ಸಸ್ಯ ಸಂಜೀವಿನಿ



ಡಾ॥ ಶೈಲೇಶ್ ಎಂ.ಡಿ.

ಕನ್ನಡ ಪುಸ್ತಕ ಪ್ರಾಧಿಕಾರ

ಸಸ್ಯ ಸಂಜೀವಿನಿ

ಸಸ್ಯ ಸಂಜೀವಿನಿ

ಡಾ॥ ಶೈಲೇಶ್ ಎಂ.ಡಿ.

SASYA SANJEEVINI : By Dr. Shylesh M.D., Published by **Ashok N. Chalawadi,** Administrative Officer, Kannada Pustaka Pradhikara, Kannada Bhavana, J.C. Road, Bengalooru-560 002.

© ಈ ಆವೃತ್ತಿಯ ಗ್ರಂಥಸ್ವಾಮ್ಯ - ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

ಮೊದಲ ಮುದ್ರಣ: ೨೦೧೦
ಪುಟಗಳು : xiv + ೨೬೪
ಬೆಲೆ : ರೂ. ೧೨೦/-
ಪ್ರತಿಗಳು : ೧,೦೦೦

First Print : 2010
Page : xiv + 264
Price : **Rs. 120/-**
Copies : 1,000
ISBN-81-7713-274-1

ಪ್ರಕಾಶಕರು :
ಅಶೋಕ ಎನ್. ಚಲವಾದಿ
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು-೫೬೦ ೦೦೨

ಕರಡು ತಿದ್ದಿದವರು : ಲೇಖಕರು

ಮುದ್ರಕರು :
ರಾಜಾ ಪ್ರಿಂಟರ್
ನಂ. ೫೯, ೪ನೇ ಕ್ರಾಸ್, ಲಾಲ್‌ಬಾಗ್ ರಸ್ತೆ
ಬೆಂಗಳೂರು-೫೬೦೦೨೭, ದೂ: ೨೨೨೨೩೪೦೬೬

ಅಧ್ಯಕ್ಷರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರ ಜನಪ್ರಿಯ ಪುಸ್ತಕದ ಪ್ರಕಟಣೆಗಿಂತ ವಿಶೇಷವಾಗಿ ಅಪರೂಪದ ಸಾಹಿತ್ಯ ಪ್ರಕಾರದ ಪುಸ್ತಕಗಳನ್ನು ಪ್ರಕಟಿಸುವುದನ್ನು ಧ್ಯೇಯವನ್ನಾಗಿಟ್ಟುಕೊಂಡಿದೆ. ಈ ದಿಶೆಯಲ್ಲಿ ಈಗಾಗಲೇ ನೂರಾರು ಕೃತಿಗಳನ್ನು ಹೊರತರಲಾಗಿದೆ. ಪ್ರಸ್ತುತ ಪ್ರಕಟವಾಗುತ್ತಿರುವ ಡಾ॥ ಶೈಲೇಶ್ ಅವರ ಕೃತಿ 'ಸಸ್ಯ ಸಂಜೀವಿನಿ' ಒಂದು ವಿಶಿಷ್ಟ ಕೃತಿಯಾಗಿದೆ. ಇಲ್ಲಿ ಲೇಖಕರು ನಾವು ದಿನಬಳಕೆಯಲ್ಲಿ ಉಪಯೋಗಿಸುವ ಸಸ್ಯಗಳನ್ನು ಕುರಿತು ವೈಜ್ಞಾನಿಕವಾಗಿ ನಿರೂಪಣೆ ನೀಡಿದ್ದಾರೆ. ಪ್ರತಿ ಸಸ್ಯಕ್ಕೆ ಬೇರೆ ಬೇರೆ ಭಾಷೆಯಲ್ಲಿ ಕರೆಯುವ ಹೆಸರು, ಅದರ ಪರ್ಯಾಯ ಪದಗಳು, ದ್ರವ್ಯದ ವರ್ಣನೆ, ಅದರ ಗುಣಧರ್ಮ, ಔಷಧ ಪ್ರಮಾಣ ಮತ್ತು ಉಪಯೋಗ ಹೀಗೆ ಬಹಳ ಸರಳವಾಗಿ ಸಂಗ್ರಹವಾಗಿ ನೀಡಿರುವುದು ಮೆಚ್ಚುಗೆಗೆ ಪಾತ್ರವಾಗುತ್ತದೆ. ಈ ಕೃತಿ ಈಗಾಗಲೇ ಜನಪ್ರಿಯ ದೈನಿಕದಲ್ಲಿ ಪ್ರಕಟವಾಗಿ ಜನರ ಆದರಾಭಿಮಾನ ಗಳಿಸಿದೆ. ಈ ಕೃತಿಯನ್ನು ಹೊರತರಲು ಅನುಮತಿಸಿದ ಡಾ॥ ಶೈಲೇಶ್ ಅವರಿಗೆ ಕೃತಜ್ಞತೆಗಳು.

ಈ ಕೃತಿಯನ್ನು ಹೊರತರುವಲ್ಲಿ ಪ್ರಾರಂಭದಿಂದ ವಿಶೇಷ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಅಶೋಕ ಎನ್. ಚಲವಾದಿ, ನನ್ನ ಆಪ್ತ ಕಾರ್ಯದರ್ಶಿ ಶ್ರೀ ಕೆ. ಮುಕುಂದನ್, ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಆಭಾರಿಯಾಗಿದ್ದೇನೆ.

(ಡಾ. ಸಿದ್ಧಲಿಂಗಯ್ಯ)
ಅಧ್ಯಕ್ಷರು

ಮುನ್ನುಡಿ

ಔಷಧಿ ಗುಣವುಳ್ಳ ಸಸ್ಯ ಸಂಪತ್ತು ನಮ್ಮ ದೇಶದ ವಿಶೇಷತೆ. ಇದರ ವೈವಿಧ್ಯ ವಿಸ್ತಾರ ಅಪಾರವಾದುದು. ವೈದಿಕ ಸಂಸ್ಕೃತಿಯ ಪ್ರಾರಂಭದಿಂದಲೂ ಮೂಲಿಕೆಗಳ ಅನ್ವೇಷಣೆ, ಅಧ್ಯಯನ, ನಮ್ಮ ಹಿರಿಯರು ನಮಗೆ ನೀಡಿದ ಕೊಡುಗೆ. ಇಂದಿಗೂ ಆಯುರ್ವೇದ ವಿಜ್ಞಾನ ಸಹಸ್ರಾರು ವರ್ಷಗಳಿಂದ ತನ್ನ ನಿರಂತರತೆಯನ್ನು ಕಾಯ್ದು ಕೊಂಡಿದೆ. ಈ ನಿರಂತರತೆಯ ಒಂದು ಭಾಗವಾಗಿ ನಮ್ಮ ಸಂಸ್ಥೆಯ ವಿದ್ಯಾರ್ಥಿ "ಡಾ॥ ಶೈಲೇಶ್ ಎಂ.ಡಿ." ವೈದ್ಯ ಸಾಹಿತ್ಯಕ್ಕೆ ನೀಡಿದ ಕೊಡುಗೆ ಈ "ಸಸ್ಯ ಸಂಜೀವಿನಿ".

ಕೋಟ್ಯಾಂತರ ಹಣದ ವ್ಯವಹಾರ ಇಂದು ಸಸ್ಯ ಔಷಧಿಗಳ ಕ್ಷೇತ್ರದಲ್ಲಿ ತೊಡಗಿಕೊಂಡಿದೆ ಅದರೊಂದಿಗೆ, ನಿತ್ಯ ನಿರಂತರ ಆಧುನಿಕ ವೈದ್ಯಕೀಯ ಸಂಶೋಧನೆ, ಅದ್ಭುತ ವೈದ್ಯಕೀಯ ಉಪಕರಣಗಳ ಉಪಯೋಗ, ಜೈವಿಕ ಕ್ರಿಯೆಗಳನ್ನು ತಮ್ಮ ನಿಯಂತ್ರಣದಲ್ಲಿ ಹಿಡಿದಿಟ್ಟುಕೊಳ್ಳುತ್ತಿರುವ ಆಧುನಿಕ ಔಷಧಿಗಳು ಅದರೊಂದಿಗೆ ಉಂಟಾಗುತ್ತಿರುವ ಸಮಸ್ಯೆಗಳು ಇವೆಲ್ಲ ಇಂದು ವೈದ್ಯಕೀಯ ಕ್ಷೇತ್ರವನ್ನು ಸಂಧಿಗ್ಧಗೊಳಿಸಿವೆ. "ಎಲ್ಲರಿಗೂ ಆರೋಗ್ಯ" ಎಂಬ ವಿಶ್ವ ಆರೋಗ್ಯ ಸಂಸ್ಥೆಯ (W.H.O) ಸೂತ್ರವು ಸಫಲವಾಗದೆ, ಅನೇಕ ಸಮಸ್ಯೆಗಳನ್ನು ತಂದೊಡ್ಡುತ್ತಿದ್ದು ಮನುಷ್ಯ ಔಷಧಿಗಳ ನಿಯಂತ್ರಣದಲ್ಲಿ ಕಾಯಿಲೆಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡು ಬದುಕುವವನಾಗಿದ್ದಾನೆ.

ಈ ಸಮಸ್ಯೆಗಳೇ ನಮ್ಮ ವೈದ್ಯಕೀಯ ವ್ಯವಸ್ಥೆಯನ್ನು ಪುನರ್ ಪರಿಶೀಲಿಸುವಂತೆ ಮಾಡಿದೆ. ವಿಶ್ವ ಆರೋಗ್ಯ ಸಂಸ್ಥೆ (W.H.O) ಹಾಗೆಯೇ, ಭಾರತ ಕೇಂದ್ರ ಸರಕಾರ ಪಾರಂಪರಿಕ ಆರೋಗ್ಯ ಶಾಸ್ತ್ರಗಳಿಗೆ ಪ್ರೋತ್ಸಾಹ ನೀಡಿ ಚಿಕಿತ್ಸಾ ಸೂತ್ರದ ಸಮಗ್ರ ಚಿಂತನೆಗೆ ಅವಕಾಶ ಮಾಡಿಕೊಟ್ಟಿದೆ. ಅಷ್ಟಾಂಗ ಆಯುರ್ವೇದವು ಭಾರತದಲ್ಲಿ ಮಾತ್ರವಲ್ಲದೆ ವಿಶ್ವದೆಲ್ಲೆಡೆ ಹೆಗ್ಗಳಿಕೆ ಪಡೆಯುತ್ತಿದೆ. ಕರ್ನಾಟಕ ರಾಜ್ಯವು ಕೂಡ ಅಮೂಲ್ಯ ಸಸ್ಯ ಸಂಪತ್ತು ಹೊಂದಿದ ಕ್ಷೇತ್ರವಾಗಿದ್ದು, ಜನ ಸಾಮಾನ್ಯರಿಗೂ ಕೂಡ ಇವುಗಳ ಸಮಗ್ರ ಪರಿಚಯವಾಗಬೇಕೆಂಬ ಉದ್ದೇಶ ಈ ಕೃತಿಯ ಹಿಂದಿದೆ. ನಮ್ಮ ಸಂಸ್ಥೆಯ ಪ್ರತಿಭಾನ್ವಿತ ವಿದ್ಯಾರ್ಥಿ ಡಾ॥ ಶೈಲೇಶ್ ಎಂ.ಡಿ. ತನ್ನ ದೀರ್ಘ ಪ್ರಯತ್ನದಿಂದ ಆಯ್ದ ಪ್ರಮುಖ ಮೂಲಿಕೆಗಳ ಪರಿಚಯವನ್ನು ಅತ್ಯಂತ ಸುಲಲಿತವಾಗಿ ಸ್ವಾರಸ್ಯಕರ ವಿವರಣೆಯೊಂದಿಗೆ ರಾಜ್ಯದ ಪ್ರಮುಖ ದಿನಪತ್ರಿಕೆ ವಿಜಯ ಕರ್ನಾಟಕದ "ಸಸ್ಯ ಸಂಜೀವಿನಿ" ಅಂಕಣದಲ್ಲಿ ಪ್ರಕಟಿಸಿದ ಲೇಖನಗಳ ಸಂಗ್ರಹವೇ ಇಂದು ಕೃತಿರೂಪದಲ್ಲಿ ಪ್ರಕಟವಾಗಿದೆ. ಕರ್ನಾಟಕದ

ಓದುಗರೆಲ್ಲ ಈಗಾಗಲೇ ಇದರ ಪ್ರಯೋಜನ ಪಡೆದು ಪ್ರೋತ್ಸಾಹಿಸಿದ್ದಾರೆ. ವಿದ್ಯಾರ್ಥಿ ಜೀವನದಲ್ಲಿಯೇ ಡಾ॥ ಶೈಲೇಶ್ ಎಂ.ಡಿ.ಯವರ ಈ ಸಾಹಿತ್ಯಿಕ ಪ್ರಯತ್ನ ಎಲ್ಲ ವೈದ್ಯ ವಿದ್ಯಾರ್ಥಿಗಳಿಗೆ ಮಾರ್ಗದರ್ಶಿಯಾಗಿದೆ. ಕನ್ನಡ ಭಾಷೆಯಲ್ಲಿರುವಂತಹ ಆಯುರ್ವೇದ ಸಾಹಿತ್ಯದ ಕೊರತೆಯನ್ನು ತುಂಬುವಲ್ಲಿ ಇದೊಂದು ಪ್ರಮುಖ ಹೆಜ್ಜೆಯಾಗಿದೆ.

ಜಂಭದಿಂದ ಕೂಡಿದ ಜಂಬೂನೇರಳೆ, ಬುದ್ಧಿವರ್ಧಕ ಶಂಖಪುಷ್ಪಿ ಹಾಗೂ ಅಶ್ವದಂತಿರುವ ಅಶ್ವಗಂಧ ಎಂಬ ಸ್ವಾರಸ್ಯಕರ ನಿರೂಪಣೆಯೂ ವೈದ್ಯರನ್ನು ಮಾತ್ರವಲ್ಲದೆ, ಜನ ಸಾಮಾನ್ಯರಲ್ಲೂ ಕುತೂಹಲ, ಆಸಕ್ತಿ ಮೂಡಿಸುವಲ್ಲಿ ಸಹಕಾರಿಯಾಗಿದೆ. ಈ ಕಿರು ವೈದ್ಯ ವಿದ್ಯಾರ್ಥಿಯಲ್ಲಿ ಅಡಗಿರುವ ಸಾಹಿತಿ ಈ ಎಲ್ಲ ಅಂಕಣಗಳಲ್ಲೂ ತನ್ನ ಸಾಹಿತ್ಯ ಪ್ರತಿಭೆ ಮೂಡಿಸಿದ್ದಾನೆ ಎಂದರೆ ಅತಿಶಯೋಕ್ತಿಯಾಗದು. ಸುಮಾರು 39 ಗ್ರಂಥಗಳ ಅಧ್ಯಯನ, ಸಸ್ಯಗಳ ಬಗ್ಗೆ ಪ್ರತ್ಯಕ್ಷಿಕ ಜ್ಞಾನ ಹಾಗೂ ಅವುಗಳ ವರ್ಣಚಿತ್ರಗಳ ಸಂಗ್ರಹ, ಪ್ರಾಧ್ಯಾಪಕ, ವಿದ್ಯಾರ್ಥಿಗಳ ಜೊತೆ ಸಮಾಲೋಚನೆ ಇತ್ಯಾದಿ, ಮೂರು ವರ್ಷದ ಎಲ್ಲ ಪ್ರಯತ್ನಗಳ ಪರಿಣಾಮ ಈ ಕೃತಿಯಲ್ಲಿ ಮೂಡಿ ಬಂದಿದೆ. ವೈದ್ಯಕೀಯ ವಿದ್ಯಾರ್ಥಿ ಡಾ॥ ಶೈಲೇಶ್ ಎಂ.ಡಿ., ವಿದ್ಯಾರ್ಥಿ ಜೀವನದಲ್ಲೇ ತನ್ನ ಅಂತರ್ಯದ ಧ್ವನಿಗೆ ಓಗೊಟ್ಟು ಆಯುರ್ವೇದ ವೈದ್ಯ ಸಾಹಿತ್ಯಕ್ಕೆ ನೀಡಿದ ಕಾಣಿಕೆ, ಎಲ್ಲರೂ ಪ್ರಯೋಜನ ಪಡೆಯುವಂತಾಗಲಿ ಹಾಗೂ ಶ್ರೀ ಧನ್ವಂತರಿಯೂ ಲೇಖಕ ಡಾ॥ ಶೈಲೇಶ್ ಎಂ.ಡಿ.ಗೆ ದೀರ್ಘಾಯುಸ್ಸು ಆರೋಗ್ಯವಂತ ಹಾಗೂ ಯಶಸ್ವಿ ಚಿಕಿತ್ಸಕನಾಗುವಂತೆ ಅನುಗ್ರಹಿಸಲಿ ಎಂಬ ಆರೈಕೆಯೊಡನೆ,

ಡಾ॥ ರಮೇಶ್ ಎಚ್.
ಪ್ರಾಂಶುಪಾಲರು

ಲೇಖಕರ ಮಾತು

ಆಯುರ್ವೇದದ ಬಗ್ಗೆ ಅನೇಕ ವಿಷಯಗಳನ್ನು ಹೇಳಲು ಮನಸ್ಸಿದ್ದರೂ, ಅದು ಸಾಧ್ಯವಾಗದ ಕಾರಣ ಒಂದೇ ವಾಕ್ಯದಲ್ಲಿ ಹೇಳುವುದಾದರೆ ಆಯುರ್ವೇದದ ಮಹತ್ವ, ಚಿಕಿತ್ಸೆ ವಿಧಾನದ ಬಗ್ಗೆ ಕರ್ನಾಟಕದ ಸಮಸ್ತ ಜನರಿಗೆ ಅರಿವು ಮೂಡಿಸಿ ಆಯುರ್ವೇದದ ಪ್ರಯೋಜನ ಮುಂದಿನ ಪೀಳಿಗೆಗೂ ತಿಳಿಸುವ ಉದ್ದೇಶದಿಂದ ಸುಮಾರು ಮೂರು ವರುಷಗಳಿಂದ ವಾರಕ್ಕೊಮ್ಮೆ ಕರ್ನಾಟಕದ ನಂಬರ್ 1 ವಿಜಯ ಕರ್ನಾಟಕ ದಿನ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ "ಸಸ್ಯ ಸಂಜೀವಿನಿ" ಅಂಕಣ ಇಂದು "ಸಸ್ಯ ಸಂಜೀವಿನಿ" ಪುಸ್ತಕ ರೂಪದಲ್ಲಿ ಬಿಡುಗಡೆ ಮಾಡಲು ಇಚ್ಛೈಸುತ್ತೇವೆ.

- ❑ ನನ್ನ ಓದಿಗೆ ಪ್ರತ್ಯಕ್ಷವಾಗಿ ಸಹಾಯವಿತ್ತು ಪ್ರೋತ್ಸಾಹಿಸಿದ ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಯಾದ ಪೂಜ್ಯರಾದ ಡಾ॥ ಡಿ. ವೀರೆಂದ್ರ ಹೆಗ್ಡೆಯವರಿಗೆ ನನ್ನ ತುಂಬು ಹೃದಯದ ಕೃತಜ್ಞತೆಗಳು.
- ❑ ನನ್ನ ಓದಿಗೆ, ಈ ಕೃತಿ ಬಿಡುಗಡೆ ಮಾಡಲು ಸಂಪೂರ್ಣ ಉತ್ತೇಜನ ನೀಡಿದ ಡಾ॥ ಎಂ. ವೀರಪ್ಪಮೊಯ್ಲಿ, ಕಾನೂನು ಸಚಿವರು, ಭಾರತ ಸರ್ಕಾರ ಇವರಿಗೆ ನನ್ನ ಅನಂತಾನಂತ ಕೃತಜ್ಞತೆಗಳು.
- ❑ ಕರ್ನಾಟಕ ಸರಕಾರದ ಕನ್ನಡ ಪುಸ್ತಕ ಪ್ರಾಧಿಕಾರ ಇಲಾಖೆಯಿಂದ ಪುಸ್ತಕ ಬಿಡುಗಡೆಯಾಗಿ ಸಮಸ್ತ ಜನರಿಗೆ ತಲುಪಿಸಲು ನೆರವಾದ ಡಾ॥ ವಿ.ಎಸ್. ಆಚಾರ್ಯ, ಗೃಹ ಸಚಿವರು ಕರ್ನಾಟಕ ಸರಕಾರ, ಶ್ರೀ.ಜೆ. ಕೃಷ್ಣ ಪಾಲೆಮಾರ್, ಸಚಿವರು, ಕರ್ನಾಟಕ ಸರಕಾರ, ಶ್ರೀ. ಬಿ. ನಾಗರಾಜ ಶೆಟ್ಟಿ, ಮಾಜಿ ಸಚಿವರು, ಅಧ್ಯಕ್ಷರು ಕರಾವಳಿ ಅಭಿವೃದ್ಧಿ ಪ್ರಾಧಿಕಾರ ಕರ್ನಾಟಕ ಸರಕಾರ, ಶ್ರೀ. ಕೆ.ಅಭಯಚಂದ್ರ ಜೈನ್ ಶಾಸಕರು, ಮೂಲ್ಕಿ ಮೂಡಬಿದ್ರೆ ಕ್ಷೇತ್ರ, ಶ್ರೀ ಕೆ.ಪಿ. ಸುಚರಿತ ಶೆಟ್ಟಿ ಮಾಜಿ ಅಧ್ಯಕ್ಷರು ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, ಶ್ರೀ. ಎಂ. ತುಂಗಪ್ಪ ಬಂಗೇರ ಜಿಲ್ಲಾ ಪಂಚಾಯತ್ ಸದಸ್ಯರು, ದಕ್ಷಿಣ ಕನ್ನಡ ಜಿಲ್ಲೆ, ಶ್ರೀ. ಎಂ. ನಾರಾಯಣ ದೇವಾಡಿಗ, ಮಾಜಿ ಪುರಸಭೆ ಅಧ್ಯಕ್ಷರು, ಇವರೆಲ್ಲರಿಗೂ ನನ್ನ ತುಂಬುಹೃದಯದ ಕೃತಜ್ಞತೆಗಳು

- ವಿಜಯ ಕರ್ನಾಟಕ ದಿನ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ಸಸ್ಯ ಸಂಜೀವಿನಿ ಅಂಕಣ ಪುಸ್ತಕ ರೂಪದಲ್ಲಿ ಬಿಡುಗಡೆಯಾಗಲು ಮುಖ್ಯ ಕಾರಣವಾದ ವಿಜಯ ಕರ್ನಾಟಕದ ಮುಖ್ಯ ಸಂಪಾದಕರಾದ ಶ್ರೀ.ಎಂ. ವಿಶ್ವೇಶ್ವರ ಭಟ್, ಸ್ಥಾನೀಯ ಸಂಪಾದಕರಾದ ಶ್ರೀ. ಯು.ಕೆ. ಕುಮಾರನಾಥ್, ಸ್ಥಾನೀಯ ಸಹ ಸಂಪಾದಕರಾದ ಶ್ರೀ ಕೃಷ್ಣಭಟ್ ಇವರಿಗೆಲ್ಲರಿಗೂ ನನ್ನ ಮನಃಪೂರ್ವಕ ಕೃತಜ್ಞತೆಗಳು

- ಸಸ್ಯ ಸಂಜೀವಿನಿ ಪುಸ್ತಕ ರೂಪದಲ್ಲಿ ಮುದ್ರಿಸಿ ಪ್ರಕಟವಾಗಲು ಕಾರಣರಾದ ಯುವ ಲೇಖಕರನ್ನು ಪ್ರೋತ್ಸಾಹಿಸುವ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ' ಡಾ. ಸಿದ್ಧಲಿಂಗಯ್ಯ, ಆಡಳಿತಾಧಿಕಾರಿಯಾದ ಶ್ರೀ ಅಶೋಕ್ ಎನ್. ಚಲವಾದಿ, ಹಾಗೂ ಅಲ್ಲಿನ ಸಮಸ್ತ ಸಿಬ್ಬಂದಿ ವರ್ಗದವರಿಗೆ ನನ್ನ ಕೃತಜ್ಞತೆಗಳು.

- ಈ ಕೃತಿಯನ್ನು ಪರಿಶೀಲಿಸಿ ಬಿಡುಗಡೆಗೆ ಅನುವು ನೀಡಿದ ಶ್ರೀ ಮಂಜುನಾಥೇಶ್ವರ ಆಯುರ್ವೇದ ಕಾಲೇಜು, ಉಡುಪಿ. ಇಲ್ಲಿನ ಪ್ರಾಂಶುಪಾಲರಾದ ಡಾ॥ ಯು.ಎನ್.ಪ್ರಸಾದ್ ಮತ್ತು ದ್ರವ್ಯಗುಣ ವಿಭಾಗದ ಮುಖ್ಯಸ್ಥರಾದ ಡಾ॥ ಶ್ರೀಧರ್ ಬಾಯರ್ ಅವರಿಗೆ ನನ್ನ ಕೃತಜ್ಞತೆಗಳು.

- ಈ ಕೃತಿಯು ಹೊರ ಹೊಮ್ಮಲು ಕೇಂದ್ರ ಬಿಂದುವಾದ ಆಳ್ವಾಸ್ ವಿದ್ಯಾ ಸಂಸ್ಥೆಯ ಮುಖ್ಯಸ್ಥರಾದ ಡಾ॥ ಎಂ. ಮೋಹನ್ ಆಳ್ವ ಹಾಗೂ ಅವರ ಪುತ್ರನಾದ ನನ್ನ ಪ್ರೀತಿಯ ಗೆಳೆಯನಾದ ವಿವೇಕ್ ಆಳ್ವ ಹಾಗೂ ಅಲ್ಲಿನ ಗ್ರಂಥಪಾಲಕರು ಹಾಗೂ ನಮ್ಮ ಕಾಲೇಜಿನ ಗ್ರಂಥ ಪಾಲಕರಿಗೆ ನನ್ನ ಕೃತಜ್ಞತೆಗಳು.

- ಈ ಕೃತಿಗೆ ಮುನ್ನುಡಿ ಬರೆದ ಹಾಗೂ ವಿಜಯ ಕರ್ನಾಟಕದಲ್ಲಿ ಪ್ರಕಟವಾದ ಅಂಕಣಗಳು ಪುಸ್ತಕ ರೂಪದಲ್ಲಿ ಹೊರ ಬರಲು ಕಾರಣ ಕರ್ತರಾದ ನನ್ನ ನೆಚ್ಚಿನ ಗುರುಗಳು ಹಾಗೂ ಕಾಲೇಜಿನ ಪ್ರಾಂಶುಪಾಲರು ಡಾ॥ ರಮೇಶ್ ಹರವಾಳ್ಕರವರಿಗೆ ನನ್ನ ತುಂಬು ಹೃದಯದ ಕೃತಜ್ಞತೆಗಳು.

- ಕೃತಿಯಲ್ಲಿರುವ ಲೋಪದೋಷಗಳನ್ನು ತಿದ್ದಿ ಸರಿಪಡಿಸಿದ ನನ್ನ ಪ್ರೀತಿಯ ಗುರುಗಳು ಹಾಗೂ ಕಾಲೇಜಿನ ದ್ರವ್ಯಗುಣ ವಿಭಾಗದ ಮುಖ್ಯಸ್ಥರು ಡಾ॥ ರಘುರಾಮ ಭಟ್ಟರಿಗೆ ನನ್ನ ತುಂಬುಹೃದಯದ ಕೃತಜ್ಞತೆಗಳು

- ಜೀವನವನ್ನು ಛಾಲೆಂಜ್ ಆಗಿ ತೆಗೆದುಕೊಂಡು ನನ್ನ ಓದಿಗೆ ಹಾಗೂ ಈ ಪುಸ್ತಕವು ಕರ್ನಾಟಕದ ಸಮಸ್ತ ಜನರಿಗೆ ತಲುಪಿಸುವಂತೆ ಪರೋಕ್ಷವಾಗಿ ನೆರವಾದ ಛಾಲೆಂಜಿಂಗ್ ಸ್ಟಾರ್ ದರ್ಶನ್ ಚಿತ್ರನಟ ಇವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

- ಈ ಕೃತಿ ಬಿಡುಗಡೆಯಾಗಲು ಪ್ರೋತ್ಸಾಹಿಸಿದ ಶ್ರೀ. ಎಂ. ಕೃಷ್ಣಪ್ಪ ದೇವಾಡಿಗ ಹಾಗೂ ಮಕ್ಕಳು ಕೃಷ್ಣ ಪ್ರಸಾದ್ ಗ್ರೂಪ್ಸ್ ಮೂಡಬಿದ್ರೆ, ಶ್ರೀ ಜಯ ವಿಕ್ರಮ ಸೊರಕೆ ಇವರಿಗೆ ನನ್ನ ತುಂಬು ಹೃದಯದ ಕೃತಜ್ಞತೆಗಳು.
- ಈ ಪುಸ್ತಕ ಬಿಡುಗಡೆಗೆ ಹಗಲಿರುಳು ಶ್ರಮಿಸಿದ ನನ್ನ ನೆಚ್ಚಿನ ಗುರುಗಳು ಹಾಗೂ ನನ್ನ ಎಲ್ಲ ಮಿತ್ರ ವೃಂದದವರಿಗೆ ನನ್ನ ತುಂಬು ಹೃದಯದ ಕೃತಜ್ಞತೆಗಳು
- ಈ ಪುಸ್ತಕ ಹೊರಹೊಮ್ಮಲು ಸದಾ ಸಹಕರಿಸಿದ ನಮ್ಮ ಕಾಲೇಜಿನ ಸಿಬ್ಬಂದಿ ವರ್ಗದವರಾದ ರಮೇಶ್ ಕೋಟ್ಯಾನ್ ಮತ್ತು ಸವಿತಾರವರಿಗೆ ನನ್ನ ತುಂಬು ಹೃದಯದ ಕೃತಜ್ಞತೆಗಳು.
- ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ಮೂಡಿ ಬಂದಿರುವ ಸಸ್ಯಸಂಜೀವಿನಿ ಅಂಕಣವನ್ನು ಓದಿ ಮೆಚ್ಚುಗೆಯನ್ನು ಪತ್ರದ ಮೂಲಕ, ದೂರವಾಣಿ ಮೂಲಕ ವ್ಯಕ್ತಪಡಿಸಿದ ಸಮಸ್ತ ಓದುಗರಿಗೆ ನನ್ನ ಅನಂತಾನಂತ ಕೃತಜ್ಞತೆಗಳು

ಡಾ॥ ಶೈಲೇಶ್ ಎಂ.ಡಿ.
ಮೂಡಬಿದ್ರೆ

ಸಸ್ಯ ಸಂಜೀವಿನಿಯ ಸತ್ವ

ಹಸಿರೇ ಉಸಿರು ಅಂತೇವೆ. ಹೆಸರೇ ಗೊತ್ತಿಲ್ಲದ ಬಣ್ಣ ಬಣ್ಣದ ಗಿಡಗಂಟಿಗಳನ್ನು ತಂದು ಮನೆ ಮುಂದೆ ಇಡ್ತೇವೆ. ಹಿತ್ತಲಲ್ಲಿದ್ದ ಅಪರೂಪದ ಸಸ್ಯರಾಶಿಗಳನ್ನು ಸವರಿ ತೊಟ್ಟಿಗೆಸೀತೇವೆ. 'ಹಿತ್ತಲಗಿಡದಲ್ಲೂ ಮದ್ದು' ಇದೆ ಅಂತಾ ಹೇಳ್ಲಿಕ್ಕೆ ನಮಗೆ ಅಮೆರಿಕಾದಿಂದ 'ಮಾತ್ರೆ' ರೂಪದಲ್ಲಿ ಬರಬೇಕು! ಇದನ್ನು ನಾಗರಿಕತೆ ಅನ್ನಬೇಕಾ, ಆಧುನಿಕತೆ ಅನ್ನಬೇಕಾ? ಪ್ರಾಣಿಗಳನ್ನಂತೂ ನಾವು ನ್ಯಾಷನಲ್ ಪಾರ್ಕ್‌ನಲ್ಲೇ ನೋಡುವುದು ಅಂತ ನಿರ್ಧರಿಸಿ ಬಿಟ್ಟಿದ್ದೇವೆ. ಈಗ ಸಸ್ಯಗಳ ಸರದಿ.

ಆಹಾರವೇ ಆಗಲಿ ಔಷಧಿಯೇ ಆಗಲೀ ನಮಗೆ ನಮ್ಮದೇ ನೆಲದ ಸಮೃದ್ಧ ಸಸ್ಯ ಸಂಪತ್ತೇ ಸರ್ವಶ್ರೇಷ್ಠ ಹಿಂದೆ ಆರೋಗ್ಯದ ಸೂತ್ರ ಎಷ್ಟು ಸರಳವಾಗಿತ್ತೆಂದರೆ 'ಊಟ ಬಲ್ಲವನಿಗೆ ರೋಗವಿಲ್ಲ' ಮನೆ ಊಟದಿಂದ ಮನೆ ಮದ್ದಿನವರೆಗೆ ಎಲ್ಲವೂ ಸ್ವಾವಲಂಬನೆ. ಇಂದು ಹಾಗಲ್ಲ, ಹೊರಗಿನಿಂದ ತಂದು ತಿಂದು ಹೊರ ರೋಗಿಯಾಗಿ ಹೋಗ್ತೇವೆ ಮದ್ದಿಗೆ.

ನಮಗೆ ನಮ್ಮ ನೆಲದ ಬಗ್ಗೆ ಜಲದ ಬಗ್ಗೆ ಎಷ್ಟು ಭಾವುಕತೆ ಎಷ್ಟು ಅಭಿಮಾನ ಇದೆಯೋ ಅಷ್ಟೇ ಭಾವನಾತ್ಮಕ ಸಂಬಂಧ ಈ ನೆಲದಿಂದ ಬಂದ ಜೀವರಾಶಿ, ಸಸ್ಯರಾಶಿ ಬಗೆಗೂ ಇರಬೇಕು. ಆಗ ಮಾತ್ರ ಭಾವೈಕ್ಯತೆಗೆ ನಿಜವಾದ ಅರ್ಥ. ಹುಟ್ಟು ನೆಲದ ತರ್ಕ ಬಂಧ ಬದುಕು ಎಲ್ಲವೂ ಇಷ್ಟೆ ಸರಳ. ನಾವಾದರೂ ಅಷ್ಟೆ, ನಮ್ಮ ಜೀವನ ಚಕ್ರವನ್ನೇ ಗೋಜಲು ಮಾಡಿಕೊಂಡು ದಿಕ್ಕು ತಪ್ಪಿದ್ದೇವೆ. ಹೊಸ ದಿಕ್ಕುಗಳ ಹುಡುಕಾಟದಲ್ಲಿ ಎಲ್ಲವನ್ನೂ ಕಲಬೆರಕೆ ಮಾಡಿ ದಿಗ್ಭ್ರಮೆಗೊಂಡಿದ್ದೇವೆ.

ಇಂಥಾ ಸಂದಿಗ್ಧ ಕಾಲ ಘಟ್ಟದಲ್ಲಿ ನಮಗೆ ಜೀವ ಸಂಜೀವಿನಿಯಾಗಿ ಒದಗಬಹುದಾದ್ದು ನಮ್ಮದೇ ನೆಲದ ಸತ್ವಯುತ ಸಸ್ಯಗಳು ಮಾತ್ರ, ಸರಳ ಸಹಜ ಸಹಬಾಳ್ವೆಯ ಸಮಾಜಕ್ಕೆ ನಮ್ಮ ಪೂರ್ವಜರು ರೂಪಿಸಿಕೊಟ್ಟ ಪರಿಶುದ್ಧ ಮತ್ತು ಪರಿಪೂರ್ಣ ಆರೋಗ್ಯ ಪದ್ಧತಿಯ ಜೀವನಾಡಿಯೇ ಸಸ್ಯ ಸಂಪತ್ತು ನಮ್ಮ ಸುತ್ತಮುತ್ತ ಇದ್ದೂ ಅಪರಿಚಿತವಾಗಿರುವ ಅಜ್ಞಾತವಾಗಿರುವ ಅಸ್ಪಷ್ಟವಾಗಿರುವ ಅಸಂಖ್ಯಾತ ಅಮೂಲ್ಯ ಸಸ್ಯ ಪ್ರಬೇಧಗಳನ್ನು ಅದರ ಮಹತ್ವವನ್ನು ವಿಜಯ ಕರ್ನಾಟಕದ ನಲ್ಮೆಯ ಓದುಗರಿಗೆ ಅರಿವು ಮಾಡಿಕೊಡಬೇಕೆಂಬ ಉದ್ದೇಶ ನಮ್ಮದಾಗಿತ್ತು. ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಮಾರ್ಗದರ್ಶನದೊಂದಿಗೆ ಮಂಗಳೂರು ಆವೃತ್ತಿಯಲ್ಲಿ 2006ರ ಮಾರ್ಚ್‌ನಿಂದ 'ಸಸ್ಯ ಸಂಜೀವಿನಿ' ಎಂಬ ಅರ್ಥಪೂರ್ಣ ಶೀರ್ಷಿಕೆಯೊಂದಿಗೆ ಅಂಕಣಕ್ಕೆ ಚಾಲನೆ

ನೀಡಲಾಯಿತು. 'ನಮ್ಮ ಕರಾವಳಿ'ಯಲ್ಲಿ ಪ್ರತಿ ಬುಧವಾರ ಪ್ರಕಟವಾಗತೊಡಗಿದ ದಿನದಿಂದಲೇ ಈ ಅಂಕಣಕ್ಕೆ ಕರಾವಳಿಯ ಓದುಗರಿಂದ ಅತ್ಯದ್ಭುತ ಪ್ರತಿಸ್ಪಂದನ ಕಂಡುಬಂದಿದೆ.

ಆರಂಭಿಕ ದಿನಗಳಲ್ಲಿ ಮಂಗಳೂರಿನ ಕರ್ನಾಟಕ ಆಯುರ್ವೇದ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿ ಶೈಲೇಶ್ ಈ ಅಂಕಣಕ್ಕೆ ವಿಷಯ ಸಂಗ್ರಹ ನೀಡುವ ಪ್ರಸ್ತಾಪದೊಂದಿಗೆ ಬಂದಾಗ ಇದರ ಯಶಸ್ಸಿನ ಬಗ್ಗೆ ನಮಗೇ ನಂಬಿಕೆ ಇರಲಿಲ್ಲ. ಅಷ್ಟೊಂದು ಅಗಾಧ ಸಂಖ್ಯೆಯ ಅಪರೂಪದ ಪ್ರಬೇಧಗಳ ವರ್ಣ ಛಾಯಾಚಿತ್ರಗಳನ್ನು ಸಂಗ್ರಹಿಸುವುದೇ ದೊಡ್ಡ ಸವಾಲಾಗಿತ್ತು. ಅದರಲ್ಲೂ ಸೀಸನಲ್ ಸಸ್ಯಗಳ ಹೂ, ಹಣ್ಣುಕಾಯಿಗಳ ಚಿತ್ರಗಳನ್ನು ಸೆರೆ ಹಿಡಿಯಲು ಋತುಮಾನದೊಂದಿಗೆ ಸೆಣಸಿ ಸಂಯಮದಿಂದ ಕಾತರಿಸುವುದೇ ಒಂದು ತಪ. ಆದರೆ ಶೈಲೇಶ್ ಮಾತ್ರ ಎಂದಿಗೂ ಎದೆಗುಂದಲಿಲ್ಲ. ಎಷ್ಟೊಂದು ಶ್ರದ್ಧೆಯಿಂದ ಯಾವುದೇ ತಪ್ಪುಗಳು ನುಸುಳಬಾರದೆಂದು ಕಂಪ್ಯೂಟರ್ ಮುದ್ರಿತ ಪತ್ರಿಕೆಯೊಂದಿಗೆ ವಾರಂಪ್ರತಿ ತಪ್ಪದೇ ಕಚೇರಿಗೆ ಹಾಜರಾಗುತ್ತಿದ್ದ ಈ ಹುಡುಗ ಇಂಟರ್‌ನೆಟ್‌ನಲ್ಲೂ ಚಿತ್ರ ಲಭ್ಯವಾಗದಾಗ ಕೆಮರಾ ಹಿಡಿದು ಆಯುರ್ವೇದ ವನಗಳಿಗೆ, ಕಾಡುಮೇಡುಗಳಿಗೆ ಅಂಡಲೆಯುತ್ತಿದ್ದಾತ.


ಅಂಕಣವನ್ನು ಆಕರ್ಷಕವಾಗಿ ಅರ್ಥಪೂರ್ಣವಾಗಿ ಅಪೂರ್ವ ಮಾಹಿತಿ ಯುಕ್ತವಾಗಿ ಕಳೆದೊಂದು ವರ್ಷದಿಂದ ಓದುಗರ ಮುಂದಿಡುವಲ್ಲಿ ಶೈಲೇಶ್ ಅವರ ಶ್ರಮ, ಶ್ರದ್ಧೆ, ಶಿಸ್ತು ಸಂಯಮ, ಅಧ್ಯಯನ, ಏಕಾಗ್ರತೆ, ಛಲ ಎಲ್ಲವೂ ಒಗ್ಗೂಡಿ ಕೆಲಸ ಮಾಡಿದೆ. ಇಂದು ಅದೇ ಅಂಕಣ ಬರಹಗಳನ್ನು ಒಗ್ಗೂಡಿಸಿ ಒಂದೆಡೆ ಸೇರಿಸಿ ಓದುಗರ ಮುಂದಿಡುವಲ್ಲಿ ನಿಜವಾದ ಸಾರ್ಥಕತೆ ಇದೆ. ಕನ್ನಡ ಭಾಷೆಯಲ್ಲಿ ಹೊರಬರುತ್ತಿರುವ ಅಪರೂಪದ ಮಾಹಿತಿಯುಳ್ಳ ವರ್ಣರಂಜಿತ ಸಂಗ್ರಹ ಯೋಗ್ಯ ಗ್ರಂಥ ಇದು. ಆಯುರ್ವೇದ ವಿದ್ಯಾರ್ಥಿಗಳು, ಶೈಕ್ಷಣಿಕ ಸಂಸ್ಥೆಗಳು, ವೃತ್ತಿನಿರತರು ಮಾತ್ರವಲ್ಲ, ಆರೋಗ್ಯದ ಬಗ್ಗೆ ನಿಜವಾದ ಕಾಳಜಿಯನ್ನು ಪ್ರತಿಯೊಬ್ಬ ನಾಗರಿಕನಿಗೂ ಇದು ಅಮೂಲ್ಯ ಕೊಡುಗೆಯಾಗಿ ಸಲ್ಲಬಲ್ಲದು. ಈ ಗ್ರಂಥ ರಚಿಸಿದ ಶೈಲೇಶ್‌ಗೂ ಪ್ರಕಾಶಕರಿಗೂ ಪ್ರಾಯೋಜಕರಿಗೂ ಮತ್ತು ಸಮಸ್ತ ಓದುಗರಿಗೂ ವಿಜಯ ಕರ್ನಾಟಕದ ಶುಭ ಹಾರೈಕೆಗಳು.


ಯು.ಕೆ. ಕುಮಾರನಾಥ್
ಸ್ಥಾನೀಯ ಸಂಪಾದಕರು
ವಿಜಯ ಕರ್ನಾಟಕ, ಮಂಗಳೂರು ಆವೃತ್ತಿ

ಪರಿವಿಡಿ

ಅರ್ಜುನನಂತೆ ಇರುವ ಅರ್ಜುನ ವೃಕ್ಷ

Terminalia arjuna, Roxb.
Combretaceae





ಹೇಗೆ ಅರ್ಜುನನು ತನ್ನ ಬಿಲ್ಲು ವಿದ್ಯೆಯಿಂದ ಯುದ್ಧದಲ್ಲಿ ಹೋರಾಡಿ ಜಯವನ್ನು ಪಡೆದನೋ, ಹಾಗೆಯೇ ಅರ್ಜುನನಂತೆ ಇರುವ ಅರ್ಜುನ ವೃಕ್ಷವು ತನ್ನ ಔಷಧ ಗುಣಗಳಿಂದ ರೋಗಗಳ ವಿರುದ್ಧ ಹೋರಾಡಿ ಜಯವನ್ನು ಗಳಿಸಿದೆ. ಅರ್ಜುನನ ನೆನಪಿಗಾಗಿಯೋ ಏನೋ ಈ ದ್ರವ್ಯಕ್ಕೆ "ಅರ್ಜುನ ವೃಕ್ಷ" ಎಂದು ಹೆಸರಿಟ್ಟಿರಬಹುದು. ಅರ್ಜುನ ವೃಕ್ಷದ ಬಗ್ಗೆ ಅರಿಯದವರು ಅದನ್ನು ಸೌದೆಗಾಗಿ ಮಾತ್ರ ಉಪಯೋಗಿಸುತ್ತಿದ್ದರು. ಆದರೆ ಇದರ ಚಕ್ಕೆಯು ಅದ್ಭುತವಾದ ಹೃದಯ ರಸಾಯನ. ಬೃಹತ್ ಸಂಹಿತೆಯಲ್ಲಿ ಈ ದ್ರವ್ಯವನ್ನು ರಕ್ತಪಿತ್ತ, ಮೂಲವ್ಯಾಧಿ, ಕುಷ್ಠ, ಪ್ರಮೇಹ, ಮೂತ್ರಾಘಾತ ಮತ್ತು ವ್ರಣ ರೋಗಗಳಿಗೆ ಉಪಯೋಗಿಸಬಹುದಾಗಿದೆ ಎಂದು ವಿವರಿಸಲಾಗಿದೆ. ಆದರೆ ಇದನ್ನು ಹೃದಯರೋಗಕ್ಕೆ ಉಪಯೋಗಿಸುವುದರ ಬಗ್ಗೆ ಬೃಹತ್ ಸಂಹಿತೆಯಲ್ಲಿ ಉಲ್ಲೇಖವಿಲ್ಲ. ಚಕ್ರಪಾಣಿ, ವೃಂದ, ಶೋಡಲ ಇದರ ಹೃದಯ ಸಂಬಂಧಿ ಉಪಯೋಗದ ಬಗ್ಗೆ ವಿವರಿಸಿದ್ದಾರೆ.

ಬಹು ಭಾಷಾ ಹೆಸರುಗಳು

ಕನ್ನಡ : ಮತ್ತೀಮರ, ಹೊಳೆಮತ್ತಿ

ಸಂಸ್ಕೃತ : ಅರ್ಜುನ

ತುಳು : ಸುದೆ ಮರುವ

ಹಿಂದಿ : ಅರ್ಜುನ್

ಇಂಗ್ಲೀಷ್ : ಅರ್ಜುನ

ಪರ್ಯಾಯ ಪದಗಳು

ಅರ್ಜುನ, ನದೀಸರ್ಜ, ಕಕುಭ, ವೀರವೃಕ್ಷ, ಧನಂಜಯ, ಪಾರ್ಥ, ಗೌರ. ಸಾಮಾನ್ಯವಾಗಿ ನದಿಯ ದಡಗಳಲ್ಲಿ ಮತ್ತು ಸರ್ಜ ವೃಕ್ಷಕ್ಕೆ ಹೋಲುವುದರಿಂದಲೇ ಈ ವೃಕ್ಷವನ್ನು 'ನದೀಸರ್ಜ' ಎಂದು ಕರೆಯುತ್ತಾರೆ.

ದ್ರವ್ಯದ ವರ್ಣನೆ

ಅರ್ಜುನವೃಕ್ಷವು 20–26 ಮೀಟರ್‌ನಷ್ಟು ಎತ್ತರಕ್ಕೆ ಬೆಳೆಯುವ ಬೃಹತ್‌ಗಾತ್ರದ ಮರ. ಮರದ ಮೋಟು (ಕಾಂಡ) ಹೊರಗೆ ನೇರ, ಮೃದು ಬಿಳಿ ಛಾಯೆಯಿಂದ ಕೂಡಿದ್ದು, ಒಳಗೆ ದಪ್ಪವಾಗಿ ನಸುಗೆಂಪು ಬಣ್ಣದಿಂದ ಕೂಡಿದೆ. ಈ ದ್ರವ್ಯವು 3ರಿಂದ 6 ಸೆಂ. ಮೀಟರ್ ಉದ್ದದ ಅಂಡಾಕಾರದ ಎಲೆಗಳನ್ನು ಹೊಂದಿದೆ. ಹೂವುಗಳು ಚಿಕ್ಕದಾಗಿದ್ದು, ಹಳದಿ ಬಣ್ಣದಿಂದ ಕೂಡಿದೆ. ಈ ದ್ರವ್ಯವು 2–5 ಸೆಂ. ಮೀಟರ್‌ನಷ್ಟು ಉದ್ದವಾಗಿರುವ ಹಣ್ಣುಗಳು ದಾರೆಹುಳಿಗೆ ಹೋಲುತ್ತವೆ. ಈ ದ್ರವ್ಯದ ಹೂವನ್ನು ಮಾರ್ಚ್–ಜೂನ್ ತಿಂಗಳಿನಲ್ಲಿ, ಹಣ್ಣನ್ನು ಸೆಪ್ಟೆಂಬರ್ – ನವೆಂಬರ್ ತಿಂಗಳಿನಲ್ಲಿ ಬಿಡುತ್ತದೆ. ತೊಗಟೆಯನ್ನು ಔಷಧಕ್ಕೆ ಉಪಯೋಗಿಸಲ್ಪಡುವ ಈ ದ್ರವ್ಯವು ಭಾರತದ ಎಲ್ಲ ಪ್ರದೇಶಗಳಲ್ಲಿ ಹೆಚ್ಚಾಗಿ ಹಿಮಾಲಯ, ಬಂಗಾಲ, ಬಿಹಾರ, ಮಧ್ಯಪ್ರದೇಶ ಮುಂತಾದ ಪ್ರದೇಶಗಳಲ್ಲಿ ಕಂಡು ಬರುತ್ತದೆ.

ವಿಧಗಳು

ಈ ದ್ರವ್ಯದಲ್ಲಿ ಎರಡು ವಿಧಗಳಿವೆ. ಅವು

- ಬಿಳಿ ಅರ್ಜುನ
- ಕಪ್ಪು ಅರ್ಜುನ

ಸಸ್ಯಶಾಸ್ತ್ರದಲ್ಲಿ ಎರಡು ಬಗೆಗಳಿವೆ. ಅವು

- Terminalia arjuna
- Terminalia alata

ಉಪಯುಕ್ತ ಅಂಗಗಳು

- ತೊಗಟೆ

ದ್ರವ್ಯದ ಗುಣಧರ್ಮಗಳು

ರಸ : ಕಷಾಯ
ಗುಣ : ರೂಕ್ಷ, ಲಘು
ವೀರ್ಯ : ಶೀತ
ವಿಪಾಕ : ಕಟು
ಕರ್ಮ : ಕಫಪಿತ್ತಹರ, ಉದರ್ದಪ್ರಶಮನ, ಹೃದ್ಯ

"ಅರ್ಜುನಃ ತುವರಃ ಶೀತೋ ಜಯೇತ್‌ಪಿತ್ತಕಫವ್ರಣಾನ್।
ಮೇದೋಮೇಹಾಸ್ರಹೃದ್ರೋಗ ಸ್ವೇದಭಗ್ನಕ್ಷತಕ್ಷಯಾನ್॥" (ಭಾವಪ್ರಕಾಶ)

ಎಂದರೆ ಅರ್ಜುನ ವೃಕ್ಷವು ಕಷಾಯ ರಸದಿಂದ ಕೂಡಿದೆ, ಶೀತ ಗುಣದಿಂದ ಕೂಡಿದೆ, ಪಿತ್ತಕಫಹರವಾಗಿದೆ. ವ್ರಣ, ಮೇದೋರೋಗ, ಮೇಹ, ಹೃದಯರೋಗ, ಭಗ್ನ, ಕ್ಷತ, ಕ್ಷಯ ಮುಂತಾದ ರೋಗಕ್ಕೆ ಒಳ್ಳೆಯದು.

ಔಷಧಿ ಪ್ರಮಾಣ

ಚೂರ್ಣ – 3–6 ಗ್ರಾಂ
ರಸ – 12–24 ಮಿ.ಲೀ
ಕಷಾಯ – 50–100 ಮಿ.ಲೀ

ಔಷಧೀಯ ಯೋಗಗಳು

- ಅರ್ಜುನಾರಿಷ್ಟ
- ಅರ್ಜುನ ಘೃತ
- ಪಾರ್ಥಾದ್ಯಾರಿಷ್ಟ
- ಅಶ್ವಗಂಧಾರಿಷ್ಟ
- ಪುಷ್ಯಾನುಗ ಚೂರ್ಣ
- ಅರವಿಂದಾಸವ

ಔಷಧೀಯ ಉಪಯೋಗಗಳು

- ಅರ್ಜುನ ಚೆಕ್ಕೆಯ ಪುಡಿಯನ್ನು ತುಪ್ಪ, ಹಾಲು ಅಥವಾ ಬೆಲ್ಲ ನೀರಿನೊಂದಿಗೆ ಸೇವಿಸುವುದರಿಂದ ಹೃದಯ ರೋಗ ನಿವಾರಣೆಯಾಗಿ, ಆಯುಷ್ಯವು ವೃದ್ಧಿಯಾಗುತ್ತದೆ.
- ಅರ್ಜುನ ಚೆಕ್ಕೆಯ ಪುಡಿಯನ್ನು ಆಡುಸೋಗೆ ರಸದೊಂದಿಗೆ ಬೆರೆಸಿ ಅದಕ್ಕೆ ತುಪ್ಪ, ಜೇನು ಮತ್ತು ಕಲ್ಲುಸಕ್ಕರೆ ಮಿಶ್ರಮಾಡಿ ಕಲಸಿ ಕುಡಿಯುವುದರಿಂದ ಕೆಮ್ಮು, ಕ್ಷಯರೋಗವು ನಿವಾರಣೆಯಾಗುತ್ತದೆ.

- ಅರ್ಜುನ ಚೆಕ್ಕೆ ಮತ್ತು ಶ್ರೀಗಂಧದಿಂದ ತಯಾರಿಸಿದ ಕಷಾಯ ಸೇವನೆಯಿಂದ ಶುಕ್ರಮೇಹವು ಕಡಿಮೆಯಾಗುತ್ತದೆ.
- ಅರ್ಜುನ ಚೆಕ್ಕೆಯ ಲೇಪವನ್ನು ಜೇನಿನೊಂದಿಗೆ ಬೆರೆಸಿ ಚರ್ಮಕ್ಕೆ ಹಚ್ಚುವುದರಿಂದ ಚರ್ಮರೋಗ ನಿವಾರಣೆ.
- ಅರ್ಜುನ ಚೆಕ್ಕೆಯ ಪುಡಿಯನ್ನು ಹಾಲು ಮತ್ತು ತುಪ್ಪದಲ್ಲಿ ಸೇವಿಸುವುದರಿಂದ ಮೂಳೆಯ ಮುರಿತದಿಂದ ಬಳಲುತ್ತಿರುವವರಿಗೆ ಒಳ್ಳೆಯದು.
- ಕದಂಬ, ಅರ್ಜುನ, ಕಹಿಬೇವು, ಪಾಟಲೀ, ಹಿಪ್ಪಲಿ ಮತ್ತು ಎಕ್ಕೆ ಇವುಗಳ ಎಲೆಗಳನ್ನು ಅರೆದು ಗಾಯಕ್ಕೆ ಲೇಪಿಸುವುದರಿಂದ ಗಾಯವು ನಿವಾರಣೆಯಾಗುತ್ತದೆ.
- ಆಡುಸೋಗೆ, ಅರ್ಜುನ, ಯವಾಸ (ಬಳ್ಳಿ ತುರುಚಿ), ಕಹಿಬೇವು ಇವುಗಳ ಕಷಾಯ ಕುಡಿಯುವುದರಿಂದ ಮೂಲವ್ಯಾಧಿ ರೋಗದಿಂದ ಬಳಲುತ್ತಿರುವವರಿಗೆ ಒಳ್ಳೆಯದು.
- ಕಗ್ಗಲಿಮರ, ಕಕ್ಕೆ ಕಾಯಿ ಮತ್ತು ಅರ್ಜುನವನ್ನು ಸ್ನಾನಕ್ಕೆ ಮತ್ತು ಸೇವಿಸಲು ಉಪಯೋಗಿಸಿದರೆ ಕುಷ್ಠರೋಗವು ನಿವಾರಣೆಯಾಗುತ್ತದೆ.
- ಅರ್ಜುನ ಚೆಕ್ಕೆಯ ಪುಡಿಯನ್ನು ಜೇನಿನೊಂದಿಗೆ ಬೆರೆಸಿ ಹಾಲಿನೊಂದಿಗೆ ಸೇವಿಸುವುದರಿಂದ ರಕ್ತಾತಿಸಾರವು ನಿವಾರಣೆಯಾಗುತ್ತದೆ.
- ಅರ್ಜುನ ಚೆಕ್ಕೆಯ ಕಷಾಯವನ್ನು ಹಾಲಿನೊಂದಿಗೆ ಸೇವಿಸುವುದರಿಂದ ಹೃದಯರೋಗವು ಕಡಿಮೆಯಾಗಿ ಹೃದಯದ ಕಾರ್ಯವು ಸರಾಗವಾಗಿ ನಡೆಯುತ್ತದೆ.
- ಅರ್ಜುನವೃಕ್ಷದ ತೊಗಟೆಯ ಕಷಾಯದಿಂದ ದಿನಾಲೂ 5–6 ಬಾರಿ ಬಾಯಿ ಮುಕ್ಕಳಿಸುವುದರಿಂದ ವಸಡುಗಳ ಊತ ಕಡಿಮೆಯಾಗುತ್ತದೆ.
- ಅರ್ಜುನವೃಕ್ಷದ ತೊಗಟೆಯ ಕಷಾಯಕ್ಕೆ ಕಲ್ಲುಸಕ್ಕರೆ ಪುಡಿ ಮತ್ತು ಜೇನುತುಪ್ಪ ಬೆರೆಸಿ ಕುಡಿಯುವುದರಿಂದ ಶ್ವೇತಪ್ರದರ ಮತ್ತು ರಕ್ತಪ್ರದರ ನಿವಾರಣೆಯಾಗುತ್ತದೆ.

ಮನುಷ್ಯನ ಶರೀರದೊಳಗಿನ

ಮಹಾಶತ್ರುವೇ ಆಲಸ್ಯ

ಮಧುರವಾದ ಅತಿಮಧುರ

Glycyrrhiza glabra, Linn.

Fabaceae





ಹೆಸರು ಸೂಚಿಸುವಂತೆ ಮಧುರವಾಗಿರುವ ಅತಿಮಧುರ ಆಯುರ್ವೇದದ ಪ್ರಮುಖ ದ್ರವ್ಯಗಳಲ್ಲೊಂದು. ಆಯುರ್ವೇದ ಶಾಸ್ತ್ರದಲ್ಲಿ ಅತಿಮಧುರ ವೇದಕಾಲದಿಂದಲೂ ಪರಿಚಯ ಇರುವ ಔಷಧೀಯ ಸಸ್ಯಗಳಲ್ಲಿ ಒಂದಾಗಿದೆ. ಅತಿಮಧುರ ದೀರ್ಘಕಾಲ ಬೆಳೆಯುವ ವನಸ್ಪತಿಗಳಲ್ಲಿ ಒಂದು. ಈ ದ್ರವ್ಯದಲ್ಲಿ ಅನ್ನಸತ್ವಗಳಾದ ಸಕ್ಕರೆ, ಪಿಷ್ಟ, ಮ್ಯಾಗ್ನಿಶಿಯಂ ಅಂಶವಿದೆ. ಊತ, ಉರಿಗಳಲ್ಲಿ ದಿವ್ಯೌಷಧಿಯಾಗಿ ಇದು ಉಪಯೋಗಕ್ಕೆ ಬರುತ್ತದೆ.

ಬಹು ಭಾಷಾ ಹೆಸರುಗಳು

ಕನ್ನಡ : ಅತಿಮಧುರ, ಜೇಷ್ಠಮಧು

ಸಂಸ್ಕೃತ : ಯಷ್ಟಿಮಧು

ತುಳು : ಅತಿಮಧುರೋ

ಹಿಂದಿ : ಜೇಠಿಮಧು, ಮುಲೇಠಿ

ಇಂಗ್ಲೀಷ್ : ಲಿಕರಿಸ್

ಪರ್ಯಾಯ ಪದಗಳು

ಯಷ್ಟಿಮಧು, ಮಧುಯಷ್ಟಿ, ಮಧುಕ, ಜಲಯಷ್ಟಿ, ಕ್ಲೀತಕ, ಮಧುರ, ಮಧುಸ್ರಾವ, ಯಷ್ಟಿಕ, ಯಷ್ಟಿಮಧ್ವ, ಯಷ್ಟಿ, ಅತಿರಸ.

ಕಾಂಡ ಮತ್ತು ಬೇರು ಸಿಹಿಯಾಗಿರುವುದರಿಂದ ಇದನ್ನು 'ಮಧುಕ' ಎಂಬ ಹೆಸರಿನಿಂದ ಕರೆಯುತ್ತಾರೆ.

ದ್ರವ್ಯದ ವರ್ಣನೆ

ಅತಿಮಧುರ ವರ್ಷಗಟ್ಟಲೆ ಬಾಳುವ ಸಸ್ಯವಾಗಿದೆ. ಈ ಸಸ್ಯವು ಎರಡರಿಂದ ಐದು ಅಡಿಯಷ್ಟು ಎತ್ತರಕ್ಕೆ ಬೆಳೆಯುತ್ತದೆ. ಬೇರಿನ ಒಳಭಾಗವು ಹಳದಿ ಬಣ್ಣದಿಂದ ಕೂಡಿದೆ. ಹೊರಭಾಗವು ಕೆಂಪು ಬಣ್ಣದಿಂದ ಕೂಡಿದೆ. ಅಂಡಾಕಾರದ ಎಲೆಗಳನ್ನು ಹೊಂದಿರುವ ಈ ಸಸ್ಯದ ಹೂಗಳು ನೇರಳೆ ಬಣ್ಣದಿಂದ ಕೂಡಿದೆ. ಮೂರರಿಂದ ಐದು ಅಂಗುಲ ಉದ್ದಕ್ಕೆ ಬೆಳೆಯುವ ಹಣ್ಣುಗಳಲ್ಲಿ ಎರಡರಿಂದ ಮೂರು ವೃತ್ತಾಕಾರದ ಬೀಜಗಳು ಇರುತ್ತವೆ. ಮಾರ್ಚ್ ತಿಂಗಳಲ್ಲಿ ಈ ಸಸ್ಯವು ಹೂ ಬಿಡುತ್ತದೆ ಮತ್ತು ಆಗಸ್ಟ್ ತಿಂಗಳಿನಲ್ಲಿ ಹಣ್ಣು ಬಿಡುತ್ತದೆ. ಈ ಸಸ್ಯವು ಪಂಜಾಬ್ ಮತ್ತು ಹಿಮಾಲಯ ಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಯುತ್ತದೆ.

ವಿಧಗಳು

ಚರಕನ ಪ್ರಕಾರ ಅತಿಮಧುರದಲ್ಲಿ ಎರಡು ವಿಧಗಳಿವೆ. ಅವು

- ಆನುಪ ಯಷ್ಟಿಮಧು
- ಸ್ಥಳಜ ಯಷ್ಟಿಮಧು

ಉಪಯುಕ್ತ ಅಂಗಗಳು

ಬೇರು

ದ್ರವ್ಯದ ಗುಣಧರ್ಮಗಳು

ರಸ	:	ಮಧುರ
ಗುಣ	:	ಗುರು, ಸ್ನಿಗ್ಧ
ವೀರ್ಯ	:	ಶೀತ
ವಿಪಾಕ	:	ಮಧುರ
ಕರ್ಮ	:	ತ್ರಿದೋಷಹರ, ರಸಾಯನ, ವೃಷ್ಯ, ಚಕ್ಷುಷ್ಯ, ಬಲ್ಯ, ವರ್ಣ್ಯ, ಕೇಶ್ಯ, ಸ್ವರ್ಯ

ಯಷ್ಟೀ ಹಿಮಾ ಗುರುಃ ಸ್ವಾದುಃ ಚಕ್ಷುಷ್ಯಾ ಬಲವರ್ಣಕೃತ್।
ಸುಸ್ನಿಗ್ಧಾ ಶುಕ್ರಲಾ ಕೇಶ್ಯಾ ಸ್ವರ್ಯಾ ಪಿತ್ತಾನಿಲಾಸ್ರಜಿತ್।
ವ್ರಣಶೋಥವಿಷಛರ್ದಿತೃಷ್ಣಾಗ್ಲಾನಿಕ್ಷತಾಪಹಾ॥ ಕೈಯ್ಯದೇವ ನಿಘಂಟು॥

ಎಂದರೆ ಅತಿಮಧುರ ಮಧುರ ರಸದಿಂದ ಕೂಡಿದೆ. ಗುರು ಮತ್ತು ಸ್ನಿಗ್ಧ ಗುಣದಿಂದ ಕೂಡಿದೆ. ಶೀತ ವೀರ್ಯದಿಂದ ಕೂಡಿದೆ. ಚಕ್ಷುಷ್ಯ, ಬಲವನ್ನು ವೃದ್ಧಿಸುತ್ತದೆ. ವರ್ಣವನ್ನು ಹೆಚ್ಚಿಸುತ್ತದೆ. ಕೇಶ್ಯ, ಸ್ವರ್ಯಾ ಅನಿಲಪಿತ್ತಹರವಾಗಿದೆ. ಗಾಯ, ಊತ, ವಿಷ, ವಾಂತಿ, ಬಾಯಾರಿಕೆ, ಶ್ರಮ, ಕ್ಷತರೋಗಗಳನ್ನು ನಿವಾರಿಸುತ್ತದೆ.

ಔಷಧಿ ಪ್ರಮಾಣ

ಚೂರ್ಣ : 3–5 ಗ್ರಾಂ

ಔಷಧಿ ಯೋಗಗಳು

- ಯಷ್ಟ್ಯಾಧಿ ಚೂರ್ಣ
- ಯಷ್ಟ್ಯಾಮಧ್ವಾದಿ ತೈಲ
- ಯಷ್ಟ್ಯಾಧಿಪಾಕ
- ಯಷ್ಟಿ ಘನವಟಿ

ಔಷಧೀಯ ಉಪಯೋಗಗಳು

- ಅತಿಮಧುರ ತೈಲವನ್ನು ಭಗಂದರ ಗಾಯಕ್ಕೆ ಹಚ್ಚುವುದರಿಂದ ಭಗಂಧರ ರೋಗವು ಕಡಿಮೆಯಾಗುತ್ತದೆ.
- ಅತಿಮಧುರ ಮತ್ತು ಕಟುಕ ರೋಹಿಣಿಯ ಲೇಪವನ್ನು ಸಕ್ಕರೆ ನೀರಿನಲ್ಲಿ ಮಿಶ್ರ ಮಾಡಿ ಕುಡಿಯುವುದರಿಂದ ಹೃದಯ ರೋಗದವರಿಗೆ ಒಳ್ಳೆಯದು.
- ಕಫವಿಲ್ಲದೆ ಒಣ ಕೆಮ್ಮಿನವರಿಗೆ ಅತಿಮಧುರ ಉತ್ಕೃಷ್ಟ ಔಷಧ. ಯಷ್ಟಿಮಧು ಚೂರ್ಣವನ್ನು ಜೇನಿನಲ್ಲಿ ಬೆರೆಸಿ ಸೇವಿಸಬೇಕು.
- ಜೀರಿಗೆ ಮತ್ತು ಅತಿಮಧುರ ಕಷಾಯವನ್ನು ಸೇವಿಸುವುದರಿಂದ ಪಿತ್ತರೋಗ, ಉದರನೋವು, ಕಣ್ಣು ಉರಿ ಕಡಿಮೆಯಾಗುತ್ತದೆ.
- ಸಂಧಿ ನೋವಿನಿಂದ ಬಳಲುತ್ತಿರುವವರು ಅತಿಮಧುರದ ಬೇರನ್ನು ಹೊರಗಿನಿಂದ ಲೇಪಿಸಿ ಕಷಾಯ ಮಾಡಿ ಕುಡಿಯಬೇಕು.
- ಶರೀರದ ಯಾವುದೇ ಭಾಗದಲ್ಲಿ ರಕ್ತಸ್ರಾವ ಆಗುವುದನ್ನು ನಿಲ್ಲಿಸಬೇಕಾದರೆ ಅತಿಮಧುರದ ಕಷಾಯವನ್ನು ಎರಡೆರಡು ಗಂಟೆಗಳಿಗೊಮ್ಮೆ ಕುಡಿಸಬೇಕು.

- ಹಾಲು ಮತ್ತು ಅಕ್ಕಿಯಿಂದ ತಯಾರಿಸಿದ ಪಾಯಸಕ್ಕೆ ಯಷ್ಟಿಮಧು ಚೂರ್ಣ ಮತ್ತು ತುಪ್ಪ ಬೆರೆಸಿ ಸೇವಿಸುವುದರಿಂದ ಒರಟಾದ ಸ್ವರ ರೋಗವು ನಿವಾರಣೆ.
- ಹೃದಯರೋಗದಿಂದ ಬಳಲುತ್ತಿರುವವರು ಯಷ್ಟಿಮಧು ಮತ್ತು ಕಟುಕದ ಲೇಪವನ್ನು ಸಕ್ಕರೆ ನೀರಿನಲ್ಲಿ ಬೆರೆಸಿ ಸೇವಿಸಬೇಕು.
- ಯಷ್ಟಿಮಧುವನ್ನು ಬೂದುಕುಂಬಳಕಾಯಿ ರಸದಲ್ಲಿ ಅರೆದು ಲೇಪಿಸುವುದರಿಂದ ಅಪಸ್ಮಾರ ರೋಗವು ನಿವಾರಣೆಯಾಗುತ್ತದೆ.
- ಯಷ್ಟಿಮಧುವನ್ನು ಬೂದುಕುಂಬಳಕಾಯಿ ರಸದಲ್ಲಿ ಅರೆದು ಲೇಪಿಸುವುದರಿಂದ ಅಪಸ್ಮಾರ ರೋಗವು ನಿವಾರಣೆಯಾಗುತ್ತದೆ.
- ಯಷ್ಟಿಮಧು ಕಷಾಯವನ್ನು ಸೇವಿಸುವುದರಿಂದ ಬಾಯಾರಿಕೆ ನಿವಾರಣೆ.
- ಅತಿಮಧುರ ಮತ್ತು ಬೇವಿನ ಎಲೆಯ ಲೇಪವನ್ನು ಗಾಯಕ್ಕೆ ಹಚ್ಚುವುದರಿಂದ ಗಾಯವು ನಿವಾರಣೆಯಾಗುತ್ತದೆ.
- ಯಷ್ಟಿಮಧು ಮತ್ತು ಉಪ್ಪು ಬೆರೆಸಿ ಲೇಪ ಮಾಡಿ ಹಚ್ಚುವುದರಿಂದ ಅಪಘಾತದ ಗಾಯ ನಿವಾರಣೆ.
- ಯಷ್ಟಿಮಧು ಚೂರ್ಣಕ್ಕೆ ಹಾಲು ಮತ್ತು ಸಕ್ಕರೆ ಬೆರೆಸಿ ಸೇವಿಸುವುದರಿಂದ ಮೊಲೆ ಹಾಲು ವೃದ್ಧಿಯಾಗುತ್ತದೆ.

ಆರೋಗ್ಯ ನೀಡುವ ಅತ್ತಿಮರ

Ficus glomerata, Roxb.

Moraceae





ಅತ್ತಿಯು ಆರೋಗ್ಯವನ್ನು ನೀಡುವ, ವೇದಕಾಲದಿಂದಲೂ ಪ್ರಚಾರವಿರುವ ಔಷಧೀಯ ಸಸ್ಯಗಳಲ್ಲಿ ಒಂದಾಗಿದೆ. ಅತ್ತಿಮರವು ಧಾರ್ಮಿಕ ಪೂಜೆಗಳಿಗೆ ಒಂದು ಮುಖ್ಯವಾದ ದ್ರವ್ಯ. ಇದರ ರೆಂಬೆಯನ್ನು ಹಿಂದಿನ ಕಾಲದಲ್ಲಿ ಹಲ್ಲುಜ್ಜಲು ಉಪಯೋಗಿಸುತ್ತಿದ್ದರು. ಅತ್ತಿಯ ಹಣ್ಣಿನಿಂದ ತಯಾರಿಸಿದ ಚಟ್ನಿಯಲ್ಲಿ ಊಟ ಮಾಡುವುದೇ ಒಂದು ಸೊಬಗು. ಅದು ಊಟಕ್ಕೆ ರುಚಿಯನ್ನು ಕೊಡುವುದರ ಜೊತೆಗೆ ಮತ್ತಷ್ಟು ತಿನಿಸುವಂತೆ ಮಾಡುತ್ತದೆ. ಅಂತಹ ಅದ್ಭುತವಾದ ರುಚಿಯಿಂದ ಕೂಡಿದ ಅತ್ತಿಯು ಸಾಮಾನ್ಯವಾಗಿ ಎಲ್ಲರಿಗೂ ಪರಿಚಿತ. ಆಹಾರವಾಗಿ ಮಾತ್ರವಲ್ಲದೆ ಅತ್ತಿಯನ್ನು ಔಷಧಕ್ಕೂ ಕೂಡ ಯಥೇಚ್ಛವಾಗಿ ಉಪಯೋಗಿಸುತ್ತಾರೆ. ಹೊರನೋಟಕ್ಕೆ ಅತ್ತಿಯ ಹಣ್ಣು ಸುಂದರವಾಗಿ ಕಂಡರೂ, ಒಳಗಿನ ಹಣ್ಣಿನ ಭಾಗದಲ್ಲಿ ಸೂಕ್ಷ್ಮ ಜಂತುಗಳಿವೆ.

ಬಹು ಭಾಷಾ ಹೆಸರುಗಳು

ಕನ್ನಡ : ಅತ್ತಿಮರ

ಸಂಸ್ಕೃತ : ಉದುಂಬರ

ತುಳು : ಅರ್ತಿ ಮರ

ಹಿಂದಿ : ಗೂಲರ್

ಇಂಗ್ಲೀಷ್ : ಕ್ಲಸ್ಟರ್‌ಫಿಗ್

ಪರ್ಯಾಯ ಪದಗಳು

ಉದುಂಬರ, ಅಪುಷ್ಪ, ಜಂತುಫಲ, ಸದಾಫಲ, ಶ್ವೇತವಲ್ಕಲ, ಕ್ಷೀರವೃಕ್ಷ, ಕ್ರಿಮಿಕಂಠ, ಬ್ರಹ್ಮವೃಕ್ಷ, ಅಪುಷ್ಪಫಲಸಂಬಂಧ, ಹರಿತಾಕ್ಷ, ಕ್ಷೀರವೃಕ್ಷಕ, ಹೇಮದುಗ್ಧ, ಸೌಮ್ಯ, ಶೀತಫಲ, ಶೀತವಲ್ಕಲ, ಶ್ವೇತವಲ್ಕಲ, ಸುಚಕ್ಷು, ಯಜ್ಞಫಲ, ಯಜ್ಞಯೋಗ, ಯಜ್ಞಸರ, ಹೇಮದುಗ್ಧಕ.

ಅತ್ತಿಯ ಹಣ್ಣಿನಲ್ಲಿ ಜಂತುಗಳಿರುವುದರಿಂದ ಇದನ್ನು 'ಜಂತುಫಲ' ಎಂದು ಕರೆಯುತ್ತಾರೆ. ಅತ್ತಿಯ ಹಾಲಿನಂತಹ ದ್ರವ ಪದಾರ್ಥವು ಹಳದಿ ಬಣ್ಣದಿಂದ ಕೂಡಿರುವುದರಿಂದ ಇದನ್ನು 'ಹೇಮದುಗ್ಧಾ' ಎಂಬ ಹೆಸರಿನಿಂದ ಕರೆಯುತ್ತಾರೆ. ಅತ್ತಿಯಲ್ಲಿ ಹಾಲಿನಂತಹ ದ್ರವ ಪದಾರ್ಥವಿರುವುದರಿಂದ 'ಕ್ಷೀರವೃಕ್ಷ' ಎಂಬುದಾಗಿ ಕರೆಯುತ್ತಾರೆ.

ದ್ರವ್ಯದ ವರ್ಣನೆ

ಹಳ್ಳಿಯಲ್ಲಿ ಅತ್ಯಂತ ಜನಪ್ರಿಯವಾಗಿರುವ ಈ ಮರವು 9-12 ಮೀಟರ್‌ನಷ್ಟು ಎತ್ತರವಾಗಿ ಬೆಳೆಯುತ್ತದೆ. ಎಲೆ, ಫಲ, ಕಾಯಿ, ತೊಗಟೆಯಿಂದ ಬಿಳಿಹಳದಿ ಬಣ್ಣದ ಅಂಟಾದ ಹಾಲು ಬರುವುದು. ಕಾಯಿ ಹಸಿರಾಗಿದ್ದು, ಹಣ್ಣಾದಾಗ ಕೆಂಪು ಬಣ್ಣವನ್ನು ಹೊಂದುವುದು. ಹಣ್ಣು ಮೃದುವಾಗಿ ಪರಿಮಳದಿಂದ ಕೂಡಿದೆ. ನೋಡಲು ಸುಂದರವಾಗಿರುವ ಹಣ್ಣಿನ ಒಳಗಡೆ ಇರುವೆಗಳಿವೆ. ಹಣ್ಣಿನ ಒಳಗಡೆ ನೂರಾರು ಸಣ್ಣದಾದ ಬೀಜಗಳಿರುತ್ತದೆ. ಭಾರತ ಮತ್ತು ಶ್ರೀಲಂಕಾ ದೇಶಗಳಲ್ಲಿ ಈ ದ್ರವ್ಯವು ಹೆಚ್ಚಾಗಿ ಬೆಳೆಯುತ್ತದೆ.

ವಿಧಗಳು

ರಾಜನಿಘಂಟುಕಾರನ ಪ್ರಕಾರ ಅತ್ತಿಯಲ್ಲಿ ಮೂರು ಭೇದಗಳಿವೆ. ಅವು

- ಉದುಂಬರ
- ಕಾಕ ಉದುಂಬರ
- ನದ್ಯೋದುಂಬರ

ಸಸ್ಯಶಾಸ್ತ್ರದಲ್ಲಿ ಇದನ್ನು ಕ್ರಮವಾಗಿ Ficus glomerata, Ficus hispida ಮತ್ತು Ficus carica ಎಂಬುದಾಗಿ ಕರೆಯುತ್ತಾರೆ.

ಉಪಯುಕ್ತ ಅಂಗಗಳು

- ತೊಗಟೆ
- ಹಣ್ಣು
- ನಿರ್ಯಾಸ

- ಬೇರು
- ಕಾಯಿ

ದ್ರವ್ಯದ ಗುಣಧರ್ಮಗಳು

ರಸ : ಕಷಾಯ
ಗುಣ : ಗುರು, ರೂಕ್ಷ
ವೀರ್ಯ : ಶೀತ
ವಿಪಾಕ : ಕಟು
ಕರ್ಮ : ಪಿತ್ತಕಫಹರ, ವ್ರಣ ರೋಪಣ, ಶೋಧನ

ಉದುಂಬರೋ ಹಿಮೋ ರೂಕ್ಷೋ ಗುರುಃ ಪಿತ್ತಕಫಾಸ್ರಜಿತ್।
ಮಧುರಃ ತುವರೋ ವರ್ಣ್ಯೋ ವ್ರಣಶೋಧನರೋಪಣಃ॥ (ಭಾವಪ್ರಕಾಶ)

ಎಂದರೆ ಅತ್ತಿಯು ಗುರು, ರೂಕ್ಷ ಗುಣಗಳಿಂದ ಕೂಡಿದೆ, ಶೀತವೀರ್ಯದಿಂದ ಕೂಡಿದೆ, ಮಧುರ ಮತ್ತು ಕಷಾಯ ರಸದಿಂದ ಕೂಡಿದೆ. ಪಿತ್ತಕಫಹರವಾಗಿದೆ. ವ್ರಣಶೋಧನ ರೋಪಣ ಕಾರ್ಯವನ್ನು ಮಾಡುತ್ತದೆ.

ಔಷಧಿ ಪ್ರಮಾಣ

ಚೂರ್ಣ : 3–6 ಗ್ರಾಂ.
ಕಷಾಯ : 50–100 ಮಿ.ಲೀ.
ನೀರ್ಯಾಸ : 5–10 ಬಿಂದು

ಔಷಧೀಯ ಯೋಗಗಳು

- ಪಂಚವಲ್ಕ
- ಪಂಚಕ್ಷೀರೀ
- ಉದುಂಬರ ರಸಾಯನ
- ಉದುಂಬರಾದಿ ತೈಲ
- ಉದುಂಬರ ಸಾರ

ಔಷಧೀಯ ಉಪಯೋಗಗಳು

- ಮಧುಮೇಹದವರು ಅತ್ತಿ ಹಣ್ಣು ಮತ್ತು ನೇರಳೆ ಹಣ್ಣಿನ ಬೀಜದ ಚೂರ್ಣವನ್ನು ಸಮಾನ ಪ್ರಮಾಣದಲ್ಲಿ ಮಿಶ್ರಿಸಿ ಸೇವಿಸಬೇಕು.
- ಅತ್ತಿಯ ತೊಗಟೆಯ ಭಸ್ಮವನ್ನು ಜೇನುತುಪ್ಪ ಮತ್ತು ತುಪ್ಪದೊಂದಿಗೆ ಮಿಶ್ರಿಸಿ, ಸೇವಿಸುವುದರಿಂದ ಬಿಕ್ಕಳಿಕೆಯು ಕಡಿಮೆಯಾಗುತ್ತದೆ.

- ಅತ್ತಿಯ ಮರದ ಎಲೆ, ಫಲ ಮತ್ತು ಚಕ್ಕೆಯ ಚೂರ್ಣಕ್ಕೆ ಸಮಾನ ಪ್ರಮಾಣದಷ್ಟು ಅತಿಮಧುರದ ಚೂರ್ಣವನ್ನು ಮಿಶ್ರಿಸಿ, ಆ ಚೂರ್ಣಕ್ಕೆ ಅತ್ತಿ ಎಲೆಗಳ ರಸದಿಂದ ಭಾವನೆ ಕೊಡಬೇಕು. ಇದರ ಸೇವನೆಯಿಂದ ಕೆಮ್ಮು ಮತ್ತು ಉಬ್ಬಸ ರೋಗಗಳು ಗುಣವಾಗುವುದು.
- ಅತ್ತಿಯ ಹಾಲನ್ನು ಸಕ್ಕರೆ ಪುಡಿ ಸಮೇತ ಸೇವಿಸುವುದರಿಂದ ಅತಿಸಾರ ರೋಗವು ನಿವಾರಣೆಯಾಗುವುದು.
- ಪಕ್ವವಾದ ಅತ್ತಿ ಹಣ್ಣನ್ನು ಸೇವಿಸುವುದರಿಂದ ಅಶಕ್ತತೆ ಮತ್ತು ಸ್ನಾಯುಗಳ ದೌರ್ಬಲ್ಯತೆ ನಾಶವಾಗುತ್ತದೆ.
- ಅತ್ತಿಕಾಯಿಯನ್ನು ಬೇಯಿಸಿ, ಅದಕ್ಕೆ ಮೊಸರು ಸೇರಿಸಿ ಸೇವಿಸುವುದರಿಂದ ಗ್ರಹಣೀ ರೋಗ ನಿವಾರಣೆಯಾಗುತ್ತದೆ.
- ಅತ್ತಿಯ ತೊಗಟೆಯ ಚೂರ್ಣವನ್ನು ಅಕ್ಕಿಯ ಹಾಲು ಅಥವಾ ಹಾಯಿಯ ಮೊಲೆ ಹಾಲಿನಲ್ಲಿ ಬೆರೆಸಿ ಸೇವಿಸುವುದರಿಂದ ಅತಿಯಾದ ಜಠರಾಗ್ನಿಗೆ ಒಳ್ಳೆಯದು.
- ಹಣ್ಣಾದ ಉದುಂಬರ ಹಣ್ಣಿನ ರಸಕ್ಕೆ ಸಕ್ಕರೆ ಬೆರೆಸಿ ಸೇವಿಸುವುದರಿಂದ ಬಾಯಾರಿಕೆಯು ನಿವಾರಣೆಯಾಗುತ್ತದೆ.
- ಅತ್ತಿಯ ಹಣ್ಣಿನ ರಸವನ್ನು ಜೇನುತುಪ್ಪದೊಂದಿಗೆ ಬೆರೆಸಿ ಸೇವಿಸುವುದರಿಂದ ರಕ್ತಪ್ರದರ ರೋಗವು ನಿವಾರಣೆಯಾಗುತ್ತದೆ.
- ಅತ್ತಿಯ ಹಣ್ಣನ್ನು ಜೇನುತುಪ್ಪದೊಡನೆ ಸೇವಿಸುವುದರಿಂದ ಮೂಗು, ಬಾಯಿ, ಮೂತ್ರದ್ವಾರ, ಮಲದ್ವಾರಗಳಲ್ಲಿ ರಕ್ತ ಅಂದರೆ ರಕ್ತಪಿತ್ತರೋಗಕ್ಕೆ ಒಳ್ಳೆಯದು.
- ಅತ್ತಿಯ ಹಣ್ಣಿನ ಚೂರ್ಣಕ್ಕೆ ಕಲ್ಲುಸಕ್ಕರೆ ಪುಡಿ ಬೆರೆಸಿ, ಹಾಲಿನಲ್ಲಿ ಮಿಶ್ರಿಸಿ ಕುಡಿದರೆ 15 ದಿವಸದೊಳಗೆ ವೀರ್ಯಕ್ಕೆ ಸಂಬಂಧಿಸಿದ ರೋಗಗಳು ನಿವಾರಣೆಯಾಗುತ್ತದೆ.
- ಅತ್ತಿಯ ಹಣ್ಣು ಎರಡಾಣೆ ತೂಕ ಚೂರ್ಣಕ್ಕೆ, ಹಾಲು ಸಕ್ಕರೆ ಮಿಶ್ರಿಸಿ ಸೇವಿಸಿದರೆ ಭೇದಿ ನಿಲ್ಲುತ್ತದೆ.


ಹಾಡಿ ಹಾಡಿ ರಾಗ - ಉಗುಳಿ ಉಗುಳಿ ರೋಗ


ತ್ರಿಫಲಗಳಲ್ಲಿ ಒಂದಾದ ಅಣಿಲೆಕಾಯಿ

Terminalia chebula, Retz.

Combretaceae







ತ್ರಿಫಲಗಳಲ್ಲಿ ಒಂದಾದ ಅಣಿಲೆಕಾಯಿಯು ಆಯುರ್ವೇದದಲ್ಲಿ ಒಂದು ಪ್ರಮುಖವಾದ ದ್ರವ್ಯ. ಇದನ್ನು ಮೊಟ್ಟ ಮೊದಲಾಗಿ ಪಾಣಿನಿಯು ಮಲಬದ್ಧತೆ ಮತ್ತು ಮೂತ್ರ ರೋಗಗಳಿಗೆ ಉಪಯೋಗಿಸಿದನು. ಈ ದ್ರವ್ಯವನ್ನು ಸಾಮಾನ್ಯವಾಗಿ ಮತ್ತು ಮುಖ್ಯವಾಗಿ ನಾಟಿವೈದ್ಯರು ತಮ್ಮ ಔಷಧಿಯಲ್ಲಿ ಉಪಯೋಗಿಸುತ್ತಾರೆ. ಮದನಪಾಲ ನಿಘಂಟಿನಲ್ಲಿ "ತಾಯಿ"ಯಂತೆ ಅಣಿಲೆಕಾಯಿಯು ಹಿತವನ್ನು ನೀಡುತ್ತದೆ. ಕೆಲವೊಮ್ಮೆ ತಾಯಿ ಕೋಪಗೊಳ್ಳಬಹುದು, ಆದರೆ ಔಷಧಿಯಾಗಿ ಸೇವನೆ ಮಾಡಿದ ಅಣಿಲೆಕಾಯಿಯಿಂದ ಯಾವುದೇ ಕೆಟ್ಟ ಪರಿಣಾಮವಾಗುವುದಿಲ್ಲ ಎಂದು ವಿವರಿಸಲಾಗಿದೆ. ಚಿಕಿತ್ಸೆಗಾಗಿ ಬಳಸುವ ಅಣಿಲೆಕಾಯಿಯು ಹೊಸತಾಗಿ, ಗಟ್ಟಿಯಾಗಿ, ಭಾರವಾಗಿ, ನೀರಿನಲ್ಲಿ ಮುಳುಗಬೇಕು. ಕಾಯಿಯ ತೂಕವು 20 ಗ್ರಾಂನಷ್ಟು ಇರಬೇಕು. ಅಣಿಲೆಕಾಯಿ ಮತ್ತು ತುಪ್ಪ ಸೇವನೆಯಿಂದ ವಾತರೋಗ, ಅಣಿಲೆಕಾಯಿ ಮತ್ತು ಸಕ್ಕರೆ ಸೇವನೆಯಿಂದ ಕಫರೋಗವು ನಿವಾರಣೆಯಾಗುತ್ತದೆ. ಕಾಲಕ್ಕೆ ತಕ್ಕಂತೆ ಅಣಿಲೆಕಾಯಿಯನ್ನು ಆಹಾರ ದ್ರವ್ಯದೊಂದಿಗೆ ಸೇವಿಸಬೇಕು. ಮಳೆಗಾಲ ಉಪ್ಪಿನಲ್ಲಿ, ವಸಂತ ಕಾಲ ಜೇನಿನಲ್ಲಿ, ಶರದ್‌ಕಾಲ ಸಕ್ಕರೆಯಲ್ಲಿ, ಬೇಸಿಗೆಕಾಲ ಬೆಲ್ಲದಲ್ಲಿ, ಹೇಮಂತಕಾಲ ಶುಂಠಿಯಲ್ಲಿ, ಶಿಶಿರಕಾಲ ಹಿಪ್ಪಲಿಯಲ್ಲಿ

ಅಣಿಲೆಕಾಯಿಯನ್ನು ಸೇವಿಸುವುದರಿಂದ ದೇಹದ ಆರೋಗ್ಯದ ಸಮತೋಲನ ಕಾಪಾಡಲು ನೆರವಾಗುತ್ತದೆ.

ಬಹು ಭಾಷಾ ಹೆಸರುಗಳು

ಕನ್ನಡ : ಅಣಿಲೆ ಕಾಯಿ, ಅಳಲೇಕಾಯಿ

ಸಂಸ್ಕೃತ : ಹರೀತಕೀ

ತುಳು : ಅಣಿಲೆದ ಕಾಯಿ

ಇಂಗ್ಲೀಷ್ : ಮೈರೋಬಲನ್

ಹಿಂದಿ : ಹರಡ

ಪರ್ಯಾಯ ಪದಗಳು

ಹರೀತಕೀ, ಅಮೃತ, ಅಭಯ, ಕಾಯಸ್ಥ, ವಯಸ್ಥ, ಪಥ್ಯ, ವಿಜಯಾ, ಶಿವೆ, ಜಯ, ಹೇಮಾವತಿ, ಚೇತಕೀ, ಪೂತನ, ಜೀವಂತಿ, ಶ್ರೇಯಾಸಿ, ವಯಸ್ಥಾ. ರೋಗಗಳಲ್ಲಿ ಇದು ಜಯಶಾಲಿಯಾಗುವುದರಿಂದ ಇದನ್ನು 'ವಿಜಯಾ' ಎಂದೂ, ವ್ರಣ ರೋಪಣ ಕಾರ್ಯ ಮಾಡುವುದರಿಂದ 'ರೋಹಿಣಿ' ಎಂದೂ, ಚೇತನವನ್ನು ಜೀವಕ್ಕೆ ತುಂಬುವುದರಿಂದ 'ಚೇತನಾ' ಎಂದು ಕರೆಯುತ್ತಾರೆ.

ದ್ರವ್ಯದ ವರ್ಣನೆ

ಅಣಿಲೆಕಾಯಿಯು ದೊಡ್ಡ ಮರವಾಗಿ ಬೆಳೆಯುತ್ತದೆ. ಈ ಮರವು ಸುಮಾರು 12–15 ಮೀಟರ್‌ನಷ್ಟು ಎತ್ತರಕ್ಕೆ ಬೆಳೆಯುತ್ತದೆ. ಎಲೆಯು 8–20 ಸೆಂ.ಮೀಟರ್‌ನಷ್ಟು ಉದ್ದವಿರುತ್ತದೆ. ಎಲೆಗಳ ಮೇಲೆ ಹೊಳಪಾದ ಮಾಸು ಬಣ್ಣದ ರೋಮವಿರುತ್ತದೆ. ಹೂವು ಬಿಳಿ ಅಥವಾ ಹಳದಿ ಬಣ್ಣದಿಂದ ಕೂಡಿದ್ದು, ಹೂವಿನಲ್ಲಿ ಒಂದು ವಿಶಿಷ್ಟವಾದ ವಾಸನೆ ಇರುವುದು. ಈ ದ್ರವ್ಯವು ಹೂವನ್ನು ಏಪ್ರಿಲ್–ಮೇ ತಿಂಗಳಿನಲ್ಲಿ, ಹಣ್ಣನ್ನು ನವೆಂಬರ್–ಜನವರಿ ತಿಂಗಳಿನಲ್ಲಿ ಬಿಡುತ್ತದೆ. ಉತ್ತರಭಾರತದಲ್ಲಿ ಬೆಳೆಯುವ ಈ ದ್ರವ್ಯವು ಬಿಹಾರ, ಪಶ್ಚಿಮ ಬಂಗಾಳ, ಅಸ್ಸಾಂ, ಮಧ್ಯಭಾರತ, ದಕ್ಷಿಣ ಭಾರತದಲ್ಲಿ ಬೆಳೆಯುತ್ತದೆ.

ವಿಧಗಳು

ಭಾವಮಿಶ್ರನ ಪ್ರಕಾರ ಅಣಿಲೆಕಾಯಿಯಲ್ಲಿ 7 ವಿಧಗಳಿವೆ. ಅವು

1. ವಿಜಯಾ
2. ರೋಹಿಣಿ
3. ಪೂತನ

4. ಅಮೃತ
5. ಅಭಯ
6. ಜೀವಂತಿ
7. ಚೇತಕಿ

ಉಪಯುಕ್ತ ಅಂಗಗಳು

- ಹಣ್ಣಿನ ತೊಗಟೆ

ದ್ರವ್ಯದ ಗುಣಧರ್ಮಗಳು

ರಸ : ಮಧುರ, ಆಮ್ಲ, ಕಟು, ತಿಕ್ತ, ಕಷಾಯ

ಗುಣ : ಲಘು, ರೂಕ್ಷ

ವೀರ್ಯ : ಉಷ್ಣ

ವಿಪಾಕ : ಮಧುರ

ಕರ್ಮ : ತ್ರಿದೋಷಹರ, ರಸಾಯನ, ಚಕ್ಷುಷ್ಯ, ಹೃದ್ಯ, ಮೇಧ್ಯ, ಕ್ರಿಮಿಘ್ನ, ಸ್ವರ್ಯ.

ಹರೀತಕೀರಸಾ:ಪಂಚವಿಧ್ಯಾತ್‌ಲವಣವರ್ಜಿತಾ॥
ವಿಪಾಕಮಧುರಾ ಮೇಧ್ಯಾ ವಯಃಸ್ಥಾಪನದೀಪನೀ॥
ಉಷ್ಣವೀರ್ಯಾ ಸರಾಯುಷ್ಯಾ ಬುಧ್ಧೀಂದ್ರಿಯಬಲಪ್ರದಾ।
ಕುಷ್ಠವೈವರ್ಣ್ಯ ವೈಸ್ವರ್ಯ ಪುರಾಣವಿಷಮಜ್ವರಾನ್॥
ಶ್ವಾಸಕಾಸಪ್ರಸೇಕಾರ್ಶಃಪ್ಲೀಹಾನಾಹಗರೋದರಾನ್॥

(ಶೋಢಲನಿಘಂಟು)

ಎಂದರೆ ಹರೀತಕೀ ಐದು ರಸಗಳಿಂದ ಕೂಡಿದೆ ಲವಣವನ್ನು ಹೊರತಾಗಿ, ವಿಪಾಕದಲ್ಲಿ ಮಧುರ, ಉಷ್ಣ ವೀರ್ಯವುಳ್ಳದ್ದಾಗಿದೆ. ಇದು ಆಯುಷ್ಯ, ಬುದ್ಧಿ, ಇಂದ್ರಿಯ ಗ್ರಹಣ ಶಕ್ತಿ, ಬಲವನ್ನು ವೃದ್ಧಿಸುತ್ತದೆ. ಕುಷ್ಠ, ಸ್ವರರೋಗ, ವಿಷಮಜ್ವರ, ಶ್ವಾಸ, ಕೆಮ್ಮು, ಪ್ರಸೇಕ, ಮೂಲವ್ಯಾಧಿ, ಪ್ಲೀಹರೋಗ, ಉದರ ರೋಗಗಳನ್ನು ನಿವಾರಿಸುತ್ತದೆ.

ಔಷಧಿ ಪ್ರಮಾಣ

ಚೂರ್ಣ : 3–6 ಗ್ರಾಂ.

ಅಭಯಾರಿಷ್ಟ : 20–30 ಮಿ.ಲೀ.

ಔಷಧೀಯ ಯೋಗಗಳು

ಅಭಯಾರಿಷ್ಟ, ಪಥ್ಯಾಧಿ ಕ್ವಾಥ, ತ್ರಿಫಲ ಚೂರ್ಣ, ತ್ರಿಫಲ ಘೃತ, ಚಿತ್ರಕ ಹರೀತಕೀ

ಔಷಧೀಯ ಉಪಯೋಗಗಳು

- ಅಣಿಲೆಕಾಯಿ ಚೂರ್ಣವನ್ನು ನಿಂಬೆರಸದೊಂದಿಗೆ ಸೇವಿಸುವುದರಿಂದ ಅಜೀರ್ಣತೆಯನ್ನು ಗುಣಪಡಿಸಬಹುದು.
- ಅಣಿಲೆಕಾಯಿ ಚೂರ್ಣವನ್ನು ಜೇನುತುಪ್ಪದೊಂದಿಗೆ ಸೇವಿಸುವುದರಿಂದ ಪ್ರಮೇಹರೋಗವು ಕಡಿಮೆಯಾಗುತ್ತದೆ.
- ಅಣಿಲೆಕಾಯಿ ಮತ್ತು ದ್ರಾಕ್ಷವನ್ನು ಮಿಶ್ರಿಸಿ ಸೇವಿಸುವುದರಿಂದ ಆಮ್ಲಪಿತ್ತ ರೋಗವು ಕಡಿಮೆಯಾಗುತ್ತದೆ.
- ಅಣಿಲೆಕಾಯಿ ಸೇವನೆಯಿಂದ ವಾತ ಮತ್ತು ಕಫ ದೋಷದಿಂದ ಉಂಟಾದ ರೋಗವು ನಿವಾರಣೆಯಾಗುತ್ತದೆ.
- ಅಣಿಲೆಕಾಯಿಯನ್ನು ಜೇನುತುಪ್ಪದೊಂದಿಗೆ ಸೇವಿಸುವುದರಿಂದ ಮಲೇರಿಯಾ ಜ್ವರದಿಂದ ಗುಣ ಕಾಣಬಹುದು.
- ಕಫದಿಂದ ಉಂಟಾದ ಅತಿಸಾರಕ್ಕೆ ಅಣಿಲೆಕಾಯಿ, ಶುಂಠಿ ಮತ್ತು ಸೈಂಧವ ಲವಣದ ಪುಡಿಯನ್ನು ಜೇನುತುಪ್ಪ ಮತ್ತು ಸಕ್ಕರೆ ಬೆರೆಸಿ ಸೇವಿಸುವುದು ಫಲಕಾರಿ.
- ಅಣಿಲೆಕಾಯಿಯನ್ನು ದಿವಸಲೂ ಶುಂಠಿರಸ ಅಥವಾ ಬೆಲ್ಲದೊಂದಿಗೆ ಸೇವಿಸುತ್ತ ಇದ್ದರೆ ಹಸಿವಿಲ್ಲದಿರುವಿಕೆಗೆ ಒಳ್ಳೆಯದು.
- ಅಣಿಲೆಕಾಯಿ ವೃಕ್ಷದ ತೊಗಟೆಯ ಪುಡಿಯನ್ನು ಮಜ್ಜಿಗೆಯೊಂದಿಗೆ ಸೇವಿಸುವುದರಿಂದ ಆಮ್ಲ ಮತ್ತು ರಕ್ತ ದೋಷದಿಂದ ಉಂಟಾದ ಗ್ರಹಣೀ ರೋಗ ನಿವಾರಣೆಯಾಗುತ್ತದೆ.
- ಅಣಿಲೆಕಾಯಿ ಚೂರ್ಣವನ್ನು ಬೆಲ್ಲದೊಂದಿಗೆ ಬೆರೆಸಿ ಊಟದ ,ಮೊದಲು ಸೇವಿಸುವುದರಿಂದ ಮೂಲವ್ಯಾಧಿ ರೋಗವು ನಿವಾರಣೆ.
- ಅಣಿಲೆಕಾಯಿಯನ್ನು ಜೇನುತುಪ್ಪದೊಂದಿಗೆ ಸೇವಿಸಿದರೆ ವಾಂತಿಯು ನಿವಾರಣೆಯಾಗುತ್ತದೆ.
- ಅಣಿಲೆಕಾಯಿ, ಶುಂಠಿ, ಭದ್ರಮುಷ್ಠಿ ಮತ್ತು ಬೆಲ್ಲದಿಂದ ತಯಾರಿಸಿದ ಗುಳಿಗೆಯನ್ನು ಬಾಯಿಯಲ್ಲಿಟ್ಟು ಚೀಪಿದರೆ ಕೆಮ್ಮು ರೋಗವು ನಿವಾರಣೆಯಾಗುತ್ತದೆ.

- ಅಣಿಲೆಕಾಯಿ ಚೂರ್ಣವನ್ನು ಬಿಸಿ ನೀರಿನಲ್ಲಿ ಸೇವಿಸಿದರೆ ಎಕ್ಕಾದೆಯು ನಿವಾರಣೆ.
- ಅಣಿಲೆಕಾಯಿಯ ಪುಡಿಯನ್ನು ಹಾಲಿನೊಂದಿಗೆ ಸೇವಿಸಿದರೆ ಉದರರೋಗವು ಕಡಿಮೆಯಾಗುತ್ತದೆ.
- ಅಣಿಲೆಕಾಯಿ, ಕಹಿಬೇವು ಮತ್ತು ನೆಲ್ಲಿಕಾಯಿಯನ್ನು ಬೆರೆಸಿ ಒಂದು ತಿಂಗಳವರೆಗೆ ಸೇವಿಸಿದರೆ ಕುಷ್ಠ ರೋಗವು ನಿವಾರಣೆಯಾಗುತ್ತದೆ.
- ಅಣಿಲೆಕಾಯಿಯ ಕಷಾಯಕ್ಕೆ ಜೇನು ಬೆರೆಸಿ ಸೇವಿಸುವುದರಿಂದ ಗಂಟಲು ರೋಗಗಳು ನಿವಾರಣೆಯಾಗುತ್ತದೆ.

ಎಚ್ಚರಿಕೆ

ಅಣಿಲೆಕಾಯಿಯನ್ನು ಆಯಾಸಗೊಂಡವರು, ಗರ್ಭಿಣಿಯರು, ಅಶಕ್ತರು, ರಕ್ತದಾನ ಮಾಡಿದವರು, ಪಿತ್ತ ಪ್ರಕೃತಿವುಳ್ಳವರು, ಬಾಯಾರಿಕೆಯಾದವರು ಸೇವಿಸುವುದು ಸೂಕ್ತವಲ್ಲ.

ಹದಿಹರೆಯದವರು ದೇಶದ ಮುಖ್ಯ
ಮಾನವ ಸಂಪತ್ತು

ಅನಂತವಾಗಿರುವ ಅನಂತಬೇರು

Hemidesmus indicus, R.Br.

Asclepiadaceae





ಸಾಮಾನ್ಯವಾಗಿ ನಮ್ಮ ಸುತ್ತಮುತ್ತಲಿನ ಗುಡ್ಡಗಾಡುಗಳಲ್ಲಿ ಕಾಣಸಿಗುವ ಅನಂತಬೇರು ಎಲ್ಲರಿಗೂ ಪರಿಚಿತ ದ್ರವ್ಯ. ಅನಂತಮೂಲವು ಕೆಂಪುಮಣ್ಣು ಇರುವ ಭೂಮಿಯಲ್ಲಿ, ಎಂದರೆ ಬೆಟ್ಟದ ಪ್ರದೇಶದಲ್ಲಿ ಹೆಚ್ಚಾಗಿ ಬೆಳೆಯುತ್ತದೆ. ಅನಂತ ಬೇರಿನಿಂದ ಅನೇಕ ತರಹದ ಔಷಧಿಗಳಾದ ಸರ್‌ಸಪರಿಲ್ಲಾ ಮುಂತಾದ ಔಷಧಿಯನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ. ಆದರೆ ಅನಂತ ಬೇರಿನ ಗುಣಧರ್ಮ, ಉಪಯೋಗದ ಬಗ್ಗೆ ತಿಳಿದುಕೊಳ್ಳುವ ಕುತೂಹಲ, ಸಹನೆಯಾಗಲಿ ನಮ್ಮ ಜನರಿಗೆ ಇಲ್ಲದೆ ಇರುವುದು ವಿಪರ್ಯಾಸ. ಈ ದ್ರವ್ಯವನ್ನು ಚರ್ಮವ್ಯಾಧಿಗಳಿಗೆ ಹೆಚ್ಚಾಗಿ ಬಳಸುತ್ತಾರೆ. ಯಾಕೆಂದರೆ ಇದು ಚರ್ಮದಲ್ಲಿ ಉತ್ಪತ್ತಿಯಾಗಿರುವ ಅನೇಕ ತರಹದ ದೋಷಗಳನ್ನು ಹೊರಹಾಕುತ್ತದೆ. ಯುನಾನಿ ವೈದ್ಯರು ಈ ದ್ರವ್ಯವನ್ನು ಬೇಧಿಕಾರಕ, ಜ್ವರನಾಶಕ, ಅರ್ಧ'ತಲೆನೋವು, ಗಂಟುನೋವುಗಳಿಗೆ ಪರಿಣಾಮಕಾರಿಯೆಂದು ಹೇಳುತ್ತಾರೆ. ಕೊತ್ತಂಬರಿ, ಜೀರಿಗೆ ಮತ್ತು ಅನಂತಬೇರಿನ ಪುಡಿಯನ್ನು ಸೇರಿಸಿ ತಯಾರಿಸಿದ ಕಷಾಯವನ್ನು ಸೇವಿಸುವುದನ್ನು ನಾವು ಈಗಲೂ ಹಳ್ಳಿ, ಪಟ್ಟಣಗಳಲ್ಲಿ ಕಾಣಬಹುದು.

ಬಹು ಭಾಷಾ ಹೆಸರುಗಳು

ಕನ್ನಡ : ಅನಂತಬೇರು, ನಾಮದ ಬೇರು

ಸಂಸ್ಕೃತ : ಅನಂತಮೂಲ, ಸಾರಿವಾ

ತುಳು : ನಾಮದ ಬೇರ್

ಹಿಂದಿ : ಸರಿವನ

ಇಂಗ್ಲೀಷ್ : ಇಂಡಿಯನ್ ಸರ್ಸಪರಿಲ್ಲ

ಪರ್ಯಾಯ ಪದಗಳು

ಸಾರಿವಾ, ಶ್ವೇತಸಾರಿವಾ, ಗೋಪೀಸಾರಿವಾ, ಗೋಪ, ಗೋಪವಲ್ಲೀ, ಕೃಷ್ಣೋದರೀ, ಶ್ಯಾಮಾ, ಚಂದನಗಂಧಾ, ಗೋಪಕನ್ಯಾ, ಅನಂತಾ, ಅನಂತಮೂಲ, ಉತ್ಪಲ ಸಾರಿವಾ, ಚಂದನಾ, ಗೋಪವಧೂ, ಜಂಬೂಪತ್ರಾ

ದ್ರವ್ಯದ ವರ್ಣನೆ

ಹಳ್ಳಿಯ ಜನರಿಗೆ ಪರಿಚಯವಿರುವ ಅನಂತಮೂಲವು ಒಂದು ತೆಳ್ಳನೆಯ ಕುರುಚಲು ಬಳ್ಳಿ, ಇದರ ಎಲೆಯು ಒಂದು ಸೆಂ. ಮೀನಷ್ಟು ಉದ್ದವಾಗಿ ಬೆಳೆಯುತ್ತದೆ. ಎಲೆಯು ಹಸಿರಾಗಿದ್ದೂ, ಮಧ್ಯೆ ಬಿಳಿ ಬಣ್ಣದ ನಾಮವಿರುವುದು. ಆದ್ದರಿಂದಲೇ ಈ ಬಳ್ಳಿಯನ್ನು 'ನಾಮದ ಬಳ್ಳಿ' ಎಂಬ ಹೆಸರಿನಿಂದ ಕರೆಯುತ್ತಾರೆ. ಈ ದ್ರವ್ಯದ ಬೇರು ಬಹಳ ಸುಗಂಧತೆಯಿಂದ ಕೂಡಿದೆ. ಆದ್ದರಿಂದ 'ಸುಗಂಧಿಬೇರು' ಎಂಬುದಾಗಿಯೂ ಕರೆಯುತ್ತಾರೆ. ಬೇರನ್ನು ತುಂಡರಿಸಿದಾಗ ಪರಿಮಳವುಳ್ಳ ಹಾಲು ಸೋರುತ್ತದೆ. ಬೇರುಗಳು ಭೂಮಿಯಲ್ಲಿ ಆಳವಾಗಿ ಇಳಿದಿರುತ್ತದೆ. ಈ ದ್ರವ್ಯದ ಬೇರನ್ನು ಮುಖ್ಯವಾಗಿ ರಕ್ತಪಿತ್ತ, ವಾತರಕ್ತ, ಸೆರಗು, ಕೆಮ್ಮು, ಉಬ್ಬಸ, ಅರುಚಿ, ಜ್ವರ ಹೀಗೆ ಅನೇಕ ರೋಗಗಳಿಗೆ ಉಪಯೋಗಿಸುತ್ತಾರೆ. ಭಾರತದ ಎಲ್ಲ ಪ್ರಾಂತ್ಯಗಳಲ್ಲಿ ಬೆಳೆಯುವ ಈ ಮೂಲಿಕೆ ಶ್ರೀಲಂಕಾ, ಮಲಯಾ, ಬರ್ಮಾ ದೇಶದಲ್ಲಿ ಹೆಚ್ಚಾಗಿ ಬೆಳೆಯುತ್ತದೆ.

ವಿಧಗಳು

ಗೋಪಾ, ಗೋಪವಲ್ಲೀ, ಉತ್ಪಲಸಾರಿವಾ ಹೀಗೆ ಅನೇಕ ಬಗೆಗಳು ಈ ದ್ರವ್ಯದಲ್ಲಿ ಕಂಡು ಬಂದರೂ, ಆಧುನಿಕ ಆಚಾರ್ಯರು ಇದನ್ನು ಮುಖ್ಯವಾಗಿ 2 ವಿಧವಾಗಿ ವಿಂಗಡಿಸಿದ್ದಾರೆ. ಅವು

1. ಬಿಳಿಅನಂತಬೇರು (Hemidesmus indicus)
2. ಕಪ್ಪು ಅನಂತಬೇರು (Ichnocarpus frutescence)

   ಮಾರುಕಟ್ಟೆಯಲ್ಲಿ Decalepis hamiltonii ಎಂಬ ವಿಧವನ್ನು ಅನಂತಮೂಲವಾಗಿ ಮಾರಾಟ ಮಾಡುತ್ತಾರೆ.

ಉಪಯುಕ್ತ ಅಂಗ

- ಬೇರು

ದ್ರವ್ಯದ ಗುಣಧರ್ಮಗಳು

ರಸ : ಮಧುರ, ತಿಕ್ತ

ಗುಣ : ಗುರು, ಸ್ನಿಗ್ಧ

ವೀರ್ಯ : ಶೀತ

ವಿಪಾಕ : ಮಧುರ

ಕರ್ಮ : ತ್ರಿದೋಷಹರ, ಗ್ರಾಹೀ, ದೀಪನ, ವಿಷಘ್ನ, ಶುಕ್ರಲ

ಸಾರಿವಾಯುಗಲಂ ಸ್ವಾದು ಸ್ನಿಗ್ಧಂ ಶುಕ್ರಕರಂ ಗುರು।
ಅಗ್ನಿಮಾಂದ್ಯಾರುಚಿ ಶ್ವಾಸಕಾಸಾಮವಿಷನಾಶನಮ್॥
ದೋಷತ್ರಯಾಸ್ರಪ್ರದರ ಜ್ವರಾತಿಸಾರನಾಶನಮ್॥ *(ಭಾವಪ್ರಕಾಶ)*

ಎಂದರೆ ಅನಂತಬೇರು ಸ್ವಾಧುರಸದಿಂದ ಮತ್ತು ವಿಪಾಕದಿಂದ ಕೂಡಿದೆ. ಸ್ನಿಗ್ಧ ಮತ್ತು ಗುರು ಗುಣದಿಂದ ಕೂಡಿದೆ. ಶುಕ್ರಕರವಾಗಿದೆ. ತ್ರಿದೋಷಹರವಾಗಿದೆ. ಅಗ್ನಿಮಾಂದ್ಯ, ರುಚಿಯಿಲ್ಲದಿರುವಿಕೆ, ಶ್ವಾಸ, ಕೆಮ್ಮು, ಆಮಜವಿಕಾರ, ವಿಷರೋಗ, ಪ್ರದರ, ಜ್ವರ, ಅತಿಸಾರ ಮುಂತಾದ ರೋಗವನ್ನು ನಿವಾರಿಸುತ್ತದೆ.

ಔಷಧಿ ಪ್ರಮಾಣ

ಲೇಪ – 5–10 ಗ್ರಾಂ

ಚೂರ್ಣ – 3–5 ಗ್ರಾಂ

ಆಸವ – 50 ಮಿ.ಲೀ.

ಪಾನಕ – 10–50 ಮಿ.ಲೀ.

ಔಷಧೀಯ ಯೋಗಗಳು

- ಪಿಂಡ ತೈಲ
- ಸಾರಿವಾದ್ಯಾಸವ
- ಮಹಾತಿಕ್ತಕ ಘೃತ
- ಪಿಪ್ಪಲ್ಯಾದಿ ಘೃತ

ಔಷಧೀಯ ಉಪಯೋಗಗಳು

- ಅನಂತಬೇರನ್ನು ಗಾಯ ಶುಚಿ ಮಾಡಲು ಉಪಯೋಗಿಸಬಹುದು.
- ಅನಂತಬೇರು, ಅಮೃತಬಳ್ಳಿ, ಹುರಿದ ಜೀರಿಗೆ ಮತ್ತು ಮಂಜಿಷ್ಠ ಸೇರಿಸಿ ಕಷಾಯ ಮಾಡಿ ಸೇವಿಸುವುದರಿಂದ ಮೂತ್ರದಲ್ಲಿ ಉರಿ ಮತ್ತು ನೋವು ಕಡಿಮೆಯಾಗುತ್ತದೆ.
- ಅನಂತಬೇರು, ಭದ್ರಮುಷ್ಠಿ, ಪಡವಳಕಾಯಿ, ಅಗಲಶುಂಠಿಯ ಕಷಾಯವನ್ನು ಮಾಡಿ ಕುಡಿಯುವುದರಿಂದ ವಿಷಮ ಜ್ವರವು ನಿವಾರಣೆಯಾಗುತ್ತದೆ.
- ಅನಂತಬೇರಿನಿಂದ ತಯಾರಿಸಿದ ಲೇಪವನ್ನು ಬಾಹ್ಯ ತ್ವಚೆಗೆ ಲೇಪಿಸುವುದರಿಂದ ಮತ್ತು ಅದರ ಕಷಾಯವನ್ನು ಕುಡಿಯುವುದರಿಂದ ಕುಷ್ಠರೋಗವು ನಾಶವಾಗುತ್ತದೆ.
- ಎರಡರಷ್ಟು ಪ್ರಮಾಣದ ಅನಂತ ಬೇರಿನ ಕಷಾಯಕ್ಕೆ ಒಂದು ಪ್ರಮಾಣ ತುಪ್ಪ ಬೆರೆಸಿ ಕಾಯಿಸಿ ಸೇವಿಸುವುದರಿಂದ ಉಬ್ಬಸ ರೋಗವು ನಿವಾರಣೆಯಾಗುತ್ತದೆ.
- ಅನಂತಬೇರಿನ ಚೂರ್ಣ ಅಥವಾ ಲೇಪವನ್ನು ಜೇನುತುಪ್ಪದಲ್ಲಿ ಸೇವನೆ ಮಾಡಿದರೆ ಜೇಡರ ವಿಷಕ್ಕೆ ಒಳ್ಳೆಯದು.
- ಅನಂತಬೇರಿನ ಚೂರ್ಣವನ್ನು ಜೇನುತುಪ್ಪದೊಡನೆ ಸೇವಿಸಿದರೆ ಸಂಧಿವಾತವು ಗುಣವಾಗುತ್ತದೆ.
- ಅನಂತಬೇರಿನ ಚೂರ್ಣಕ್ಕೆ ತಾವರೆದಂಟು ಸೇರಿಸಿ ಕಷಾಯ ಮಾಡಿ ಅದಕ್ಕೆ ಸಕ್ಕರೆ ಬೆರೆಸಿ ಕುಡಿದರೆ, ಪಿತ್ತದಿಂದ ಬಂದ ಜ್ವರ ಮತ್ತು ವಾಂತಿ ನಿಲ್ಲುತ್ತದೆ.
- ಅನಂತ ಬೇರಿನ ತೊಗಟೆಗೆ 11 ಒಳ್ಳೆ ಮೆಣಸಿನ ಕಾಳು ಸೇರಿಸಿ ನೀರಿನ ಸಹಾಯದಿಂದ ಅರೆದು ಪ್ರತಿದಿನ ಬೆಳಗ್ಗೆ 7 ದಿವಸ ಸೇವಿಸುವುದರಿಂದ ಕಣ್ಣಿನ ಮತ್ತು ಶರೀರದ ಹಳದಿ ಬಣ್ಣ ದೂರವಾಗಿ, ಕಾಮಾಲೆ ರೋಗವು ನಿವಾರಣೆ.
- ಸಿಪ್ಪೆ ತೆಗೆದ ಅನಂತ ಬೇರನ್ನು ಹಾಲಿನಲ್ಲಿ ಅರೆದು, ಬೆಳಗ್ಗೆ ಒಂದು ವಾರದವರೆಗೆ ಸೇವನೆ ಮಾಡುವುದರಿಂದ ಎದೆ ಹಾಲು ವೃದ್ಧಿಯಾಗುತ್ತದೆ.
- ರಕ್ತ ಶುದ್ಧಿಗೊಳ್ಳಲು ಅನಂತ ಬೇರಿನ ಕಷಾಯವನ್ನು ದಿನಾಲೂ ಬೆಳಗ್ಗೆ ಸೇವಿಸಬೇಕು.
- ಒಂದು ಚಮಚ ಅನಂತ ಬೇರಿನ ಚೂರ್ಣ ಮತ್ತು ಸಕ್ಕರೆ ಚೂರ್ಣವನ್ನು 100 ಮಿ. ಲೀ ಹಾಲಿಗೆ ಬೆರೆಸಿ, ಅದಕ್ಕೆ 50 ಮಿ.ಲೀ ನೀರು ಸೇರಿಸಿ, ಕುದಿಸಿ ಹಾಲಿನ ಭಾಗದಷ್ಟು ಉಳಿಯುವಾಗ ಕೆಳಗಿಳಿಸಿ ತಣ್ಣಗಾದ ನಂತರ ಸೇವನೆ ಮಾಡುವುದರಿಂದ ಬಿಳಿಸೆರಗು, ನರಗಳ ದೌರ್ಬಲ್ಯ, ವಾತರೋಗಗಳು ನಿವಾರಣೆ.

ಆರೋಗ್ಯವಂತ ಮಗು ದೇಶದ ಸಂಪತ್ತು

ಅಮೃತದಂತೆ ಇರುವ ಅಮೃತ ಬಳ್ಳಿ

Tinospora cordifolia, Willd.
Menispermaceae



ಆಯುರ್ವೇದ ಶಾಸ್ತ್ರದಲ್ಲಿ ಅಮೃತ ಬಳ್ಳಿಯು ಪ್ರಾಚೀನ ಕಾಲದಿಂದ ಔಷಧಿಗೆ ಉಪಯೋಗಿಸುವ ಮುಖ್ಯವಾದ ಔಷಧಿ ಸಸ್ಯಗಳಲ್ಲಿ ಒಂದಾಗಿದೆ. ಅಮೃತಬಳ್ಳಿಯು ಮನೆಯಲ್ಲಿ ಇದ್ದರೆ ಹಾವು ಮತ್ತು ಚೇಳು ಮನೆಯೊಳಗೆ ಪ್ರವೇಶಿಸುವುದಿಲ್ಲ ಎಂಬ ನಂಬಿಕೆ ಇದೆ. ಪುರಾಣದಲ್ಲಿ ರಾಮ ಮತ್ತು ರಾವಣರ ನಡುವಿನ ಯುದ್ಧದಲ್ಲಿ ಅನೇಕ ಮಂಗಗಳು ಸತ್ತವು. ಆಗ ಇಂದ್ರನು ಅಮೃತವನ್ನು ಅವುಗಳ ಮೇಲೆ ಚಿಮ್ಮಿಸಿದನು. ಆ ಕ್ರಿಯೆಯಲ್ಲಿ ಕೆಲವು ಅಮೃತದ ಹನಿಗಳು ಭೂಮಿಯ ಮೇಲೆ ಬಿದ್ದಾಗ ಅಮೃತ ಬಳ್ಳಿ ಎಂಬ ಸಸ್ಯವು ಉತ್ಪತ್ತಿಯಾಯಿತು ಎಂಬ ಕಥೆ ಇದೆ.

ಬಹು ಭಾಷಾ ಹೆಸರುಗಳು

ಕನ್ನಡ : ಅಮೃತಬಳ್ಳಿ
ಸಂಸ್ಕೃತ : ಗುಡೂಚೀ
ತುಳು : ಅಮೃತಬಳ್ಳಿ
ಹಿಂದಿ : ಗಿಲೋಯ್
ಇಂಗ್ಲೀಷ್ : ಪೋಯಿಸನ್ ಬೆರ್ರಿ

ಪರ್ಯಾಯ ಪದಗಳು

ಅಮೃತ, ಅಮೃತವಲ್ಲಿ, ಜೀವಂತಿಕ, ಜ್ವರಾರಿ, ಕುಮಾರಿಕ, ಶ್ಯಾಮ, ಗ್ದುಡೂಚೀ, ಕುಂಡಲೀ, ಗುಡೂಚಿಕಾ, ಚಕ್ರಾಂಗೀ, ಚಿಕ್ರಲಕ್ಷಣಾ, ಚಂದ್ರಹಾಸ, ತಂತ್ರಿಕಾ, ದೇವನಿರ್ಮಿತಾ, ನಾಗಕನ್ಯಾಕಾ, ನಾಗಕುಮಾರಿಕಾ, ಭಿಷಕ್‌ಪ್ರಿಯಾ, ಮಂಡಲೀ, ಸೋಮಾ.

ದ್ರವ್ಯದ ವರ್ಣನೆ

ಅಮೃತ ಬಳ್ಳಿಯು ಉದ್ದನೆಯ ಬಳ್ಳಿಯಾಗಿ ಬೆಳೆಯುತ್ತದೆ. ಇದರ ಎಲೆಯು 10–15 ಸೆಂ.ಮೀ. ನಷ್ಟು ಉದ್ದವಿರುತ್ತದೆ. ಎಲೆಯು ಹಸಿರು ಬಣ್ಣದಿಂದ ಕೂಡಿದೆ. ಎಲೆಯು ಹೃದಯಾಕಾರದಲ್ಲಿ ಇದೆ. ಅಮೃತಬಳ್ಳಿಯ ಕಾಂಡದಲ್ಲಿ ತೆಳುವಿನಿಂದ ಕೂಡಿದ ಪೊರೆಗಳಿರುತ್ತದೆ. ಗುಂಪು ಗುಂಪಾಗಿ ಕೂಡಿದ ಹೂವುಗಳು ಹಳದಿ ಬಿಳಿ ಮಿಶ್ರಿತ ಬಣ್ಣದಿಂದ ಕೂಡಿದೆ. ಸಾಮಾನ್ಯವಾಗಿ ಈ ಬಳ್ಳಿಯ ಬೇವಿನ ಮರ, ಮಾವಿನ ಮರಗಳ ಆಸರೆಯಲ್ಲಿ ಹಬ್ಬಿಕೊಂಡು ಬೆಳೆಯುತ್ತದೆ. ಈ ಬಳ್ಳಿಯು ಹೂಗಳನ್ನು ವರ್ಷ ಋತುವಿನಲ್ಲಿ, ಹಣ್ಣನ್ನು ಚಳಿಗಾಲದಲ್ಲಿ ಬಿಡುತ್ತದೆ. ಭಾರತದಲ್ಲೆಡೆ ಬೆಳೆಯುವ ಈ ದ್ರವ್ಯವು ಬರ್ಮಾ, ಅಂಡಮಾನ್, ಶ್ರೀಲಂಕಾ ಮೊದಲಾದ ದೇಶಗಳಲ್ಲಿ ಹೆಚ್ಚಾಗಿ ಬೆಳೆಯುತ್ತದೆ.

ವಿಧಗಳು

ಮೂಲಗ್ರಂಥಗಳಲ್ಲಿ ಒಂದೇ ವಿಧದ ಅಮೃತಬಳ್ಳಿ ಎಂಬ ಸಸ್ಯವು ಕಂಡರೂ, ನಿಘಂಟುಕಾರರ ಪ್ರಕಾರ ಈ ದ್ರವ್ಯದಲ್ಲಿ ಎರಡು ವಿಧಗಳಿವೆ. ಅವು

1. ಗುಡೂಚಿ
2. ಪದ್ಮ ಗುಡೂಚಿ

ಗುಡೂಚಿ ಮತ್ತು ಪದ್ಮ ಗುಡೂಚಿಯನ್ನು ಸಸ್ಯ ಶಾಸ್ತ್ರದಲ್ಲಿ Tinospora cordifolia ಮತ್ತು Tinospora malabarica ಎಂದು ಕ್ರಮವಾಗಿ ಕರೆಯುತ್ತಾರೆ.

ಉಪಯುಕ್ತ ಅಂಗಗಳು

- ಕಾಂಡ
- ಎಲೆ
- ಬೇರು

ದ್ರವ್ಯದ ಗುಣಧರ್ಮಗಳು

ರಸ : ತಿಕ್ತ, ಕಷಾಯ, ಮಧುರ

ಗುಣ : ಗುರು, ಸ್ನಿಗ್ಧ

ವೀರ್ಯ : ಉಷ್ಣ

ವಿಪಾಕ : ಮಧುರ

ಕರ್ಮ : ತ್ರಿದೋಷಶಾಮಕ, ಮೇಧ್ಯ, ರಸಾಯನ, ದೀಪನೀಯ.

ಗುಡೂಚೀ ಕಟುಕಾ ತಿಕ್ತಾ ಸ್ವಾದುಪಾಕಾ ರಸಾಯನೀ।
ಸಂಗ್ರಾಹಿಣೀ ಕಷಾಯೋಷ್ಣಾ ಲಘ್ವೀ ಬಲ್ಯಾಗ್ನಿದೀಪನೀ॥
ದೋಷತ್ರಯಾಮತೃಡ್‌ದಾಹಮೇಹಕಾಸಾಂಶ್ಚ ಪಾಂಡುತಾಂ।
ಕಾಮಲಾಕುಷ್ಠವಾತಾಸ್ರಜ್ವರಕ್ರಿಮಿವಮೀನ್ ಹರೇತ್॥
ಪ್ರಮೇಹ ಶ್ವಾಸಕಾಸಾರ್ಶಃ ಕೃಚ್ಛ್ರಹೃದ್ರೋಗವಾತನುತ್॥ *(ಭಾವಪ್ರಕಾಶ)*

ಎಂದರೆ ಅಮೃತ ಬಳ್ಳಿಯು ಕಟು ತಿಕ್ತ ರಸದಿಂದ ಕೂಡಿದೆ. ಮಧುರ ವಿಪಾಕದಿಂದ ಕೂಡಿದೆ. ರಸಾಯನ, ಬಲಕರ, ಅಗ್ನಿದೀಪನ, ತ್ರಿದೋಷಶಾಮಕವಾಗಿದೆ. ಆಮ, ಬಾಯಾರಿಕೆ, ಉರಿ, ಪ್ರಮೇಹ, ಕೆಮ್ಮು, ಪಾಂಡು, ಕಾಮಾಲೆ, ಕುಷ್ಠ, ವಾತರಕ್ತ, ಜ್ವರ, ಕ್ರಿಮಿ, ವಾಂತಿ, ಶ್ವಾಸ, ಮೂಲವ್ಯಾಧಿ, ಹೃದಯಕ್ಕೆ ಸಂಬಂಧಿಸಿದ ರೋಗಗಳನ್ನು ನಿವಾರಿಸುತ್ತದೆ.

ಔಷಧಿ ಪ್ರಮಾಣ

ಕಾಂಡದ ಪುಡಿ – 3–6 ಗ್ರಾಂ.

ಕಷಾಯ – 50–100 ಮಿ.ಲೀ.

ಸ್ವರಸ – 10–20 ಮಿ.ಲೀ.

ಸತ್ವ – 1–2 ಗ್ರಾಂ.

ಔಷಧಿ ಯೋಗಗಳು

- ಅಮೃತಾರಿಷ್ಟ
- ಅಮೃತಸತ್ವ
- ಗುಡೂಚ್ಯಾದಿ ಚೂರ್ಣ
- ಗೂಡೂಚ್ಯಾದಿ ಕ್ವಾಥ

ಔಷಧೀಯ ಉಪಯೋಗಗಳು

- ಅಮೃತಬಳ್ಳಿಯ ರಸವನ್ನು ನಾಲ್ಕು ಚಮಚದಷ್ಟು ದಿವಸಕ್ಕೆ ಎರಡು ಬಾರಿ ಸೇವಿಸಿದರೆ ಬುದ್ಧಿ ಶಕ್ತಿಯು ಹೆಚ್ಚುತ್ತದೆ.

- ಅಮೃತಬಳ್ಳಿ ರಸವನ್ನು ಜೇನುತುಪ್ಪದೊಂದಿಗೆ ಸೇವಿಸುವುದರಿಂದ ಪ್ರಮೇಹ ರೋಗವು ಕಡಿಮೆಯಾಗುತ್ತದೆ.
- ಅಮೃತಬಳ್ಳಿ ಕಷಾಯವನ್ನು ಮಾಡಿ ಅದು ತಣ್ಣಗಾದ ಮೇಲೆ ಜೇನುತುಪ್ಪದೊಂದಿಗೆ ಸೇರಿಸಿ ಕುಡಿಯುವುದರಿಂದ ಅಮ್ಲಪಿತ್ತ ರೋಗವು ಕಡಿಮೆಯಾಗುತ್ತದೆ.
- ಅಮೃತಬಳ್ಳಿ ಮತ್ತು ಶತಾವರಿಯ ಸಮಪ್ರಮಾಣದ ಸ್ವರಸಕ್ಕೆ ಬೆಲ್ಲ ಸೇರಿಸಿ ಸೇವಿಸುವುದರಿಂದ ವಾತ ದೋಷದಿಂದ ಉಂಟಾದ ಜ್ವರ ನಿವಾರಣೆಯಾಗುತ್ತದೆ.
- ಅಮೃತ ಬಳ್ಳಿ, ಕಹಿ ಬೇವು ಮತ್ತು ನೆಲ್ಲಿಕಾಯಿಯ ಕಷಾಯಕ್ಕೆ ಜೇನುತುಪ್ಪ ಬೆರೆಸಿ ಸೇವಿಸುವುದರಿಂದ ಬಿಟ್ಟು ಬಿಟ್ಟು ಬರುವ ಜ್ವರವು ನಿವಾರಣೆಯಾಗುತ್ತದೆ.
- ಅಮೃತ ಬಳ್ಳಿಯ ಕಷಾಯಕ್ಕೆ ಜೇನು ಬೆರೆಸಿ ಬೆಳಗಿನ ಜಾವ ಸೇವಿಸುವುದರಿಂದ ಕಾಮಾಲೆ ರೋಗವು ನಿವಾರಣೆಯಾಗುತ್ತದೆ.
- ಅಮೃತಬಳ್ಳಿಯ ಸಿರಪ್‌ಸೇವನೆಯಿಂದ ಬಾಯಾರಿಕೆ ನಿವಾರಣೆಯಾಗುತ್ತದೆ.
- ಅಮೃತ ಬಳ್ಳಿ, ತ್ರಿಫಲ, ಕಹಿಬೇವು, ಪಡವಳ ಕಾಯಿಗಳನ್ನು ಬೆರೆಸಿ ತಯಾರಿಸಿದ ಕಷಾಯಕ್ಕೆ ಜೇನುತುಪ್ಪ ಮತ್ತು ಸಕ್ಕರೆ ಸೇರಿಸಿ ಸೇವಿಸುವುದರಿಂದ ವಾಂತಿ ಮತ್ತು ಅಮ್ಲಪಿತ್ತ ರೋಗವು ನಿವಾರಣೆಯಾಗುತ್ತದೆ.
- 30 ಗ್ರಾಂನಷ್ಟು ಅಮೃತಬಳ್ಳಿ, ಶುಂಠಿ ಮತ್ತು ಕೊತ್ತಂಬರಿ ಬೆರೆಸಿ ತಯಾರಿಸಿದ ಕಷಾಯ ಸೇವನೆಯಿಂದ ವಾತರಕ್ತ, ಆಮವಾತ, ಕುಷ್ಠ ರೋಗಗಳು ನಿವಾರಣೆಯಾಗುತ್ತದೆ.
- ಅಮೃತಬಳ್ಳಿಯ ರಸವನ್ನು ಮಜ್ಜಿಗೆಯಲ್ಲಿ ಸೇವಿಸುವುದರಿಂದ ಮೂಲವ್ಯಾಧಿಗೆ ಒಳ್ಳೆಯದು.
- ಅಮೃತಬಳ್ಳಿಯ ರಸಕ್ಕೆ ಜೇನುತುಪ್ಪ ಸೇರಿಸಿ ಸೇವಿಸುವುದರಿಂದ ನೆಗಡಿ, ಕೆಮ್ಮು, ಪ್ರಮೇಹ ರೋಗವು ನಿವಾರಣೆಯಾಗುತ್ತದೆ.
- ದಿನಾಲು ಅಮೃತಬಳ್ಳಿ ಕಾಂಡದ ರಸ ನುಂಗುತ್ತಿದ್ದರೆ ಸಿಹಿಮೂತ್ರ ರೋಗ ನಿವಾರಣೆಯಾಗುತ್ತದೆ.

ಅಮೃತಸತ್ವ ತಯಾರಿಕೆ ವಿಧಾನ

ಹಸಿಯಾದ ಅಮೃತಬಳ್ಳಿಯ ಕಾಂಡದ ಹೊರಗಿನ ಸಿಪ್ಪೆ ತೆಗೆದು, ತುಂಡುಗಳಾಗಿ ಕತ್ತರಿಸಿ, ಆ ತುಂಡುಗಳನ್ನು ಜಜ್ಜಿ ಒಂದು ಮಡಿಕೆಯಲ್ಲಿ ಹಾಕಿಡಬೇಕು. ಮಡಿಕೆಗೆ ತುಂಡುಗಳ 8 ಭಾಗ ನೀರು ಸುರಿದು ರಾತ್ರಿ ಪೂರ್ತಿ ಇಡಬೇಕು. ಬೆಳಗ್ಗೆ ಈ ಮಿಶ್ರಣವನ್ನು ಒಂದು ಸಲಾಕೆ ಅಥವಾ ಕೈಯಿಂದ ಚೆನ್ನಾಗಿ ಕಿರುವಬೇಕು. ಆಗ

ಅಮೃತಬಳ್ಳಿಯ ಗೋಂದಿನ ದ್ರಾವಣ ನೀರಿಗೆ ಬರುತ್ತದೆ. ನಂತರ ಅಮೃತ ಬಳ್ಳಿಯ ಕಾಂಡವನ್ನು ನೀರಿನಿಂದ ತೆಗೆದು, ನೀರನ್ನು ಅಲ್ಲಾಡಿಸದೆ ಹಾಗೆಯೇ ಬಿಡಬೇಕು. ಆಗ ಸತ್ವಾಂಶವು ಮಡಿಕೆಯ ಕೆಳಭಾಗದಲ್ಲಿ ಸಂಗ್ರಹವಾಗುತ್ತದೆ. ಆಗ ಮೇಲಿನ ನೀರಿನಾಂಶವನ್ನು ಚೆಲ್ಲಿ, ಮಡಿಕೆಯನ್ನು ಬಿಸಿಲಿನಲ್ಲಿ ಒಣಗಿಸಬೇಕು. ನಂತರ ಸಂಗ್ರಹವಾದ ಅಮೃತಬಳ್ಳಿಯ ಸತ್ವವನ್ನು, ಗ್ಲಾಸ್‌ಪಾತ್ರೆಯಲ್ಲಿ ಸಂಗ್ರಹಿಸಿಡಬೇಕು. ಅಮೃತ ಸತ್ವವನ್ನು 500 ಮಿ.ಗ್ರಾಂ - 1 ಗ್ರಾಂ. ನಷ್ಟು ಜೇನಿನೊಂದಿಗೆ ಸೇವಿಸುವುದರಿಂದ ಕ್ಷಯ ರೋಗ, ರಕ್ತಪಿತ್ತ, ಪ್ರದರ ರೋಗ, ವಾತರಕ್ತ ರೋಗಗಳು ನಿವಾರಣೆಯಾಗುತ್ತದೆ.

ಮಗುವಿನ ಆರೋಗ್ಯ ದೇಶದ ಭಾಗ್ಯ

ಹಳದಿ ಬಣ್ಣದಿಂದ ಕಂಗೊಳಿಸುವ ಅರಿಷಿಣ

Curcuma longa, Linn.

Zingiberaceae





ಅರಿಶಿಣವು ವೇದಕಾಲದಿಂದಲೂ ಹೆಸರುವಾಸಿಯಾದ ದ್ರವ್ಯಗಳಲ್ಲೊಂದಾಗಿದೆ. ನಮ್ಮ ದೇಶದಲ್ಲಿ ಅರಿಶಿಣವಿಲ್ಲದೇ ಯಾವ ಶುಭಕಾರ್ಯಗಳು ಜರುಗುವುದಿಲ್ಲ. ಅಡುಗೆ ಮನೆಯಿಂದ ಹಿಡಿದು ಮದುವೆ ಮಂಟಪದವರೆಗೆ ಅರಿಶಿಣವು ಉಪಯೋಗಿ. ಹಿಂದಿನ ಕಾಲದಲ್ಲಿ ಹೆಣ್ಣು ಮಕ್ಕಳು ಅರಿಷಿಣವನ್ನು ಸೌಭಾಗ್ಯದ ಮುತ್ತೈದೆತನದ ಗುರುತಾಗಿ ಮೈಗೆ ಹಚ್ಚಿಕೊಳ್ಳುತ್ತಿದ್ದರು. ಆ ವಾಡಿಕೆಯು ಇರುವವರೆಗೆ ಹೆಂಗಳೆಯರ ಮೈ ಮೊಗಗಳು ಚಿನ್ನದಂತೆ ಬೆಳಗುತ್ತಿದ್ದವು, ಚರ್ಮರೋಗಗಳಿಲ್ಲದೇ ಹೊಳೆಯುತ್ತಿದ್ದವು. ಅರಿಷಿಣವನ್ನು ಪೂಜೆಗಳಿಗೆ, ಅಡುಗೆಗಳಿಗೆ ಹೇರಳವಾಗಿ ಉಪಯೋಗಿಸುತ್ತಿದ್ದಾರೆ. ನಾವು ದಿನನಿತ್ಯ ತಿನ್ನುವ ಆಹಾರವು ಕಲಬೆರಕೆಯಿಂದ ಅನೇಕ ರಾಸಾಯನಿಕ ವಸ್ತುಗಳಿಂದ ಕೂಡಿದೆ. ಇಂತಹ ರಾಸಾಯನಿಕಗಳು ದೇಹದ ಮೇಲೆ ಅನೇಕ ತರಹದ ದುಷ್ಪರಿಣಾಮಗಳನ್ನು ಬೀರುತ್ತದೆ... ಆದರೆ ಅರಿಷಿಣವನ್ನು ಅಡುಗೆಗೆ ಬಳಸುವುದರಿಂದ ಇಂತಹ ದುಷ್ಪರಿಣಾಮಗಳಿಂದ ದೇಹವನ್ನು ರಕ್ಷಿಸಬಹುದು ಯಾಕೆಂದರೆ ಅರಿಷಿಣವು ಉತ್ತಮ ವಿಷನಾಶಕವಾಗಿದೆ. ವಿಷನಾಶಕ ಅರಿಷಿಣವು ಆಹಾರಕ್ಕೆ ರುಚಿ, ಬಣ್ಣ ಮತ್ತು ಪರಿಮಳವನ್ನು ನೀಡುತ್ತದೆ.

ಬಹು ಭಾಷಾ ಹೆಸರುಗಳು

ಕನ್ನಡ : ಅರಿಷಿಣ
ಸಂಸ್ಕೃತ : ಹರಿದ್ರಾ
ತುಳು : ಮಂಜೊಲ್
ಹಿಂದಿ : ಹಳ್‌ದಿ
ಇಂಗ್ಲೀಷ್ : ಟರ್ಮರಿಕ್

ಪರ್ಯಾಯ ಪದಗಳು

ಹರಿದ್ರಾ, ಕಾಂಚನೀ, ಕ್ರಿಮಿಘ್ನಾ, ಯೋಷಿತಪ್ರಿಯಾ, ಗೌರೀ, ವರವರ್ಣಿನೀ, ಪೀತಾ, ಹರಿತಾ, ಜಯಂತೀ, ಹಟ್ಟ ವಿಲಾಸಿನೀ, ನಿಶಾ.

ದ್ರವ್ಯದ ವರ್ಣನೆ

ಅರಿಶಿನ ಒಂದು ಬಹುವಾರ್ಷಿಕ ಸಸ್ಯ. ಬಹು ವರ್ಷಾಯುವಾದ ಅರಿಶಿಣವು ಸುಮಾರು ಒಂದರಿಂದ ಮೂರು ಮೀಟರ್ ಎತ್ತರಕ್ಕೆ ಬೆಳೆಯುತ್ತದೆ. ಎಲೆಯು 1–2 ಮೀಟರ್‌ನಷ್ಟು ಉದ್ದವಾಗಿ ಅರಿಷಿಣ ಗಡ್ಡೆಯ ವಾಸನೆಯನ್ನು ಬೀರುತ್ತದೆ. ಭೂ ಅಂತರ್ಗತ ಕಾಂಡವನ್ನು ಹೊಂದಿದ್ದ ಈ ಸಸ್ಯವು ಶುಂಠಿ ಸಸ್ಯಕ್ಕೆ ಹೋಲುತ್ತದೆ. ಈ ಸಸ್ಯವು ಹಳದಿ ಬಣ್ಣದ ಹೂವುಗಳನ್ನು ಬಿಡುತ್ತದೆ. ಅರಿಷಿಣವನ್ನು ಸಾಮಾನ್ಯವಾಗಿ ಜೂನ್‌ನಲ್ಲಿ ನೆಟ್ಟು, ಡಿಸೆಂಬರ್–ಜನವರಿಯಲ್ಲಿ ಕಟಾವು ಮಾಡುತ್ತಾರೆ. ಸಾಮಾನ್ಯವಾಗಿ ಎಲ್ಲ ಕಡೆಗಳಲ್ಲಿ ಬೆಳೆಯುವ ಅರಿಷಿಣವು ರಾಜಸ್ಥಾನ್, ಮಧ್ಯಪ್ರದೇಶ, ಮಹಾರಾಷ್ಟ್ರ, ಗೋವಾ, ಕರ್ನಾಟಕ, ಕೇರಳ, ತಮಿಳುನಾಡು, ಆಂಧ್ರಪ್ರದೇಶ ಮುಂತಾದ ರಾಜ್ಯಗಳಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ.

ವಿಧಗಳು

ಹರಿದ್ರಾದಲ್ಲಿ ನಾಲ್ಕು ವಿಧಗಳಿವೆ. ಅವು

- ಹರಿದ್ರಾ (Curcuma longa)
- ದಾರುಹರಿದ್ರಾ (Berberis aristata)
- ವನಹರಿದ್ರಾ (Curcuma aromatica)
- ಆಮ್ರಗಂಧಿ ಹರಿದ್ರಾ (Curcuma amada)

ಉಪಯುಕ್ತ ಅಂಗಗಳು

- ಅರಿಷಿಣ ಬೇರು (ಗಡ್ಡೆ)

ದ್ರವ್ಯದ ಗುಣಧರ್ಮಗಳು

ರಸ : ತಿಕ್ತ, ಕಟು

ಸಂಸ್ಕೃತ : ರೂಕ್ಷ, ಲಘು

ವೀರ್ಯ : ಉಷ್ಣ

ವಿಪಾಕ : ಕಟು

ಕರ್ಮ : ಕಫವಾತಹರ, ವಿಷಘ್ನ, ವರ್ಣ್ಯ, ಕ್ರಿಮಿಘ್ನ

ಹರಿದ್ರಾ ಸ್ವರಸೇ ತಿಕ್ತಾ ರೋಕ್ಷೋಷ್ಣಾ ವಿಷಕುಷ್ಠನುತ್।
ಕಂಡೂಮೇಹವ್ರಣಾನ್ ಹಂತಿ ದೇಹವರ್ಣವಿಧಾಯಿನೀ॥
ವಿಶೋಧಿನೀ ಕ್ರಿಮಿಹರಾ ಪೀನಸಾರುಚಿನಾಶಿನೀ॥ (ಧನ್ವಂತರಿ ನಿಘಂಟು)

ಎಂದರೆ ಅರಿಶಿಣವು ರುಚಿಯಲ್ಲಿ ಕಹಿಯಾಗಿದ್ದು, ರೂಕ್ಷ ಗುಣದಿಂದ ಕೂಡಿದೆ. ಉಷ್ಣ ವೀರ್ಯದಿಂದ ಕೂಡಿದೆ. ವಿಷ ಮತ್ತು ಕುಷ್ಠ ರೋಗಗಳನ್ನು ಪರಿಹರಿಸುತ್ತದೆ. ತುರಿಕೆ, ಪ್ರಮೇಹ ಗಾಯಗಳನ್ನು ಗುಣಪಡಿಸುತ್ತದೆ. ಚರ್ಮದ ಸೌಂದರ್ಯವನ್ನು ಹೆಚ್ಚಿಸುತ್ತದೆ. ರಕ್ತ ಶೋಧಕವೂ, ಕ್ರಿಮಿಹರವೂ, ಪೀನಸ ಮತ್ತು ಅರುಚಿ ರೋಗಗಳನ್ನು ನಿವಾರಿಸುತ್ತದೆ.

ಔಷಧಿ ಪ್ರಮಾಣ

ಸ್ವರಸ : 10–20 ಮಿ.ಲೀ.

ಚೂರ್ಣ : 1–3 ಗ್ರಾಂ

ಫಾಂಟ : 20–50 ಮಿ.ಲಿ.

ಔಷಧೀಯ ಯೋಗಗಳು

- ಹರಿದ್ರಾ ಖಂಡ
- ವ್ರಣಶೋಧನ ತೈಲಮ್
- ನಿಶಾಮಲಕೀ
- ಹರಿದ್ರಾದಿ ಧೂಮವರ್ತಿ
- ಹರಿದ್ರಾದಿ ಘೃತ
- ಹರಿದ್ರಾದಿ ತೈಲ

ಔಷಧೀಯ ಉಪಯೋಗಗಳು

- ಅರಿಶಿಣ ಹಾಗೂ ಶ್ರೀಗಂಧವನ್ನು ತೇಯ್ದು ಪ್ರತಿದಿನ ಮುಖಕ್ಕೆ ಹಚ್ಚಿಕೊಂಡರೆ ಮುಖವು ಕಾಂತಿಯುತವಾಗುತ್ತದೆ. ಮೊಡವೆ ಮತ್ತು ಕಲೆಗಳು ಇದರಿಂದ ಗುಣವಾಗುತ್ತದೆ.

- ಹುರಿದ ಅರಿಷಿಣ ಚೂರ್ಣವನ್ನು ಜೇನಿನೊಂದಿಗೆ ತೆಗೆದುಕೊಳ್ಳುವುದರಿಂದ ಅಸ್ತಮಾ, ಕೆಮ್ಮುರೋಗಕ್ಕೆ ಒಳ್ಳೆಯದು.
- ಅರಿಷಿಣ ಚೂರ್ಣವನ್ನು ಜೇನಿನೊಂದಿಗೆ ಬೆರೆಸಿ ನೆಲ್ಲಿಕಾಯಿಯ ಸ್ವರಸದೊಂದಿಗೆ ಸೇವಿಸುವುದರಿಂದ ಪ್ರಮೇಹ ರೋಗವು ಕಡಿಮೆಯಾಗುತ್ತದೆ.
- ಶರೀರದ ಯಾವುದೇ ಭಾಗಕ್ಕೆ ಪೆಟ್ಟು ಬಿದ್ದು ಊದಿಕೊಂಡಿದ್ದರೆ ಅರಿಷಿಣಪುಡಿ, ಉಪ್ಪು ಸೇರಿಸಿ ನಿಂಬೆರಸದಲ್ಲಿ ಅರೆದು ಲೇಪ ತಯಾರಿಸಿಕೊಂಡು ಅದನ್ನು ಬಿಸಿ ಮಾಡಿ ಪೆಟ್ಟು ಬಿದ್ದಿರುವ ಜಾಗಕ್ಕೆ ಹಚ್ಚಿದರೆ ಊತ ಕಡಿಮೆಯಾಗಿ ನೋವು ನಿವಾರಣೆಯಾಗುತ್ತದೆ.
- ಶೀತ, ನೆಗಡಿ ಇರುವಾಗ ಒಂದು ಲೋಟ ಬಿಸಿ ಹಾಲಿಗೆ ಒಂದು ಚಮಚ ಅರಿಷಿಣ ಪುಡಿ ಹಾಗೂ ಬೆಲ್ಲ ಸೇರಿಸಿ ದಿನಕ್ಕೆ ಎರಡು ಬಾರಿ ಸೇವಿಸಬೇಕು.
- ಅರಿಷಿಣ, ಅಮೃತ ಬಳ್ಳಿ, ಜೇನು ಈ ಮೂರನ್ನು ಸೇರಿಸಿ ತಯಾರಿಸಿದ ಕಷಾಯವನ್ನು ಸೇವಿಸುವುದರಿಂದ ವಾತರಕ್ತರೋಗವು ನಾಶವಾಗುತ್ತದೆ.
- ಅರಿಷಿಣವನ್ನು ತ್ರಿಫಲ ಚೂರ್ಣದೊಂದಿಗೆ ಬೆರೆಸಿ, ತುಪ್ಪ ಮತ್ತು ಜೇನನ್ನು ಸೇರಿಸಿ ಕುಡಿಯುವುದರಿಂದ ರಕ್ತಹೀನತೆಯಿಂದ ಬಳಲುತ್ತಿರುವವರಿಗೆ ಒಳ್ಳೆಯದು.
- ಹರಿದ್ರಾ ಚೂರ್ಣವನ್ನು ನೀರಿನಲ್ಲಿ ಬೆರೆಸಿ, ಅದಕ್ಕೆ ಸ್ವಲ್ಪ ಪ್ರಮಾಣದ ಹುಣಸೆ ಎಲೆಯ ರಸವನ್ನು ಸೇರಿಸಿ ಕುಡಿಯುವುದರಿಂದ ಸಿಡುಬು (Pox) ರೋಗಕ್ಕೆ ಒಳ್ಳೆಯದು.
- ಸಂಧಿವಾತ ನಿವಾರಣೆಗಾಗಿ ಅರಿಷಿಣ ಚೂರ್ಣ ಮತ್ತು ಶುಂಠಿಯನ್ನು ಸಮಾನ ಭಾಗದಲ್ಲಿ ತೆಗೆದುಕೊಂಡು ಹಾಲಿನ ಜೊತೆಗೆ ಸೇವಿಸಬೇಕು.
- ಅರಿಷಿಣ ಬೇರನ್ನು ಜೇನುತಪ್ಪದಲ್ಲಿ ತೇದು ಕೊಟ್ಟರೆ ಮಕ್ಕಳು ಹಾಸಿಗೆಯಲ್ಲಿ ಮೂತ್ರ ವಿಸರ್ಜನೆ ಮಾಡುವುದನ್ನು ತಡೆಗಟ್ಟಬಹುದು.
- ಹೃದಯ ನೋವಿನ ನಿವಾರಣೆಗಾಗಿ ಅರ್ಧ ಚಮಚ ಅರಿಷಿಣ ಪುಡಿಗೆ ಒಂದು ಚಮಚ ಕಲ್ಲು ಸಕ್ಕರೆ ಸೇರಿಸಿ ನುಂಗಬೇಕು.
- ಅರಿಷಿಣ ಬೇರನ್ನು ಸುಟ್ಟು ಅದರ ಚೂರ್ಣವನ್ನು ಲೋಳೆರಸದಲ್ಲಿ ಬೆರೆಸಿ ಕುಡಿಯುವುದರಿಂದ ಮೂಲವ್ಯಾದಿ ನಿವಾರಣೆ.
- ಅರಿಷಿಣ ಬೇರು, ಒಳ್ಳೆ ಮೆಣಸು, ಅತಿಮಧುರ, ಅಮೃತ ಬಳ್ಳಿ ,ಇವುಗಳನ್ನು ಸಮತೂಕದಲ್ಲಿ ಸೇರಿಸಿ ಮಾಡಿದ ಪುಡಿಯ ಕಷಾಯವನ್ನು ಕುದಿಸಿ ಕುಡಿದರೆ ಹಳೆಯ ನೆಗಡಿ, ಜ್ವರ, ಕೆಮ್ಮು, ತಲೆನೋವುಗಳು ಗುಣವಾಗುತ್ತದೆ.
- ಬೇರಿನ ಪುಡಿಮಾಡಿ ನೀರಿನಲ್ಲಿ ಕುದಿಸಿ, ಆ ನೀರಿನಿಂದ ದಿನದಲ್ಲಿ ಕೆಲವು ಸಲ ಕಣ್ಣನ್ನು ಒರೆಸಿದರೆ ಕೆಂಗಣ್ಣು ರೋಗವು ಗುಣವಾಗುತ್ತದೆ.

ಅಶ್ವದಂತೆ ಇರುವ ಅಶ್ವಗಂಧ

Withania somnifera, Dunal.
Solanaceae







"ಮದ್ದಿಲ್ಲದ ರೋಗಕ್ಕೆ ಹಿರೇಮದ್ದು" ಎಂಬುದಾಗಿ ವಿವರಣೆಯನ್ನು ನಾವು ಅನೇಕ ಪುಸ್ತಕಗಳಲ್ಲಿ ಕಾಣಬಹುದು. ಹೌದು, ಈ ದ್ರವ್ಯದ ದಪ್ಪ ಬೇರಿನ ಚೂರ್ಣವನ್ನು ಸಕ್ಕರೆಯ ಜೊತೆಗೆ ಒಂದು ವರ್ಷದವರೆಗೆ ನಿಯಮಬದ್ಧವಾಗಿ ಸೇವಿಸಿದರೆ ಎಲ್ಲಾ ರೋಗದಿಂದ ಶರೀರವು ದೂರವಾಗುತ್ತದೆ ಎಂದು ಆಯುರ್ವೇದ ಶಾಸ್ತ್ರ ಹೇಳುತ್ತದೆ. ಅಶ್ವಗಂಧವು ಹಿಂದಿನ ಕಾಲದಿಂದಲೂ ಔಷಧಕ್ಕೆ ಉಪಯೋಗಿಸುವ ಮುಖ್ಯ ದ್ರವ್ಯಗಳಲ್ಲಿ ಒಂದು. ಇದರ ಬೇರನ್ನು ಹೆಚ್ಚಾಗಿ ಔಷಧಕ್ಕೆ ಉಪಯೋಗಿಸುತ್ತಾರೆ. ಅಶ್ವಗಂಧವು ಅತ್ಯಂತ ವೀರ್ಯವರ್ಧಕ ಔಷಧೀಯ ಸಸ್ಯ ಎಂಬ ಉಲ್ಲೇಖವೂ ಇದೆ. ಹಿರೇಮದ್ದಿನ ಸೇವನೆಯಿಂದ ಮಕ್ಕಳಲ್ಲಿ ಪುಷ್ಟಿ, ಲೈಂಗಿಕ ದೌರ್ಬಲ್ಯ ಮತ್ತು ವೃದ್ಧರ ಅನೇಕ ರೋಗಗಳಿಗೆ ಇದು ಪರಿಣಾಮಕಾರಿ. ಅಶ್ವಗಂಧವನ್ನು ಹಾಲಿನಲ್ಲಿ ಕುದಿಸಿ ಶುದ್ಧ ಮಾಡಬೇಕೆಂದು ಅನೇಕರು ಹೇಳುತ್ತಾರೆ. ಆದರೆ ಹಾಲಿನಲ್ಲಿ ಶುದ್ಧ ಮಾಡದೆ ಅಶ್ವಗಂಧವನ್ನು ಸೇವಿಸುವುದರಿಂದ ಯಾವುದೇ ತೊಂದರೆಬಾರದು. ಯಾಕೆಂದರೆ ಆಯುರ್ವೇದ ಶಾಸ್ತ್ರದಲ್ಲಿ ಅಶ್ವಗಂಧದ ಶೋಧನದ ಬಗ್ಗೆ ಹೇಳಿರುವಂತೆ ಕಂಡು ಬರುವುದಿಲ್ಲ.

ಬಹು ಭಾಷಾ ಹೆಸರುಗಳು

ಕನ್ನಡ : ಹಿರೇಮದ್ದು

ಸಂಸ್ಕೃತ : ಅಶ್ವಗಂಧ

ತುಳು : ಹಿರೇಮದ್ದು

ಹಿಂದಿ : ಅಸಗಂಧಿ

ಇಂಗ್ಲೀಷ್ : ವಿಂಟರ್‌ಚೆರಿ

ಪರ್ಯಾಯ ಪದಗಳು

ಅಶ್ವಗಂಧ, ಗಾತ್ರಕಾರಿ, ಬಲ್ಯಾ, ವಾಜೀಕರಿ, ವಾಜಿಗಂಧ, ವಾರಾಹಕರ್ಣಿ, ಹಯಾಗಂಧ, ಕುಷ್ಟಗಂಧಿ, ಬಲದಾ, ಗೋಕರ್ಣ, ಗಂಧಾಂತ.

ಅಶ್ವಗಂಧದ ಎಲೆಯನ್ನು ಕೈಗಳಲ್ಲಿ ಉಜ್ಜಿದರೆ ಕುದುರೆ ಮೂತ್ರದ ವಾಸನೆ ಬರುವುದು. ಆದುದರಿಂದ ಈ ಮೂಲಿಕೆಗೆ 'ಅಶ್ವಗಂಧ' ಎನ್ನುವರು.

ದ್ರವ್ಯದ ವರ್ಣನೆ

ಅಶ್ವಗಂಧವು ಒಂದರಿಂದ ಮೂರು ಅಡಿ ಎತ್ತರಕ್ಕೆ ಬೆಳೆಯುವ ಸುಂದರವಾದ ಕುರುಚಲ ಗಿಡ. ಎಲೆಗಳು ಹಸಿರಾಗಿದ್ದು ಬೂದು ಬಣ್ಣದ ರೋಮಗಳಿಂದ ಕೂಡಿರುತ್ತದೆ. ಎಲೆಯನ್ನು ಉಜ್ಜಿದಾಗ ಕುದುರೆ ಮೂತ್ರದ ವಾಸನೆ ಬರುತ್ತದೆ. ಹೂವುಗಳು ಹಸಿರು, ಹಳದಿ ಬಣ್ಣದಿಂದ ಗೊಂಚಲಿನಲ್ಲಿರುತ್ತವೆ. ಹಣ್ಣು ಕೆಂಪು ಬಣ್ಣದಿಂದ ಕೂಡಿದ್ದು, ಹಣ್ಣುಗಳಲ್ಲಿ ಅಸಂಖ್ಯ ಸೂಕ್ಷ್ಮ ಬೀಜವಿರುತ್ತದೆ. ಈ ದ್ರವ್ಯದ ಬೇರು ಬಿಳಿ, ಹಳದಿ ಬಣ್ಣದಿಂದ ಕೂಡಿರುತ್ತದೆ. ಈ ದ್ರವ್ಯವು ಹೂವು ಮತ್ತು ಹಣ್ಣನ್ನು ನವೆಂಬರ್ ಫೆಬ್ರವರಿ ತಿಂಗಳಿನಲ್ಲಿ ಬಿಡುತ್ತದೆ. ಅಶ್ವಗಂಧವು ಹೆಚ್ಚಾಗಿ ಭಾರತದ ಬಯಲು ಸೀಮೆಯ ಕಾಡುಗುಡ್ಡಗಳಲ್ಲಿ ಸಿಗುತ್ತದೆ.

ವಿಧಗಳು

ಅಶ್ವಗಂಧದಲ್ಲಿ ಶಾಸ್ತ್ರೀಯವಾಗಿ ಯಾವುದೇ ವಿಧವನ್ನು ಕಾಣದಿದ್ದರೂ, ಈ ದ್ರವ್ಯದಲ್ಲಿ ಸಣ್ಣ ಮತ್ತು ದಪ್ಪ ಬೇರುಳ್ಳದ್ದಾಗಿ ಬೆಳೆಯುವ ಎರಡು ವಿಧಗಳಿರುತ್ತದೆ. ಸಣ್ಣದಾಗಿ ಬೆಳೆಯುವ ಅಶ್ವಗಂಧವು ಮಧ್ಯಪ್ರದೇಶದ ನಾಗೋರಿ ಜಿಲ್ಲೆಯಲ್ಲಿ ಹೆಚ್ಚಾಗಿ ಬೆಳೆಯುತ್ತದೆ. ಆದ್ದರಿಂದಲೇ ಇದನ್ನು 'ನಾಗೋರಿ ಅಶ್ವಗಂಧ' ಎಂದು ಕರೆಯುತ್ತಾರೆ. ನಮ್ಮ ಒಳನಾಡಿನಲ್ಲಿ ಬೆಳೆಯುವ ದಪ್ಪ ಬೇರಿನ ಅಶ್ವಗಂಧವನ್ನು 'ನಾಟಿ ಅಶ್ವಗಂಧ', 'ಹಿರೇಮದ್ದಿನ ಬೇರು' ಎಂಬುದಾಗಿ ಕರೆಯುತ್ತಾರೆ. ಹಳ್ಳಿಯ ಜನರಿಗೆ ಇದರ ಪರಿಚಯ ಚೆನ್ನಾಗಿ ಇರುತ್ತದೆ.

ಉಪಯುಕ್ತ ಅಂಗಗಳು

- ಬೇರು
- ಎಲೆ
- ಹಣ್ಣು

ದ್ರವ್ಯದ ಗುಣಧರ್ಮಗಳು

ರಸ : ಕಟು, ತಿಕ್ತ, ಕಷಾಯ

ಗುಣ : ಸ್ನಿಗ್ಧ, ಲಘು

ವೀರ್ಯ : ಉಷ್ಣ

ವಿಪಾಕ : ಕಟು

ಕರ್ಮ : ವಾತಕಫಹರ, ಬಲ್ಯ, ರಸಾಯನ, ಶುಕ್ರಲ

ಅಶ್ವಗಂಧಾ ಕಷಾಯೋಷ್ಣಾ ಪಿತ್ತಲಾ ವಾತಕಫಾಪಹಾ।
ವಿಷವ್ರಣಕ್ಷಯಾನ್ ಹಂತಿ ಕಾಂತಿವೀರ್ಯ ಬಲಪ್ರದಾ॥ *(ಧನ್ವಂತರಿ ನಿಘಂಟು)*

ಎಂದರೆ ಅಶ್ವಗಂಧವು ಕಷಾಯರಸದಿಂದ ಕೂಡಿದೆ, ಉಷ್ಣವೀರ್ಯದಿಂದ ಕೂಡಿದೆ, ಪಿತ್ತ, ವಾತ, ಕಫ ದೋಷಗಳನ್ನು ನಾಶ ಮಾಡುತ್ತದೆ. ವಿಷ, ಗಾಯ, ಕ್ಷಯ ರೋಗಗಳನ್ನು ನಾಶಪಡಿಸಿ ಕಾಂತಿವೀರ್ಯ ಬಲಗಳನ್ನು ಹೆಚ್ಚಿಸುತ್ತದೆ ಎಂಬ ವಿವರಣೆಯನ್ನು ಧನ್ವಂತರಿ ನಿಘಂಟಿನಲ್ಲಿ ಕಾಣಬಹುದು.

ಔಷಧಿ ಪ್ರಮಾಣ

ಚೂರ್ಣ : 3–6 ಗ್ರಾಂ

ಲೇಹ : 1–2 ಚಮಚ

ಔಷಧಿ ಯೋಗಗಳು

- ಅಶ್ವಗಂಧಾರಿಷ್ಟ
- ಅಶ್ವಗಂಧಾವಲೇಹ
- ಅಶ್ವಗಂಧಾದಿಚೂರ್ಣ
- ಅಶ್ವಗಂಧಾ ರಸಾಯನ
- ಅಶ್ವಗಂಧಾಘೃತ

ಔಷಧೀಯ ಉಪಯೋಗಗಳು

- ಅಶ್ವಗಂಧ, ಶಾಂತಿಕಾಯಿ ಪುಡಿ ಮತ್ತು ಬೆಲ್ಲವನ್ನು ಬೆರೆಸಿ ಸ್ವಲ್ಪ ಬಿಸಿಯಿರುವ ನೀರಿನೊಂದಿಗೆ ಸೇವಿಸಿದರೆ ವಾತದಿಂದ ಬಂದ ಹೃದಯರೋಗವು ಕಡಿಮೆಯಾಗುತ್ತದೆ.
- ಅಶ್ವಗಂಧ ಕ್ಷಾರವನ್ನು ತುಪ್ಪ ಮತ್ತು ಜೇನಿನೊಂದಿಗೆ ಸೇವಿಸುವುದರಿಂದ 'ಉಬ್ಬಸ' ರೋಗವು ನಾಶವಾಗುತ್ತದೆ.
- ಅಶ್ವಗಂಧ ಚೂರ್ಣವನ್ನು ತುಪ್ಪದಲ್ಲಿ ದಿನಕ್ಕೆ ಮೂರು ಬಾರಿ ಸೇವಿಸುವುದರಿಂದ ಸಂಧಿವಾತ ರೋಗವು ಕಡಿಮೆಯಾಗುತ್ತದೆ.
- ಅಶ್ವಗಂಧದ ಮೂಲವನ್ನು ಗೋಮೂತ್ರದಲ್ಲಿ ಅರೆದು ಬಿಸಿಮಾಡಿ ಗಾಯಕ್ಕೆ ಲೇಪಿಸುವುದರಿಂದ ಗಾಯವು ಬೇಗ ಪಕ್ವವಾಗುತ್ತದೆ.
- ಅಶ್ವಗಂಧ ಚೂರ್ಣವನ್ನು ನೆಲ್ಲಿಕಾಯಿ ರಸದಲ್ಲಿ ಕಲಸಿ, ತುಪ್ಪ ಮತ್ತು ಜೇನುತುಪ್ಪದೊಂದಿಗೆ ಬೆರೆಸಿ ಸೇವಿಸುವುದರಿಂದ ಕಣ್ಣ ದೃಷ್ಟಿಯು ವೃದ್ಧಿಯಾಗುತ್ತದೆ.
- ಒಂದೆಲಗ, ಶಂಖಪುಷ್ಪಿ, ಅಶ್ವಗಂಧ ಮತ್ತು ಶತಾವರಿಯನ್ನು ಬೆರೆಸಿ ಸೇವಿಸುವುದರಿಂದ ಬುದ್ಧಿ, ಬಲ ಮತ್ತು ಆಯುಷ್ಯ ವೃದ್ಧಿಯಾಗುತ್ತದೆ.
- ಅಶ್ವಗಂಧ, ಹಿಪ್ಪಲಿ, ಸಕ್ಕರೆಯ ಪುಡಿಗೆ ತುಪ್ಪ ಮತ್ತು ಜೇನುತುಪ್ಪ ಬೆರೆಸಿ ಸೇವಿಸುವುದರಿಂದ ಕ್ಷಯ ರೋಗಕ್ಕೆ ಒಳ್ಳೆಯದು.
- ತುಪ್ಪ, ನಾಲ್ಕರಷ್ಟು ಹಾಲು ಮತ್ತು ಅಶ್ವಗಂಧದ ಲೇಪವನ್ನು ಸೇರಿಸಿ ತಯಾರಿಸಿದ ಅಶ್ವಗಂಧ ಘೃತವು ವಾತವ್ಯಾಧಿಗೆ ಒಳ್ಳೆಯದು.
- ಅಶ್ವಗಂಧದ ಚೂರ್ಣಕ್ಕೆ ಸಕ್ಕರೆ ಬೆರೆಸಿ ಅದನ್ನು ತುಪ್ಪದಲ್ಲಿ ಸೇವಿಸುವುದರಿಂದ ನಿದ್ರಾನಾಶದಿಂದ ಬಳಲುತ್ತಿರುವವರಿಗೆ ಒಳ್ಳೆಯದು.
- ಅಶ್ವಗಂಧದ ಕಷಾಯ ಸೇವನೆಯಿಂದ ಮೂತ್ರಧಾರಣೆಯಿಂದ ಬಂದ ತೊಂದರೆ ಮತ್ತು ಮೂತ್ರ ಸರಾಗವಾಗಿ ಹೋಗಲು ಸಹಾಯ ಮಾಡುತ್ತದೆ.
- ಅಶ್ವಗಂಧ ಚೂರ್ಣವನ್ನು ಸತಿಪತಿಗಳಿಬ್ಬರೂ ದಿನಕ್ಕೆ ಎರಡು ಬಾರಿ ಒಂದೊಂದು ಟೀ ಚಮಚ ಪ್ರಮಾಣದಲ್ಲಿ ಸೇವಿಸುತ್ತಾ, ಅನ್ನ, ಹಾಲು, ಸಿಹಿ ಪದಾರ್ಥಗಳನ್ನು ಸೇವಿಸುತ್ತಾ ಬಂದರೆ ಗರ್ಭಧಾರಣೆಗೆ ಒಳ್ಳೆಯದು.
- ಅಶ್ವಗಂಧ ಚೂರ್ಣ ಮತ್ತು ಕೆಂಪು ಕಲ್ಲುಸಕ್ಕರೆ ಪುಡಿಯನ್ನು ಹಾಲಿನಲ್ಲಿ ಕಾಯಿಸಿ ದಿವಸಕ್ಕೆ ಎರಡು ಹೊತ್ತು ಸೇವಿಸಿದರೆ ಬೆನ್ನು ನೋವು ನಿವಾರಣೆಯಾಗುತ್ತದೆ.

ಓ.ಆರ್.ಎಸ್. ಪಾನಕ ಕುಡಿಸಿ,
ಮಗುವಿನ ಆರೋಗ್ಯ ಉಳಿಸಿ


ಶೋಕ ನಿವಾರಕ ಅಶೋಕ

Saraca ashoka, Linn

Leguminoceae







ತಾಯಂದಿರ ತನುಮನಗಳ ಸ್ವಾಸ್ಥ್ಯವೇ ದೇಶದ ಶ್ರೇಯೋಭಿವೃದ್ಧಿಯ ಮೂಲ. ಅದನ್ನು ಸಾಧಿಸಬೇಕಾದರೆ ಅಶೋಕ ಚಿಕ್ಕಿಯಷ್ಟು ಉಪಯೋಗಕಾರಿ ವಸ್ತು ಬೇರೊಂದಿಲ್ಲ. ತಾಯಿಯ ಗರ್ಭಾಂಗಗಳು ಪುಷ್ಟವಾಗಿದ್ದರೆ ಮಾತ್ರ ಅವರು ತಮ್ಮ ಸಂತಾನಕ್ಕೆ ಭಾವ್ಯಕ್ಯದ ವರದಾನ ಮಾಡಬಲ್ಲರು. ಇದು ಅಶೋಕ ಚಿಕ್ಕಿಯಿಂದ ಸಾಧ್ಯ. ಆದ್ದರಿಂದಲೇ ಪುರಾತನ ಕಾವ್ಯಗಳಲ್ಲಿ ಹೆಣ್ಣು ಶರೀರಕ್ಕೂ, ಅಶೋಕಕ್ಕೂ ಇರುವ ನಿಕಟ ಸಂಬಂಧವನ್ನು 'ತರುಣಿಯ ಪಾದಾಘಾತದಿಂದ ಅಶೋಕವು ಹರ್ಷಿಸುವುದು, ಚಿಗುರುವುದು, ಹೂ ಬಿಡುವುದು ಎಂಬ ಕವಿಕಲ್ಪನೆಗಳಿಂದ ವರ್ಣಿಸಲಾಗಿದೆ. ವೇದಕಾಲದಿಂದ ಉಪಯೋಗಿಸಲ್ಪಡುವ ಅಶೋಕ ವೃಕ್ಷವು ಸಾಮಾನ್ಯವಾಗಿ ಎಲ್ಲರಿಗೂ ಪರಿಚಿತ ದ್ರವ್ಯ. ಭಾರತೀಯ ವೃಕ್ಷಗಳಲ್ಲಿ ಅಶೋಕ ವೃಕ್ಷಕ್ಕೆ ತನ್ನದೇ ಆದ ವಿಶೇಷತೆ ಇದೆ. ಸುಂದರವಾದ ಹೂ ಗೊಂಚಲುಗಳಿಂದ ಶೋಭಿಸುವ ಅಶೋಕ ವೃಕ್ಷವನ್ನು ಕವಿಗಳು ತಮ್ಮದೇ ಆದ ಕಲ್ಪನೆಯಲ್ಲಿ ಬಣ್ಣಿಸಿದ್ದಾರೆ. ಈ ವೃಕ್ಷವು ಹೆಂಗಸರ ದುಃಖ ನಿವಾರಿಸುವ ಕಾರಣದಿಂದ ಇದಕ್ಕೆ ಅಶೋಕ ಎಂಬ ಹೆಸರು ಬಂದಿದೆಯೆಂಬ ನಂಬಿಕೆಯೂ ಇದೆ. ವನವಾಸದಲ್ಲಿ ಸೀತೆ ಈ ವೃಕ್ಷದ ಅಡಿಯಲ್ಲಿ ಕುಳಿತು ಪತಿಯನ್ನು ಬಿಟ್ಟ ವೇದನೆಯನ್ನು ಕಡಿಮೆ ಮಾಡಿದಳು ಎಂಬ ವಿವರಣೆಯನ್ನು ಕಾಣಬಹುದು.

ಬಹು ಭಾಷಾ ಹೆಸರುಗಳು

ಕನ್ನಡ : ಅಶೋಕ

ಸಂಸ್ಕೃತ : ಅಶೋಕ

ತುಳು : ಅಶೋಕದ ಮರ

ಹಿಂದಿ: :- ಅಶೋಕ

ಇಂಗ್ಲೀಷ್ : ಅಶೋಕ್ ಟ್ರೀ

ಪರ್ಯಾಯ ಪದಗಳು

ಅಶೋಕ, ಗಂಧಪುಷ್ಪ, ಹೇಮಾಪುಷ್ಪ, ಪಿಂಡ ಪುಷ್ಪ, ತಾಮ್ರಪಲ್ಲವ, ಶಂಕೇಲಿ, ರಕ್ತಪಲ್ಲವ.

ಸುವಾಸನೆಯಿಂದ ಕೂಡಿದ ಹೂವುಗಳನ್ನು ಹೊಂದಿರುವುದರಿಂದಲೇ ಅಶೋಕ ವೃಕ್ಷವನ್ನು 'ಗಂಧಪುಷ್ಪ' ಎಂದು ಕರೆದಿರಬಹುದು.

ದ್ರವ್ಯದ ವರ್ಣನೆ

ಹೂದೋಟ ಉದ್ಯಾನ ವನಗಳಲ್ಲಿ ಶೋಭೆಯ ಸಂಕೇತವಾಗಿ ಕಂಗೊಳಿಸುವ ಅಶೋಕ ವೃಕ್ಷವೂ 6 ರಿಂದ 9 ಮೀಟರ್‌ನಷ್ಟು ಎತ್ತರವಾಗಿ ಬೆಳೆಯುತ್ತದೆ. ಎಲೆಗಳು ಹಸಿರು ಬಣ್ಣವನ್ನು ಹೊಂದಿರುತ್ತದೆ. ಪರಿಮಳದಿಂದ ಕೂಡಿದ ಹೂವುಗಳು ಹಳದಿ ಮಿಶ್ರಿತ ಕೇಸರಿ ಬಣ್ಣದಿಂದ ಕೂಡಿದೆ. ಕಾಯಿ ಸುಮಾರು 20 ಸೆಂ. ಮೀಟರ್‌ನಷ್ಟು ಉದ್ದವಾಗಿದ್ದು, ಹಲವಾರು ಬೀಜಗಳಿಂದ ತುಂಬಿರುತ್ತದೆ. ಈ ವೃಕ್ಷವು ಮಾರ್ಚ್ ಎಪ್ರಿಲ್ ತಿಂಗಳಿನಲ್ಲಿ ಹೂವನ್ನು, ಆಗಸ್ಟ್ – ಸೆಪ್ಟೆಂಬರ್ ತಿಂಗಳಿನಲ್ಲಿ ಹಣ್ಣುಗಳನ್ನು ಬಿಡುತ್ತದೆ. ಭಾರತೀಯ ಎಲ್ಲ ಭಾಷೆಗಳಲ್ಲಿ ಕಾವ್ಯಾತ್ಮಕವಾಗಿ ವರ್ಣಿಸಲ್ಪಟ್ಟ ಅಶೋಕವೃಕ್ಷವು ಮಧ್ಯ ಮತ್ತು ಪೂರ್ವ ಹಿಮಾಲಯ, ದಕ್ಷಿಣ ಭಾರತದಲ್ಲಿ ಯಥೇಚ್ಛವಾಗಿ ಬೆಳೆಯುತ್ತದೆ.

ಉಪಯುಕ್ತ ಅಂಗ

- ಕಾಂಡದ ತೊಗಟೆ
- ಬೀಜ
- ಹೂವು

ದ್ರವ್ಯದ ಗುಣಧರ್ಮಗಳು

ರಸ : ಕಷಾಯ, ತಿಕ್ತ

ಗುಣ : ಲಘು, ರೂಕ್ಷ

ವೀರ್ಯ : ಶೀತ

ವಿಪಾಕ : ಕಟು

ಕರ್ಮ : ಪಿತ್ತಹರ, ಹೃದ್ಯ, ವರ್ಣ್ಯ, ಗ್ರಾಹೀ, ಕ್ರಿಮಿಘ್ನ

ಅಶೋಕ: ಮಧುರೋ ಹೃದ್ಯ: ಸಂಧಾನೀಯ: ಸುಗಂಧಿಕ: ।

(ಧನ್ವಂತರಿ ನಿಘಂಟು)

ಎಂದರೆ ಅಶೋಕವು ಮಧುರರಸವುಳ್ಳದ್ದು, ಹೃದಯಕ್ಕೆ ಬಲವನ್ನು ಕೊಡುವುದು, ಮುರಿದ ಮೂಳೆಗಳನ್ನು ಜೋಡಿಸುವುದು, ಪರಿಮಳದಿಂದ ಕೂಡಿದೆ ಎಂಬುದಾಗಿ ಧನ್ವಂತರಿ ನಿಘಂಟು ಹೇಳುತ್ತದೆ. ಅಶೋಕ ವೃಕ್ಷದಲ್ಲಿ ಮಧುರರಸವಲ್ಲದೇ ಕಷಾಯ ರಸವು ಇರುತ್ತದೆ.

ಔಷಧಿ ಪ್ರಮಾಣ

ಕಷಾಯ : 50–100 ಮಿ.ಲೀ

ಬೀಜ ಚೂರ್ಣ: 3–6 ಗ್ರಾಂ

ಔಷಧೀಯ ಯೋಗಗಳು

- ಅಶೋಕಾರಿಷ್ಠ
- ಅಶೋಕ ಘೃತಮ್
- ಅಶೋಕ ಕಷಾಯ

ಔಷಧೀಯ ಉಪಯೋಗಗಳು

- ಅಶೋಕ ಚಕ್ಕೆಯು ಸ್ತ್ರೀಯರ ಆರೋಗ್ಯದಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಅಶೋಕ ಚಕ್ಕೆಯ ಪುಡಿಯನ್ನು ತುಪ್ಪದ ಜೊತೆ ಬೆರೆಸಿ ಸೇವಿಸುವುದರಿಂದ ಗರ್ಭಾಂಗಗಳು ದಪ್ಪ – ಪುಷ್ಟವಾಗುತ್ತದೆ.
- ಅಶೋಕದ ತೊಗಟೆಯ ಕಷಾಯವನ್ನು ಸೇವಿಸುವುದರಿಂದ ರಕ್ತಪ್ರದರ ರೋಗವು ನಿವಾರಣೆಯಾಗುತ್ತದೆ.
- ಅಶೋಕ ವೃಕ್ಷದ ಬೀಜದ ಚೂರ್ಣವನ್ನು 3–6 ಗ್ರಾಂ. ನಷ್ಟು ಬಲಾನುಸಾರವಾಗಿ ಬಿಸಿ ನೀರು ಅಥವಾ ಹಾಲಿನಲ್ಲಿ ಸೇವಿಸುವುದರಿಂದ ಮೂತ್ರ ಕಲ್ಲು, ಮೂತ್ರ ಮಾಡುವಾಗ ಉಂಟಾಗುವ ತೊಂದರೆಗಳು ನಿವಾರಣೆಯಾಗುತ್ತದೆ.
- ಅಶೋಕ ಚಕ್ಕೆಯ ಕಷಾಯವನ್ನು ಹಾಲಿನಲ್ಲಿ ಕುಡಿಯುವುದರಿಂದ ರಕ್ತ ಪ್ರದರವು ಗುಣವಾಗುವುದು.
- ಅಶೋಕ ಚಕ್ಕೆಯ ಕಷಾಯಕ್ಕೆ ಸ್ವಲ್ಪ ಬೆಲ್ಲ ಸೇರಿಸಿ ದಿನಕ್ಕೆ ಎರಡು ಬಾರಿ ಸೇವಿಸುವುದರಿಂದ ಶ್ವೇತ ಪ್ರದರ ಮತ್ತು ರಕ್ತ ಪ್ರದರ ರೋಗಗಳು ನಿವಾರಣೆಯಾಗುತ್ತದೆ.

- ಅಶೋಕ ಚೂರ್ಣ, ಜೀರಿಗೆ ಪುಡಿ, ಕಲ್ಲು ಸಕ್ಕರೆಯನ್ನು ನೀರಿನಲ್ಲಿ ಮಿಶ್ರಿಸಿ ಕುಡಿಯುವುದರಿಂದ ರಕ್ತಪಿತ್ತ ರೋಗವು ನಿವಾರಣೆಯಾಗುತ್ತದೆ.
- ಅಶೋಕ ಚಕ್ಕೆಯ ಕಷಾಯ ಅಥವಾ ಅಶೋಕ ಚಕ್ಕೆಯ ಪುಡಿಯನ್ನು ಸೇವಿಸುವುದರಿಂದ ರಕ್ತಮೂಲವ್ಯಾಧಿ ನಿವಾರಣೆಯಾಗುತ್ತದೆ.
- ಅಶೋಕ ಚಕ್ಕೆ, ಅಶ್ವಗಂಧ, ರೋಧ್ರ, ಪುತ್ರಂಜೀವಿ ಬೀಜ, ನೆಲ್ಲಿ ಚೆಟ್ಟು, ವಿಷ್ಣುಕ್ರಾಂತಿ ಈ ಆರು ದ್ರವ್ಯಗಳ ಚೂರ್ಣವನ್ನು ಪ್ರತಿದಿನ ಒಂದು ಚಮಚ ಸ್ತ್ರೀಯರು ಸೇವಿಸಿ, ನಂತರ ಸಕ್ಕರೆ ಮಿಶ್ರಿತ ಹಾಲನ್ನು ಕುಡಿಯಬೇಕು. ಈ ರೀತಿ ಕನಿಷ್ಠ ಮೂರು ತಿಂಗಳು ಮೇಲಿನ ದ್ರವ್ಯಗಳನ್ನು ಸೇವಿಸುವುದರಿಂದ ಗರ್ಭಾಶಯ ವಿಕಾಸಗೊಂಡು ಪುತ್ರ ಸಂತಾನವಾಗುತ್ತದೆ.
- ಅಶೋಕ ವೃಕ್ಷದ ಹೂವನ್ನು ನೀರಿನಲ್ಲಿ ಅರೆದು ಸೇವಿಸುವುದರಿಂದ ಆಮಾತಿಸಾರ ನಿವಾರಣೆ.
- ಅಶೋಕ ವೃಕ್ಷದಿಂದ ತಯಾರಿಸಿದ ಪ್ರಸಿದ್ಧ ಅರಿಷ್ಟ 'ಅಶೋಕಾರಿಷ್ಟ'ವನ್ನು ಸೇವಿಸುವುದರಿಂದ ಅತಿರಕ್ತಸ್ರಾವ, ಗರ್ಭಸ್ರಾವಗಳು ನಿವಾರಣೆಯಾಗುತ್ತದೆ. ಈ ಕಷಾಯ ಸೇವನೆಯಿಂದ ಶರೀರದ ತೇಜಸ್ಸು ಹೆಚ್ಚುತ್ತದೆ.
- ಅಶೋಕ ವೃಕ್ಷದ ಹೂವುಗಳನ್ನು ನುಣ್ಣಗೆ ಅರೆದು ಕೊಬ್ಬರಿ ಎಣ್ಣೆಯಲ್ಲಿ ಕುದಿಸಿ, ಬರುವ ಎಣ್ಣೆಯನ್ನು ಚರ್ಮಕ್ಕೆ ಹಚ್ಚುವುದರಿಂದ ಚರ್ಮರೋಗಕ್ಕೆ ಒಳ್ಳೆಯದು.



ಚಿಕ್ಕ ಸಂಸಾರ ಚೊಕ್ಕ ಸಂಸಾರ

ಜ್ವರ ನಿವಾರಕ ಆಡುಸೋಗೆ

Adhathoda vasica, Nees.

Acanthaceae







ಆಡುಸೋಗೆಯು ಬಡವ ಬಲ್ಲಿದರೆಲ್ಲರಿಗೂ ಕಾಸಿಲ್ಲದೆ ಕೈ ಸೇರುವ ಮನೆ ಮದ್ದು, ದೇಶದೆಲ್ಲೆಡೆ ಗ್ರಾಮೀಣ ಭಾಗಗಳಲ್ಲಿ ಸುಲಭವಾಗಿ ಲಭ್ಯವಿರುವ ಆಡುಸೋಗೆಯು ಒಂದು ಸಣ್ಣಗಿಡವಾಗಿದೆ. ಆಡುಸೋಗೆಯು ಬೇಲಿಗಳಲ್ಲಿ ಹೆಚ್ಚಾಗಿ ಬೆಳೆಯುತ್ತದೆ. ಜ್ವರ ಮತ್ತು ಕೆಮ್ಮು ಇದ್ದಾಗ ಆಡುಸೋಗೆಯು ದಿವ್ಯೌಷಧ ಎನಿಸುತ್ತದೆ. ಅತ್ಯಂತ ಮುಖ್ಯ ದ್ರವ್ಯವಾದ ಆಡುಸೋಗೆಯನ್ನು, ಎಲ್ಲ ರೀತಿಯ ವನಸ್ಪತಿಗಳನ್ನು ಸೇವಿಸುವ ಆಡುಗಳು ಮುಟ್ಟುವುದಿಲ್ಲ. ಆಡುಸೋಗೆಯು ವೈದ್ಯರ ತಾಯಿ ಎಂದು ಪ್ರಸಿದ್ಧತೆಯನ್ನು ಹೊಂದಿದೆ. ಆಡುಸೋಗೆಯು ಅಗ್ಗದಲ್ಲಿ ದೊರೆಯುವ ಉನ್ನತ ಔಷಧ. ಆಡುಸೋಗೆಯ ಎಲೆಗಳಿಗೆ ಕಫ ಕೆಮ್ಮನ್ನು ಕಡಿಮೆ ಮಾಡುವ ಗುಣವಿದೆ. ಅತ್ಯಂತ ಗುಣದಿಂದ ಕೂಡಿದ ಆಡುಸೋಗೆಯ ಎಲೆಯನ್ನು ಹೆಚ್ಚಾಗಿ ಔಷಧಕ್ಕೆ ಉಪಯೋಗಿಸುತ್ತಾರೆ.

ಬಹು ಭಾಷಾ ಹೆಸರುಗಳು

ಕನ್ನಡ : ಆಡುಸೋಗೆ

ಸಂಸ್ಕೃತ : ವಾಸಕ

ತುಳು : ಆಟಿಸೋಗೆ

ಹಿಂದಿ : ವಸಿಕಾ

ಇಂಗ್ಲೀಷ್ : ಮಲಬಾರ್‌ನಟ್

ಪರ್ಯಾಯ ಪದಗಳು

ವಾಸಾ, ವಾಸಕಾ, ವಾಸಿಕಾ, ಸಿಂಹೀ, ಸಿಂಹಮುಖಿ, ವೃಷ, ವಾಜಿ, ವಾಜಿದಂತ, ಭೀಷಜ್ಞಾತಾ, ಅತರೂಷಾ, ಆಮಲಕ, ರಕ್ತಪಿತ್ತಘ್ನೀ, ಸಿಂಹಾನನ, ರಾಮರೂಪಕಂ, ಸಿಂಹಪರ್ಣಿ, ಸಿಂಹಾಸ್ಯ, ಪಂಚಮುಖಿ.

ದ್ರವ್ಯದ ವರ್ಣನೆ

ಆಡುಸೋಗೆಯ ಒಂದು ಸಣ್ಣ ಗಿಡವಾಗಿದೆ. ಇದು ಸುಮಾರು ನಾಲ್ಕರಿಂದ ಏಳು ಅಡಿ ಎತ್ತರದವರೆಗೆ ಬೆಳೆಯುತ್ತದೆ. ಮಾವಿನೆಲೆಗಳನ್ನು ಹೋಲುವ ಎಲೆಗಳು ಒಂದರ ಮುಂದೆ ಒಂದರಂತೆ ಬೆಳೆಯುತ್ತದೆ. ಎಲೆಯು ವಿಶಿಷ್ಟ ವಾಸನೆಯಿಂದ ಕೂಡಿದೆ. ಬಲಿತ ಕಾಂಡವನ್ನು ನೆಡುವ ಮೂಲಕ ಈ ಗಿಡವನ್ನು ಬೆಳೆಸಬಹುದು. ಎಲೆಯ ತೊಟ್ಟು ಕಾಂಡಕ್ಕೆ ಸೇರುವ ಭಾಗದಲ್ಲಿ ಬಿಳಿ ಬಣ್ಣದ ಹೂಗಳು ಗುಚ್ಛ ರೂಪದಲ್ಲಿ ಬೆಳೆಯುತ್ತದೆ. ಗುಂಪಾಗಿ ಗುಚ್ಛದಲ್ಲಿ ಬೆಳೆಯುವ ಬಿಳಿ ಹೂಗಳ ಮೇಲೆ ತಿಳಿನೀಲಿ ರೇಖೆ ಇರುತ್ತದೆ. ಈ ದ್ರವ್ಯವು ಹೂವು ಮತ್ತು ಹಣ್ಣನ್ನು ಫೆಬ್ರವರಿ ಮೇ ತಿಂಗಳಲ್ಲಿ ಬಿಡುತ್ತದೆ. ಭಾರತದಲ್ಲೆಡೆ ಬೆಳೆಯುವ ಆಡುಸೋಗೆಯು ಶ್ರೀಲಂಕಾ, ಮಲಯಾ ಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಯುತ್ತದೆ.

ವಿಧಗಳು

ಪುರಾತನ ಶಾಸ್ತ್ರದಲ್ಲಿ ಆಡುಸೋಗೆಯ ವಿಧವನ್ನು ಕಾಣದಿದ್ದರೂ, ಸಸ್ಯಶಾಸ್ತ್ರದಲ್ಲಿ, ಆಡುಸೋಗೆಯಲ್ಲಿ ಎರಡು ಪ್ರಭೇದಗಳನ್ನು ಕಾಣಬಹುದು. ಅವು

1. Justicia gendarussa
2. Adhatoda beddomi

ಆದರೆ ಔಷಧಕ್ಕೆ ಸಾಮಾನ್ಯವಾಗಿ Adhatoda vasica ವನ್ನೇ ಉಪಯೋಗಿಸುತ್ತಾರೆ.

ಉಪಯುಕ್ತ ಅಂಗಗಳು

- ಎಲೆ
- ಬೇರು
- ಹೂವು

ದ್ರವ್ಯದ ಗುಣಧರ್ಮಗಳು

ರಸ : ತಿಕ್ತ, ಕಷಾಯ

ಗುಣ : ಲಘು

ವೀರ್ಯ : ಶೀತ

ವಿಪಾಕ : ಕಟು

ಕರ್ಮ : ಕಫಪಿತ್ತಹರ, ಹೃದ್ಯ, ಸ್ವರ್ಯ

ವಾಸಕೋ ವಾತಕೃತ್‌ಸ್ವರ್ಯಃ ಕಫಪಿತ್ತಾಸ್ರನಾಶನಃ
ತಿಕ್ತಃ ತುವರಕೋ ಹೃದ್ಯೋ ಲಘುಶೀತಃ ತೃಡರ್ತಿಹೃತ್॥
ಶ್ವಾಸಕಾಸ ಜ್ವರ ಛರ್ದಿಮೇಹಕುಷ್ಠಕ್ಷಯಾಪಹಃ॥ (ಭಾವ ಪ್ರಕಾಶ)

ಎಂದರೆ ಆಡುಸೋಗೆಯು ವಾತಕರವಾಗಿದೆ. ಸ್ವರ್ಯ, ಕಫಪಿತ್ತರಕ್ತಹರವಾಗಿದೆ. ತಿಕ್ತ, ಕಷಾಯ ರಸದಿಂದ ಕೂಡಿದೆ. ಲಘು ಗುಣದಿಂದ ಕೂಡಿದೆ, ಶೀತ ವೀರ್ಯದಿಂದ ಕೂಡಿದೆ. ಹೃದ್ಯವಾಗಿದೆ. ಬಾಯಾರಿಕೆ, ಶ್ವಾಸ, ಕೆಮ್ಮು, ಜ್ವರ, ವಾಂತಿ, ಮೇಹ, ಕುಷ್ಠ, ಕ್ಷಯ ಮುಂತಾದ ರೋಗಗಳನ್ನು ನಿವಾರಿಸುತ್ತದೆ ಎಂದು ಭಾವಪ್ರಕಾಶನು ಹೇಳುತ್ತಾನೆ.

ಔಷಧಿ ಪ್ರಮಾಣ

ಎಲೆಯ ರಸ	–	10–20 ಮಿ.ಲೀ.
ಬೇರಿನ ಕಷಾಯ	–	40–80 ಮಿ.ಲೀ.
ಹೂವಿನ ರಸ	–	10–20 ಮಿ.ಲೀ.
ವಾಸಾವಲೇಹ	–	10–30 ಮಿ.ಲೀ.
ವಾಸಕಾಸವ	–	20–50 ಮಿ.ಲೀ.

ಔಷಧಿ ಯೋಗಗಳು

- ವಾಸಾವಲೇಹ
- ವಾಸಕಾಸವ
- ವಾಸಾರಿಷ್ಠ
- ವಾಸಾ ಪಾನಕ
- ವಾಸಾಚಂದನಾದಿ ತೈಲ
- ವಾಸಾ ಘೃತಮ್
- ವಾಸಾಕಂಟಕಾರಿ ಲೇಹ್ಯ

ಔಷಧೀಯ ಉಪಯೋಗಗಳು

- ಆಡುಸೋಗೆ ಪುಷ್ಪದ ಚೂರ್ಣವನ್ನು ಜೇನುತುಪ್ಪದೊಂದಿಗೆ ಸೇವಿಸುವುದರಿಂದ 'ರಕ್ತ ಪಿತ್ತ' ರೋಗವು ನಾಶವಾಗುತ್ತದೆ.
- ಆಡುಸೋಗೆ ಎಲೆಯ ರಸವನ್ನು ಬಿಲ್ವಪತ್ರೆ ಎಲೆಯ ರಸದೊಂದಿಗೆ ಮಿಶ್ರಿಸಿ ಕುಡಿಯುವುದರಿಂದ ಸ್ಥೌಲ್ಯರೋಗವು ನಾಶವಾಗುತ್ತದೆ.
- ಆಡುಸೋಗೆ ರಸಕ್ಕೆ ಸಮಪ್ರಮಾಣದಷ್ಟು ತುಪ್ಪ ಅಥವಾ ಹಾಲು ಸೇರಿಸಿ ಕುಡಿಯುವುದರಿಂದ ಕಫವಿಲ್ಲದ ಒಣ ಕೆಮ್ಮು, ಉಬ್ಬಸಗಳಿಂದ ಬಳಲುತ್ತಿರುವವರಿಗೆ ಒಳ್ಳೆಯದು.
- ಕ್ಷಯರೋಗದ ಪೂರ್ವ ಲಕ್ಷಣಗಳಿಂದ ಭಯಪಡಲಾಗುವ ನಿರಂತರ ರಕ್ತಹೀನತೆ, ಅಶಕ್ತತೆ, ಕೆಮ್ಮು, ಜೀರ್ಣಜ್ವರ ಕಂಡು ಬಂದರೆ ಆಡುಸೋಗೆ, ಅಮೃತಬಳ್ಳಿ ಮತ್ತು ಅಶ್ವಗಂಧದ ಕಷಾಯವನ್ನು ಮಾಡಿ ದಿನಕ್ಕೆ 3 ಬಾರಿಯಂತೆ 120 ದಿನಗಳವರೆಗೆ ಸೇವಿಸಬೇಕು. ಈ ಅವಧಿಯಲ್ಲಿ ಮೊಸರು ಇತ್ಯಾದಿ ಹುಳಿ ಪದಾರ್ಥಗಳನ್ನು ತ್ಯಜಿಸಬೇಕು.
- ವಾಸಾದಿಘೃತವನ್ನು ಅರ್ಧ ಚಮಚದಷ್ಟಕ್ಕೆ ಒಂದು ಟೀ ಚಮಚ ಜೇನುತುಪ್ಪ ಸೇರಿಸಿ ಸೇವಿಸುವುದರಿಂದ ಕಫದ ಕೆಮ್ಮು ವಾಸಿಯಾಗುವುದು.
- ಆಡುಸೋಗೆಯ ರಸಕ್ಕೆ ಸಕ್ಕರೆ ಮತ್ತು ಜೇನುತುಪ್ಪ ಬೆರೆಸಿ ಸೇವಿಸುವುದರಿಂದ ಪಿತ್ತ ಮತ್ತು ಕಫದಿಂದ ಉಂಟಾದ ಜ್ವರವು ನಿವಾರಣೆ.
- ಆಡುಸೋಗೆ, ಕಂಟಕಾರೀ ಮತ್ತು ಅಮೃತಬಳ್ಳಿಯ ಕಷಾಯಕ್ಕೆ ಜೇನುತುಪ್ಪ ಸೇರಿಸಿ ಸೇವಿಸುವುದರಿಂದ ಜ್ವರ ಮತ್ತು ಕೆಮ್ಮು ನಿವಾರಣೆಯಾಗುತ್ತದೆ.
- ಆಡುಸೋಗೆ ಮತ್ತು ತ್ರಿಫಲದ ಸೇವನೆ, ಸ್ನಾನ ಲೇಪ ಹಚ್ಚುವುದರಿಂದ ಚರ್ಮರೋಗವು ನಿವಾರಣೆಯಾಗುತ್ತದೆ.
- ಆಡುಸೋಗೆ, ಶುಂಠಿ ಮತ್ತು ಕಕ್ಕೆಕಾಯಿಯ ಕಷಾಯಕ್ಕೆ ಹರಳೆಣ್ಣೆ ಬೆರೆಸಿ ಸೇವಿಸುವುದರಿಂದ ಸಯಾಟಿಕಾ (ಸೊಂಟನೋವು) ಎಂಬ ವಾತವ್ಯಾಧಿಯು ನಿವಾರಣೆಯಾಗುತ್ತದೆ.
- ಆಡುಸೋಗೆ ರಸ ಸೇವನೆಯಿಂದ ಪ್ರದರರೋಗವು ನಿವಾರಣೆಯಾಗುತ್ತದೆ.

ತಾಯಿ ಹಾಲನ್ನು ಮಗು ಹುಟ್ಟಿದ
ಅರ್ಧ ಗಂಟೆಯೊಳಗೆ ಕುಡಿಸಬೇಕು

ಆಸರೆಯ ಆಷಾಢಿ ಬೇರು

Asparagus racemosus, Willd.

Liliaceae



ಆಷಾಢಿಬೇರು ರೋಗವನ್ನು ನಾಶಮಾಡುವ, ಹಿಂದಿನ ಕಾಲದಿಂದಲೂ ಪ್ರಚಾರವಿರುವ ಔಷಧಿಯ ಸಸ್ಯಗಳಲ್ಲಿ ಒಂದಾಗಿದೆ. ಆಷಾಢಿಬೇರು ಬುದ್ಧಿವರ್ಧಕ, ಅಗ್ನಿದೀಪಕ, ಪೌಷ್ಟಿಕ, ಸ್ನಿಗ್ಧ, ಕಾಮೋದ್ದೀಪಕ, ಸ್ತನಗಳಲ್ಲಿ ಹಾಲನ್ನು ವರ್ಧನ ಮಾಡುವ ಗುಣಮಟ್ಟಿದ್ದು ಆಗಿದೆ. ಆಷಾಢಿಬೇರು ಹೆಚ್ಚಿನ ಸಂಖ್ಯೆಯ ಉದ್ದವಾದ ಬೇರುಗಳನ್ನು ಹೊಂದಿದೆ. ಈ ದ್ರವ್ಯದ ಹೂ ಬಿಟ್ಟ ಬಳ್ಳಿಯನ್ನು ಹಳ್ಳಿಯ ಹುಡುಗರು ಕಿರೀಟದಂತೆ ತಲೆಯಲ್ಲಿ ತೊಟ್ಟು ಬಹಳ ಸಂತೋಷದಿಂದ ಕುಣಿಯುತ್ತಾರೆ. ರೋಗವನ್ನು ನಾಶ ಮಾಡಿ ರೋಗಿಗೆ ಆಸರೆ ನೀಡುವ ಔಷಧಿ ಸಸ್ಯಗಳಲ್ಲಿ ಆಷಾಢಿಬೇರು ಮುಖ್ಯವಾದ ದ್ರವ್ಯ.

ಬಹು ಭಾಷಾ ಹೆಸರುಗಳು

ಕನ್ನಡ : ಆಷಾಢಿಬೇರು

ಸಂಸ್ಕೃತ : ಶತಾವರೀ

ತುಳು : ಉದ್ರಿ ಕಂಡೆ

ಹಿಂದಿ : ಶತಾವರಿ

ಇಂಗ್ಲೀಷ್ : ವೈಲ್ಡ್ ಆಸ್ಪರಾಗಸ್

ಪರ್ಯಾಯ ಪದಗಳು

ಶತಾವರೀ, ಶತವೀರ್ಯಾ, ಅತಿರಸಾ, ಅರ್ಧಕಂಟಕ, ಇಂದೀವರಿ, ಶತಾಹ್ವ, ಪೀವಾರಿ, ರಂಜನೀ, ಬಹುಮೂಲಾ, ಸೂಕ್ಷ್ಮಪತ್ರಾ, ಶತಮೂಲೀ, ಶತವೀರ್ಯಾ, ಬಹುಸುತಾ, ಅತಿರಸಾ, ಸಹಸ್ರವೀರ್ಯಾ, ಸಹಸ್ರಮಾಲೀ.

ದ್ರವ್ಯದ ವರ್ಣನೆ

ಆಷಾಢಿಬೇರು ಉದ್ದವಾಗಿ, ಮರಗಿಡಗಳನ್ನು ಆಶ್ರಯಿಸಿ ಬೆಳೆಯುವ ಗಟ್ಟಿಯಾದ ಹಸಿರು ಕಾಂಡವುಳ್ಳ, ಮುಳ್ಳುಗಳುಳ್ಳ ಒಂದು ಕುರುಚಲ ಬಳ್ಳಿ, ಎಲೆಗಳು ತೀರಾ ಚಿಕ್ಕವು. ಹೂ ಗುಚ್ಛಗಳು ಚಿಕ್ಕವಾಗಿದ್ದು, ಬಿಳಿ ವರ್ಣದಲ್ಲಿ ಕೂಡಿದ್ದು ಒಂದೊಂದು ಗುಚ್ಛದಲ್ಲಿ 8–9 ಹೂಗಳಿರುವುವು. ಹೂವು ಸುವಾಸನೆಯಿಂದಿರುವುದು, ಬಳ್ಳಿಯ ಕೆಳಗಡೆ ನೆಲದಲ್ಲಿ ನೂರಾರು ಬೇರುಗಳು ಇರುತ್ತದೆ. ಆದ್ದರಿಂದಲೇ ಇದಕ್ಕೆ ಶತಾವರಿ ಎಂಬ ಹೆಸರು ಇರುವುದು. ಆಗಸ್ಟ್ ಸೆಪ್ಟೆಂಬರ್ ತಿಂಗಳಿನಲ್ಲಿ ಹೂವು, ಕಾಯಿ ಬಿಡುವ ಈ ಬಳ್ಳಿಯು ಭಾರತದ ಎಲ್ಲ ಪ್ರಾಂತ್ಯಗಳಲ್ಲಿ ಸಾಮಾನ್ಯವಾಗಿ ಬೆಳೆಯುತ್ತದೆ.

ವಿಧಗಳು

ಆಷಾಢಿ ಬೇರಿನಲ್ಲಿ ಮುಖ್ಯವಾಗಿ ಎರಡು ಬಗೆಗಳಿವೆ,

1. ಶತಾವರಿ
2. ಮಹಾಶತಾವರಿ

ಸಸ್ಯ ಶಾಸ್ತ್ರದಲ್ಲಿ ಈ ಮೇಲಿನ ಬಗೆಗಳನ್ನು ಕ್ರಮವಾಗಿ Asparagus racemosus ಮತ್ತು Asparagus sarmentosa ಎಂದು ಕರೆಯುತ್ತಾರೆ.

ಉಪಯುಕ್ತ ಅಂಗಗಳು

- ಬೇರು

ದ್ರವ್ಯದ ಗುಣಧರ್ಮಗಳು

ರಸ	:	ಮಧುರ, ತಿಕ್ತ
ಗುಣ	:	ಗುರು, ಸ್ನಿಗ್ಧ
ವೀರ್ಯ	:	ಶೀತ
ವಿಪಾಕ	:	ಮಧುರ
ಕರ್ಮ	:	ವಾತಪಿತ್ತಹರ, ರಸಾಯನ, ವೃಷ್ಯ, ಮೇಧ್ಯ, ಬಲ್ಯ, ದೀಪಕ, ಸ್ತನ್ಯ

ಶತಾವರೀ ಗುರುಃ : ಶೀತಾ ತಿಕ್ತಾ ಸ್ವಾದ್ವೀ ರಸಾಯನೀ।
ಮೇಧಾಗ್ನಿಪುಷ್ಟಿದಾ ಸ್ನಿಗ್ಧಾ ನೇತ್ರ್ಯಾ ಗುಲ್ಮಾತಿಸಾರಜಿತ್॥ (ಭಾವಪ್ರಕಾಶ)

ಎಂದರೆ ಆಷಾಢಿಬೇರು ಗುರು, ಸ್ನಿಗ್ಧ ಗುಣದಿಂದ ಕೂಡಿದೆ. ತಿಕ್ತ, ಮಧುರ ರಸದಿಂದ ಕೂಡಿದೆ, ಮಧುರ ವಿಪಾಕದಿಂದ ಕೂಡಿದೆ, ಶೀತ ವೀರ್ಯವುಳ್ಳದಾಗಿದೆ, ರಸಾಯನವಾಗಿದೆ. ಬುದ್ಧಿವರ್ಧಕ, ಅಗ್ನಿದೀಪಕ, ನೇತ್ರ್ಯವಾಗಿದೆ. ಗುಲ್ಮ ಅತಿಸಾರ ರೋಗಗಳನ್ನು ನಿವಾರಿಸುತ್ತದೆ.

ಔಷಧಿ ಪ್ರಮಾಣ

ಎಲೆಯ ರಸ : 10–20 ಮಿ.ಲೀ.

ಕಷಾಯ : 50–100 ಮಿ.ಲೀ.

ಚೂರ್ಣ : 3–6 ಗ್ರಾಂ.


ಔಷಧಿ ಯೋಗಗಳು

- ಶತಾವರೀ ಗುಡ
- ಶತಾವರೀ ಮಂಡೂರ
- ನಾರಾಯಣ ತೈಲಮ್
- ಶತಾವರೀ ಘೃತಮ್
- ಸಿದ್ಧಘೃತ

ಔಷಧೀಯ ಉಪಯೋಗಗಳು

- ಶತಾವರಿ ಲೇಪವನ್ನು ಹಾಲಿನೊಂದಿಗೆ ಸೇವಿಸುವುದರಿಂದ ಅತಿಸಾರ ರೋಗವು ಕಡಿಮೆಯಾಗುತ್ತದೆ.
- ಶತಾವರಿ ಬೇರಿನ ಚೂರ್ಣವನ್ನು ಸಕ್ಕರೆ ಮಿಶ್ರಿತ ಹಾಲಿನೊಂದಿಗೆ ಕಲಸಿ ಕುಡಿಯುವುದರಿಂದ ನಿಶ್ಶಕ್ತಿ, ನಿರುತ್ಸಾಹಕ್ಕೆ ಒಳ್ಳೆಯದು.
- ಶತಾವರಿ ಬೇರಿನ ಚೂರ್ಣವನ್ನು ಜೇನುತುಪ್ಪದೊಂದಿಗೆ ಸೇವಿಸುವುದರಿಂದ ತಾಯಿ ಹಾಲು ವೃದ್ಧಿಯಾಗುತ್ತದೆ.
- ಶತಾವರಿ ಬೇರಿನ ಚೂರ್ಣದಿಂದ ಕಷಾಯ ಮಾಡಿ ಅದನ್ನು ಹಾಲಿನೊಂದಿಗೆ ಕಲಸಿ ಕುಡಿಯುವುದರಿಂದ ಸ್ತ್ರೀಯರ ರೋಗಗಳಾದ ಶ್ವೇತಪ್ರದರ, ರಕ್ತಪ್ರದರ ರೋಗಗಳು ಕಡಿಮೆಯಾಗುತ್ತದೆ.
- ಶತಾವರಿ ಮತ್ತು ನಾಗಬಲವನ್ನು ತುಪ್ಪದೊಂದಿಗೆ ಸೇವಿಸುವುದರಿಂದ ಕೆಮ್ಮು ರೋಗವು ಕಡಿಮೆಯಾಗುತ್ತದೆ.

- ಶತಾವರಿ ಬೇರು, ಅಶ್ವಗಂಧ ಮತ್ತು ನೆಲಗುಂಬಳ ಗಡ್ಡೆ (ವಿದಾರಿಕಂದ) ಚೂರ್ಣವನ್ನು ಹಾಲಿನಲ್ಲಿ ಬೆರೆಸಿ ದಿವಸಕ್ಕೆ ಎರಡು ಬಾರಿ ಸೇವಿಸಿದರೆ ಅಜೀರ್ಣ, ಮುಪ್ಪು ಮತ್ತು ಮೂತ್ರರೋಗಕ್ಕೆ ಒಳ್ಳೆಯದು.
- ಶತಾವರಿ ಲೇಪವನ್ನು ಹಾಲಿನೊಂದಿಗೆ ಸೇವಿಸುವುದರಿಂದ ರಕ್ತಾತಿಸಾರವು ನಿವಾರಣೆಯಾಗುತ್ತದೆ.
- ಶತಾವರಿ ಬೇರಿನ ಲೇಪವನ್ನು ಹಾಲಿನಲ್ಲಿ ಬೆರೆಸಿ ಸೇವನೆ ಮಾಡುವುದರಿಂದ ಮೂಲವ್ಯಾಧಿಗೆ ಒಳ್ಳೆಯದು.
- ಅಮೃತಬಳ್ಳಿ ಮತ್ತು ಶತಾವರಿಯ ಸಮಪ್ರಮಾಣದ ರಸಕ್ಕೆ ಬೆಲ್ಲ ಸೇರಿಸಿ ಸೇವಿಸುವುದರಿಂದ ಜ್ವರವು ನಿವಾರಣೆಯಾಗುತ್ತದೆ.
- ಶತಾವರಿ ಬೇರನ್ನು ಹಾಲಿನಲ್ಲಿ ಅರೆದು ಸೇವಿಸುವುದು ಸ್ತನ್ಯ ಕ್ಷಯಕ್ಕೆ ಒಳ್ಳೆಯದು.
- ಒಂದು ಟೀ ಚಮಚ ಶತಾವರಿ ಬೇರಿನ ರಸವನ್ನು ಹಾಲಿನಲ್ಲಿ ಸೇವನೆ ಮಾಡುವುದರಿಂದ ಮೂತ್ರದಲ್ಲಿರುವ ಕಲ್ಲು ಕರಗುತ್ತದೆ.
- ಧಾತುಗಳ ಪುಷ್ಟಿಗೆ 5 ಗ್ರಾಂ. ನಷ್ಟು ಶತಾವರಿ ಚೂರ್ಣ ಮತ್ತು ಕಲ್ಲು ಸಕ್ಕರೆ ಚೂರ್ಣ ಹಾಲಿನಲ್ಲಿ ಬೆರೆಸಿ ಕುದಿಸಿ ಸೇವನೆ ಮಾಡುವುದು.
- ಸಮ ಪ್ರಮಾಣ ಶತಾವರಿ ಮತ್ತು ನೆಲ್ಲಿಯ ಸ್ವರಸಕ್ಕೆ ಜೇನು ಬೆರೆಸಿ ಸೇವನೆ ಮಾಡುವುದುರಿಂದ ಮಧುಮೇಹ ನಿವಾರಣೆಯಾಗುತ್ತದೆ.




ತಾಂಯಿ ಹಾಲು ಮಗುವಿಗೆ
ಅತ್ಯುತ್ತಮ ಆಹಾರ

ವಾತ ನಿವಾರಕ ಇಂಗು

Ferula narthex, Bioss.

Umbelliferae





ಇಂಗು ಎಂದ ಕೂಡಲೇ ನೆನಪು ಬರುವುದು ಅಡುಗೆ ಮನೆ. ಸಾಮಾನ್ಯವಾಗಿ ಎಲ್ಲರ ಅಡುಗೆ ಮನೆಯಲ್ಲಿ ಕಾಣಸಿಗುವ, ಅಡುಗೆಗೆ ತನ್ನದೇ ಆದ ರುಚಿಯನ್ನು ಕೊಡುವ ಇಂಗು ಎಲ್ಲರಿಗೂ ಪರಿಚಿತ ದ್ರವ್ಯ. ಕೆಲವರಂತೂ ಇಂಗು ಹಾಕದ ಪದಾರ್ಥಗಳನ್ನು ಸೇವಿಸುವುದೇ ಇಲ್ಲ. ಯಾಕೆ ? ಎಂಬ ಪ್ರಶ್ನೆಯು ಸಾಮಾನ್ಯವಾಗಿ ಬಂದೇ ಬರುತ್ತದೆ. ಇದರ ಬಗ್ಗೆ ನಾನು ಹಲವರಲ್ಲಿ ವಿಚಾರಿಸಿದಾಗ ಅವರಿಂದ ಬಂದ ಉತ್ತರ ರುಚಿಗೆ, ಪರಿಮಳಕ್ಕೆ, ವಾತದ ತೊಂದರೆಗೆ, ಗ್ಯಾಸ್‌ಟ್ರಬಲ್‌ಗೆ... ... ಅದೇನೆ ಇರಲಿ, ಆದರೂ ಸಾರು, ಗೊಜ್ಜು, ಉಪ್ಪಿನಕಾಯಿ, ಚಟ್ನಿ ಮುಂತಾದ ಪದಾರ್ಥದ ನಿಜವಾದ ರುಚಿ ಅನುಭವಿಸಬೇಕಾದರೆ ಸ್ವಲ್ಪ ಇಂಗು ಹಾಕುವುದು ಒಳ್ಳೆಯದು. ಆದರೆ ಅಡಿಗೆ ಮತ್ತು ಔಷಧಿಗಳಿಗೆ ಉಪಯೋಗಿಸುವ ಮೊದಲು ಇಂಗನ್ನು ಸಂಸ್ಕರಿಸಿ ಅನಂತರ ಉಪಯೋಗಿಸಬೇಕು. ಇಂಗಿಗೆ ಹಸುವಿನ ತುಪ್ಪವನ್ನು ಹಾಕಿ ಒಲೆಯ ಮೇಲಿಟ್ಟು ಹುರಿಯಬೇಕು. ತುಪ್ಪವು ಹಿಂಗಿದ ಮೇಲೆ ಅಥವಾ ತುಪ್ಪದಲ್ಲಿ ಹಿಂಗು ತೇಲಲು ಪ್ರಾರಂಭಿಸಿದಾಗ ಇದನ್ನು ತೆಗೆದು ಉಪಯೋಗಿಸಬೇಕು. ಚರಕನ ಪ್ರಕಾರ ಇದೊಂದು ಉತ್ತಮ ಪಾಚಕ ದ್ರವ್ಯ. ಹೊಟ್ಟೆಯಲ್ಲಿ ಉಂಟಾಗುವ ಅನೇಕ ರೀತಿಯ ವಾಯುವಿನ ತೊಂದರೆಗಳನ್ನು ನಿವಾರಿಸುವ ಶಕ್ತಿಯನ್ನು ಇಂಗು ಹೊಂದಿದೆ.

ಬಹು ಭಾಷಾ ಹೆಸರುಗಳು

ಕನ್ನಡ : ಇಂಗು

ಸಂಸ್ಕೃತ : ಹಿಂಗು

ತುಳು : ಇಂಗ್

ಹಿಂದಿ : ಇಂಗ್

ಇಂಗ್ಲೀಷ್ : ಅಸೆಫೋಟಿಡಾ

ಪರ್ಯಾಯ ಪದಗಳು

ಇಂಗು, ಅಗೂಢಗಂಧ, ಜಂತುಘ್ನ, ಭೂತನಾಶನ, ಜರಣ, ಜತುಕ, ಭೇದನ, ದೀಪ್ತ, ಗೃಹಿಣಿ, ಸಹಸ್ರ ಬೇಧಿ, ಬಾಹ್ಲೀಕ, ರಾಮಠ, ಉಗ್ರಗಂಧ, ಭೂತಾರೀ.

ಅಡುಗೆಗೆ ಸುವಾಸನೆಯನ್ನು ಕೊಡುವುದರಿಂದ ಇಂಗನ್ನು 'ಸೂಪಧೂಪನ' ಎಂದು ಕರೆಯುತ್ತಾರೆ.

ದ್ರವ್ಯದ ವರ್ಣನೆ

ಇಂಗು ಗಿಡದಲ್ಲಿ ಉತ್ಪತ್ತಿಯಾಗುವ ಒಂದು ಅಂಟು, ಗಿಡವು ಸುಮಾರು 1–2 ಮಿ. ನಷ್ಟು ಎತ್ತರಕ್ಕೆ ಬೆಳೆಯುತ್ತದೆ. ಎಲೆಯು ಮೊದಲು ಚಿಕ್ಕದಾಗಿ, ಮೃದುವಾಗಿ ಚಿಕ್ಕ – ಚಿಕ್ಕ ರೋಮಗಳಿಂದ ಕೂಡಿದೆ. ಎಳೆಯ ಎಲೆಗಳು 10–15 ಸೆಂ. ಮೀಟರ್‌ನಷ್ಟು ಉದ್ದವಾಗಿರುತ್ತದೆ. ಹಣ್ಣು 8–5 ಮೀಟರ್‌ನಷ್ಟಿದೆ. ಅಫ್ಘಾನಿಸ್ತಾನ್, ಇರಾನ್, ಟರ್ಕಿ ದೇಶಗಳಲ್ಲಿ ವಿಶೇಷವಾಗಿ ಬೆಳೆಯುವ ಇದು ನಮ್ಮ ದೇಶದ ಪಂಜಾಬ್, ರಾಜಸ್ಥಾನಗಳಲ್ಲಿ ಅಲ್ಪ ಪ್ರಮಾಣದಲ್ಲಿ ಬೆಳೆಯುತ್ತದೆ.

ವಿಧಗಳು

ಇಂಗುವಿನಲ್ಲಿ ಎರಡು ಪ್ರಭೇದಗಳಿವೆ. ಅವು

- ಬಿಳಿ ಇಂಗು
- ಕಪ್ಪು ಇಂಗು

ಬಿಳಿ ಇಂಗು ಸುವಾಸನೆಯಿಂದ ಕೂಡಿದೆ. ಕಪ್ಪು ಇಂಗು ಹೊಲಸು ನಾರುವ ವಾಸನೆಯಿಂದ ಕೂಡಿದೆ. ಮಾರುಕಟ್ಟೆಯಲ್ಲಿ ಸಿಗುವ ಇಂಗು ಅನೇಕ ವೇಳೆ ಕೃತಕ ಇಲ್ಲವೇ ಕಲಬೆರಕೆಯಿಂದ ಕೂಡಿರುತ್ತದೆ. ಆದುದರಿಂದ ಅದನ್ನು ಪರೀಕ್ಷಿಸಿ ಉಪಯೋಗ ಮಾಡಬೇಕು.

ಸಸ್ಯಶಾಸ್ತ್ರದಲ್ಲಿ ಅನೇಕ ತರಹದ ಪ್ರಭೇದಗಳನ್ನು ಕಾಣಬಹುದು. ಅವು

F. foetida, F. thomsoni, F. jaeschkaena, F. galbaniflua, F. sumbal, F. sauveolens, F. persica ಮತ್ತು F. szowitziana

ಉಪಯುಕ್ತ ಅಂಗ

- ನಿರ್ಯಾಸ

ದ್ರವ್ಯದ ಗುಣಧರ್ಮಗಳು

ರಸ : ಕಟು

ಗುಣ : ಲಘು, ಸ್ನಿಗ್ಧ, ತೀಕ್ಷ್ಣ.

ವೀರ್ಯ : ಉಷ್ಣ

ವಿಪಾಕ : ಕಟು

ಕರ್ಮ : ಕಫವಾತಹರ, ಹೃದ್ಯ, ಶೂಲಹರ, ಬಲ್ಯ, ಚಕ್ಷುಷ್ಯ, ರುಚ್ಯ.

ಹಿಂಗೂಷ್ಣಂ ಕಟುಕಂ ಹೃದ್ಯಂ ಸರಂವಾತಕಫಕ್ರಿಮೀನ್।
ಹಂತಿ ಗುಲ್ಮೋದರಾಧ್ಮಾನಬಂಧಶೂಲ ಹೃದಾಯಾನ್॥

(ಧನ್ವಂತರಿ ನಿಘಂಟು)

ಎಂದರೆ ಇಂಗು ಉಷ್ಣ ವೀರ್ಯದಿಂದ ಕೂಡಿದೆ, ಕಟುರಸದಿಂದ ಕೂಡಿದೆ, ಹೃದಯದ ತೊಂದರೆಗಳನ್ನು ನಿವಾರಿಸುತ್ತದೆ, ಸರವಾಗಿದೆ, ವಾತರಕಫಹರವಾಗಿದೆ. ಕ್ರಿಮಿರೋಗ, ಗುಲ್ಮ, ಉದರ, ಆಧ್ಮಾನ, ಬಂಧಶೂಲ, ಹೃದಯರೋಗಗಳನ್ನು ನಿವಾರಿಸುತ್ತದೆ.

ಔಷಧಿ ಪ್ರಮಾಣ

ನಿರ್ಯಾಸ – 125–500 ಮಿ.ಗ್ರಾಂ

ಔಷಧೀಯ ಯೋಗಗಳು

- ಹಿಂಗ್ವಾಷ್ಟಕ ಚೂರ್ಣ
- ಹಿಂಗ್ವಾದಿ ವಟಿ
- ಹಿಂಗ್ವಾದಿ ಚೂರ್ಣ
- ಹಿಂಗೂಗ್ರಗಂಧಾದಿ ಚೂರ್ಣ
- ಹಿಂಗ್ವಾದಿ ತೈಲ
- ಹಿಂಗು ತ್ರಿಗುಣ ತೈಲಮ್

ಔಷಧೀಯ ಉಪಯೋಗಗಳು

- ಸ್ವಲ್ಪ ಬೆಚ್ಚನೆಯ ಇಂಗನ್ನು ಹುಳುಕು ಹಲ್ಲಿಗೆ ತುಂಬಿಸುವುದರಿಂದ ಕ್ರಿಮಿದಂತಕ್ಕೆ ಒಳ್ಳೆಯದು.
- ಸ್ವಲ್ಪ ಪ್ರಮಾಣದ ಇಂಗನ್ನು ಬಾಳೆಹಣ್ಣಿನ ಮಧ್ಯೆ ಇಟ್ಟು ನುಂಗಿಸಿದರೆ ಸ್ವಲ್ಪ ಸಮಯದಲ್ಲಿ ಹೊಟ್ಟೆನೋವು ಕಡಿಮೆಯಾಗುತ್ತದೆ.
- ಒಂದು ಲೋಟ ನೀರಿಗೆ ಸ್ವಲ್ಪ ಇಂಗು, ಸ್ವಲ್ಪ ತುಪ್ಪ ಮತ್ತು ಸೈಂಧವ ಲವಣಗಳನ್ನು ಸೇರಿಸಿ ತೆಗೆದುಕೊಂಡರೆ ಅತಿಶೀಘ್ರವಾಗಿ ಹೊಟ್ಟೆಯುಬ್ಬರ ಕಡಿಮೆಯಾಗುತ್ತದೆ.
- ಇಂಗನ್ನು ನಿಂಬೆರಸದಲ್ಲಿ ಕಲಸಿ ಲೇಪ ಹಾಕಿದರೆ ಆರಂಭಾವಸ್ಥೆಯ ಕುರುಗಳು ಶಮನವಾಗುವುದು, ಬೆಳೆದಿದ್ದರೆ ಹಣ್ಣಾಗಿ ಒಡೆಯುವುವು.
- ಇಂಗನ್ನು ನೀರಿನಲ್ಲಿ ತೇಯ್ದು ಮೂಗಿಗೆ 2–3 ಹನಿ ಹಾಕಿದರೆ ನರಮಂಡಲದ ಕ್ಷೋಭೆಯಿಂದ ಬಂದ ತಲೆನೋವು ಗುಣವಾಗುವುದು.
- ಇಂಗನ್ನು ಕೊಬ್ಬರಿಎಣ್ಣೆಯಲ್ಲಿ ಕಲಸಿ ಕಜ್ಜಿಗೆ ಲೇಪಿಸುವುದರಿಂದ ಕಜ್ಜಿಯು ಗುಣವಾಗುತ್ತದೆ.
- ಎದೆನೋವಿಗೆ ಇಂಗನ್ನು 125 ಮಿ. ಗ್ರಾಂನಷ್ಟು ಬಿಸಿ ನೀರಿನಲ್ಲಿ ಕಲಸಿ ಕುಡಿಯಬೇಕಲ್ಲದೆ, ಅದನ್ನು ಎಳ್ಳೆಣ್ಣೆಯಲ್ಲಿ ತೇಯ್ದು ಎದೆಗೆ ತಿಕ್ಕಿ ಬೆಚ್ಚಗೆ ಕಟ್ಟಬೇಕು.
- ಒಂದು ಗುಂಜಾ ಇಂಗಿನ ಪುಡಿಯನ್ನು ಬಿಸಿ ನೀರಿನಲ್ಲಿ ಕಲಸಿ ಕುಡಿಯುವುದರಿಂದ ಅಜೀರ್ಣ ವಾಯುವಿಗೆ ಒಳ್ಳೆಯದು.
- ಹುಳುಕು ಹಲ್ಲಿನ ನೋವುಂಟಾದಾಗ ಇಂಗನ್ನು ನೀರಿನಲ್ಲಿ ಕರಗಿಸಿ ಆ ದ್ರಾವಣದಲ್ಲಿ ಹತ್ತಿಯನ್ನು ಅದ್ದಿ ಹುಳುಕು ಹಲ್ಲಿನ ಮೇಲೆ ಇಟ್ಟರೆ ಸ್ವಲ್ಪ ಸಮಯದಲ್ಲಿ ನೋವು ಕಡಿಮೆಯಾಗುತ್ತದೆ.

ಶುದ್ಧ ಇಂಗು

ಒಂದು ಲೋಟದಲ್ಲಿ ನೀರನ್ನು ತೆಗೆದುಕೊಂಡು ಸ್ವಲ್ಪ ಇಂಗನ್ನು ಅದರಲ್ಲಿ ಹಾಕಿದರೆ ಅದು ಕರಗಿ ಬಿಳಿ ಧಾರೆಯಂತೆ ಕಾಣುತ್ತದೆ. ಅದು ಪೂರ್ಣವಾಗಿ ಕರಗಿದ ಮೇಲೆ ನೀರು ಹಾಲಿನಂತೆ ದ್ರಾವಣವಾಗುತ್ತದೆ. ಪಾತ್ರೆಯ ಅಡಿಯಲ್ಲಿ ಕಿಟ್ಟದಂಥ ಅಂಶವೂ ಉಳಿಯುವುದಿಲ್ಲ. ಅಂತಹ ಇಂಗು ಶುದ್ಧವಾಗಿರುತ್ತದೆ.


ಎಚ್ಚರಿಕೆ


ಇಂಗುವಿನ ಅತಿಸೇವನೆಯಿಂದ ಮೆದುಳಿಗೆ, ಪಿತ್ತಾಶಯಕ್ಕೆ ತೊಂದರೆ ಉಂಟಾಗುತ್ತದೆ. ಮಾತ್ರವಲ್ಲದೇ ಪಿತ್ತ ಪ್ರಕೃತಿಯವರು ಹೆಚ್ಚಾಗಿ ಇಂಗನ್ನು ಸೇವಿಸಬಾರದು.


ಆರೋಗ್ಯಕ್ಕೆ ನೀರುಳ್ಳಿ

Allium cepa, Linn.

Liliaceae







ಈರುಳ್ಳಿಯು ಭಾರತದಲ್ಲಿ ಅನೇಕರಿಗೆ ನಿತ್ಯದ ಆಹಾರ ವಸ್ತುವಾಗಿರುವುದಲ್ಲದೆ, ಭಾರತೀಯರು ಕೆಲವು ರೋಗಗಳಿಗೆ ಅದನ್ನು ಮನೆಮದ್ದಾಗಿ ಬಳಸುವುದನ್ನು ಹಿಂದಿನ ಕಾಲದಿಂದಲೂ ಬಲ್ಲರು. ಈ ದ್ರವ್ಯದ ಮಹತ್ವವು ಪುರಾತನ ಈಜಿಪ್ಟಿನವರಿಗೂ ತಿಳಿದಿತ್ತು. ಕೆಮ್ಮು ಮಲಬದ್ಧತೆ ನಿವಾರಿಸುವ ಈರುಳ್ಳಿ ಕ್ರಿಮಿನಾಶಕ ಗುಣಗಳನ್ನು ಹೊಂದಿದೆ. ಈರುಳ್ಳಿಯನ್ನು ಸೇವಿಸಿದರೆ ನಿದ್ದೆ ಚೆನ್ನಾಗಿ ಬರುತ್ತದೆ ಎಂಬ ಉಲ್ಲೇಖವು ಇದೆ. ಈರುಳ್ಳಿಯನ್ನು ನಾವು ಪ್ರತಿನಿತ್ಯದ ಆಹಾರದಲ್ಲಿ ದಿನಕ್ಕೆ ಒಂದು ಬಾರಿಯಾದರೂ ಸೇವಿಸದೆ ಇರಲು ಸಾಧ್ಯವೇ ಇಲ್ಲ. ಯಾಕೆಂದರೆ ಅಡುಗೆಯಲ್ಲಿ ಅದು ಅಷ್ಟು ಪ್ರಯೋಜನಕಾರಿ, ಯಾಕೆ? ಎಂಬುದು ಹೆಚ್ಚಿನವರಿಗೆ ತಿಳಿದಿರುವುದಿಲ್ಲ. ಈರುಳ್ಳಿ ಸೇವನೆಯಿಂದ ಶ್ವಾಸಕೋಶ, ಜೀರ್ಣಶಕ್ತಿ ಕಾರ್ಯ, ಜ್ವರದಂಥ ಮಹಾ ರೋಗಗಳನ್ನು ನಾಶಮಾಡುವ ಗುಣಗಳು ಈ ದ್ರವ್ಯಕ್ಕಿದೆ. ಮಾಂಸದ ಪದಾರ್ಥದಲ್ಲಿ ಈರುಳ್ಳಿಯನ್ನು ಹೆಚ್ಚು ಹೆಚ್ಚು ಉಪಯೋಗಿಸುವುದರಿಂದ ಮಾಂಸದ ಪದಾರ್ಥವು ರುಚಿಯಾಗಿರುವುದು ಮಾತ್ರವಲ್ಲದೇ ಮಾಂಸವು ದೇಹದಲ್ಲಿ ಸುಲಭವಾಗಿ ಜೀರ್ಣಿಸಲು ಸಹಾಯವಾಗುತ್ತದೆ. ವಾತಶಾಮಕ ಬೆಳ್ಳುಳ್ಳಿಯ ನಂತರ ಈರುಳ್ಳಿಯೇ ಉತ್ತಮ ವಾತಶಾಮಕವಾಗಿದೆ. ಇದು

ಪಿತ್ತ ಮತ್ತು ಕಫವನ್ನು ವೃದ್ಧಿಸುತ್ತದೆ. ಬೆಲ್ಲದೊಂದಿಗೆ ಹಸಿ ಈರುಳ್ಳಿ ತಿಂದರೆ ಮಕ್ಕಳ ಬೆಳವಣಿಗೆಗೆ ಒಳ್ಳೆಯದು ಎಂಬ ವ್ಯಾಖ್ಯಾನವು ಇದೆ. 'ನಪಲಾಂಡು ಭಕ್ಷಯೇತ್' ಎಂಬುದಾಗಿ ವೈದಿಕ ವಾಕ್ಯವು ನಿಷೇಧಿಸಿರುತ್ತದೆ. ಈ ನಿಷೇಧಕ್ಕೆ ಇದರ ತಾಮಸಗುಣವೇ ಕಾರಣವೆಂಧು ಹೇಳಬಹುದು. ವೈದಿಕರ ದೃಷ್ಟಿ ಹೇಗೇ ಇರಲಿ, ಆರೋಗ್ಯ ದೃಷ್ಟಿಯಿಂದ ಈರುಳ್ಳಿಯೂ ಒಂದು ಶ್ರೇಷ್ಠ ದ್ರವ್ಯ ಎಂದು ಎಲ್ಲರೂ ಒಪ್ಪಲೇ ಬೇಕು. ಹಸಿ ಈರುಳ್ಳಿಯನ್ನು ತಿನ್ನುವುದೆಂದರೆ ಕೆಲವರಿಗೆ ಭಾರೀ ಪ್ರೀತಿ, ಆದರೆ ತಿಂದ ಮೇಲೆ ಬಾಯಿಯಲ್ಲಿ ಒಂದು ತರಹದ ನಾರುವ ವಾಸನೆಯನ್ನು ಉಂಟು ಮಾಡುವುದರಿಂದ ಕೆಲವರು ಇದನ್ನು ತಿನ್ನಲು ಇಷ್ಟಪಡುವುದಿಲ್ಲ. ಈರುಳ್ಳಿಯಲ್ಲಿ ಪ್ರೋಟೀನ್, ಕ್ಯಾಲ್ಸಿಯಂ, ಲೋಹ, ವಿಟಮಿನ್ ಎ, ಬಿ ಮತ್ತು 'ಸಿ' ಇರುತ್ತವೆ.

ಈರುಳ್ಳಿಯನ್ನು ಪಿತ್ತ ಪ್ರಕೃತಿಯವರು ಮತ್ತು ಮೆದುಳು ವಿಕಾರದಿಂದ ಬಳಲುತ್ತಿರುವವರು ಸೇವಿಸುವುದು ಸೂಕ್ತವಲ್ಲ. ಇದರ ದುಷ್ಪರಿಣಾಮಕ್ಕೆ ದಾಳಿಂಬೆ ರಸ ಸೇವಿಸುವುದು ಸೂಕ್ತ.

ಬಹು ಭಾಷಾ ಹೆಸರುಗಳು

ಕನ್ನಡ : ಈರುಳ್ಳಿ

ಸಂಸ್ಕೃತ : ಪಲಾಂಡು

ತುಳು : ನೀರುಳ್ಳಿ

ಹಿಂದಿ : ಪ್ಯಾಜ್

ಇಂಗ್ಲೀಷ್ : ಓನಿಯನ್

ಪರ್ಯಾಯ ಪದಗಳು

ಪಲಾಂಡು, ಮುಖದೂಷಕ, ಯುವನೇಷ್ಟ ತೀಕ್ಷ್ಣಕಂದ, ದೀಪನ, ಕ್ರಿಮಿಘ್ನ, ಮುಖಗಂಧಕ, ದುರ್ಗಂಧ, ವಿಶ್ವಗಂಧಕ, ವಿಶ್ವಗಂಧ, ರೋಚನ, ಸೂದಪ್ರಿಯ ಈರುಳ್ಳಿಯನ್ನು ಹಸಿಯಾಗಿ ತಿಂದಾಗ ಒಂದು ರೀತಿಯ ನಾರುವ ವಾಸನೆ ಬರುವುದರಿಂದಲೇ ಇದನ್ನು 'ಮುಖಧೂಷಕ' ಎಂದು ಕರೆದಿರಬಹುದು.

ದ್ರವ್ಯದ ವರ್ಣನೆ

ಈರುಳ್ಳಿಯು ಒಂದು ಕುರಚಲ ಗಿಡ. ಇದು ಸುಮಾರು 60–90 ಸೆಂ. ಮೀಟರ್‌ನಷ್ಟು ಎತ್ತರಕ್ಕೆ ಬೆಳೆಯುತ್ತದೆ. ಎಲೆಯು ದಪ್ಪವಾಗಿ, ಮೃದುವಾಗಿ, ವೃತ್ತವಾಗಿ ಹಸಿರು ಬಣ್ಣದಿಂದ ಕೂಡಿದೆ. ಈ ದ್ರವ್ಯವು ಬಿಳಿ ಬಣ್ಣದ ಹೂಗಳನ್ನು ಬಿಡುತ್ತದೆ. ಈ ದ್ರವ್ಯವು ಹೂವು ಮತ್ತು ಹಣ್ಣನ್ನು ಚಳಿಗಾಲದಲ್ಲಿ ಬಿಡುತ್ತದೆ. ಈರುಳ್ಳಿ ಗಡ್ಡೆಯನ್ನು ಔಷಧ ತಯಾರಿಕೆಗೆ

ಉಪಯೋಗಿಸುತ್ತಾರೆ. ಭಾರತದ ಎಲ್ಲ ರಾಜ್ಯಗಳಲ್ಲಿ ವಾಣಿಜ್ಯ ಬೆಳೆಯಾಗಿ ಬೆಳೆಯುವ ಈರುಳ್ಳಿಯನ್ನು ಮಹಾರಾಷ್ಟ್ರದಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ.

ವಿಧಗಳು

ಈರುಳ್ಳಿಯಲ್ಲಿ ಎರಡು ವಿಧಗಳಿವೆ ಅವು

- ಬಿಳಿ ಈರುಳ್ಳಿ
- ಕೆಂಪು ಈರುಳ್ಳಿ

ಆರೋಗ್ಯದ ದೃಷ್ಟಿಯಲ್ಲಿ ಬಿಳಿ ಈರುಳ್ಳಿಯನ್ನೇ ಔಷಧಿ ಉಪಯೋಗಕ್ಕೆ ಬಳಸುವುದು ಸೂಕ್ತ.

ಉಪಯುಕ್ತ ಅಂಗಗಳು

- ಈರುಳ್ಳಿ ಗಡ್ಡೆ
- ಬೀಜಗಳು

ದ್ರವ್ಯದ ಗುಣಧರ್ಮಗಳು

ರಸ : ಮಧುರ, ಕಟು
ಗುಣ : ಗುರು, ಸ್ನಿಗ್ಧ, ತೀಕ್ಷ್ಣ
ವೀರ್ಯ : ಅನುಷ್ಣ
ವಿಪಾಕ : ಮಧುರ
ಕರ್ಮ : ವಾತಹರ, ವೃಷ್ಯ, ರಸಾಯನ

ಸ್ವಾದುಃಪಾಕೇ ರಸೇಃನುಷ್ಣಃ ಕಫಕೃನ್ನಾತಿಪಿತ್ತಲಃ
ಹರತೇ ಕೇವಲಂ ವಾತಂ ಬಲವೀರ್ಯಕರೋ ಗುರುಃ *(ಭಾವಪ್ರಕಾಶ)*

ಎಂದರೆ ಈರುಳ್ಳಿಯು ಮಧುರ ರಸ ಮತ್ತು ವಿಪಾಕದಿಂದ ಕೂಡಿದೆ. ಗುರು ಗುಣದಿಂದ ಕೂಡಿದೆ, ಅನುಷ್ಣ ವೀರ್ಯದಿಂದ ಕೂಡಿದೆ. ಕಫ ಮತ್ತು ಪಿತ್ತವನ್ನು ವೃದ್ಧಿಸುತ್ತದೆ. ಅದು ವಾತಹರವಾಗಿದೆ. ಬಲ ಮತ್ತು ವೀರ್ಯವನ್ನು ಹೆಚ್ಚಿಸುತ್ತದೆ.

ಔಷಧಿ ಪ್ರಮಾಣ

ರಸ : 10–30 ಮಿ.ಲೀ.
ಬೀಜ ಚೂರ್ಣ : 1–3 ಗ್ರಾಂ

ಔಷಧೀಯ ಉಪಯೋಗಗಳು

- ಈರುಳ್ಳಿಯ ರಸವನ್ನು ಮೂಗಿಗೆ ಬಿಡುವುದರಿಂದ ಮೂಗಿನಿಂದ ಬರುವ ರಕ್ತಸ್ರಾವವು ನಿವಾರಣೆಯಾಗುತ್ತದೆ.
- ಈರುಳ್ಳಿ ಸೇವನೆಯಿಂದ ರಕ್ತದ ಮೂಲವ್ಯಾಧಿಗೆ ಒಳ್ಳೆಯದು.
- ಈರುಳ್ಳಿಯ ರಸವನ್ನು ತಾಯಿಯ ಎದೆ ಹಾಲಿನಲ್ಲಿ ಬೆರೆಸಿ ಮೂಗಿಗೆ ಬಿಡುವುದರಿಂದ ಉಬ್ಬಸ, ಕೆಮ್ಮು ರೋಗವು ನಿವಾರಣೆಯಾಗುತ್ತದೆ.
- ಕಾಲಿನ ಹಿಮ್ಮಡಿಯು ಸೀಳಿದರೆ, ಹಸಿ ಈರುಳ್ಳಿಯನ್ನು ಸೀಳಿರುವ ಜಾಗಕ್ಕೆ ತಿಕ್ಕಬೇಕು.
- ಕಾಲರಾದ ರೋಗದಿಂದ ಬಳಲುತ್ತಿರುವವರು ಈರುಳ್ಳಿ ರಸವನ್ನು ಗಂಟೆ ಗಂಟೆಗೆ ಸ್ವಲ್ಪ ಸ್ವಲ್ಪ ಕುಡಿಯಬೇಕು. ಹೀಗೆ ಮಾಡುವುದರಿಂದ ರೋಗವು ಬೇಗ ನಿವಾರಣೆಯಾಗಿ, ಹೊಟ್ಟೆಯಲ್ಲಿರುವ ಹುಳಗಳು ಬೇಗ ಸಾಯುತ್ತವೆ.
- ಈರುಳ್ಳಿಯನ್ನು ಚೇಳು ಕಚ್ಚಿದ ಸ್ಥಳಕ್ಕೆ ತಿಕ್ಕುವುದರಿಂದ ವಿಷ ಇಳಿಯುತ್ತದೆ.
- ಈರುಳ್ಳಿ ರಸ, ತುಪ್ಪ ಮತ್ತು ಸಕ್ಕರೆ ಬೆರೆಸಿ ಸೇವಿಸುವುದರಿಂದ ಮೂಲವ್ಯಾಧಿಯು ನಿವಾರಣೆಯಾಗುತ್ತದೆ.
- ಬಿಳಿ ಈರುಳ್ಳಿ ರಸ, ಬೆಲ್ಲ, ಅರಶಿನವನ್ನು ಬೆರೆಸಿ ಮೂಗಿಗೆ ನಶ್ಯದಂತೆ ಏರಿಸಿದರೆ ಕಾಮಾಲೆ ರೋಗದಿಂದ ಗುಣವನ್ನು ಕಾಣಬಹುದು.
- ಈರುಳ್ಳಿ ರಸವನ್ನು ಸ್ವಲ್ಪ ಕಾಯಿಸಿ, ಅದು ತಣ್ಣಗಾದ ಮೇಲೆ ಕಿವಿಗೆ ಬಿಡುವುದರಿಂದ ಕಿವಿನೋವು, ಕಿವಿಯಲ್ಲಿ ಶಬ್ದ, ಕಿವಿ ಸೋರುವುದು ಮುಂತಾದ ತೊಂದರೆಯಿಂದ ಮುಕ್ತಿ ದೊರೆಯುತ್ತದೆ.
- ಬಿಳಿ ಈರುಳ್ಳಿ, ರಸವನ್ನು ಮೂಗಿಗೆ ಬಿಡುವುದರಿಂದ ಮತ್ತು ಕಣ್ಣಿಗೆ ಹಚ್ಚುವುದರಿಂದ ಮೂರ್ಛೆ ರೋಗವು ನಿವಾರಣೆಯಾಗುತ್ತದೆ.
- ಈರುಳ್ಳಿ ರಸಕ್ಕೆ ಉಪ್ಪು, ಕರಿಮೆಣಸಿನ ಪುಡಿ, ನಿಂಬೆರಸ ಬೆರೆಸಿ ಸೇವಿಸುವುದರಿಂದ ವಿಟಮಿನ್‌ಗಳು ದೇಹಕ್ಕೆ ದೊರೆಯುತ್ತದೆ.
- ಈರುಳ್ಳಿ ರಸ ಅಥವಾ ಲೇಪವನ್ನು ಚರ್ಮಕ್ಕೆ ಹಚ್ಚುವುದರಿಂದ ಚರ್ಮರೋಗವು ನಿವಾರಣೆಯಾಗುತ್ತದೆ.
- ಈರುಳ್ಳಿ ರಸವನ್ನು ಅಂಜನವಾಗಿ ಕಣ್ಣಿಗೆ ಹಚ್ಚುವುದರಿಂದ ದೃಷ್ಟಿಮಾಂದ್ಯ ರೋಗವು ನಿವಾರಣೆಯಾಗುತ್ತದೆ.
- 2–3 ತೊಟ್ಟು ಈರುಳ್ಳಿ ರಸವನ್ನು ಜೇನಿನಲ್ಲಿ ಮಿಶ್ರಿಸಿ ಸೇವಿಸುವುದರಿಂದ ಮಕ್ಕಳ ಹೊಟ್ಟೆನೋವು ಕಡಿಮೆಯಾಗುವುದರ ಜೊತೆಗೆ ಹೊಟ್ಟೆ ಹುಳಗಳು ನಿವಾರಣೆಯಾಗುತ್ತದೆ.


- ಹಸಿ ನೀರುಳ್ಳಿಯ ಪ್ರತಿನಿತ್ಯ ಸೇವನೆ ಹೃದಯಕ್ಕೆ ಒಳ್ಳೆಯದು.
- ವಸಡಿನಲ್ಲಿ ರಕ್ತಸ್ರಾವವಾಗುತ್ತಿದ್ದರೆ, ಈರುಳ್ಳಿಯನ್ನು ನುಣ್ಣಗೆ ಅರೆದು ವಸಡಿಗೆ ಹಚ್ಚಬೇಕು.
- ಸುಟ್ಟ ಈರುಳ್ಳಿಯ ಸೇವನೆಯಿಂದ ಅಜೀರ್ಣರೋಗ ನಿವಾರಣೆಯಾಗುತ್ತದೆ.
- ಈರುಳ್ಳಿ ಮತ್ತು ಬೆಲ್ಲವನ್ನು ಸೇವಿಸುವುದರಿಂದ ರಕ್ತವೃದ್ಧಿಯಾಗುವುದಲ್ಲದೇ ಶರೀರದ ತೂಕವು ಹೆಚ್ಚುತ್ತದೆ.
- ಈರುಳ್ಳಿ ಹೂವನ್ನು ಸೇವಿಸುವುದರಿಂದ ಜೀರ್ಣಶಕ್ತಿ ಹೆಚ್ಚುತ್ತದೆ.
- ಸುಟ್ಟ ಈರುಳ್ಳಿಯನ್ನು ಸೇವಿಸುವುದರಿಂದ ಸುಖ ಮಲಪ್ರವೃತ್ತಿ ಉಂಟಾಗಿ ದೇಹದ ಬಲ ಹೆಚ್ಚುತ್ತದೆ.
- ಉಷ್ಣ ಪ್ರಕೃತಿಯವರು ಈರುಳ್ಳಿಯನ್ನು ತುಂಬಾ ಸೇವಿಸುವುದರಿಂದ ಸ್ಮರಣಶಕ್ತಿ ಕಡಿಮೆಯಾಗುತ್ತದೆ.
- ಈರುಳ್ಳಿಯ ರಸ ನಿತ್ಯ ಸೇವನೆಯಿಂದ ಕೆಮ್ಮು, ನೆಗಡಿ, ದಮ್ಮು ನಿವಾರಣೆಯಾಗುತ್ತದೆ.
- ಚೇಳು ಕಡಿತಕ್ಕೆ ಈರುಳ್ಳಿಯನ್ನು ಜಜ್ಜಿ, ಚೇಳು ಕಚ್ಚಿದ ಜಾಗಕ್ಕೆ ತಿಕ್ಕಬೇಕು.
- ಬಿಳಿ ಈರುಳ್ಳಿಯನ್ನು ತುಪ್ಪದಲ್ಲಿ ಹುರಿದು, ಕಲ್ಲು ಸಕ್ಕರೆ ಬೆರೆಸಿ 50 ಗ್ರಾಂನಷ್ಟು ಬೆಳಗ್ಗೆ ಮತ್ತು ರಾತ್ರಿ ಸೇವಿಸುವುದರಿಂದ ಬೊಜ್ಜು ಕರಗುತ್ತದೆ.
- ಈರುಳ್ಳಿ ಗಡ್ಡೆಯನ್ನು ಬಿಸಿ ಮಾಡಿ, ಶಾಖಕೊಟ್ಟರೆ ಕುರು, ಬಾವು ಹಣ್ಣಾಗುತ್ತದೆ.

ರೋಗಕ್ಕೆ ಉತ್ತರಿಸುವ ಉತ್ತರಾಣಿ

Achyranthes aspera, Linn.

Amaranthacae





ಉತ್ತರಾಣಿಯು ಮಹಾರಾಣಿಯಂತೆ ಯಾವುದೇ ಸಹಾಯವಿಲ್ಲದೇ ಎಲ್ಲೆಡೆ ಬೆಳೆಯುವ ಗಿಡವಾಗಿದೆ. ಬೇರೆ ಯಾವುದೇ ವೇದಗಳಲ್ಲಿ ಇದರ ಪರಿಚಯವನ್ನು ಕಾಣದಿದ್ದರೂ ಯುಜುರ್ವೇದಗಳಲ್ಲಿ ಇದರ ಪರಿಚಯವನ್ನು ಗುರುತಿಸಬಹುದು. ಭಾರತದಲ್ಲಿ ಹೆಚ್ಚಿನ ಪ್ರಾಂತ್ಯಗಳಲ್ಲಿ ಕಳೆಯಂತೆ ಬೆಳೆಯುತ್ತದೆ. ಈ ದ್ರವ್ಯವು ನೀರಿನಾಂಶ ಇದ್ದಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಉತ್ತರಾಣಿ ದ್ರವ್ಯವು ಪ್ರಾಚೀನ ಕಾಲದಿಂದ ಆಯುರ್ವೇದದಲ್ಲಿ ಉಪಯೋಗಿಸುವಂತ ಪರಿಣಾಮಕಾರಿ ದ್ರವ್ಯ, "ಅಪಮೃಜ್ಯತೇ ವ್ಯಾಧಿರನೇನ ಇತಿ ಅಪಾಮಾರ್ಗಃ" ಶರೀರದಲ್ಲಿ ದೂಷಿತವಾಗಿರುವ ರಸಾದಿ ಧಾತುಗಳನ್ನು ಇದು ಶುದ್ಧೀಕರಿಸಬಲ್ಲುದು, ಆದ್ದರಿಂದಲೇ ಇದನ್ನು 'ಅಪಾಮಾರ್ಗ' ಎಂಬ ಹೆಸರಿನಿಂದ ಕರೆಯುತ್ತಾರೆ. ಉತ್ತರಾಣಿಯ ಎಲೆಗಳ ರಸವನ್ನು ಕೈಗಳಿಗೆ ಹಚ್ಚಿಕೊಂಡು ಚೇಳನ್ನು ಹಿಡಿಯಬಹುದು ಯಾಕೆಂದರೆ ಉತ್ತರಾಣಿಯಲ್ಲಿ ವಿಷನಾಶಕ ಪ್ರಭಾವ ವಿಶೇಷವಾಗಿದೆ ಎಂಬ ಉಲ್ಲೇಖವು ಇದೆ.

ಬಹು ಭಾಷಾ ಹೆಸರುಗಳು

ಕನ್ನಡ : ಉತ್ತರಾಣಿ

ಸಂಸ್ಕೃತ : ಅಪಾಮಾರ್ಗ

ತುಳು : ಉತ್ತರಾಣಿ

ಹಿಂದಿ : ಚಿರಚಿಂಟಾ

ಇಂಗ್ಲೀಷ್ : ಪ್ರಿಕ್ಲೀಚಫ್ ಫ್ಲವರ್

ಪರ್ಯಾಯ ಪದಗಳು

ಅಪಾಮಾರ್ಗ, ಶಿಖರೀ, ಮಯೂರಕ, ಪ್ರತ್ಯಕ್‌ಪುಷ್ಪಿ, ಕಿನಿಹೀ, ಮರ್ಕಟ ಪಿಪ್ಪಲಿ, ಕುಬ್ಜ, ಮಯೂರಶಿಖಾ.

ಉದ್ದವಾದ ಪುಷ್ಪಗಳ ಸಮುದಾಯವು ಉತ್ತರಾಣಿ ಗಿಡದ ತುದಿಯಲ್ಲಿರುವುದರಿಂದಲೇ ಅದನ್ನು ಸಂಸ್ಕೃತದಲ್ಲಿ 'ಶಿಖರೀ' ಎಂಬ ಹೆಸರಿನಿಂದ ಕರೆಯುತ್ತಾರೆ.

ದ್ರವ್ಯದ ವರ್ಣನೆ

ಕಾಂಡವು ಗಂಟು ಗಂಟಾಗಿರುವ ಈ ಗಿಡವು ಪೊದೆಯಾಕಾರದಲ್ಲಿದ್ದು 1/2–1 ಮೀಟರ್‌ನಷ್ಟು ಎತ್ತರವಾಗಿ ಬೆಳೆಯುತ್ತದೆ. ಎಲೆಗಳು ದುಂಡಾಗಿದ್ದು 5 ಸೆಂಟಿ ಮೀಟರ್‌ನಷ್ಟು ಉದ್ದವಾಗಿ, 3–4 ಸೆಂ.ಮೀಟರ್‌ನಷ್ಟು ಅಗಲವಾಗಿ ಮೃದುವಾಗಿರುವುದು. ಇದರ ಹೂವು ಹಸಿರು – ಬಿಳಿ ಮಿಶ್ರಿತ ಬಣ್ಣದಿಂದ ಕೂಡಿರುತ್ತದೆ. ಹೂ ಬಿಡುವ ದಂಟಿನ ಅರ್ಧಕ್ಕಿಂತ ಹೆಚ್ಚು ಭಾಗದಲ್ಲಿ ದಂಟು ಬಾಗಿರುವುದು. ಚಿಕ್ಕ ಚಿಕ್ಕ ಕಾಯಿಗಳು ಮನುಷ್ಯರ ಪ್ರಾಣಿಗಳ ಅಂಗಕ್ಕೆ ತಾಗಿದರೆ ಅಂಟಿಕೊಳ್ಳುವುದು. ಸಾಮಾನ್ಯವಾಗಿ ಭಾರತದೆಲ್ಲೆಡೆ ಕಾಣಸಿಗುವ ಈ ಗಿಡವು ಹೂವನ್ನು ಚಳಿಗಾಲದಲ್ಲಿ ಮತ್ತು ಹಣ್ಣನ್ನು ಬೇಸಿಗೆ ಕಾಲದಲ್ಲಿ ಬಿಡುತ್ತದೆ.

ವಿಧಗಳು

ನಿಘಂಟುಕಾರ ಪ್ರಕಾರ ಉತ್ತರಾಣಿಯಲ್ಲಿ ಎರಡು ವಿಧಗಳಿವೆ/ ಅವು

- ಬಿಳಿ ಉತ್ತರಾಣಿ
- ಕೆಂಪು ಉತ್ತರಾಣಿ

- ಕೈಯ್ಯದೇವನ ಪ್ರಕಾರ ಮೂರು ವಿಧಗಳಿವೆ. ಅವು
- ಬಿಳಿ ಉತ್ತರಾಣಿ

- ಕೆಂಪು ಉತ್ತರಾಣಿ
- ನೀಲಿ ಉತ್ತರಾಣಿ

ಉಪಯುಕ್ತ ಅಂಗಗಳು

- ಬೇರು
- ಬೀಜ
- ಎಲೆ
- ಕ್ಷಾರ
- ಸಂಪೂರ್ಣ ಗಿಡ

ದ್ರವ್ಯದ ಗುಣಧರ್ಮಗಳು

ರಸ : ಕಟು, ತಿಕ್ತ

ಗುಣ : ಲಘು, ರೂಕ್ಷ, ತೀಕ್ಷ್ಣ

ವೀರ್ಯ : ಉಷ್ಣ

ವಿಪಾಕ : ಕಟು

ಕರ್ಮ : ಕಫವಾತಹರ, ಶಿರೋವಿರೇಚನ, ದೀಪನ, ಪಾಚನ, ರೋಚಕ.

ಅಪಾಮಾರ್ಗ: ಸರಃ ತೀಕ್ಷ್ಣೋ ದೀಪನಃ ತಿಕ್ತಕಃ ಕಟುಃ।
ಪಾಚನೋ ರೋಚನಃ ಛರ್ದಿಕಫಮೇದೋಽನಿಲಾಪಹಃ।
ನಿಹಂತಿ ಹೃದ್ರುಜಾಧ್ಮಾರ್ಶಃ ಕಂಡೂಶೂಲೋದರಾಪಚೀಃ॥ (ಭಾವಪ್ರಕಾಶ)

ಎಂದರೆ, ಉತ್ತರಾಣಿಯು ತೀಕ್ಷ್ಣ ಗುಣದಿಂದ ಕೂಡಿದೆ. ಕಟು ತಿಕ್ತ ರಸದಿಂದ ಕೂಡಿದೆ. ಪಾಚನ, ರೋಚನ, ಸರ ಕಾರ್ಯಗಳನ್ನು ನಿರ್ವಹಿಸುತ್ತದೆ. ಕಫವಾತಹರವಾಗಿದೆ, ಮೇದೋಹರವಾಗಿದೆ. ವಾಂತಿಹೃದ್ರುಜ, ಹೊಟ್ಟೆಯುಬ್ಬರ, ಕಂಡೂ, ಉದರ ರೋಗ, ಶೂಲ, ಅಪಚೀ, ಮೂಲವ್ಯಾಧಿ ಮುಂತಾದ ರೋಗಗಳನ್ನು ನಿವಾರಿಸುತ್ತದೆ.

ಔಷಧಿ ಪ್ರಮಾಣ

ಸ್ವರಸ : 10–20 ಮಿ.ಲೀ.

ಕ್ಷಾರಂ : 5–2 ಗ್ರಾಂ

ಬೀಜ ಚೂರ್ಣ : 5–20 ಗ್ರೈನ್ಸ್

ಭಸ್ಮ : 5–10 ಗುಂಜಾ

ಚೂರ್ಣ : 3–5 ಗ್ರಾಂ

ಔಷಧೀಯ ಯೋಗಗಳು

- ಅಪಮಾರ್ಗಕ್ಷಾರ ತೈಲ
- ಶಿಕಾರೀ ಘೃತ

ಔಷಧೀಯ ಉಪಯೋಗಗಳು

- ಗಾಯದಲ್ಲಿ ರಕ್ತ ಸುರಿಯುತ್ತಿದ್ದರೆ. ಆ ಭಾಗಕ್ಕೆ ಉತ್ತರಾಣಿ ಗಿಡದ ಸೊಪ್ಪಿನ ರಸವನ್ನು ಹಾಕುವುದು ಆಗ ರಕ್ತಸ್ರಾವ ನಿಲ್ಲುತ್ತದೆ ಮತ್ತು ಗಾಯವು ವಾಸಿಯಾಗುತ್ತದೆ.
- ಉತ್ತರಾಣಿಯ ಕ್ಷಾರವನ್ನು ಹಿಪ್ಪಲಿ ಮತ್ತು ಜೇನುತುಪ್ಪದೊಂದಿಗೆ ಸೇವಿಸುವುದರಿಂದ ಕಫ, ಕೆಮ್ಮು ರೋಗವು ಗುಣವಾಗುತ್ತದೆ.
- ಬಿಳಿ ಉತ್ತರಾಣಿಯ ಬೇರನ್ನು ಶುದ್ಧವಾದ ನೀರಿನಲ್ಲಿ ತೇದು ಸ್ತನಗಳ ಮೇಲೆ ಲೇಪಿಸುವುದರಿಂದ ತಾಯಂದಿರ ಎದೆ ಹಾಲು ಹೆಚ್ಚುತ್ತದೆ.
- ಇಲಿ ವಿಷ, ಸರ್ಪವಿಷ ಮತ್ತು ಚೇಳಿನ ವಿಷದಲ್ಲಿ ಉತ್ತರಾಣಿಯ ಬೇರನ್ನು ಜಜ್ಜಿ ತಯಾರಿಸಿದ ಲೇಪವನ್ನು ಕಚ್ಚಿದ ಭಾಗಕ್ಕೆ ಲೇಪಿಸುವುದರಿಂದ ವಿಷದ ಪರಿಣಾಮ ಕಡಿಮೆಯಾಗುವುದು.
- ಉತ್ತರಾಣಿ ಕ್ಷಾರ ತೈಲ ಕಿವಿನೋವು, ಕಿವುಡುತನ, ಕಿವಿಯಲ್ಲಿ ಸದಾ ಶಬ್ದ ಬರುವುದು ಮುಂತಾದ ರೋಗಗಳಿಗೆ ಒಳ್ಳೆಯದು.
- ಉತ್ತರಾಣಿಯ ಬೇರಿನ ಸೂಕ್ಷ್ಮ ಚೂರ್ಣವನ್ನು ಅಕ್ಕಿ ತೊಳೆದ ನೀರಿನಲ್ಲಿ ಸೇವಿಸುತ್ತ, ಉತ್ತರಾಣಿಯ ಬೀಜದ ಪುಡಿಯ ಲೇಪವನ್ನು ಮೂಲವ್ಯಾಧಿಯ ಅಂಕುರಕ್ಕೆ ಲೇಪಿಸುವುದರಿಂದ ಮೂಲವ್ಯಾಧಿ ರೋಗವು ಕಡಿಮೆಯಾಗುತ್ತದೆ.
- ಉತ್ತರಾಣಿಯ ಬೀಜದಿಂದ ಮತ್ತು ಹಾಲಿನಿಂದ ತಯಾರಿಸಿದ ಗಂಜಿಯನ್ನು ಸೇವಿಸುವುದರಿಂದ ಅತಿಯಾದ ಹಸಿವಿನಿಂದ ಬಳಲುತ್ತಿರುವವರಿಗೆ ಒಳ್ಳೆಯದು.
- ಉತ್ತರಾಣಿಯ ಬೀಜದ ಲೇಪವನ್ನು ಮಜ್ಜಿಗೆಯಲ್ಲಿ ಸೇವಿಸುವುದರಿಂದ ರಕ್ತ ಮೂಲವ್ಯಾಧಿಯು ನಿವಾರಣೆಯಾಗುತ್ತದೆ.
- ಉತ್ತರಾಣಿಯ ಬೇರಿನ ಪುಡಿಯನ್ನು ಹಾಲಿನಲ್ಲಿ ಸೇವಿಸುವುದರಿಂದ ಮೂತ್ರ ಕೃಚ್ಛ್ರ, ಮೂತ್ರ ತೊಂದರೆ ನಿವಾರಣೆಯಾಗುತ್ತದೆ.
- ಅಪಮಾರ್ಗ ಬೇರನ್ನು ಎಣ್ಣೆಯಲ್ಲಿ ಬಿಸಿಮಾಡಿ, ತಯಾರಿಸಿದ ಎಣ್ಣೆಯನ್ನು ಹಚ್ಚುವುದರಿಂದ ಅಪಘಾತದ ಗಾಯವು ನಿವಾರಣೆಯಾಗುತ್ತದೆ.
- ಉತ್ತರಾಣಿ ಬೀಜದಿಂದ ತಯಾರಿಸಿದ ಎಣ್ಣೆಯನ್ನು ತಲೆಗೆ ಹಚ್ಚುವುದರಿಂದ ತಲೆನೋವು ನಿವಾರಣೆಯಾಗುತ್ತದೆ.


- ಉತ್ತರಾಣಿ ಕಷಾಯ ಮತ್ತು ಹಿಪ್ಪಲಿಯ ಲೇಪಕ್ಕೆ ತುಪ್ಪ ಬೆರೆಸಿ, ಕಾಯಿಸಿ, ತಯಾರಿಸಿದ ತುಪ್ಪವನ್ನು ಸೇವಿಸುವುದರಿಂದ ಹೊಟ್ಟೆನೋವು ನಿವಾರಣೆ.
- ಉತ್ತರಾಣಿಯ ಬೀಜದ ಪುಡಿಯನ್ನು ನಶ್ಯದಂತೆ ಮೂಗಿಗೆ ಏರಿಸುವುದರಿಂದ ತಲೆಭಾರ, ಅರ್ಧ ತಲೆನೋವು, ಪೀನಸ ವಿಕಾರಗಳು ನಿವಾರಣೆಯಾಗುತ್ತದೆ.
- 5 ಗ್ರಾಂ. ಕೆಂಪು ಉತ್ತರಾಣಿ ಗಿಡದ ರಸಕ್ಕೆ, 5 ಗ್ರಾಂ ಕಾಳು ಮೆಣಸಿನ ಪುಡಿ ಸೇರಿಸಿ ನೆಕ್ಕಿಸಿದರೆ ಮೂತ್ರದಲ್ಲಿ ರಕ್ತ ಸುರಿಯುತ್ತಿದ್ದರೆ ಕಡಿಮೆಯಾಗುತ್ತದೆ.

ಮನುಷ್ಯನ ಶರೀರದೊಳಗಿನ
ಮಹಾಶತ್ರುವೇ ಆಲಸ್ಯ


ಬಂಗಾರಕ್ಕಿಂತ ಶ್ರೇಷ್ಠ ಉಮ್ಮತ್ತಿ

Datura metel, Linn.

Solanaceae







ಬಂಗಾರಕ್ಕಿಂತ ಶ್ರೇಷ್ಠವಾದ 'ಉಮ್ಮತ್ತಿ' ಗಿಡವು ಭಾರತದ ಎಲ್ಲ ಭಾಗಗಳಲ್ಲಿ ಯಥೇಚ್ಛವಾಗಿ ಕಂಡು ಬರುತ್ತದೆ. ಈ ವನಸ್ಪತಿಯ ಪರಿಚಯವು ಚರಕ, ಸುಶ್ರುತ ಸಂಹಿತೆಗಳಲ್ಲಿ ಕಾಣಬಹುದು. ಹೊಳೆ ಬದಿಗಳಲ್ಲಿ ಕೊಳಕು ಪ್ರದೇಶಗಳಲ್ಲಿ ಉಮ್ಮತ್ತಿ ಗಿಡವು ಬೆಳೆಯುತ್ತದೆ. ಈ ಗಿಡವನ್ನು ಹೊಟ್ಟೆಗೆ ಹೆಚ್ಚಿನ ಪ್ರಮಾಣದಲ್ಲಿ ತೆಗೆದುಕೊಂಡರೆ ಬುದ್ಧಿಮಾಂದ್ಯತೆ ಉಂಟಾಗುವ ಸಾಧ್ಯತೆಗಳಿವೆ. ಅಸ್ತಮಾ, ನಾಯಿಕೆಮ್ಮು, ಸೆಳೆತ ರೋಗಗಳಿಗೆ ಉಮ್ಮತ್ತಿಯು ಒಳ್ಳೆಯ ಮದ್ದು ಎಂಬುದಾಗಿ ಕೆ.ಎಮ್. ನಾಡಕರ್ಣಿ ತಿಳಿಸಿದ್ದಾರೆ. ಮನಸ್ಸನ್ನು ವಿಕೃತಗೊಳಿಸುವ ಶಕ್ತಿಯು ಧತ್ತೂರಿ ಗಿಡದ ಬೀಜದಲ್ಲಿರುವುದರಿಂದ ವಶೀಕರಣ ಕೆಲಸಕ್ಕೆ ಈ ದ್ರವ್ಯದ ಬೀಜಗಳನ್ನು ಹಿಂದಿನ ಕಾಲದಿಂದಲೂ ಉಪಯೋಗಿಸುತ್ತಿದ್ದರು. ಗಾಯ, ನೋವು, ತುರಿಕೆ, ತ್ವಚೆಯ ರೋಗಗಳನ್ನು ನಿವಾರಿಸಿ ಚರ್ಮಕ್ಕೆ ಕಾಂತಿ ನೀಡುವ ಉಮ್ಮತ್ತಿಯು ಆಯುರ್ವೇದದ ಪ್ರಮುಖ ದ್ರವ್ಯಗಳಲ್ಲಿ ಒಂದು.

ಬಹು ಭಾಷಾ ಹೆಸರುಗಳು

ಕನ್ನಡ : ಉಮ್ಮತ್ತಿ

ಸಂಸ್ಕೃತ : ಧತ್ತೂರ.

ತುಳು : ಉಂಬೆದ ದೈ

ಹಿಂದಿ : ಧತ್ತೂರ

ಇಂಗ್ಲೀಷ್ : ಥಾರ್ನ್ಆಪಲ್

ಪರ್ಯಾಯ ಪದಗಳು

ಉಮ್ಮತ್ತ, ಧತ್ತೂರ, ಕನಕ, ಮದನ, ಶಿವಪ್ರಿಯಾ, ಮಾತುಲಪುತ್ರಕ, ಮಾತುಲ, ಉನ್ಮತ್ತ, ಧೂರ್ತ, ಕನಕದ್ವಯ, ಕಾಂಚನಾ, ಹೇಮಾ, ದೇವತಾ, ಮಹಾಮೋಹಿ, ಮದನ.

ದ್ರವ್ಯದ ವರ್ಣನೆ

ಒಂದರಿಂದ ಎರಡು ಅಡಿ ಎತ್ತರಕ್ಕೆ ಬೆಳೆಯುವ ಧತ್ತೂರಿ ಗಿಡವು ಭಾರತದ ಉತ್ತರ ತುದಿಯಿಂದ ದಕ್ಷಿಣ ತುದಿಯವರೆಗೆ ಕಾಣಸಿಗುವುದು. ಈ ಗಿಡವು 6 ರಿಂದ 15 ಸೆ. ಮೀಟರ್‌ನಷ್ಟು ಉದ್ದದ ತ್ರಿಕೋಣಾಕಾರದ ಎಲೆಗಳನ್ನು ಹೊಂದಿದ್ದು, 5–15 ಸೆಂ. ಮೀಟರ್ ಉದ್ದದ ಬಿಳಿ, ನೇರಳೆ ಬಣ್ಣದ ಹೂಗಳನ್ನು ಹೊಂದಿರುತ್ತದೆ. ಕಾಯಿಗಳು ಚೆಂಡಿನಾಕಾರದಲ್ಲಿದ್ದು ಮುಳ್ಳಿನಿಂದ ಕೂಡಿರುತ್ತದೆ. ಉಮ್ಮತ್ತಿಯು ಒಳ್ಳೆಯ ನೋವು ನಿವಾರಕ ಮತ್ತು ಕೆಮ್ಮು ದಮ್ಮುಗಳಲ್ಲಿ ಸಹಾಯಕ ಸಸ್ಯವಾಗಿದೆ.

ವಿಧಗಳು

ಈ ಗಿಡದಲ್ಲಿ ಎರಡು ಪ್ರಭೇದಗಳಿವೆ. ಇವು

- ಶ್ವೇತ ದತ್ತೂರ
- ಕೃಷ್ಣ ದತ್ತೂರ

ಸಸ್ಯಶಾಸ್ತ್ರದಲ್ಲಿ ಇದನ್ನು ಕ್ರಮವಾಗಿ Datura stramonium ಮತ್ತು Datura metel ಎಂದು ಕರೆಯುತ್ತಾರೆ.

ರಾಜನಿಘಂಟುಕಾರನ ಪ್ರಕಾರ ಧತ್ತೂರದಲ್ಲಿ 5 ಪ್ರಭೇದಗಳಿವೆ. ಅವು

- ಶ್ವೇತ ದತ್ತೂರ
- ನೀಲ ದತ್ತೂರ
- ಪೀತ ದತ್ತೂರ
- ರಕ್ತ ದತ್ತೂರ
- ಕೃಷ್ಣ ದತ್ತೂರ

ಉಪಯುಕ್ತ ಅಂಗಗಳು

- ಬೇರು
- ಕಾಯಿ
- ಬೀಜ
- ಹೂವು
- ಎಲೆ

ದ್ರವ್ಯದ ಗುಣಧರ್ಮಗಳು

ರಸ : ತಿಕ್ತ, ಕಟು

ಗುಣ : ಲಘು, ರೂಕ್ಷ

ವೀರ್ಯ : ಉಷ್ಣ

ವಿಪಾಕ : ಕಟು

ಕರ್ಮ : ಕಫವಾತಹರ, ವಿಷಘ್ನ, ಕಾಸಹರ, ಗ್ರಾಹೀ, ವೇದನಾಹರ.

ದತ್ತೂರಃ ಕಟುರುಷ್ಣಶ್ಚ ಕಾಂತಿಕಾರೀ ವ್ರಣಾರ್ತಿನುತ್।
ತ್ವಗ್ದೋಷಕೃಚ್ಛ್ರಕಂಡೂತಿಜ್ವರಹರೀ ಭ್ರಮಾವಹಃ॥ *(ಧನ್ವಂತರಿ ನಿಘಂಟು)*

ಎಂದರೆ ಧತ್ತೂರವು ಕಟು ರಸ ಮತ್ತು ವಿಪಾಕದಿಂದ ಕೂಡಿದೆ, ಉಷ್ಣವೀರ್ಯವುಳ್ಳದಾಗಿದೆ. ಚರ್ಮ ದೋಷವನ್ನು ಹೋಗಲಾಡಿಸಿ ಕಾಂತಿಯನ್ನು ಹೆಚ್ಚಿಸುತ್ತದೆ. ಗಾಯಗಳನ್ನು ನೋವುಗಳನ್ನು ತುರಿಕೆಯನ್ನು ಪರಿಹರಿಸುತ್ತದೆ. ಜ್ವರಹರವಾಗಿದೆ. ಆದರೆ ಸರಿಯಾದ ತಿಳುವಳಿಕೆ ಇಲ್ಲದೆ ಶುದ್ಧಿಕರಿಸದೆ ಸೇವಿಸಿದರೆ ಭ್ರಮೆಯನ್ನು ಉಂಟು ಮಾಡುತ್ತದೆ.

ಔಷಧಿ ಪ್ರಮಾಣ

ಬೀಜದ ಚೂರ್ಣ : 50–100 ಮಿ.ಗ್ರಾಂ

ಪತ್ರ ಚೂರ್ಣ : 50–250 ಮಿ.ಗ್ರಾಂ

ಔಷಧೀಯ ಯೋಗಗಳು

- ಕನಕಾಸವ
- ಸೂತಶೇಖರ ರಸ
- ಕನಕ ತೈಲ
- ಕನಕ ಲೇಪ

- ಮಹಾವಿಷಗರ್ಭ ತೈಲ
- ಉನ್ಮತ್ತ ರಸ

ಔಷಧೀಯ ಉಪಯೋಗಗಳು

- ಧತ್ತೂರದಿಂದ ತಯಾರಿಸಿದ ತೈಲವನ್ನು ನೋವಿನ ಸ್ಥಳಕ್ಕೆ ಹಚ್ಚಿ ಮೃದುವಾಗಿ ಉಜ್ಜಿ, ಶಾಖ ಕೊಡುವುದರಿಂದ ಸಂಧಿವಾತ, ಉಳುಕಿನ ನೋವು ಮತ್ತು ವಾತವ್ಯಾಧಿಗಳಲ್ಲಿ ಕಾಣುವ ಸಂಧಿ ಶೂಲಗಳು ಕಡಿಮೆಯಾಗುವುವು.
- ಮುಟ್ಟಾದಾಗ ಬರುವ ಹೊಟ್ಟೆನೋವಿಗೆ ಉಮ್ಮತ್ತಿಯ ಎಲೆಗಳಿಗೆ ಎಣ್ಣೆ ಸವರಿ, ಬಿಸಿ ಮಾಡಿ ಹೊಕ್ಕಳ ಕೆಳಗೆ ಇಡುವುದರಿಂದ ನೋವು ಕಡಿಮೆಯಾಗುವುದು.
- ಮಂಗನ ಬಾವು ರೋಗದಲ್ಲಿ ಸ್ವಲ್ಪ ಜ್ವರವಿದ್ದು ಕಿವಿಯ ಹತ್ತಿರದ ದವಡೆಯ ಭಾಗವು ಬಾತುಕೊಳ್ಳುತ್ತದೆ. ಅದಕ್ಕೆ ಒಂದು ಧತ್ತೂರದ ಎಲೆ, ಕಾಲು ತೊಲೆ ಸುಣ್ಣ, ಕಾಲು ತೊಲೆ ಬೆಲ್ಲವನ್ನು ಒಟ್ಟಾಗಿ ಅರೆದು ಲೇಪಿಸುವುದರಿಂದ ಮಂಗನ ಬಾವು ರೋಗದಿಂದ ಗುಣ ಸಿಗುತ್ತದೆ.
- ಉಮ್ಮತ್ತಿಯ ಬೀಜದೆಣ್ಣೆಯನ್ನು ನಿಂಬೆರಸದಲ್ಲಿ ಬೆರೆಸಿ ಹಾವು ಕಚ್ಚಿದ ಸ್ಥಳಕ್ಕೆ ಹಚ್ಚಿದರೆ ವಿಷ ಏರುವುದನ್ನು ತಡೆಯಬಹುದು.
- ಉಮ್ಮತ್ತಿಯ ಎಲೆಗಳನ್ನು ಸುಟ್ಟು ಬರುವ ಹೊಗೆಯನ್ನು ಸೇವಿಸಿದರೆ ಕೆಮ್ಮು ದಮ್ಮು ಮೊದಲಾದ ರೋಗಗಳು ಕಡಿಮೆ ಆಗುವುದು.
- ಉಮ್ಮತ್ತಿಯ ಎಲೆಯ ರಸವನ್ನು ಕುರು, ಹುಣ್ಣು, ಗಾಯಗಳ ಮೇಲೆ ಹಚ್ಚಿದರೆ ಗುಣ ಸಿಗುತ್ತದೆ.
- ಧತ್ತೂರ ಎಲೆಯ ರಸಕ್ಕೆ ಸಕ್ಕರೆ ಮತ್ತು ಜೇನು ಬೆರೆಸಿ 125 ಮಿ.ಲೀ. ಪ್ರಮಾಣದಷ್ಟು ಸೇವಿಸುವುದರಿಂದ ಎಲ್ಲ ವಿಧದ ಜ್ವರ ನಿವಾರಣೆಯಾಗುತ್ತದೆ.
- ಧತ್ತೂರ ಎಲೆಯ ರಸವನ್ನು ಹಚ್ಚುವುದರಿಂದ ಗಜಕರ್ಣ, ಇಸುಬು ಚರ್ಮವ್ಯಾಧಿಗಳು ನಿವಾರಣೆಯಾಗುತ್ತದೆ.
- ಅರಿಷಿಣದ ಮತ್ತು ದತ್ತೂರ ಕಾಯಿಯ ಲೇಪವನ್ನು ಸ್ತನಗಳಿಗೆ ಹಚ್ಚುವುದರಿಂದ ಸ್ತನ ನೋವು ನಾಶವಾಗುತ್ತದೆ.
- ಧತ್ತೂರದ ಹಣ್ಣಿನ ರಸವನ್ನು ತಲೆಗೆ ಹಾಕುವುದರಿಂದ ತಲೆಯಲ್ಲಿರುವ ಹೊಟ್ಟು ಉದುರುವುದಕ್ಕೆ ಒಳ್ಳೆಯದು.

ದತ್ತೂರ ಶುದ್ಧಿಕ್ರಮ

ಡೋಲಾ ಯಂತ್ರದಲ್ಲಿ ಹಾಲನ್ನು ಉಪಯೋಗಿಸಿಕೊಂಡು, ಧತ್ತೂರವನ್ನು ಕಾಯಿಸಿ ಶುದ್ಧಿ ಮಾಡುವುದು.

ಎಚ್ಚರಿಕೆ

ಉಮ್ಮತ್ತಿಯನ್ನು ಉಪಯೋಗಿಸುವಾಗ ಮಾತ್ರ ಎಚ್ಚರಿಕೆ ಅವಶ್ಯ. ಇದು ಒಂದು ವಿಷ ದ್ರವ್ಯವಾಗಿರುವುದರಿಂದಲೇ ಶುದ್ಧೀಕರಿಸದೆ ಅಭ್ಯಂತರ ಸೇವನೆ ಮಾಡದಿರುವುದು ಸೂಕ್ತ. ಬಾಹ್ಯ ರೂಪದಲ್ಲಿ ಉಪಯೋಗಿಸುವಾಗಲೂ ಹೊಟ್ಟೆಗೆ ಹೋಗದಂತೆ ಮುನ್ನೆಚ್ಚರಿಕೆ ಅವಶ್ಯ.


ನೇತ್ರ ದಾನ ಮಹಾ ದಾನ

ಸಾಂಬಾರ ವಸ್ತುಗಳ ರಾಣಿ ಏಲಕ್ಕಿ

Elettaria cardomomum, Maton.

Scitaminaceae





ಸಾಂಬಾರ ವಸ್ತುಗಳ ರಾಣಿಯೆಂದು ಪ್ರಸಿದ್ಧಿ ಪಡೆದ ಏಲಕ್ಕಿ ಪ್ರಪಂಚದಲ್ಲಿ ಅತ್ಯಮೂಲ್ಯ ವಸ್ತು. ಕರಿಮೆಣಸು ಸಾಂಬಾರ ವಸ್ತುಗಳ ರಾಜ. ಇದಕ್ಕೆ ಪ್ರಥಮ ಸ್ಥಾನ. ಏಲಕ್ಕಿಗೆ ದ್ವಿತೀಯ ಸ್ಥಾನ. ನಮ್ಮ ನಾಡಿನ ಪುರಾತನ ಗ್ರಂಥಗಳಲ್ಲಿ, ಸಂಹಿತೆಗಳಲ್ಲಿ ಏಲಕ್ಕಿಯ ಉಲ್ಲೇಖವಿದೆ. ಕಾಳಿದಾಸನ ಕೃತಿಗಳಲ್ಲಿ (ಕ್ರಿ.ಶ. 4ನೇ ಶತಮಾನ) ಏಲಕ್ಕಿಯ ಸುಗಂಧಯುಕ್ತ ಸುವಾಸನೆಯ ಬಗ್ಗೆ ಉಲ್ಲೇಖವಿದೆ. ಔಷಧಿಗೆ ಮಾತ್ರ ಬಳಕೆಯಲ್ಲಿರದ ಏಲಕ್ಕಿಯನ್ನು ಅನೇಕ ತರಹದ ಸಿಹಿತಿಂಡಿಗಳಿಗೆ, ಪಾಯಸಗಳಿಗೆ ಕೂಡ ಉಪಯೋಗಿಸುತ್ತಾರೆ. ಪಾಯಸಕ್ಕೆ ಏಲಕ್ಕಿ ಹಾಕಿದರೆ ಸಿಗುವಂತಹ ಪರಿಮಳ ಮತ್ತು ರುಚಿ ಏಲಕ್ಕಿಯಿಲ್ಲದ ಪಾಯಸದಲ್ಲಿ ಖಂಡಿತ ಸಿಗದು. ಮಾಂಸ ಆಹಾರಕ್ಕೆ ಬೇಕಾದ ಗರಂ ಮಸಾಲೆ ಪ್ಯಾಕೆಟ್‌ನಲ್ಲಿ ಏಲಕ್ಕಿಯು ಒಂದು ಪ್ರಮುಖ ಘಟಕ. ಏಲಕ್ಕಿಯ ಪರಿಚಯವು ಸಾಮಾನ್ಯವಾಗಿ ಎಲ್ಲರಿಗೂ ಇರುತ್ತದೆ. ಏಲಕ್ಕಿಯನ್ನು ಸಾಂಬಾರ ಪದಾರ್ಥಗಳಿಗೂ ಉಪಯೋಗಿಸಿದರೂ ಇದರ ಔಷಧೀಯ ಗುಣ ಮಾತ್ರ ಸಾಮಾನ್ಯ ಜನರಿಗೆ ತಿಳಿದಿಲ್ಲ. ಇದರ ಔಷಧ ಗುಣಗಳು ವೈದ್ಯರಿಗೆ ಮಾತ್ರ ತಿಳಿದಿದೆ. ಹೆಚ್ಚಿನ ಔಷಧಿ ತಯಾರಿಕೆಯಲ್ಲಿ ಏಲಕ್ಕಿಯನ್ನು ಉಪಯೋಗಿಸುತ್ತಾರೆ.

ಬಹು ಭಾಷಾ ಹೆಸರುಗಳು

ಕನ್ನಡ : ಏಲಕ್ಕಿ

ಸಂಸ್ಕೃತ : ಏಲಾ

ತುಳು : ಏಲಕ್ಕಿ

ಹಿಂದಿ : ಇಲಾಯಚಿ

ಇಂಗ್ಲೀಷ್ : ಕಾರ್ಡಮಮ್

ಪರ್ಯಾಯ ಪದಗಳು

ಏಲಾ, ತ್ರಿಪುಟಾ, ಭೃಂಗಪತ್ರಿಕಾ, ಗಂಧಪಲಿಕಾ, ದ್ರಾವಿಡೀ, ಸುಗಂಧೀ, ತೀಕ್ಷ್ಣಗಂಧಾ, ತುತ್ಥಾ, ಕೋರಂಗೀ, ಬಹುಲಾ, ಗಂಧಫಲಿಕಾ ಬಹುಗಂಧಾ, ಚಂದ್ರಭಾಗ.

ಏಲಕ್ಕಿಯಲ್ಲಿ ಸುವಾಸನೆಯಿಂದ ಕೂಡಿದ ಬೀಜಗಳು ಇರುವುದರಿಂದ ಇದನ್ನು 'ಗಂಧಫಲಿಕಾ' ಎಂದು ಸಂಸ್ಕೃತದಲ್ಲಿ ಕರೆಯುತ್ತಾರೆ. ಮನಸ್ಸಿಗೆ ಸಂತೋಷ ಕೊಡುವ ಪರಿಮಳದಿಂದ ಕೂಡಿರುವುದರಿಂದ ಇದನ್ನು 'ಸುಗಂಧೀ' ಎಂಬುದಾಗಿಯೂ ಕರೆಯುತ್ತಾರೆ.

ದ್ರವ್ಯದ ವರ್ಣನೆ

ಏಲಕ್ಕಿಯು ವರ್ಷಕ್ಕೊಮ್ಮೆ ಬೆಳೆಯುವ ವನಸ್ಪತಿ. ಬೇರಿನ ಬುಡವು ದಪ್ಪವಾಗಿರುತ್ತದೆ. ಕಾಂಡವು ಎಲೆಗಳಿಂದ ಕೂಡಿದೆ. ಎಲೆಯು ಅಗಲಕ್ಕಿಂತ ಉದ್ದವಾಗಿರುತ್ತದೆ. ಹೂವು ಬೇರಿನ ಬುಡದಿಂದ ಉದ್ಭವಿಸುತ್ತದೆ. ಹೂವು ಬಿಳಿ ಅಥವಾ ನೇರಳೆ ಬಣ್ಣದಿಂದ ಕೂಡಿದೆ. ಈ ವನಸ್ಪತಿಯು ಮೇ ಮತ್ತು ಜುಲೈ ತಿಂಗಳಿನಲ್ಲಿ ಹೂವು ಹಣ್ಣುಗಳನ್ನು ಬಿಡುತ್ತದೆ. ಪಶ್ಚಿಮಘಟ್ಟ ಮತ್ತು ದಕ್ಷಿಣ ಭಾರತದಲ್ಲಿ ಯಥೇಚ್ಛವಾಗಿ ಕಂಡು ಬರುತ್ತದೆ.

ವಿಧಗಳು

- ಏಲಕ್ಕಿಯಲ್ಲಿ ಎರಡು ಪ್ರಕಾರಗಳಿವೆ. ಅವು
- ದೊಡ್ಡ ಏಲಕ್ಕಿ
- ಚಿಕ್ಕ ಏಲಕ್ಕಿ

ಸಸ್ಯಶಾಸ್ತ್ರದಲ್ಲಿ ಇದನ್ನು ಕ್ರಮವಾಗಿ Amomum subulatum ಮತ್ತು Elettaria cardamomum ಎಂದು ಕರೆಯುತ್ತಾರೆ.

ಈ ಸಣ್ಣ ಜಾತಿಯ ಏಲಕ್ಕಿಯನ್ನು ಔಷಧಗಳಿಗೆ ಉಪಯೋಗಿಸುವುದರ ಜೊತೆಗೆ ನಾನಾ ವಿಧದ ಸಿಹಿ ತಿಂಡಿಗೂ ಇದನ್ನು ಉಪಯೋಗಿಸುತ್ತಾರೆ. ದೊಡ್ಡ ಏಲಕ್ಕಿಯು ಅಷ್ಟೊಂದು ಸುಗಂಧತೆಯಿಂದ ಇಲ್ಲದಿರುವುದರಿಂದ ಅದನ್ನು ಆಹಾರ ಪದಾರ್ಥಗಳಿಗೆ

ಉಪಯೋಗಿಸುವುದಿಲ್ಲ. ಆದರೆ ಗರಂ ಮಸಾಲೆ ಮಾಡಲು ಇದನ್ನು ಉಪಯೋಗಿಸುತ್ತಾರೆ.

ಉಪಯುಕ್ತ ಅಂಗಗಳು

- ಬೀಜ

ದ್ರವ್ಯದ ಗುಣಧರ್ಮಗಳು

ರಸ : ಕಟು, ಮಧುರ

ಗುಣ : ಲಘು, ರೂಕ್ಷ

ವೀರ್ಯ : ಶೀತ

ವಿಪಾಕ : ಕಟು

ಕರ್ಮ : ಕಫವಾತಹರ, ಹೃದ್ಯ, ಶುಕ್ರನಾಶಕ, ದೀಪನ ರೋಚನ

ಏಲಾ ಸೂಕ್ಷ್ಮಾ ಕಫಶ್ವಾಸಕಾಸಾರ್ಶೋಃಮೂತ್ರ ಕೃಚ್ಛ್ರಹೃತ್।
ರಸೇ ತು ಕಟುಕಾ ಶೀತಾ ಲಘ್ವೀ ವಾತಹರೀ ಮತಾ॥ (ಭಾವಪ್ರಕಾಶ)

ಎಂದರೆ ಏಲಕ್ಕಿಯು ಕಫವಾತಹರವಾಗಿದೆ. ಕಟು ರಸದಿಂದ ಕೂಡಿದೆ. ಲಘು ಗುಣದಿಂದ ಕೂಡಿದೆ. ಶೀತವೀರ್ಯದಿಂದ ಕೂಡಿದೆ. ಶ್ವಾಸ, ಕೆಮ್ಮು, ಮೂಲವ್ಯಾಧಿ, ಮೂತ್ರ ತೊಂದರೆಗಳಿಗೆ ಒಳ್ಳೆಯದು.

ಔಷಧಿ ಪ್ರಮಾಣ

ಚೂರ್ಣ : 0.5–1 ಗ್ರಾಂ.

ಔಷಧೀಯ ಯೋಗಗಳು

- ಏಲಾದಿ ಚೂರ್ಣ
- ಏಲಾದ್ಯರಿಷ್ಟ
- ಏಲಾದಿ ಕಷಾಯ
- ಏಲಾದಿ ಗುಟಿಕಾ
- ಏಲಾದಿ ಮೋದಕ
- ಏಲಾದಿಕ್ವಾಥ
- ಸಿತೋಪಲಾದಿ ಚೂರ್ಣ

ಔಷಧೀಯ ಉಪಯೋಗಗಳು

- ಪಿತ್ತದಿಂದ ತಲೆತಿರುಗಿದಾಗ ಏಲಕ್ಕಿಯ ಪುಡಿಯನ್ನು ಬೆಲ್ಲದೊಂದಿಗೆ ಪಾನಕ ಮಾಡಿ ಕುಡಿಯಬೇಕು. ವಾಂತಿಭೇದಿಗಳಲ್ಲೂ ಇದು ಹಿತಕರ.

- ಏಲಕ್ಕಿಯು ಹಿತವಾದ ಸುವಾಸನೆಯನ್ನು ಹೊಂದಿರುವುದರಿಂದ ಬಾಯಿ ವಾಸನೆ ಬರುವ ರೋಗವನ್ನು ನಿವಾರಿಸುತ್ತದೆ.
- ರಕ್ತಪ್ರದರ, ರಕ್ತಪಿತ್ತಗಳಲ್ಲಿ ಏಲಕ್ಕಿ ಪುಡಿಯನ್ನು ಸಕ್ಕರೆ ತುಪ್ಪದೊಡನೆ ಸೇರಿಸಿ ದಿನಕ್ಕೆ ಎರಡು ಬಾರಿ ಕೊಡಬೇಕು. ನಂತರ ಹಾಲು ಕುಡಿಯಬೇಕು.
- ವಾಂತಿಯು ಹೆಚ್ಚಾಗಿ ಆಗುತ್ತಿದ್ದರೆ, ಏಲಕ್ಕಿ ಪುಡಿಯನ್ನು ಜೇನುತುಪ್ಪದಲ್ಲಿ ಕಲಸಿ ಕೊಡಬೇಕು.
- ಏಲಕ್ಕಿ ಪುಡಿಗೆ ಹಾಲು ಮತ್ತು ಸ್ವಲ್ಪ ನೀರು ಸೇರಿಸಿ ಕುಡಿಯುವುದರಿಂದ ಮೂತ್ರಕೃಚ್ರ, ಮೂತ್ರದ ತೊಂದರೆಯು ನಿವಾರಣೆಯಾಗುತ್ತದೆ.
- ಏಲಕ್ಕಿ ಮತ್ತು ಹಿಪ್ಪಲಿ ಮೂಲವನ್ನು ತುಪ್ಪದೊಂದಿಗೆ ಸೇವಿಸುವುದರಿಂದ ಹೃದಯರೋಗವು ನಿವಾರಣೆಯಾಗುತ್ತದೆ.
- ಬಾಳೆಹಣ್ಣಿನ ಅತಿಯಾದ ಸೇವನೆಯಿಂದ ಅಜೀರ್ಣ ಉಂಟಾಗಿದ್ದರೆ, ಆಗ ನಾಲ್ಕು ಬೀಜ ಏಲಕ್ಕಿಯನ್ನು ಜಗಿದು ಸೇವಿಸಬೇಕು.
- ನಿಂಬೆಹಣ್ಣಿನ ಸರ್ಬತ್‌ಗೆ ಏಲಕ್ಕಿ ಪುಡಿ ಬೆರೆಸಿ ಸೇವಿಸಿದರೆ ವಾಂತಿ ಮತ್ತು ತಲೆಸುತ್ತುವಿಕೆ ನಿವಾರಣೆಯಾಗುತ್ತದೆ.
- ಬಾಳೆಹಣ್ಣಿನಲ್ಲಿ ಒಂದು ಏಲಕ್ಕಿಯನ್ನು ಸೇವಿಸುವುದರಿಂದ ಮೂಲವ್ಯಾಧಿ ಮತ್ತು ಮಲಬದ್ಧತೆ ನಿವಾರಣೆಯಾಗುತ್ತದೆ.
- ಏಲಕ್ಕಿ ಪುಡಿಯನ್ನು ಹಾಲಿಗೆ ಬೆರೆಸಿ, ಕಾಯಿಸಿ ಅದಕ್ಕೆ 15 ಮಿ.ಲೀ.ನಷ್ಟು ಜೇನುತುಪ್ಪ ಸೇರಿಸಿ ಪ್ರತಿರಾತ್ರಿ ಸೇವಿಸಿದರೆ ಜ್ಞಾಪಕ ಶಕ್ತಿ ಹೆಚ್ಚುವುದರ ಜೊತೆಗೆ ಉರಿ ಮೂತ್ರ ನಿವಾರಣೆಯಾಗುತ್ತದೆ.
- ಬಿಕ್ಕು ಬಂದಾಗ ಏಲಕ್ಕಿ ಪುಡಿಯನ್ನು ಜೇನುತುಪ್ಪದಲ್ಲಿ ಬೆರೆಸಿ ಸೇವಿಸಬೇಕು.
- ಊಟದ ನಂತರ ಒಂದೆರಡು ಏಲಕ್ಕಿ ಬೀಜವನ್ನು ಸೇವಿಸಿದರೆ ವಾತ ಸಂಬಂಧಿತ ರೋಗಗಳು ಬರುವುದಿಲ್ಲ.
- ಸಣ್ಣ ಏಲಕ್ಕಿ, ಜಟಾಮಾಂಸಿ, ಲವಂಗ, ಶುಂಠಿ, ಹಿಪ್ಪಲಿ, ತುಂಗೆಗಡ್ಡೆ, ರಕ್ತಚಂದನ, ಧನಿಯಾ, ಖರ್ಜೂರ, ದಾಲ್ಚಿನಿ, ಅತಿಮಧುರ, ಬಲದಬೇರು, ದಾಳಿಂಬೆಯ ಬೀಜ ಇವುಗಳ ಸಮಪ್ರಮಾಣದ ಚೂರ್ಣಕ್ಕೆ ಜೇನು ಸೇರಿಸಿ ಒಂದು ಹೊತ್ತಿಗೆ 5 ಗ್ರಾಂ, ನಷ್ಟು ಸೇವಿಸಿದರೆ ಬಿಕ್ಕಳಿಗೆ, ಕಾಮಾಲೆ, ಮೂತ್ರದ ಉರಿ, ಪ್ರಮೇಹ ರೋಗಗಳು ನಿವಾರಣೆಯಾಗುತ್ತದೆ.


ಎಚ್ಚರಿಕೆ

ಏಲಕ್ಕಿಯಲ್ಲಿ ರೂಕ್ಷ ಗುಣವು ಇದೆ. ಗರ್ಭಿಣಿ ಸ್ತ್ರೀಯರು ಇದನ್ನು ದೀರ್ಘಕಾಲದವರೆಗೆ ಸೇವಿಸಬಾರದು. ಏಲಕ್ಕಿಯ ದುಷ್ಪರಿಣಾಮಗಳ ನಿವಾರಣೆಗೆ ಜೇಷ್ಠ ಮಧುವಿನ ಪುಡಿಯನ್ನು ಸೇವಿಸಬಹುದು.

ಬುದ್ಧಿವೃದ್ಧಿಸುವ ಒಂದೆಲಗ

Centella asiatica, Linn.
Umbelliferae







ಬುದ್ಧಿವೃದ್ಧಿಸುವ ಒಂದೆಲಗದ ಪರಿಚಯವು ವೇದಕಾಲದಿಂದಲೂ ಬಳಕೆಗೆ ಬಂದಿದೆ. ಈ ವನಸ್ಪತಿಯೂ ಸ್ವಭೂಮಿ ಮತ್ತು ಪರಭೂಮಿಯಲ್ಲಿ ಪೂಜನೀಯ ಹಾಗೂ ಪ್ರಶಂಸನೀಯ ಸ್ಥಾನವನ್ನಲಂಕರಿಸಿದೆ. ಬುದ್ಧಿವರ್ಧಕ ಒಂದೆಲಗವು ರಸಾಯನ ಗುಣದ ಪ್ರಮುಖ ದ್ರವ್ಯ. ಈ ವನಸ್ಪತಿ ತಂಪು ಭೂಮಿಯಲ್ಲಿ ಹೆಚ್ಚಾಗಿ ಬೆಳೆಯುತ್ತದೆ. ನೀರಿನಾಂಶವಿರುವ ಪ್ರದೇಶದಲ್ಲಿ ಯಥೇಚ್ಛವಾಗಿ ಬೆಳೆಯುವ ಒಂದೆಲಗ ಗುಣದ ಬಗ್ಗೆ ಯಾರಿಗೂ ಸರಿಯಾಗಿ ಇನ್ನೂ ತಿಳಿದಿಲ್ಲ. ಸ್ಮರಣಶಕ್ತಿ ನಾಶ, ಚಂಚಲ ಮನಸ್ಸು, ಮೆದುಳಿನ ವಿಕಾರತೆ ಮುಂತಾದ ತೊಂದರೆಯನ್ನು ಒಂದೆಲಗ ವನಸ್ಪತಿಯಿಂದ ನಿವಾರಿಸಲು ಸಾಧ್ಯ. ಈ ವನಸ್ಪತಿಯ ರಸ ಸೇವನೆಯಿಂದ ಆಯುಷ್ಯ ಹೆಚ್ಚುತ್ತದೆ, ರೋಗ ನಾಶವಾಗುತ್ತದೆ, ದೇಹದ ಬಲ ವೃದ್ಧಿಯಾಗುತ್ತದೆ. ಶರೀರದ ಕಾಂತಿ, ಸೌಂದರ್ಯ ಹೆಚ್ಚುತ್ತದೆ. ಒಂದೆಲಗದಿಂದ ತಯಾರಿಸಿದ ಚಟ್ನಿಯಲ್ಲಿ ಊಟ ಮಾಡುವುದೆಂದರೆ ಕೆಲವರಿಗೆ ಅತಿಪ್ರಿಯ. ಅದು ಒಳ್ಳೆಯದೂ ಹೌದು. ಹಳ್ಳಿಗಳಲ್ಲಿ ಮಕ್ಕಳ ಬುದ್ಧಿ ಹೆಚ್ಚಾಗಲೂ ಒಂದೆಲಗದ ಚಟ್ನಿ ತಿನಿಸುವುದನ್ನು ನಾವೂ ಈಗಲೂ ಕಾಣಬಹುದು.

ಬಹು ಭಾಷಾ ಹೆಸರುಗಳು

ಕನ್ನಡ : ಒಂದೆಲಗ

ಸಂಸ್ಕೃತ : ಮಂಡೂಕಪರ್ಣಿ

ತುಳು : ತಿಮರೆ

ಹಿಂದಿ : ಬ್ರಹ್ಮೀ

ಇಂಗ್ಲೀಷ್ : ಪೆನ್ನಿವರ್ಟ್

ಪರ್ಯಾಯ ಪದಗಳು

ಮಂಡೂಕಪರ್ಣಿ, ದಿವ್ಯ, ಮಂಡೂಕೀ, ಮಹೌಷಧೀ, ಸುವರ್ಚಲ, ಆದಿತ್ಯಭಕ್ತ, ಸರಸ್ವತೀ, ಸುಪ್ರಿಯ, ಭೇಕಪರ್ಣಿ, ಬ್ರಹ್ಮಮಂಡೂಕಾ, ಏಕಪರ್ಣಿ.

ಒಂದೆಲಗದಲ್ಲಿ ಮನಸ್ಸು ಸೂರೆಗೊಳ್ಳುವ ಗುಣಯಿರುವುದರಿಂದ ಇದನ್ನು 'ಸುಪ್ರಿಯ' ಎಂದು, ಶ್ರೇಷ್ಠವಾದ ವನಸ್ಪತಿಯಾದರಿಂದ 'ದಿವ್ಯ' ಎಂದು ಕರೆಯುತ್ತಾರೆ.

ದ್ರವ್ಯದ ವರ್ಣನೆ

ಒಂದೆಲಗವು ಬಳ್ಳಿ, ನೆಲದ ಮೇಲೆ ಪಸರಿಸುತ್ತಾ ನೀರಿನಾಂಶ ಹೆಚ್ಚಿರುವ ಪ್ರದೇಶದಲ್ಲಿ ವಿಶೇಷವಾಗಿ ಬೆಳೆಯುತ್ತದೆ. ಇದು ಸುಮಾರು 2–3 ವರ್ಷದವರೆಗೆ ಬದುಕಬಹುದು. ತೆಳುವಾದ ಕಾಂಡದ ಗಂಟಿನಿಂದ ಬೇರು, ಎಲೆ, ಹೂವು, ಹಣ್ಣು ಹುಟ್ಟಿಕೊಳ್ಳುತ್ತದೆ. ಉದ್ದವಾದ ದಂಟಿನಿಂದ (ಸ್ಟಾಕ್) ಕೂಡಿದ ಎಲೆಯು ಕಿಡ್ನಿ ಆಕಾರದಲ್ಲಿದೆ. ಸುಮಾರು 1.25–6 ಸೆಂ.ಮೀ. ನಷ್ಟು ಉದ್ದಗಲದಿಂದ ಕೂಡಿದೆ. ಎಲೆಯಲ್ಲಿ ಏಳು ನರಗಳಿವೆ. ಎಲೆಯು ಒಂದು ರೀತಿಯ ವಿಶಿಷ್ಟ ಸುವಾಸನೆಯಿಂದ ಕೂಡಿದೆ. ಎಲೆಯು ಒಣಗಿದಾಗ ಅದರ ರಸ ಮತ್ತು ಪರಿಮಳ ನಾಶವಾಗುತ್ತದೆ. ಹೂವು ಚಿಕ್ಕದಾಗಿ ಕೆಂಪು ಬಣ್ಣದಿಂದ ಕೂಡಿದೆ. 10–15 ಹೂವುಗಳು ಹೂತೊಟ್ಟಿನಿಂದ ಹುಟ್ಟುತ್ತದೆ. ಈ ದ್ರವ್ಯವು ವಸಂತ ಋತುವಿನಲ್ಲಿ ಹೂವನ್ನು ಬಿಡುತ್ತದೆ. ಹಣ್ಣು 2–3 ಸೆಂ.ಮೀ. ಉದ್ದವಾಗಿ, 2–7 ಸಂಖ್ಯೆಯಲ್ಲಿರುತ್ತದೆ. ಈ ದ್ರವ್ಯವು ಹಣ್ಣನ್ನು ಬೇಸಿಗೆ ಕಾಲದಲ್ಲಿ ಬಿಡುತ್ತದೆ. ಬೇರು ಸಪೂರವಾಗಿ ನೂಲಿನಂತಿರುತ್ತದೆ. ನದಿ, ಹೊಂಡ, ಕೆರೆ ಮುಂತಾದ ನೀರಿರುವ ಪ್ರದೇಶಗಳಲ್ಲಿ ಕಾಣುವ ಸಸ್ಯವು ವಿಶೇಷವಾಗಿ ಭಾರತ ಮತ್ತು ಶ್ರೀಲಂಕಾ ದೇಶದಲ್ಲಿ ಹೆಚ್ಚಾಗಿ ಬೆಳೆಯುತ್ತದೆ.

ವಿಧಗಳು

ಸಸ್ಯಶಾಸ್ತ್ರದಲ್ಲಿ ಈ ಕೆಳಗಿನ ಮೂರು ದ್ರವ್ಯವನ್ನು ಒಂದೆಲಗ ಎಂದು ಉಪಯೋಗಿಸುತ್ತಾರೆ. ಅವು

- Hydrocotyle asiatica
- Hydrocotyle rotundifolia
- Hydrocotyle Javanica

ಉಪಯುಕ್ತ ಅಂಗಗಳು

- ಸಂಪೂರ್ಣ ಗಿಡ

ದ್ರವ್ಯದ ಗುಣಧರ್ಮಗಳು

ರಸ : ತಿಕ್ತ

ಗುಣ : ಲಘು

ವೀರ್ಯ : ಶೀತ

ವಿಪಾಕ : ಮಧುರ

ಕರ್ಮ : ಕಫಪಿತ್ತಹರ, ಮೇಧ್ಯ, ವಯಸ್ಥಾಪನ, ಹೃದ್ಯ, ಸ್ವರ್ಯ

ಬ್ರಾಹ್ಮೀ ಹಿಮಾ ಸರಾ ತಿಕ್ತಾ, ಲಘುರ್ಮೇಧ್ಯಾ ಚ ಶೀತಲಾ।
ಕಷಾಯಾ ಮಧುರಾ ಸ್ವಾದುಪಾಕಾ ವೃಷ್ಯಾ ರಸಾಯನೀ॥
ಸ್ವರ್ಯಾ ಸ್ಮೃತಿಪ್ರದಾ ಕುಷ್ಠಪಾಂಡುಮೇಹಾಸ್ರ ಕಾಸಜಿತ್।
ವಿಷಶೋಥ ಜ್ವರಹರೀ ತದ್ವನ್‌ಮಂಡೂಕಪರ್ಣಿನೀ॥ (ಭಾವಪ್ರಕಾಶ)

ಎಂದರೆ ಒಂದೆಲಗವು ತಿಕ್ತ ರಸದಿಂದ ಕೂಡಿದೆ, ಲಘು ಗುಣದಿಂದ ಕೂಡಿದೆ, ಮಧುರ ವಿಪಾಕದಿಂದ ಕೂಡಿದೆ, ಶೀತ ವೀರ್ಯದಿಂದ ಕೂಡಿದೆ, ಇದು ರಸಾಯನವಾಗಿದೆ. ಇದು ಸ್ವರ, ಬುದ್ಧಿಯನ್ನು ವೃದ್ಧಿಸುತ್ತದೆ. ಕುಷ್ಠ, ಪಾಂಡು, ಮೇಹ, ಕೆಮ್ಮು, ರಕ್ತ ಪಿತ್ತ, ಶೋಥ, ಜ್ವರವನ್ನು ನಿವಾರಿಸುತ್ತದೆ.

ಔಷಧಿ ಪ್ರಮಾಣ

ಸ್ವರಸ : 10–20 ಮಿ.ಲೀ.

ಚೂರ್ಣ : 3–6 ಗ್ರಾಂ.

ಬೇರಿನ ಚೂರ್ಣ : 360–900 ಮಿ.ಗ್ರಾಂ.

ಔಷಧೀಯ ಯೋಗಗಳು

- ಸಾರಸ್ವತಾರಿಷ್ಠ
- ಸಾರಸ್ವತಘೃತ

- ಮಂಡೂಕಪರ್ಣಿ ರಸಾಯನ
- ಬ್ರಾಹ್ಮೀ ಘೃತ
- ಬ್ರಾಹ್ಮೀ ತೈಲ

ಔಷಧೀಯ ಉಪಯೋಗಗಳು


- ಒಂದೆಲಗ ಮೇಧ್ಯ, ರಸಾಯನ, ಮೆಮೋರಿ ಟಾನಿಕ್ ಎಂದು ಪ್ರಸಿದ್ಧಿ ಪಡೆದಿದೆ. ಜ್ಞಾಪಕ ಶಕ್ತಿಯನ್ನು ಹೆಚ್ಚಿಸಲು ಪ್ರತಿನಿತ್ಯ ಖಾಲಿ ಹೊಟ್ಟೆಯಲ್ಲಿ 10–15 ಎಲೆಗಳನ್ನು ಅರೆದು ತಿನ್ನಬೇಕು.
- ಒಂದೆಲಗದ ರಸವನ್ನು ಜೇನುತುಪ್ಪದೊಂದಿಗೆ ಸೇರಿಸಿ ಕುಡಿಯುವುದರಿಂದ ಕಾಮಾಲೆ ರೋಗವು ಕಡಿಮೆಯಾಗುವುದು.
- ಮಕ್ಕಳ ಅತಿಸಾರ, ಆಮಶಂಕೆ, ಭೇದಿ ಕಂಡಲ್ಲಿ ಬ್ರಾಹ್ಮಿಯ 3–4 ಎಲೆಗಳನ್ನು ಜೀರಿಗೆ ಹಾಗೂ ಸಕ್ಕರೆಯೊಂದಿಗೆ ಜಜ್ಜಿ ತಿನ್ನಿಸಿ ಎಲೆಯ ಕಲ್ಕವನ್ನು ಹೊಕ್ಕಳ ಸುತ್ತ ಲೇಪಿಸಬೇಕು.
- ಕಣ್ಣುರಿ, ನಿದ್ರೆ ಬಾರದಿರುವಿಕೆ, ಅಂಗೈ ಅಂಗಾಲು ಉರಿ, ಕೂದಲುದುರುವಿಕೆ ಮತ್ತು ಬೇಗನೆ ಬಿಳಿಯಾಗುವುದು ಮೊದಲಾದ ತೊಂದರೆಗಳನ್ನು ನಿವಾರಿಸಬಲ್ಲ ಬ್ರಾಹ್ಮಿಯುಕ್ತ ಹೇರ್‌ಆಯಿಲ್ ಅಧಿಕ ಖ್ಯಾತಿ ಪಡೆದಿದೆ.
- ಮೈತುಂಬ ಆಗುವ ಗುಳ್ಳೆಗಳಿಗೆ ಬ್ರಾಹ್ಮಿ ಎಲೆ, ಕರಿ ಜೀರಿಗೆ ಹಾಗೂ ತುಪ್ಪದ ಲೇಪ ಹಿತಕರವಾಗಿದೆ.
- ಒಂದೆಲಗ, ಕೂಷ್ಮಾಂಡ, ಬಜೆ ಮತ್ತು ಶಂಖಪುಷ್ಪಿಯ ರಸವನ್ನು ಕುಷ್ಠದ್ರವ್ಯದೊಂದಿಗೆ ಬೆರೆಸಿ ಸೇವಿಸುವುದರಿಂದ ಉನ್ಮಾದ, ಬುದ್ಧಿ ಭ್ರಂಶ ರೋಗವು ನಿವಾರಣೆಯಾಗುತ್ತದೆ.
- ಒಂದೆಲಗ ರಸವನ್ನು ಜೇನಿನೊಂದಿಗೆ ಸೇವಿಸುವುದರಿಂದ ಸಿಡುಬು (Pox) ರೋಗದಿಂದ ಗುಣ ಹೊಂದಬಹುದು.
- ಮಕ್ಕಳ ಕೆಮ್ಮು ಮತ್ತು ನೆಗಡಿಗೆ ಒಂದು ಚಮಚ ಒಂದೆಗಲ ರಸವನ್ನು ನೀಡಿದರೆ, ವಾಂತಿಯು ಉಂಟಾಗಿ ಕೆಮ್ಮು, ನೆಗಡಿ ರೋಗವು ನಿವಾರಣೆ.
- ಒಂದೆಲಗ ಎಲೆ, ಬಜೆ, ಹಿಪ್ಪಲಿ, ಅಣಿಲೆ ಕಾಯಿ ಮತ್ತು ಆಡುಸೋಗೆಗಳಿಂದ ತಯಾರಿಸಿದ ಮಾತ್ರೆಯನ್ನು ಬಾಯಲ್ಲಿ ಹಾಕಿ ಜಗಿಯುವುದರಿಂದ ಸ್ವರಭಂಗಕ್ಕೆ ಒಳ್ಳೆಯದು.
- ಒಂದೆಲಗದ ಸ್ವರಸವನ್ನು ಊತ ಇರುವ ಜಾಗಕ್ಕೆ ಹಚ್ಚುವುದರಿಂದ ಊತವು ನಿವಾರಣೆಯಾಗುತ್ತದೆ.

ಹೊಟ್ಟೆ ನೋವು ನಿವಾರಕ ಓಮ

Trachyspermum ammi, (L) Sprague.

Umbelliferae





ಓಮದ ಸಸ್ಯವನ್ನು ನಾವ್ಯಾ ಕಣ್ಣಾರೆ ಕಂಡಿಲ್ಲವಾದರೂ, ಓಮದ ಬೀಜವನ್ನು ಕಾಣದವರು ತೀರಾ ಕಡಿಮೆ. ಓಮ ಎಂದ ಕೂಡಲೇ ನೆನಪು ಬರುವುದು ಹೊಟ್ಟೆನೋವು. ಹೊಟ್ಟೆ ನೋವು ಬಂದಾಗ ಓಮದಿಂದ ತಯಾರಿಸಿದ ಓಮಸತ್ವವು ಖಂಡಿತವಾಗಿ ಎಲ್ಲರ ನೆನಪಿಗೂ ಬಂದೇ ಬರುತ್ತದೆ. ಅದು ಅಷ್ಟು ಪ್ರಯೋಜನೀಯವು ಹೌದು. ಯಾರಿಗೆ ಹೊಟ್ಟೆ ನೋವು ಆಗಿದೆಯೋ ಅವರೇ ಅಜವಾನ ಮುಕ್ಕಬೇಕು ಎಂಬ ಜಾಣನುಡಿ ತಿಳಿದವರಿಗೆ ಹೊಟ್ಟೆನೋವು, ಗ್ಯಾಸ್ಟ್ರಿಕ್‌ಅಲ್ಸರ್, ಆ್ಯಸಿಡಿಟಿ ಮುಂತಾದ ಭಯಂಕರ ಹೆಸರಿನ ರೋಗಗಳು ಖಂಡಿತವಾಗಿಯೂ ಅವರನ್ನು ಪೀಡಿಸದು. ಆಯುರ್ವೇದದಲ್ಲಿ ವಾತಕಫಹರವಾಗಿ ಉಪಯೋಗಿಸಲ್ಪಡುವ ಓಮ, ಪಾಶ್ಚಾತ್ಯ ದೃಷ್ಟಿಯಲ್ಲಿ ಅಜೀರ್ಣವಾಯು, ಮೂತ್ರ ತೊಂದರೆ ಕಳೆಯುವ ಔಷಧಿಯಾಗಿದೆ.

ಬಹು ಭಾಷಾ ಹೆಸರುಗಳು

ಕನ್ನಡ : ಓಮ

ಸಂಸ್ಕೃತ : ಯವಾನೀ

ತುಳು : ಓಮೋ

ಹಿಂದಿ : ಅಜ್ವಯನ್

ಇಂಗ್ಲೀಷ್ : ಕಿಂಗ್ಸ್‌ಕ್ಯುಮಿನ್

ಪರ್ಯಾಯ ಪದಗಳು

ಯವಾನೀ, ಯವಾನಿಕಾ, ಅಜಮೋದಿಕಾ, ದೀಪ್ಯಕಾ, ಭೂತೀಕ, ಯವಾನಕ, ದೀಪನೀ, ಉಗ್ರ, ವಾತರೀ, ತೀವ್ರಗಂಧಾ, ಭೂಮೀ, ಅಗ್ನಿಗಂಧಾ, ಹೃದ್ಯಾ, ಅಗ್ನಿವರ್ಧಕಃ.

ಓಮದ ಸಸ್ಯವನ್ನು ಆಡುಗಳು ಹೆಚ್ಚಾಗಿ ಇಷ್ಟಪಡುವುದರಿಂದ 'ಅಜಮೋದಿತಾ' ಎಂಬ ಹೆಸರಿನಿಂದ ಕರೆಯುತ್ತಾರೆ. ಒರಟಾದ ಬೀಜವನ್ನು ಹೊಂದಿರುವುದರಿಂದ ಇದನ್ನು 'ಟ್ರಾಕಿಸ್ಪರ್ಮಂ' ಎಂದು ಕರೆಯುತ್ತಾರೆ.

ದ್ರವ್ಯದ ವರ್ಣನೆ

ಓಮ ಸಸ್ಯವು ಸುಮಾರು 40 ಸೆಂ.ಮೀಟರ್‌ನಷ್ಟು ಎತ್ತರಕ್ಕೆ ಬೆಳೆಯುವ ಕುರುಚಲು ಗಿಡ. ಕಾಂಡದ ತುದಿಯಲ್ಲಿ ಪುಷ್ಪ ಮಂಜರಿಗಳು ಕಂಡು ಬರುತ್ತವೆ. ಛತ್ರಿ ಆಕಾರದ ಹೂವುಗಳು ಬಿಳುಪು ಅಥವಾ ತಿಳಿಹಳದಿ ಬಣ್ಣವನ್ನು ಹೊಂದಿವೆ. ಚಿಕ್ಕದಾದ ಬೀಜವು ಒರಟಾಗಿ ತುಕ್ಕುಹಿಡಿದ ಬಣ್ಣ ಅಥವಾ ನಸುಹಳದಿ ಬಣ್ಣದಿಂದ ಕೂಡಿದೆ. ಈ ಸಸ್ಯವು ಹೂವನ್ನು ಚಳಿಗಾಲದಲ್ಲಿ ಮತ್ತು ಬೀಜವನ್ನು ಬೇಸಿಗೆಕಾಲದಲ್ಲಿ ಬಿಡುತ್ತದೆ. ಭಾರತದ ಎಲ್ಲ ಪ್ರದೇಶಗಳಲ್ಲಿ ಬೆಳೆಯುವ ಈ ಸಸ್ಯವನ್ನು ಇರಾನ್, ಈಜಿಪ್ಟ್, ಅಫ್ಘಾನಿಸ್ತಾನ್, ಮುಂತಾದ ದೇಶಗಳಲ್ಲಿಯೂ ಬೆಳೆಯುತ್ತಾರೆ.

ವಿಧಗಳು

ಓಮದಲ್ಲಿ ಎರಡು ವಿಧಗಳಿವೆ, ಅವು

- ಯವಾನೀ
- ಪಾರಸೀಕ ಯವಾನೀ

ಸಸ್ಯಶಾಸ್ತ್ರದಲ್ಲಿ Trachyspermum ammi ಮತ್ತು Carum copticum ಅನ್ನು ಯವಾನೀ ಎಂದು ಗುರುತಿಸಲಾಗಿದೆ.

ಉಪಯುಕ್ತ ಅಂಗಗಳು

- ಬೀಜಗಳು

ದ್ರವ್ಯದ ಗುಣಧರ್ಮಗಳು

ರಸ : ಕಟು

ಗುಣ : ಲಘು, ರೂಕ್ಷ, ತೀಕ್ಷ್ಣ

ವೀರ್ಯ : ಉಷ್ಣ

ವಿಪಾಕ : ಕಟು

ಕರ್ಮ : ಕಫವಾತಹರ, ಶುಕ್ರಹರ, ದೀಪನ, ಪಾಚನ

ದೀಪನೀ ಪಾಚನೀ ಹೃದ್ಯಾ ಕಫಶುಕ್ರಾನಿಲಾಪಹಾ।
ಕ್ರಿಮಿಶೂಲೋದರಾನಾಹಗುಲ್ಮಘ್ನೀ ಪಿತ್ತಕೋಪನೀ॥ (ಕೈಯ್ಯದೇವ ನಿಘಂಟು)

ಎಂದರೆ, ಓಮ ಕಟು ಮತ್ತು ತಿಕ್ತ ರಸದಿಂದ ಕೂಡಿದೆ. ತೀಕ್ಷ್ಣ ಮತ್ತು ಲಘು ಗುಣಗಳಿಂದ ಕೂಡಿದೆ. ದೀಪನ, ಪಾಚನ, ರೋಚನ, ಕಾರ್ಯಗಳನ್ನು ಮಾಡುತ್ತದೆ. ಹೃದಯಕ್ಕೆ ಒಳ್ಳೆಯದು ಕಫಶುಕ್ರವಾತಹರವಾಗಿದೆ, ಪಿತ್ತಕರವಾಗಿದೆ. ಕ್ರಿಮಿ, ಶೂಲ, ಉದರ, ಹೊಟ್ಟೆ ಉಬ್ಬರಿಸು, ಗುಲ್ಮ ಮುಂತಾದ ರೋಗಗಳನ್ನು ನಿವಾರಿಸುತ್ತದೆ.

ಔಷಧಿ ಪ್ರಮಾಣ

ಬೀಜದ ಚೂರ್ಣ	–	1–3 ಗ್ರಾಂ
ಎಣ್ಣೆ	–	1–3 ಬಿಂದು
ಕಷಾಯ	–	15–30 ಮಿ.ಲೀ.
ಅರ್ಕ	–	25–50 ಮಿ.ಲೀ.

ಔಷಧೀಯ ಯೋಗಗಳು

- ಯವನ್ಯಾಧಿ ಚೂರ್ಣ
- ಯವಾನಿಖಂಡ ಚೂರ್ಣ
- ಯವಾನಿಕಾದಿ ಘೃತ
- ತಕ್ರಾರಿಷ್ಟ
- ಯವಾನಿಕಾಧಿ ಕ್ವಾಥ
- ಯವಾನ್ಯಾರ್ಕ

ಔಷಧೀಯ ಉಪಯೋಗಗಳು

- ಓಮ ಮತ್ತು ಬಜೆಯ ಚೂರ್ಣ ಅಥವಾ ಲೇಪವನ್ನು ಒಸಡು, ದಂತಮೂಲಕ್ಕೆ ಹಚ್ಚುವುದರಿಂದ ದಂತರೋಗವು ನಿವಾರಣೆಯಾಗುತ್ತದೆ.
- ಓಮ, ಸೈಂಧವ ಲವಣ, ಅಣಿಲೆಕಾಯಿ, ಶುಂಠಿಯ ಪುಡಿಯನ್ನು ಸಮ ಪ್ರಮಾಣದಲ್ಲಿ ಸೇವಿಸುವುದರಿಂದ ಹೊಟ್ಟೆನೋವು ರೋಗವು ನಿವಾರಣೆಯಾಗುತ್ತದೆ.
- ಓಮ ಮತ್ತು ಬಿಡಲವಣದ ಪುಡಿಯನ್ನು ಮಜ್ಜಿಗೆಯೊಂದಿಗೆ ಸೇವಿಸುವುದರಿಂದ ಗುಲ್ಮ ರೋಗವು ನಿವಾರಣೆಯಾಗುತ್ತದೆ.

- ಓಮ ಮತ್ತು ಚಿತ್ರಮೂಲದ ಪುಡಿಯನ್ನು ಮಜ್ಜಿಗೆಯೊಂದಿಗೆ ಸೇವಿಸುವುದರಿಂದ ಮೂಲವ್ಯಾಧಿ ರೋಗವು ನಿವಾರಣೆಯಾಗುತ್ತದೆ.
- ಓಮವನ್ನು ಬೆಲ್ಲದೊಂದಿಗೆ ಬೆರೆಸಿ ಸರಿಯಾದ ಆಹಾರದೊಂದಿಗೆ ಸೇವಿಸುವುದರಿಂದ ಒಂದು ವಾರದೊಳಗೆ ಚರ್ಮರೋಗ (Urticaria) ನಿವಾರಣೆಯಾಗುತ್ತದೆ.
- ಓಮವನ್ನು ರಾತ್ರಿ ಹಗಲು ಬಾಯಿಯಲ್ಲಿ ಇಡುವುದರಿಂದ ಉಬ್ಬಿದ ಕಿರುನಾಲಿಗೆ (Enlarged Uvula) ರೋಗವು ನಿವಾರಣೆಯಾಗುತ್ತದೆ.
- ಓಮದ ಪುಡಿಯನ್ನು ಬಿಸಿನೀರಿನಲ್ಲಿ ಸೇವಿಸುವುದರಿಂದ ಅಜೀರ್ಣ ವಾಯು ಕಡಿಮೆಯಾಗಿ ಹೊಟ್ಟೆ ಉಬ್ಬರ, ತೇಗು ನಿವಾರಣೆಯಾಗಿ ಆಹಾರ ಚೆನ್ನಾಗಿ ಜೀರ್ಣಿಸುವುದು.
- ಓಮವನ್ನು ಜೇನುತುಪ್ಪದಲ್ಲಿ ಅರೆದು ಪ್ರತಿಬೆಳಗ್ಗೆ ರಾತ್ರಿ ಅರ್ಧ ಚಮಚದಷ್ಟು ಒಂದು ವಾರದವರೆಗೆ ಸೇವಿಸುವುದರಿಂದ ಬಹಳ ದಿನದಿಂದ ಕಾಡುವ ಜ್ವರ ನಿವಾರಣೆಯಾಗುತ್ತದೆ.
- ಓಮದ ಕಷಾಯವನ್ನು ಗಾಯಕ್ಕೆ ಹಚ್ಚಿ ತೊಳೆಯುವುದರಿಂದ ಗಾಯ ನಿವಾರಣೆಯಾಗುತ್ತದೆ.
- ಓಮದ ಕಷಾಯವನ್ನು 1–2 ಚಮಚ ಸೇವಿಸುವುದರಿಂದ ಅಜೀರ್ಣ ತೊಂದರೆಯು ನಿವಾರಣೆಯಾಗುತ್ತದೆ.
- ಓಮದ ಲೇಪವನ್ನು ಹೊಟ್ಟೆಗೆ ಲೇಪಿಸುವುದರಿಂದ ಹೊಟ್ಟೆ ಉಬ್ಬರವು ನಿವಾರಣೆಯಾಗುತ್ತದೆ.

ಹರಳೆಣ್ಣೆ ಖ್ಯಾತಿಯ ಔಡಲ

Ricinus communis, Linn.

Euphorbiaceae



ಸಾಮಾನ್ಯವಾಗಿ ವರ್ಷವಿಡೀ ಬೆಳೆಯುವ ಔಡಲ ಗಿಡವನ್ನು ನೋಡದವರು ಸಾವಿರಕ್ಕೆ ಒಬ್ಬರು ಇರಬಹುದು. ಯಾಕೆಂದರೆ ಇದು ಬೇರೆ ಬೇರೆ ವಿಧದ ಮತ್ತು ವಾತಾವರಣಕ್ಕೆ ಹೊಂದಿಕೊಂಡು ಬೆಳೆಯುವಂತಹ ಸಸ್ಯ, ಮರಳು ಮಣ್ಣಿನಿಂದ ಹಿಡಿದು ಮೆಕ್ಕಲು ಮಣ್ಣಿನಲ್ಲೂ ಬೆಳೆಯುವ ಈ ದ್ರವ್ಯವನ್ನು ಈಗ ವಾಣಿಜ್ಯ ಬೆಳೆಯನ್ನಾಗಿ ಬೆಳೆಯಲಾಗುತ್ತಿದೆ. ಈ ದ್ರವ್ಯದ ಬೀಜಗಳು ಹೊಳಪಾಗಿದ್ದು ಅದು ಬೆಲೆ ಬಾಳುವ ಮಣಿ (ಹರಳು) ರೀತಿಯಲ್ಲಿ ಕಾಣುತ್ತದೆ. ಈ ದ್ರವ್ಯವನ್ನು ಮಣಿಯಂತೆ ಧರಿಸುತ್ತಿದ್ದರು ಎಂಬುದಾಗಿ ವೇದ ಕಾಲದಲ್ಲಿ ಉಲ್ಲೇಖವಿದೆ. ಬೃಹತ್‌ಸಂಹಿತೆಗಳಲ್ಲಿ ವಿವರಿಸಲ್ಪಟ್ಟ ಈ ದ್ರವ್ಯವು ಆಯುರ್ವೇದದ ಪ್ರಮುಖ ದ್ರವ್ಯಗಳಲ್ಲಿ ಒಂದು. ಹಿಮಾಲಯದ ತಪ್ಪಲಲ್ಲಿ ಪ್ರಾಕೃತಿಕವಾಗಿ ಬೆಳೆದಿರುವ ಮತ್ತು ನಮ್ಮ ವೇದಕಾಲದಿಂದಲೂ ಔಷಧಕ್ಕೆ ಉಪಯೋಗಿಸುತ್ತಿದ್ದ ಕಾರಣ ಔಡಲದ ತವರೂರು ಭಾರತ ಎಂಬುದಾಗಿ ಅಭಿಪ್ರಾಯಕ್ಕೆ ಬರಲಾಗಿದೆ. ಔಡಲವನ್ನು ಯಥೇಚ್ಛವಾಗಿ ಔಷಧಕ್ಕೆ ಉಪಯೋಗಿಸುತ್ತಿದ್ದರೂ, ಈ ದ್ರವ್ಯದ ಎಲೆಯಲ್ಲಿ ವಿಷದಿಂದ ಕೂಡಿದ ವಸ್ತು ರೆಸಿನ್‌ಇದೆ. ಇಂತಹ ರೆಸಿನ್‌ಎಂಬ ವಿಷ ವಸ್ತುವಿಗೆ ಇನ್ನು ಸರಿಯಾದ ಪ್ರತಿವಿಷವನ್ನು ಕಂಡು ಹಿಡಿಯಲು ಸಾಧ್ಯವಾಗಲಿಲ್ಲ ಎಂಬುದರ ಬಗ್ಗೆ ಉಲ್ಲೇಖವು ಇದೆ.

ಬಹು ಭಾಷಾ ಹೆಸರುಗಳು

ಕನ್ನಡ : ಹರಳು, ಔಡಲ, ಚಿಟ್ಟ ಹರಳು

ಸಂಸ್ಕೃತ : ಏರಂಡ

ತುಳು : ಅಲ್‌ಬಡ

ಹಿಂದಿ : ಏರಂಡ್

ಇಂಗ್ಲೀಷ್ : ಕ್ಯಾಸ್ಟರ್

ಪರ್ಯಾಯ ಪದಗಳು

ವ್ಯಾಘ್ರ, ಹಸ್ತಿಕರ್ಣ, ನಾಗಕರ್ಣ, ಕರಪರ್ಣ, ವ್ಯಾಘ್ರಕರ, ಗಂಧರ್ವಹಸ್ತ, ಉರುಬೂಕ, ವ್ಯಾಘ್ರಪುಚ್ಛ, ಪಂಚಾಂಗುಲ, ಚಿತ್ರಕ, ವರ್ಧಮಾನ, ಉತ್ತನ್‌ಪತ್ರಕಾ, ವೃದಂಬಕ, ಆಮಂಡ. ವಾತ ರೋಗಕ್ಕೆ ಪರಿಣಾಮಕಾರಿಯಾಗಿರುವುದರಿಂದಲೇ 'ವಾತಾರಿ' ಎಂದು ಕರೆಯುತ್ತಾರೆ.

ದ್ರವ್ಯದ ವರ್ಣನೆ

ಔಡಲವು 2–3 ಮೀಟರ್‌ನಷ್ಟು ಎತ್ತರಕ್ಕೆ ಬೆಳೆಯುವ ಸಸ್ಯ. ಗರಗಸದ ಅಂಚಿನಂತಿರುವ ಎಲೆಯು ಹಸಿರು ಅಥವಾ ಕಂದು ಬಣ್ಣದಿಂದ ಕೂಡಿದೆ. ಎಲೆಯು ಅಗಲವಾಗಿದ್ದು, ಎಲೆಯ ಸೀಳುಗಳ ತುದಿಯು ಚೂಪಾಗಿದೆ. ಕಾಂಡವು 0–30 ಸೆಂ.ಮೀಟರ್‌ನಷ್ಟು ಉದ್ದವಾಗಿ ನಸುಗೆಂಪು ಅಥವಾ ಹಸಿರು ಬಣ್ಣದಿಂದ ಕೂಡಿದೆ. ಕಾಂಡದಲ್ಲಿ ಬಿಳಿ ಬಣ್ಣದ ಮೇಣದಂತಹ ಲೇಪವಿದೆ. ಸಸ್ಯವು ದೊಡ್ಡದಾದಂತೆ ಕಾಂಡದ ಒಳಭಾಗವು ಟೊಳ್ಳಾಗುತ್ತಾ ಬರುತ್ತದೆ. ಏಕಲಿಂಗಿಯ ಪುಷ್ಪಗಳು ನೇರಳೆ ಅಥವಾ ಕೆಂಪು ಬಣ್ಣದಿಂದ ಕೂಡಿರುತ್ತದೆ. ಮೃದುವಾದ ಕಾಯಿಯು ಮುಳ್ಳುಗಳಿಂದ ಕೂಡಿದೆ. ಕಾಯಿಯನ್ನು ಬಿರಿದಾಗ ಬೀಜವು ಕಾಣಿಸುತ್ತದೆ. ಬೀಜವು ಉದ್ದವಾಗಿ ಹೊಳಪಿನಿಂದ ಕೂಡಿದ್ದು ಕಪ್ಪು ಬಣ್ಣದಿಂದ ಕೂಡಿದೆ. ಸಸ್ಯದ ಬೇರು ದಪ್ಪವಾಗಿದೆ. ಈ ದ್ರವ್ಯವು ಹೂವು ಮತ್ತು ಕಾಯಿಯನ್ನು ಡಿಸೆಂಬರ್ ಮಾರ್ಚ್ ತಿಂಗಳಿನಲ್ಲಿ ಬಿಡುತ್ತದೆ. ಸಾಮಾನ್ಯವಾಗಿ ಎಲ್ಲ ಕಡೆಗಳಲ್ಲಿ ಬೆಳೆಯುವ ಈ ದ್ರವ್ಯವು ಹೆಚ್ಚಾಗಿ ಮಳೆಗಾಲದಲ್ಲಿ ಬೆಳೆಯುತ್ತದೆ. ಭಾರತದೆಲ್ಲೆಡೆ ಬೆಳೆಯುವ ಈ ಸಸ್ಯವು ಹೆಚ್ಚಾಗಿ ತಮಿಳುನಾಡು, ಬಂಗಾಳ, ಮಹಾರಾಷ್ಟ್ರಗಳಲ್ಲಿ ಬೆಳೆಯುತ್ತದೆ.

ವಿಧಗಳು

ಚಿಟ್ಟ ಹರಳು, ದೊಡ್ಡ ಹರಳು, ಬಿಳಿದೊಡ್ಡ ಹರಳು, ಕೆಂಪು ದೊಡ್ಡ ಹರಳು, ಕಾಡು ಹರಳು, ಸೀಮೆ ಹರಳು ಮುಂತಾದ ಅನೇಕ ಜಾತಿಯೂ ಔಡಲದಲ್ಲಿ ಇದ್ದರೂ

ಭಾವಪ್ರಕಾಶ ಮತ್ತು ರಾಜ ನಿಘಂಟುಕಾರರ ಪ್ರಕಾರದಲ್ಲಿ ಔಡಲದಲ್ಲಿ ಎರಡು ಬಗೆಗಳಿವೆ. ಅವು

1. ಬಿಳಿ ಔಡಲ
2. ಕೆಂಪು ಔಡಲ

ಉಪಯುಕ್ತ ಅಂಗಗಳು

- ಬೇರು
- ಬೀಜ
- ಎಲೆ
- ಎಣ್ಣೆ

ದ್ರವ್ಯದ ಗುಣಧರ್ಮಗಳು

ರಸ : ಮಧುರ, ಕಟು, ಕಷಾಯ
ಗುಣ : ಸ್ನಿಗ್ಧ, ತೀಕ್ಷ್ಣ, ಸೂಕ್ಷ್ಮ
ವೀರ್ಯ : ಉಷ್ಣ
ವಿಪಾಕ : ಮಧುರ
ಕರ್ಮ : ಕಫವಾತಹರ, ರೇಚನ ವೃಷ್ಯ

"ಏರಂಡಯುಗ್ಮಂ ಮಧುರಂ ಉಷ್ಣಂ ಗುರು ವಿನಾಶಯೇತ್।
ಶೂಲಶೋಥಕಟೀಬಸ್ತಿಶಿರಃಪಿಡೋದರಜ್ವರಾನ್॥
ಭ್ರಧ್ನಶ್ವಾಸಕಫಾನಾಹಕಾಸಕುಷ್ಠಾಮಮಾರುತಾನ್॥ *(ಭಾವಪ್ರಕಾಶ)*

ಎಂದರೆ ಔಡಲವು ಮಧುರ ರಸದಿಂದ ಕೂಡಿದೆ, ಉಷ್ಣ ವೀರ್ಯದಿಂದ ಕೂಡಿದೆ, ಗುರು ಗುಣದಿಂದ ಕೂಡಿದೆ. ಶೂಲೆ, ಶೋಥ, ಕಟಿ ಪ್ರದೇಶ, ಬಸ್ತಿ ಪ್ರದೇಶ, ಶಿರ ಪ್ರದೇಶದ ತೊಂದರೆಗಳನ್ನು ನಿವಾರಿಸುತ್ತದೆ. ಉದರ ರೋಗ, ಜ್ವರ, ಗಾಯ, ಶ್ವಾಸ, ಕೆಮ್ಮು, ಕುಷ್ಠ ವಾತರೋಗಗಳನ್ನು ಪರಿಹರಿಸುತ್ತದೆ.

ಔಷಧಿ ಪ್ರಮಾಣ

ಬೇರಿನ ಚೂರ್ಣ – 3–5 ಗ್ರಾಂ
ಕಷಾಯ – 50–100 ಮಿ.ಲೀ.
ಬೀಜ – 1–5 ಸಂಖ್ಯೆ
ಹರಳೆಣ್ಣೆ – 5–10 ಮಿ.ಲೀ.

ಔಷಧೀಯ ಯೋಗಗಳು

- ರಾಸ್ನೈರಂಡಾದಿ ಕಷಾಯ
- ಸಿಂಹನಾದ ಗುಗ್ಗುಲು
- ವಾತಾರಿ ಗುಗ್ಗುಲು
- ಹಿಂಗು ತ್ರಿಗುಣ ತೈಲ
- ಏರಂಡಾದಿ ತೈಲ
- ಏರಂಡ ಪಾಕ
- ಏರಂಡ ಮೂಲಾದಿ ಖಿಡ
- ಏರಂಡ ಸಪ್ತಕ ಕಷಾಯ

ಔಷಧೀಯ ಉಪಯೋಗಗಳು

- ಔಡಲದ ಬೇರನ್ನು ಹಾಲಿನಲ್ಲಿ ಕುದಿಸಿ ಸೇವಿಸುವುದರಿಂದ ಜ್ವರ ಅತಿಸಾರ ರೋಗವು ನಿವಾರಣೆಯಾಗುತ್ತದೆ.
- ಆಡುಸೋಗೆ, ಎಕ್ಕೆ, ಔಡಲ ಮತ್ತು ಬಿಲ್ವ ಪತ್ರೆಯ ಎಲೆಗಳಿಂದ ತಯಾರಿಸಿದ ಕಷಾಯವನ್ನು ಮೂಲವ್ಯಾಧಿಯ ಮೇಲೆ ಚಿಮ್ಮಿಸುವುದರಿಂದ ಮೂಲವ್ಯಾಧಿಯು ನಿವಾರಣೆಯಾಗುತ್ತದೆ.
- ಔಡಲದ ಎಣ್ಣೆಯನ್ನು ಹಾಲಿನಲ್ಲಿ ಬೆರೆಸಿ ಸೇವಿಸುವುದರಿಂದ ಮಲಬದ್ಧತೆ, ವಾತದ ಗುಲ್ಮ ರೋಗವು ನಿವಾರಣೆ.
- ಶುಂಠಿ, ಬಿಲ್ವ, ಔಡಲ ಮತ್ತು ಚಿತ್ರಮೂಲದ ಬೇರಿನ ಕಷಾಯ ಸೇವನೆಯಿಂದ ಹೊಟ್ಟೆನೋವು ಪರಿಹರಿಸುತ್ತದೆ.
- ಹರಳೆಣ್ಣೆಯನ್ನು ದನದ ಮೂತ್ರ ಅಥವಾ ಹಾಲಿನಲ್ಲಿ ಸೇವಿಸುವುದರಿಂದ ಉದರರೋಗವು ನಿವಾರಣೆಯಾಗುತ್ತದೆ.
- ತುಪ್ಪ, ಎಣ್ಣೆ ಮತ್ತು ಶುಂಠಿಯ ಕಷಾಯಕ್ಕೆ ಹರಳೆಣ್ಣೆ ಬೆರೆಸಿ ಸೇವಿಸುವುದರ ಜೊತೆಗೆ ಅಕ್ಕಿ ಮತ್ತು ಹಾಲಿನ ಆಹಾರ ಸೇವಿಸುವುದರಿಂದ ಆನೆಕಾಲು ರೋಗವು ನಿವಾರಣೆಯಾಗುತ್ತದೆ.
- ಔಡಲದ ಬೀಜವನ್ನು ಹಾಲಿನಲ್ಲಿ ಅರೆದು, ನೋವಿರುವ ಭಾಗಕ್ಕೆ ಹಚ್ಚುವುದರಿಂದ ವಾತರಕ್ತರೋಗವು ನಿವಾರಣೆಯಾಗುತ್ತದೆ.
- ಔಡಲದ ರಸಕ್ಕೆ ಸಮ ಪ್ರಮಾಣದಲ್ಲಿ ಶುಂಠಿ ಮತ್ತು ಮಧುಕ (ಇಪ್ಪೆ) ಯ ರಸ ಬೆರೆಸಿ ಸ್ವಲ್ಪ ಕಾಯಿಸಿ, ಅದಕ್ಕೆ ಎಣ್ಣೆ ಮತ್ತು ಲವಣ ಸ್ವಲ್ಪ ಬೆರೆಸಿ ಸ್ವಲ್ಪ ತಣ್ಣಗಾದ


ನಂತರ ತೊಟ್ಟು ತೊಟ್ಟಾಗಿ ಕಿವಿಗೆ ಬಿಡುವುದರಿಂದ ಕಿವಿನೋವು ನಿವಾರಣೆಯಾಗುತ್ತದೆ.

- 6 ಗಂಟೆಗೊಮ್ಮೆ ಹರಳೆಣ್ಣೆಯನ್ನು ಬಿಸಿನೀರು ಅಥವಾ ಬಿಸಿ ಹಾಲಿನಲ್ಲಿ ಸೇವಿಸುವುದರಿಂದ ಆಮವಾತ ರೋಗವು ನಿವಾರಣೆಯಾಗುತ್ತದೆ.
- ವಾತದೋಷದ ತೊಂದರೆಯಿಂದ ಬಳಲುತ್ತಿರುವವರು ಔಡಲ ಗಿಡದ ಮೂಲದ ಕಷಾಯವನ್ನು ಸೇವಿಸುವುದು ಉತ್ತಮ.
- ಶುಂಠಿಯ ಕಷಾಯಕ್ಕೆ ಹರಳೆಣ್ಣೆಯನ್ನು ಬೆರೆಸಿ ಸೇವಿಸುವುದರಿಂದ ವಾತರೋಗವು ನಿವಾರಣೆಯಾಗುತ್ತದೆ.
- ಔಡಲದ ಎಲೆಯ ರಸವನ್ನು ಹೊತ್ತಿಗೆ 1/2 ಔನ್ಸ್‌ನಂತೆ 7 ದಿವಸ ಸೇವಿಸುತ್ತಾ ಬಂದರೆ ಕಾಮಾಲೆ ರೋಗವು ನಿವಾರಣೆಯಾಗುತ್ತದೆ.
- ಸಿಪ್ಪೆ ತೆಗೆದ ಔಡಲದ ಬೀಜವನ್ನು ಹಾಲಿನಲ್ಲಿ ಅರೆದು ಕಣ್ಣಿನ ಕುರಿಯಿರುವ ಜಾಗದ ಹೊರಗಡೆ ಲೇಪಿಸುವುದರಿಂದ ಕಣ್ಣು ಕುರಿ ನಿವಾರಣೆ.
- ಔಡಲದ ಬೇರು ಮತ್ತು ಶುಂಠಿಯನ್ನು ಮಜ್ಜಿಗೆಯಲ್ಲಿ ಅರೆದು ತಲೆಗೆ ಹಚ್ಚುವುದರಿಂದ ಸಾಮಾನ್ಯ ತಲೆನೋವು ನಿವಾರಣೆಯಾಗುತ್ತದೆ.
- ಹರಳೆಣ್ಣೆಯನ್ನು ತಲೆಗೆ ಹಾಕುವುದರಿಂದ ಕೂದಲು ಚೆನ್ನಾಗಿ ಬೆಳೆದು, ದೇಹಕ್ಕೆ ತಂಪು ಉಂಟಾಗುತ್ತದೆ.
- ಹರಳೆಣ್ಣೆಯನ್ನು ಇಡೀ ದೇಹಕ್ಕೆ ಹಾಕಿ ಸ್ವಲ್ಪ ಸಮಯದ ನಂತರ ಬಿಸಿನೀರಿನಲ್ಲಿ ಸ್ನಾನ ಮಾಡುವುದರಿಂದ ಮೈಕೈ ನೋವು ಮಾಯವಾಗಿ ಸುಖ ನಿದ್ರೆ ಬರುತ್ತದೆ.
- ಹೆರಿಗೆಯ ನಂತರ ಸ್ತನಗಳಿಗೆ ಹರಳೆಣ್ಣೆ ಹಚ್ಚಿ, ಮಾಲೀಸ್‌ಮಾಡಿದರೆ ಮೊಲೆಯ ಹಾಲು ಹೆಚ್ಚಿ ಮಗುವು ಹಾಲು ಕುಡಿದ ನಂತರ ಪುಷ್ಟಿಯಾಗಿ ಬೆಳೆಯುತ್ತದೆ.
- ಹರಳೆಣ್ಣೆಯನ್ನು ನಿಂಬೆರಸದಲ್ಲಿ ಸೇರಿಸಿ ಸೇವಿಸುವುದರಿಂದ ವಾಂತಿಯು ನಿವಾರಣೆಯಾಗುತ್ತದೆ.

ಕಕ್ಕೆಯ ಬಣ್ಣದಿಂದ ಕೂಡಿದ ಕಕ್ಕೆಕಾಯಿ

Cassia fistula, Linn.

Caesalpiniaceae





ಕಾಗೆಯ ಬಣ್ಣದಿಂದ ಕೂಡಿದ ಕಕ್ಕೆ ಕಾಯಿ ಮರವು ನಮ್ಮ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಯಥೇಚ್ಛವಾಗಿ ಕಂಡು ಬರುತ್ತದೆ. ಚರಕನು ಈ ದ್ರವ್ಯವನ್ನು ಸೂತ್ರಸ್ಥಾನ ಎರಡನೇ ಅಧ್ಯಾಯದಲ್ಲಿ ವಿವರವಾಗಿ ವಿವರಿಸಿದ್ದಾನೆ. ಕಕ್ಕೆಕಾಯಿಯ ಕಾಯಿಯು ನುಗ್ಗೆಯಂತೆ ಉದ್ದವಾಗಿದೆ. ಚಂದವಾದ ಹಳದಿ ಬಣ್ಣದ ಹೂಗಳು ನೋಡುಗರನ್ನು ಆಕರ್ಷಿಸುತ್ತದೆ. ಆದ್ದರಿಂದಲೇ ಕಕ್ಕೆಕಾಯಿ ಮರಗಳನ್ನು ರಸ್ತೆಯ ಬದಿಗಳಲ್ಲಿ ನೆಟ್ಟು ಬೆಳೆಸುತ್ತಾರೆ. ಯಾವ ಪ್ರಾಯದವರೇ ಇರಲಿ (ಬಾಲಕ, ಮುದುಕ, ಕ್ಷೀಣ, ಬಲಹೀನ) ಆರಗ್ವಧ ಮೃದು ವಿರೇಚನಕ್ಕೆ ಶ್ರೇಷ್ಠವಾದ ದ್ರವ್ಯ ಎಂಬುದು ಆಚಾರ್ಯ ಚರಕರ ಹೇಳಿಕೆ. ಕಕ್ಕೆಕಾಯಿಯ ಒಣಗೆಲ್ಲುಗಳನ್ನು ಧಾರ್ಮಿಕ ಕಾರ್ಯಗಳಿಗೆ ಹಿಂದಿನ ಕಾಲದಲ್ಲಿ ಉಪಯೋಗಿಸುತ್ತಿದ್ದರು.

ಬಹು ಭಾಷಾ ಹೆಸರುಗಳು

ಕನ್ನಡ : ಕಕ್ಕೆಕಾಯಿ, ಕೊಂದೆಮರ

ಸಂಸ್ಕೃತ : ಆರಗ್ವಧ

ತುಳು : ಕಕ್ಕೆಮರ

ಹಿಂದಿ : ಅಮಲತಾಸ

ಇಂಗ್ಲೀಷ್ : ಪರ್ಜಿಂಗ್ ಕೆಶಿಯಾ

ಪರ್ಯಾಯ ಪದಗಳು

ಆರಗ್ವಧ, ವ್ಯಾಧಿಘಾತ, ರಾಜವೃಕ್ಷ, ಶಂಪಾಕ, ಚತುರಂಗುಲ, ಆರೇವತ, ಕೃತಮಾಲ, ಸುವರ್ಣಕ, ದೀರ್ಘಫಲ, ಸ್ವರ್ಣಭೂಷಣ, ಸ್ವರ್ಣಾಂಗ, ಕಂಡೂಘ್ನ, ಆರೋಗ್ಯಶಿಂಬೀ, ಶಂಪಾಕ.

ಮರವು ಸುಂದರತೆಯಿಂದ ಕೂಡಿರುವುದರಿಂದ ಇದನ್ನು 'ರಾಜವೃಕ್ಷ' ಎಂದು, ಅಂದವಾದ ಬಂಗಾರ ಬಣ್ಣದ ಪುಷ್ಪಗೊಂಚಲು ಇರುವುದರಿಂದ 'ಸುವರ್ಣ'. 'ಸ್ವರ್ಣಭೂಷಣ' ಎಂದೂ, ಉದ್ದವಾದ ಫಲವಿರುವುದರಿಂದ 'ದೀರ್ಘಫಲ'ವೆಂದು ಕರೆಯುತ್ತಾರೆ.

ದ್ರವ್ಯದ ವರ್ಣನೆ

ಕಕ್ಕೆಕಾಯಿಯು ಮಧ್ಯಮಗಾತ್ರದ ಮರ. ಇದು ಸುಮಾರು 8–10 ಮೀಟರ್ ಎತ್ತರಕ್ಕೆ ಬೆಳೆಯುತ್ತದೆ. ಕಾಂಡವು ನುಣುಪು ಮತ್ತು ನೇರವಾಗಿರುವುದು. ಮೃದುವಾದ ತೊಗಟೆಯು ತಿಳಿಹಸಿರು ಅಥವಾ ನಸು ಕೆಂಪು ಬಣ್ಣದಿಂದ ಕೂಡಿರುತ್ತದೆ. ಎಲೆಯು ಹಸಿರಾಗಿ 5–12 ಸೆಂ.ಮೀಟರ್ ಉದ್ದವಿರುತ್ತದೆ. ಎಲೆಯು ನೇರಳೆ ಮರದ ಎಲೆಗಳನ್ನು ಹೋಲುತ್ತದೆ. ದೇಟಿಗೆ ಎಲೆಗಳು ಎದುರು ಬದುರಾಗಿ ಚಿಗುರುವುದು.

ಎಲೆಗಳು ಉದುರಿದಾಗ ಹಳದಿ ಬಣ್ಣದ ಹೂವು ಹುಟ್ಟಿ ಮರವು ಬಹಳ ಸುಂದರವಾಗಿ ಕಾಣುತ್ತದೆ. ಗಟ್ಟಿಯಾದ ಕಾಯಿಗಳು ಸುಮಾರು 0.3–1 ಮೀಟರ್ ಉದ್ದವಾಗಿ ಬೆಳೆಯುತ್ತದೆ. ಕಾಯಿಯ ಒಳಗಡೆ ನಸು ಕೆಂಪು ಅಥವಾ ಕಪ್ಪು ಬಣ್ಣದ ಬೀಜಗಳಿರುತ್ತದೆ. ಈ ದ್ರವ್ಯವು ಮಾರ್ಚ್ ಏಪ್ರಿಲ್ ತಿಂಗಳಿನಲ್ಲಿ ಹೂ ಕಾಯಿ ಬಿಡುವುದು. ಕಕ್ಕೆಕಾಯಿಯು ಭಾರತದ ಹೆಚ್ಚಿನ ರಾಜ್ಯಗಳಲ್ಲಿ ಬೆಳೆಯುತ್ತದೆ.

ವಿಧಗಳು

ಧನ್ವಂತರಿ ನಿಘಂಟುಕಾರನ ಪ್ರಕಾರ ಕಕ್ಕೆಕಾಯಿಯಲ್ಲಿ ಎರಡು ಪ್ರಭೇದಗಳುಂಟು. ಅವು

- ಆರಗ್ವಧ
- ಕರ್ಣಿಕಾರ

ಉಪಯುಕ್ತ ಅಂಗಗಳು

- ಹಣ್ಣಿನ ತಿರುಳು
- ಬೇರಿನ ತೊಗಟೆ

- ಹೂವು
- ಎಲೆ
- ಬೀಜ

ದ್ರವ್ಯದ ಗುಣಧರ್ಮಗಳು

ರಸ : ಮಧುರ

ಗುಣ : ಮೃದು, ಗುರು, ಸ್ನಿಗ್ಧ

ವೀರ್ಯ : ಶೀತ

ವಿಪಾಕ : ಮಧುರ

ಕರ್ಮ : ಕಫಪಿತ್ತಹರ, ರುಚ್ಯ

ಆರಗ್ವಧೋಽತಿಮಧುರಃ ಶೀತಃ ಶೂಲಾಪಹಾರಕಃ।
ಜ್ವರಕಂಡೂಕುಷ್ಠ ಮೇಹಕಫವಿಷ್ಟಂಭನಾಶನಃ॥ (ರಾಜನಿಘಂಟು)

ಎಂದರೆ ಕಕ್ಕೆಕಾಯಿ ಮಧುರ ರಸದಿಂದ ಕೂಡಿದೆ, ಶೀತ ವೀರ್ಯದಿಂದ ಕೂಡಿದೆ, ನೋವನ್ನು ನಿವಾರಿಸುತ್ತದೆ. ಕುಷ್ಠ, ಜ್ವರ, ತುರಿಕೆ, ಪ್ರಮೇಹ, ರೋಗಗಳನ್ನು ನಿವಾರಿಸುತ್ತದೆ. ಕಫಹರವಾಗಿದೆ.

ಔಷಧಿ ಪ್ರಮಾಣ

ಬೇರಿನ ತೊಗಟೆ ಕಷಾಯ : 50–100 ಮಿ.ಲೀ.

ಹೂವಿನ ಲೇಪ : 5–10 ಗ್ರಾಂ.

ಹಣ್ಣಿನ ತಿರುಳು : 5–10 ಗ್ರಾಂ.

ಔಷಧೀಯ ಯೋಗಗಳು

- ಆರಗ್ವದಾಧಿ ಲೇಹ
- ಆರಗ್ವದಾಧಿ ತೈಲ
- ಆರಗ್ವಧಾರಿಷ್ಟ

ಔಷಧೀಯ ಉಪಯೋಗಗಳು

- ಕಕ್ಕೆಕಾಯಿಗಳನ್ನು ಚೆನ್ನಾಗಿ ಒಣಗಿಸಿ ಸುಟ್ಟು ಬೂದಿ ಮಾಡಿ, ಕಾಲು ಟೀ ಚಮಚ ಬೂದಿಗೆ ಒಂದು ಚಿಟಿಕೆ ಅಡಿಗೆ ಉಪ್ಪಿನ ಪುಡಿ ಮತ್ತು ಒಂದು ಟೀ ಚಮಚ ಜೇನು ಕಲಸಿ ದಿವಸಕ್ಕೆ 2–3 ಬಾರಿ ನೆಕ್ಕುವುದರಿಂದ ಕೆಮ್ಮು ನಿವಾರಣೆ.
- ಆರಗ್ವಧ ಎಲೆಯನ್ನು 'ಹರಣಲ' ಎಂಬ ಉಪರಸದೊಂದಿಗೆ ಸೇರಿಸಿ, ಅದರ

ಲೇಪ ಮಾಡಿ ಬಾಹ್ಯವಾಗಿ ಹಚ್ಚುವುದರಿಂದ ಚರ್ಮರೋಗವು ಕಡಿಮೆಯಾಗುತ್ತದೆ.

- ಗಂಟಲು ಬೇನೆಗೆ ಅರಗ್ವಧ ಮರದ 10 ಗ್ರಾಂ. ಅಂಟನ್ನು ಒಂದು ಲೋಟ ನೀರಿಗೆ ಹಾಕಿ ಕಷಾಯ ಮಾಡಿ ತಣ್ಣಗಾದ ಮೇಲೆ ಬಾಯಿ ಮುಕ್ಕಳಿಸುವುದು. ಪ್ರತಿದಿನ 2–4 ಬಾರಿ ಈ ರೀತಿ ಮಾಡುವುದರಿಂದ ಗಂಟಲು ಬೇನೆ ನಿವಾರಣೆಯಾಗುತ್ತದೆ.
- ಅರಗ್ವಧ ಬೇರಿನ ಚೂರ್ಣಕ್ಕೆ ಸ್ವಲ್ಪ ಅನ್ನ ಬೇಯಿಸಿದ ನೀರನ್ನು ಸೇರಿಸಿ ಅದರ ಲೇಪವನ್ನು ಹಚ್ಚುವುದರಿಂದ 'ಗಂಡಮಾಲ' ರೋಗವು ಕಡಿಮೆಯಾಗುತ್ತದೆ.
- ಕಕ್ಕೆಕಾಯಿಯನ್ನು ಹಾಲಿನೊಂದಿಗೆ ಸೇವಿಸುವುದರಿಂದ ಜ್ವರವು ನಿವಾರಣೆ.
- ಕಾಮಾಲೆ ರೋಗಕ್ಕೆ, 40 ಗ್ರಾಂ. ಕಕ್ಕೆಕಾಯಿ, ನೆಲ್ಲಿಕಾಯಿ, ತ್ರಿಕಟು ಚೂರ್ಣ ಬೆರೆಸಿ ಅದಕ್ಕೆ ಕಬ್ಬಿನ ರಸ ಸೇರಿಸಿ ಕುಡಿಯಬೇಕು.
- ಕಕ್ಕೆಕಾಯಿ ಕಷಾಯ ಸೇವನೆಯಿಂದ ಪ್ರಮೇಹ ರೋಗವು ನಿವಾರಣೆಯಾಗುತ್ತದೆ.
- ಕಕ್ಕೆಕಾಯಿ ತೊಗಟೆ ಮತ್ತು ಖದಿರಾಧಿ ಕಷಾಯ ಮಾಡಿ, ಅದಕ್ಕೆ ತುಪ್ಪ ಬೆರೆಸಿ, ಬಿಸಿಮಾಡಿ ಸೇವಿಸುವುದರಿಂದ ಕುಷ್ಠರೋಗವು ನಿವಾರಣೆಯಾಗುತ್ತದೆ.
- ಕಕ್ಕೆಕಾಯಿ ಮತ್ತು ಅರಿಷಿಣದ ಚೂರ್ಣಕ್ಕೆ ಜೇನುತುಪ್ಪ ಮತ್ತು ತುಪ್ಪ ಬೆರೆಸಿ, ಗಾಯ ಶುದ್ಧಿಗೊಳಿಸಲು ಉಪಯೋಗಿಸುವುದರಿಂದ ಗಾಯವು ಶುದ್ಧಗೊಂಡು ಗಾಯ ನಿವಾರಣೆಯಾಗುತ್ತದೆ.
- ಕಕ್ಕೆಕಾಯಿಯ ಎಲೆಯನ್ನು ಸಾಸಿವೆ ಎಣ್ಣೆಯಲ್ಲಿ ಹುರಿದು, ಸಂಜೆ ಸೇವಿಸುವುದರಿಂದ ಆಮವಾತ ರೋಗವು ನಿವಾರಣೆಯಾಗುತ್ತದೆ.
- ಕಕ್ಕೆಕಾಯಿ ಎಲೆಗೆ ಮೊಲೆ ಹಾಲು ಬೆರೆಸಿ ಗಾಯಕ್ಕೆ ಹಚ್ಚುವುದರಿಂದ ಅಪಘಾತದಿಂದ ಉಂಟಾದ ಗಾಯವು ನಿವಾರಣೆ.
- ಚರ್ಮ ತುರಿಸಿ ದಪ್ಪವಾದಾಗ ಕಕ್ಕೆ ಎಲೆಗೆ ಲಿಂಬೆರಸ ಹಾಕಿ ಅರೆದು ಲೇಪಿಸಬೇಕು.

ಕಗ್ಗಲಿ ಮರದ ಸೊಬಗು

Acacia catechu, Willd.
Mimosaceae





ಸೊಬಗಿನಿಂದ ಕೂಡಿದ ಕಗ್ಗಲಿ ಮರದ ವಿವರಣೆಯನ್ನು ಹಿಂದಿನ ಕಾಲದಿಂದಲೂ ನಮ್ಮ ಸಂಹಿತೆಗಳಲ್ಲಿ ಯಥೇಚ್ಛವಾಗಿ ಕಾಣಬಹುದು. ಇದು ಪೂಜೆಗಳಿಗೆ ಮತ್ತು ಔಷಧಿಯಾಗಿ ಬಳಸಲ್ಪಡುವ ಒಂದು ವಿಶಿಷ್ಟವಾದ ದ್ರವ್ಯ. ಶತಪತ ಬ್ರಾಹ್ಮಣ ಈ ಮರದ ಬಲವನ್ನು ಎಲುಬುಗಳ ಬಲಕ್ಕೆ ಸಮ ಎಂದು ವಿವರಿಸಿದ್ದಾರೆ. ರೋಗ ನಿರೋಧಕ ಶಕ್ತಿ ಹೊಂದಿರುವ ಕಗ್ಗಲಿ ಮರವು ಆಯುರ್ವೇದದ ಪ್ರಮುಖ ದ್ರವ್ಯಗಳಲ್ಲಿ ಒಂದು. ಕಗ್ಗಲಿಮರದ ಕಾಂಡವು ಬಲಿಷ್ಠವಾಗಿದ್ದು ಅದನ್ನು ಹಿಂದಿನ ಕಾಲದಲ್ಲಿ ರಥ ತಯಾರಿಸಲು ಉಪಯೋಗಿಸುತ್ತಿದ್ದರು. ಖದಿರದ ಕಡ್ಡಿಯನ್ನು ಹಿಂದಿನ ಕಾಲದಲ್ಲಿ ಹಲ್ಲುಜ್ಜಲು ಉಪಯೋಗಿಸುತ್ತಿದ್ದರು.

ಬಹು ಭಾಷಾ ಹೆಸರುಗಳು

ಕನ್ನಡ : ಕಗ್ಗಲಿ ಮರ
ಸಂಸ್ಕೃತ : ಖದಿರ
ತುಳು : ಕಾಚಿ, ಖದಿರೋ

ಹಿಂದಿ : ಖೈರ

ಇಂಗ್ಲೀಷ್ : ಕಚ್‌ಟ್ರೀ

ಪರ್ಯಾಯ ಪದಗಳು

ಖದಿರಃ, ಗಾಯತ್ರಿ, ದಂತಧಾವನ, ರಕ್ತಸಾರ, ಸೋಮವಲ್ಕ, ಕಂಟಕೀ, ಬಾಲಪತ್ರಾ, ಕುಷ್ಠಾರೀ, ಬಹುಶಲ್ಯ, ಬಹುಸಾರ್, ಮೇಧ್ಯ, ಕುಷ್ಠಘ್ನ, ಇರಿಮೇದ.

ಕಗ್ಗಲಿ ಮರದ ಕಡ್ಡಿಯನ್ನು ಹಲ್ಲುಜ್ಜಲು ಉಪಯೋಗಿಸುವುದರಿಂದ ಇದನ್ನು 'ದಂತಧಾವನ' ಎಂದು, ಮರವು ಮುಳ್ಳುಗಳಿಂದ ಕೂಡಿರುವುದರಿಂದ 'ಕಂಟಕೀ' ಎಂದೂ, ರೋಗನಿವಾರಿಸುವುದರಿಂದ 'ಖದಿರಾ' ಎಂದೂ, ಕಾಂಡವು ಕೆಂಪು ಬಣ್ಣದಿಂದ ಕೂಡಿರುವುದರಿಂದ 'ರಕ್ತಸಾರ' ಎಂದು, ತೊಗಟೆಯು ಬಿಳಿ ಬಣ್ಣದಿಂದ ಕೂಡಿರುವುದರಿಂದ 'ಸೋಮವಲ್ಕಲ' ಎಂದು ಸಂಸ್ಕೃತದಲ್ಲಿ ಕರೆಯುತ್ತಾರೆ.

ದ್ರವ್ಯದ ವರ್ಣನೆ

ಕಗ್ಗಲಿ ಮರವು ಮಧ್ಯಮ ಗಾತ್ರದ ಮರವಾಗಿದೆ. ಮರದ ಮೋಟು (ಟ್ರಂಕ್) ಒರಟಾಗಿ, ಮುಳ್ಳುಗಳಿಂದ ಕೂಡಿದೆ. ಮರದ ಮೋಟು ಹೊರಗೆ ಹಳದಿ ಬಣ್ಣದಿಂದ, ಒಳಗೆ ಕೆಂಪು ಬಣ್ಣದಿಂದ ಕೂಡಿದೆ. ಎಲೆಯು 8–10 ಸೆಂ.ಮೀ. ನಷ್ಟು ಉದ್ದವಾಗಿದೆ. ಎಲೆಗಳು ಸಣ್ಣದಾಗಿ ಗರಿಗಳಂತಿರುತ್ತದೆ. ಹೂವುಗಳು ಚಿಕ್ಕದಾಗಿ ಮಾಸು ಹಳದಿ ಬಣ್ಣದಿಂದ ಕೂಡಿದೆ. ಹಣ್ಣಿನ ಕೋಡು 5–10 ಸೆಂ.ಮೀ. ಉದ್ದವಾಗಿ ಸಪೂರವಾಗಿ, ಹೊಳಪಿನಿಂದ ಕೂಡಿದೆ. ಕೋಡಿನಲ್ಲಿ 5–8 ವೃತ್ತಾಕಾರದ ಬೀಜಗಳಿವೆ. ಈ ದ್ರವ್ಯದಲ್ಲಿ ಎಲೆಯು ಬೇಸಿಗೆ ಕಾಲದಲ್ಲಿ ಇರುತ್ತದೆ. ಈ ದ್ರವ್ಯವು ಹೂವನ್ನು ಮಳೆಗಾಲದಲ್ಲಿ ಮತ್ತು ಕೋಡನ್ನು ಶರತ್ಕಾಲದಲ್ಲಿ ಬಿಡುತ್ತದೆ. ಸಾಮಾನ್ಯವಾಗಿ ಭಾರತದಲ್ಲೆಡೆ ಬೆಳೆಯುವ ಈ ದ್ರವ್ಯವು ಹೆಚ್ಚಾಗಿ ಮಧ್ಯಭಾರತ, ಬಿಹಾರ, ಮಹಾರಾಷ್ಟ್ರ ತಮಿಳುನಾಡು, ಗುಜರಾತ್‌ನಲ್ಲಿ ಬೆಳೆಯುತ್ತದೆ.

ವಿಧಗಳು

ರಾಜ ನಿಘಂಟುಕಾರನ ಪ್ರಕಾರ ಈ ದ್ರವ್ಯದಲ್ಲಿ 5 ಪ್ರಭೇದಗಳಿವೆ. ಅವು

- ಖಾದಿರ
- ಸೋಮವಲ್ಕ
- ವಿಟ್‌ಖಾದಿರ
- ತಾಮ್ರಕಂಠಕ
- ಇರಿಮೇದ

ಆದರೆ ಸಸ್ಯಶಾಸ್ತ್ರದಲ್ಲಿ ಮೂರು ವಿಧವನ್ನು ಮುಖ್ಯವಾಗಿ ಕಾಣಬಹುದು. ಅವು

- Acacia catechu
- Acacia sundra
- Acacia catechnoides

ಉಪಯುಕ್ತ ಅಂಗಗಳು

- ತೊಗಟೆ
- ರೆಸಿನ್
- ಹೂವು
- ಮರದಮೋಟು

ದ್ರವ್ಯದ ಗುಣಧರ್ಮಗಳು

ರಸ : ತಿಕ್ತ, ಕಷಾಯ

ಗುಣ : ಲಘು, ರೂಕ್ಷ

ವೀರ್ಯ : ಶೀತ

ವಿಪಾಕ : ಕಟು

ಕರ್ಮ : ಕಫಪಿತ್ತಹರ, ಮೇದೋಘ್ನ, ದೀಪನ, ದಂತ್ಯ, ವ್ರಣರೋಪಕ, ಕ್ರಿಮಿಘ್ನ

ಖದಿರಃ ಶೀತಲೋ ದಂತ್ಯಃ ಕಂಡೂಕಾಸಾರುಚಿಪ್ರಣುತ್।
ತಿಕ್ತಃ ಕಷಾಯೋ ಮೇದೋಘ್ನಃ ಕೃಮಿಮೇಹಜ್ವರವ್ರಣಾನ್॥
ಶ್ವಿತ್ರಶೋಥಾಮಪಿತ್ತಾಸ್ರಪಾಂಡು ಕುಷ್ಠ ಕಫಾನ್‌ಹರೇತ್॥ (ಭಾವಪ್ರಕಾಶ)

ಎಂದರೆ ಕಗ್ಗಲಿಮರ ಶೀತ ವೀರ್ಯದಿಂದ ಕೂಡಿದೆ. ದಂತಕ್ಕೆ ಒಳ್ಳೆಯದು. ತಿಕ್ತ ಮತ್ತು ಕಷಾಯ ರಸದಿಂದ ಕೂಡಿದೆ. ತುರಿಕೆ, ಕೆಮ್ಮು, ಅರುಚಿ, ಪ್ರಮೇಹ, ಕೃಮಿ, ಜ್ವರ, ಶ್ವಿತ್ರ, ಶೋಥ, ವ್ರಣ, ಮೂಲವ್ಯಾಧಿ, ಕುಷ್ಠ ಮುಂತಾದ ರೋಗಗಳನ್ನು ನಿವಾರಿಸುತ್ತದೆ, ಕಫಹರವಾಗಿದೆ.

ಔಷಧಿ ಪ್ರಮಾಣ

ತೊಗಟೆ ಚೂರ್ಣ : 1–3 ಗ್ರಾಂ.

ಕಷಾಯ : 50–100 ಮಿ.ಲೀ.

ಮರದ ಮೋಟು : 0.5–1 ಗ್ರಾಂ.

ಖದಿರಾರಿಷ್ಟ : 50 ಮಿ.ಲೀ.

ಖದಿರಾದಿ ವಟಿ : 1 – 4

ಔಷಧಿ ಯೋಗಗಳು

- ಖದಿರಾರಿಷ್ಟ
- ಖದಿರಾದಿ ವಟಿ
- ಖದಿರಾದಿ ಕ್ವಾಥ
- ಖದಿರಾದಿ ತೈಲ
- ಇರಿಮೇದ ತೈಲ

ಔಷಧೀಯ ಉಪಯೋಗಗಳು

- ಕಗ್ಗಲಿ ಮರದ ಚೂರ್ಣವನ್ನು ಗಾಯದ ಮೇಲೆ ಉದುರಿಸಿ ಬಟ್ಟೆ ಕಟ್ಟುವುದರಿಂದ ಪೆಟ್ಟಿನಿಂದ ಗಾಯವಾಗಿ ರಕ್ತ ಸುರಿಯುತ್ತಿದ್ದರೆ ಹತೋಟಿಗೆ ಬರುತ್ತದೆ.
- ಮಲಬದ್ಧತೆ, ಭೇದಿ ಮತ್ತು ರಕ್ತಭೇದಿ ನಿವಾರಣೆಗೆ 5 ಗ್ರಾಂ.ನಷ್ಟು ಕಗ್ಗಲಿ ಚೂರ್ಣವನ್ನು ಒಂದು ಬಟ್ಟಲು ನೀರಿಗೆ ಹಾಕಿ ರಾತ್ರಿ ಇಡುವುದು, ಬೆಳಗ್ಗೆ ತಿಳಿ ನೀರನ್ನು ಶೋಧಿಸಿ ಸೇವಿಸುವುದು.
- ಭಗಂದರ ರೋಗಕ್ಕೆ ಖದಿರ ಮತ್ತು ತ್ರಿಫಲದ ಕಷಾಯಕ್ಕೆ ಉಪ್ಪು ಮತ್ತು ವಿಡಂಗದ ಚೂರ್ಣವನ್ನು ಬೆರೆಸಿ ಸೇವಿಸಬೇಕು.
- ಮೊಲೆತೊಟ್ಟು ನೋವು ಮತ್ತು ಬಿರುಕು ನಿವಾರಿಸಲು ಕಗ್ಗಲಿ ಮರದ ಚೂರ್ಣವನ್ನು ಅರ್ಧ ಬಟ್ಟಲು ನೀರಿಗೆ ಸೇರಿಸಿ ಕಷಾಯ ಮಾಡಿ ಮೊಲೆ ತೊಟ್ಟನ್ನು ತೊಳೆಯುವುದು.
- ಖದಿರದ ಕಷಾಯವನ್ನು ಸೇವಿಸುವುದರಿಂದ ಕುಷ್ಠರೋಗವು ನಿವಾರಣೆಯಾಗುತ್ತದೆ.
- ಖದಿರದ ಕಷಾಯವನ್ನು ಹಚ್ಚಲು, ಸ್ನಾನಕ್ಕೆ, ಸೇವಿಸಲು ಉಪಯೋಗಿಸಿದರೆ ಚರ್ಮವ್ಯಾಧಿಗಳೆಲ್ಲ ದೂರವಾಗುವುದು.
- ಖದಿರ ಮತ್ತು ಬೇಂಗದಿಂದ ತಯಾರಿಸಿದ ತಣ್ಣನೆಯ ನೀರನ್ನು ಕುಡಿಯುವುದರಿಂದ ಸಿಡುಬು (Pox) ರೋಗವು ನಿವಾರಣೆ.
- ಕಗ್ಗಲಿಮರದ ಮೋಟುವಿನ ಚೂರ್ಣವನ್ನು ವೈನ್ ಅಥವಾ ಮೊಸರು ಅಥವಾ ನೀರಿನಲ್ಲಿ ಬೆರೆಸಿ ಅದಕ್ಕೆ ತುಪ್ಪ ಮತ್ತು ಸೈಂಧವ ಲವಣ ಬೆರೆಸಿ ಸೇವಿಸುವುದರಿಂದ ಕೆಮ್ಮು ನಿವಾರಣೆಯಾಗುತ್ತದೆ.

- ಖದಿರದ ಕಷಾಯದಿಂದ ಬಾಯಿ ಮುಕ್ಕಳಿಸುವುದರಿಂದ ಹಲ್ಲಿನ ತೊಂದರೆ ನಿವಾರಣೆ.
- ರಸಾಯನಕ್ಕಾಗಿ ತ್ರಿಫಲ, ಖದಿರ ಕಷಾಯ ಮತ್ತು ಬೇಂಗಕ್ಕೆ ತುಪ್ಪ ಮತ್ತು ಜೇನುತುಪ್ಪ ಬೆರೆಸಿ ಸೇವಿಸುವುದು.
- ಖದಿರದ ಕಷಾಯದಿಂದ ಬಾಯಿ ಮುಕ್ಕಳಿಸುವುದರಿಂದ ಒರಟಾದ ಸ್ವರ ಮತ್ತು ಕೆಮ್ಮು ನಿವಾರಣೆ.

ಮಹತ್ವದ ಕರಿಮೆಣಸು

Piper nigrum, Linn.

Piperaceae





ನಮ್ಮ ಸುತ್ತಮುತ್ತಲೂ ಕಾಣಸಿಗುವ ಕರಿಮೆಣಸಿನ ಬಳ್ಳಿಯನ್ನು, ಕರಿಮೆಣಸನ್ನು ನೋಡದವರು ತೀರಾ ಕಡಿಮೆ. ಸಾಮಾನ್ಯವಾಗಿ ತೆಂಗಿನ ಮರ, ಅಡಿಕೆ ಮರ ಅಥವಾ ದೊಡ್ಡ ಗಿಡದ ಮೇಲೆ ಕರಿಮೆಣಸಿನ ಬಳ್ಳಿಯನ್ನು ಹಬ್ಬಿಸಿ ಕರಿಮೆಣಸನ್ನು ಬೆಳೆಯುತ್ತಾರೆ. ಕರಿಮೆಣಸಿನ ಬಳ್ಳಿಯು ಸುಮಾರು 35– 45 ವರ್ಷಗಳವರೆಗೆ ಬದುಕಿ ಫಲ ನೀಡುತ್ತಲೇ ಇರುತ್ತದೆ. ಆಯುರ್ವೇದದ ಮಹತ್ವದ ದ್ರವ್ಯಗಳಲ್ಲಿ ಕರಿಮೆಣಸು ಕೂಡ ಒಂದು ದ್ರವ್ಯ. ಇದು ಉಷ್ಣ ಗುಣದಿಂದ ಕೂಡಿದ್ದರೂ ನಾನಾ ಬಗೆಯ ರೋಗಗಳನ್ನು ನಿವಾರಿಸುವ ಮಹತ್ವಪೂರ್ಣ ಸತ್ವವನ್ನು ಒಳಗೊಂಡಿದೆ. ಕರಿಮೆಣಸಿನ ಸೇವನೆಯಿಂದ ಪಿತ್ತವೃದ್ಧಿಯಾಗುವುದಾದರೂ ಜೀರ್ಣಶಕ್ತಿಯನ್ನು ಹೆಚ್ಚಿಸುವ ವಿಶೇಷ ಗುಣವನ್ನು ಹೊಂದಿದೆ. ಔಷಧ ತಯಾರಿಕೆಗೆ ಮಾತ್ರವಲ್ಲದೇ ಕರಿಮೆಣಸನ್ನು ದಿನನಿತ್ಯದ ಸಾಂಬಾರ ವಸ್ತುವಾಗಿಯೂ ಅನೇಕ ತರಹದ ಪದಾರ್ಥಗಳಿಗೆ ಉಪಯೋಗಿಸುವುದನ್ನು ನಾವು ಕಾಣಬಹುದು. ವೇದದ ಪ್ರಕಾರ ಬ್ರಾಹ್ಮಣರು ಕರಿಮೆಣಸನ್ನು ಮಾರಾಟ ಮಾಡಬಾರದು ಎಂಬ ವ್ಯಾಖ್ಯಾನವೂ ಇದೆ. ಸಾಮಾನ್ಯವಾಗಿ ಹಳ್ಳಿಯಲ್ಲಿ ನಾವು ಕೆಮ್ಮು, ಕಫದಿಂದ ಬಂದ ಗಂಟಲುನೋವು ಮುಂತಾದ ತೊಂದರೆಗೆ ಕರಿಮೆಣಸಿನ ಕಷಾಯ ಕುಡಿಯುವುದನ್ನು ಕಾಣುತ್ತೇವೆ. ಸತ್ಯ ನಾರಾಯಣ ದೇವರ ಪೂಜೆ ಅಥವಾ ದೇವರ

ಪೂಜೆಯ ದಿವಸ ಕರಿಮೆಣಸಿನಿಂದ ತಯಾರಿಸಿದ ಪಾನಕವನ್ನು ಕುಡಿಯುವುದು ಹಿಂದಿನಿಂದ ಈಗಲೂ ಬಂದಿರುವ ರೂಢಿ.

ಬಹು ಭಾಷಾ ಹೆಸರುಗಳು

ಕನ್ನಡ : ಕರಿಮೆಣಸು, ಒಳ್ಳೆಮೆಣಸು

ಸಂಸ್ಕೃತ : ಮರೀಚ

ತುಳು : ಎಡ್ಡೆಮುಂಚಿ

ಹಿಂದಿ : ಕಾಲೀ ಮಿರ್ಚಿ

ಇಂಗ್ಲೀಷ್ : ಬ್ಲ್ಯಾಕ್ ಪೆಪ್ಪರ್

ಪರ್ಯಾಯ ಪದಗಳು

ಮರೀಚ, ಸವೃತ್ತ, ಊಷಣ, ವೆಲ್ಲಜ, ಯುವನೇಷ್ಟ, ವೃತ್ತಫಲಾ, ಶಾಕಾಂಗ, ಕೃಷ್ಣವಂತರೀ, ಕಟುಕ, ಶ್ಯಾಮ, ಕ್ರಿಮಿಹರ.

ದುಂಡಗಿನ ಫಲ ಹೊಂದಿರುವುದರಿಂದಲೇ ಸವೃತ್ತ ಎಂದು ಕರೆಯುತ್ತಾರೆ.

ದ್ರವ್ಯದ ವರ್ಣನೆ

ಕರಿಮೆಣಸು ಉಪಶಾಖೆಗಳಿಂದ ಕೂಡಿದ, ಮೃದುವಾದ ಬಳ್ಳಿ. ಎಲೆಯು ಅಗಲವಾಗಿ ಅಂಡಾಕಾರದಿಂದ ಕೂಡಿದೆ. ಇದರ ಎಲೆಗಳು ವೀಳ್ಯದೆಲೆಗೆ ಹೋಲುತ್ತವೆ. ಎಲೆಯ ತುದಿಯು ಚೂಪಾಗಿರುತ್ತದೆ. ಎಲೆಯಲ್ಲಿ ಸರಿಯಾಗಿ ಕಾಣುವ 5 ರಿಂದ 9 ನಾರುಗಳಿವೆ. ತೆಳ್ಳನೆಯ ಹೂವು ಉಭಯಲಿಂಗ ಅಥವಾ ಏಕಲಿಂಗದಿಂದ ಕೂಡಿದೆ. ಇದರ ಬಳ್ಳಿಯಲ್ಲಿ ವೃತ್ತಾಕಾರದಿಂದ ಕೂಡಿದ ಗೊಂಚಲು ಹಣ್ಣುಗಳು ಬೆಳೆಯುತ್ತವೆ. ಈ ಸಸ್ಯವು ಶರತ್ಕಾಲದಲ್ಲಿ (ಮಾರ್ಚ್–ಜೂನ್) ತಿಂಗಳಿನಲ್ಲಿ ಫಲ ನೀಡುತ್ತದೆ. ಕಾಯಿಗೆ ಹಸಿರು ಬಣ್ಣ, ಹಣ್ಣಾದಾಗ ಕಪ್ಪು ಬಣ್ಣಕ್ಕೆ ತಿರುಗುತ್ತದೆ. ಸಾಮಾನ್ಯವಾಗಿ ಉಷ್ಣ ಮತ್ತು ತೇವವಿರುವ ಪ್ರದೇಶಗಳಲ್ಲಿ ಬೆಳೆಯುವ ಈ ಸಸ್ಯವು ಭಾರತ, ಮಲೇಶಿಯಾ, ಇಂಡೋನೇಶಿಯಾ, ಸಿಲೋನ್‌ಮುಂತಾದ ದೇಶಗಳಲ್ಲಿ ಬೆಳೆಯುತ್ತದೆ. ಈ ಸಸ್ಯವು ಹೂವನ್ನು ಮಳೆಗಾಲದಲ್ಲಿ, ಹಣ್ಣನ್ನು ಶರತ್ಕಾಲದಲ್ಲಿ ಬಿಡುತ್ತದೆ.

ವಿಧಗಳು

ಕರಿಮೆಣಸಿನಲ್ಲಿ ಎರಡು ಬಗೆಗಳಿವೆ. ಅವು

- ಕೃಷ್ಣ ಮರೀಚ
- ಶ್ವೇತ ಮರೀಚ

ಕರಿಮೆಣಸಿನ ಸಿಪ್ಪೆಯನ್ನು ತೆಗೆದರೆ ಒಳಗೆ ದೊರಕುವ ಬಿಳಿ ಬಣ್ಣದ ಬೀಜವನ್ನು ಶ್ವೇತ ಮರೀಚ ಎಂದು ಗುರುತಿಸಲಾಗಿದೆ.

ಉಪಯುಕ್ತ ಅಂಗ

- ಹಣ್ಣು
- ಬೇರು

ದ್ರವ್ಯದ ಗುಣಧರ್ಮಗಳು

ರಸ : ಕಟು

ಗುಣ : ಲಘು, ತೀಕ್ಷ್ಣ

ವೀರ್ಯ : ಉಷ್ಣ

ವಿಪಾಕ : ಕಟು

ಕರ್ಮ : ಕಫವಾತಹರ, ಅವೃಷ್ಯ, ದೀಪನ, ಪಾಚನ

ಮರೀಚಂ ಕಟುಕಂ ತೀಕ್ಷ್ಣಂ ದೀಪನಂ ಕಫವಾತಜಿತ್॥
ಉಷ್ಣಂ ಪಿತ್ತಕರಂ ರೂಕ್ಷಂ ಶ್ವಾಸಶೂಲ ಕೃಮೀನ್‌ಹರೇತ್॥ (ಭಾವಪ್ರಕಾಶ)

ಎಂದರೆ ಕರಿಮೆಣಸು ಕಟು ರಸದಿಂದ ಕೂಡಿದೆ. ತೀಕ್ಷ್ಣ ಮತ್ತು ರೂಕ್ಷ ಗುಣದಿಂದ ಕೂಡಿದೆ. ದೀಪನವಾಗಿದೆ. ಕಫ ಮತ್ತು ವಾತಹರವಾಗಿದೆ. ಉಷ್ಣ ವೀರ್ಯದಿಂದ ಕೂಡಿದೆ. ಪಿತ್ತಕರವಾಗಿದೆ. ಶ್ವಾಸ, ಶೂಲ, ಕ್ರಿಮಿರೋಗಗಳನ್ನು ನಿವಾರಿಸುತ್ತದೆ.

ಔಷಧಿ ಪ್ರಮಾಣ

ಚೂರ್ಣ : 0.5–1 ಗ್ರಾಂ

ಔಷಧೀಯ ಯೋಗಗಳು

- ಮಹಾಮರೀಚ್ಯಾದಿ ತೈಲ
- ಮರೀಚ್ಯಾದಿ ತೈಲ
- ಅಗ್ನಿತುಂಡಿ ವಟಿ
- ಮರೀಚ್ಯಾದಿ ಚೂರ್ಣ
- ಮರೀಚ್ಯಾದಿ ಘೃತ

ಔಷಧೀಯ ಉಪಯೋಗಗಳು

- ಕರಿಮೆಣಸಿನ ಪುಡಿಗೆ, ಸಕ್ಕರೆ, ತುಪ್ಪ ಮತ್ತು ಜೇನುತುಪ್ಪ ಬೆರೆಸಿ ಸೇವಿಸುವುದರಿಂದ ಕೆಮ್ಮು ರೋಗವು ನಿವಾರಣೆಯಾಗುತ್ತದೆ.


- 10 ಕರಿಮೆಣಸಿನ ಕಾಳನ್ನು ವೀಳ್ಯದೆಲೆಯಲ್ಲಿಟ್ಟು ಎರಡು ತಿಂಗಳು ಸೇವಿಸುವುದರ ಜೊತೆಗೆ ತಂಪು ನೀರನ್ನು ಕುಡಿಯುವುದರಿಂದ ಸ್ಥೂಲ ರೋಗದಿಂದ ಬಳಲುತ್ತಿರುವವರಿಗೆ ಒಳ್ಳೆಯದು.
- ಕರಿಮೆಣಸಿನ ಪುಡಿಯನ್ನು ಮಜ್ಜಿಗೆಯೊಂದಿಗೆ ಸೇವಿಸುವುದರಿಂದ ಗ್ರಹಣೀ ರೋಗವು ನಿವಾರಣೆ.
- ಕರಿಮೆಣಸಿನ ಪುಡಿ ಅಥವಾ ಎಣ್ಣೆಯನ್ನು ಚರ್ಮಕ್ಕೆ ಹಚ್ಚುವುದರಿಂದ ಶ್ವಿತ್ರ, ಕಿಲಾಸ, ಪಾಮಾ ಮುಂತಾದ ಚರ್ಮವ್ಯಾಧಿಗಳು ನಿವಾರಣೆಯಾಗುತ್ತದೆ.
- ಹಲ್ಲು ನೋವಿನ ತೊಂದರೆಯಿಂದ ಬಳಲುತ್ತಿರುವವರು ಕರಿಮೆಣಸಿನ ಪುಡಿಯಿಂದ ಪ್ರತಿನಿತ್ಯವು ಹಲ್ಲನ್ನು ಉಜ್ಜಬೇಕು.
- ತುಪ್ಪವೂ ಸರಿಯಾಗಿ ಪಚನವಾಗಲು ಕರಿಮೆಣಸಿನ ಪುಡಿಯನ್ನು ಸೇವಿಸಬೇಕು.
- ಕರಿಮೆಣಸಿನ ಪುಡಿಯನ್ನು ಬೆಣ್ಣೆಯಲ್ಲಿ ಸೇವಿಸುವುದರಿಂದ ಮಕ್ಕಳ ಊತವು ಕಡಿಮೆಯಾಗುತ್ತದೆ.
- ಉಗುರು ಸುತ್ತು ರೋಗದಿಂದ ಬಳಲುತ್ತಿರುವವರು ಕರಿಮೆಣಸನ್ನು ಎಮ್ಮೆಯ ಹಾಲಿನಲ್ಲಿ ತೇಯ್ದು, ಉಗುರ ಸುತ್ತಿನ ಸ್ಥಳಕ್ಕೆ ಹಚ್ಚಬೇಕು.
- ಮೊಡವೆಗೆ ಕರಿಮೆಣಸನ್ನು ನಿಂಬೆರಸದಲ್ಲಿ ಅರೆದು ಹಚ್ಚಬೇಕು.
- ಒಂದು ಚಮಚ ಕರಿಮೆಣಸಿನ ಪುಡಿಗೆ ತುಳಸಿರಸ ಮತ್ತು ಜೇನುತುಪ್ಪ ಸಮ ಪ್ರಮಾಣದಲ್ಲಿ ಬೆರೆಸಿ ಸೇವಿಸುವುದರಿಂದ ಜ್ವರ ರೋಗವು ನಿವಾರಣೆ.
- ಸ್ವಲ್ಪ ಕರಿಮೆಣಸಿನ ಚೂರ್ಣಕ್ಕೆ, ಸ್ವಲ್ಪ ತುಪ್ಪ ಬೆರೆಸಿ ಸೇವಿಸುವುದರಿಂದ ಸ್ವರ ಭಂಗಕ್ಕೆ ಒಳ್ಳೆಯದು.
- ಕರಿಮೆಣಸಿನ ಪುಡಿಗೆ ಉಪ್ಪು, ತುಪ್ಪ ಸೇರಿಸಿ ಅನ್ನದೊಂದಿಗೆ ಸೇವಿಸುವುದರಿಂದ ಹೊಟ್ಟೆನೋವು ನಿವಾರಣೆಯಾಗುತ್ತದೆ.
- ಬಿಸಿ ಹಾಲಿಗೆ, ಕಾಳು ಮೆಣಸಿನ ಪುಡಿ ಮತ್ತು ಕಲ್ಲುಸಕ್ಕರೆ ಸೇರಿಸಿ ಕುಡಿಯುವುದರಿಂದ ನೆಗಡಿ ಕಡಿಮೆಯಾಗುತ್ತದೆ.
- ಕರಿಮೆಣಸಿನ ಪುಡಿ ಮತ್ತು ಬೆಲ್ಲವನ್ನು ಮೊಸರು ಅನ್ನಕ್ಕೆ ಬೆರೆಸಿ ಊಟ ಮಾಡುವುದರಿಂದ ಮೂತ್ರದ್ವಾರ ಮತ್ತು ಗುದದ್ವಾರದ ಉರಿ ನಿವಾರಣೆ.
- ಪ್ರಜ್ಞೆ ತಪ್ಪಿ ಬಿದ್ದವರು ಚೇತರಿಸಿಕೊಳ್ಳಬೇಕಾದರೆ ಕರಿಮೆಣಸು ಪುಡಿಯನ್ನು ಮೂಗಿಗೆ ಹಿಡಿದು ನಶ್ಯದಂತೆ ಏರಿಸಬೇಕು.
- ಕೃಷ್ಣ ತುಳಸಿಯ ರಸದಲ್ಲಿ ಕರಿಮೆಣಸಿನ ಚೂರ್ಣವನ್ನು ಬೆರೆಸಿ ಸೇವಿಸಿದರೆ ವಿಷಮ ಜ್ವರವು ನಿವಾರಣೆಯಾಗುತ್ತದೆ.

ಕಹಿಯಲ್ಲದ ಕಹಿಬೇವು

Azadirachta indica, A.Juss.

Meliaceae







ರುಚಿಗೆ ಕಹಿಯಾದರೂ, ದೇಹದ ರೋಗವನ್ನು ನಿವಾರಿಸಿ ಆರೋಗ್ಯ ಕಾಪಾಡುವ ಕಹಿ ಬೇವಿನ ಪರಿಚಯವು ಸಾಮಾನ್ಯವಾಗಿ ಎಲ್ಲರಿಗೂ ಇದ್ದೇ, ಇರುತ್ತದೆ. ಅದು ಅಷ್ಟು ಪ್ರಮುಖ ದ್ರವ್ಯವೂ ಹೌದು. ಬರ್ಮಾ ಮೂಲದ ಬೇವಿನ ಮರವು ರಾಜ್ಯದ ಎಲ್ಲ ಬಗೆಯ ಸಸ್ಯಾವರಣದಲ್ಲಿ ಬೆಳೆಯುತ್ತದೆ. ಸಾಲು ಮರವಾಗಿಯೂ ಸಹ ಇದನ್ನು ಅಲ್ಲಲ್ಲಿ ಬೆಳೆಸಲಾಗುತ್ತಿದೆ. ಒಮ್ಮೆ ಅಮೃತವನ್ನು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವಾಗ ಅದರ ಹನಿಯು ಈ ಮರದ ಮೇಲೆ ಬಿತ್ತು, ಇದರಿಂದ ಅದಕ್ಕೆ ರೋಗನಾಶ ಮಾಡುವ ಶಕ್ತಿಯೂ ಬಂತೆಂದು ಹೇಳುತ್ತಾರೆ. ಕಷ್ಟಗಳ ಸಂಕೇತವಾಗಿ ತಿನ್ನುವ ಬೇವು ಆರೋಗ್ಯವನ್ನು ನೀಡುತ್ತದೆ. ಚರ್ಮರೋಗಗಳಲ್ಲಿಯೂ ಇದರ ಕಾರ್ಯ ಅದ್ವಿತೀಯ. ಬೇವಿನ ಸೊಪ್ಪು ಪೂಜಾ ವಸ್ತುವಾಗಿ ಮತ್ತು ಔಷಧಿಯಾಗಿ ನಮ್ಮ ಜೀವನದಲ್ಲಿ ಹಾಸುಹೊಕ್ಕಾಗಿದೆ. ವೈದ್ಯಕೀಯದಲ್ಲಿ ಬೇವಿನ ಬೇರು, ತೊಗಟೆ ಎಲೆ, ಹೂವು, ಕಾಯಿ ನಾನಾ ವಿಧದ ರೋಗಗಳಿಗೆ ದಿವ್ಯೌಷಧಿಯೆಂದು ವಿವರಿಸಲ್ಪಟ್ಟಿದೆ. ನಮ್ಮ ಸುತ್ತಮುತ್ತ ಇಂತಹ ಅನೇಕ ಅದ್ಭುತ ಮಹಿಮೆಯ ದ್ರವ್ಯಗಳಿದ್ದು, ಅದರ ಔಷಧಿ ಗುಣಗಳನ್ನು ಮರೆತು ಅಥವಾ ತಿಳಿಯದೆ ಅದನ್ನು ನಾಶ ಮಾಡುವ ಕಾಯಕಕ್ಕೆ ಹೊರಟಿರುವುದು ಬೇಸರದ ಸಂಗತಿ.

ಬಹು ಭಾಷಾ ಹೆಸರುಗಳು

ಕನ್ನಡ : ಕಹಿಬೇವು, ಬೇವಿನ ಮರ

ಸಂಸ್ಕೃತ : ನಿಂಬ

ತುಳು : ಬೇವುದ ಮರ

ಹಿಂದಿ : ನೀಮ್

ಇಂಗ್ಲೀಷ್ : ನೀಮ್‌ಟ್ರೀ

ಪರ್ಯಾಯ ಪದಗಳು

ನಿಂಬ, ಅರಿಷ್ಟ, ಪಿಚುಮರ್ದ, ಪಿಚುಮಂದ, ಯುವನೇಷ್ಠ, ಸುಭದ್ರ, ಪ್ರಭದ್ರ, ನೇತಾ, ಸರ್ವತೋಭದ್ರ, ಹಿಂಗುನಿರ್ಯಾಸ, ಸುಖಿಪ್ರಿಯಾ, ಸುತಿಕ್ತಾ, ಪೀತಸಾರ, ಶೀತ, ನಿಂಬಕ, ಛರ್ದಿಘ್ನ, ಸುಮನ.

ಕುಷ್ಠರೋಗವನ್ನು ನಿವಾರಿಸುವ ಶಕ್ತಿಯನ್ನು ಹೊಂದಿರುವುದರಿಂದ ಈ ದ್ರವ್ಯವನ್ನು ಸಂಸ್ಕೃತದಲ್ಲಿ 'ಪಿಚುಮರ್ದ' ಎಂಬುದಾಗಿ ಕರೆದಿದ್ದಾರೆ.

ದ್ರವ್ಯದ ವರ್ಣನೆ

ಕಹಿಬೇವಿನ ಮರವು ಸುಮಾರು 10–18 ಮೀಟರ್‌ನಷ್ಟು ಎತ್ತರವಾಗಿ ಬೆಳೆಯುತ್ತದೆ. ಮರದ ಮೋಟು (ಟ್ರಂಕ್) ಉದ್ದವಾಗಿದ್ದು, ರೆಂಬೆಗಳಿಂದ ಕೂಡಿದೆ. ತೊಗಟೆಯು ದಪ್ಪವಾಗಿ, ಕಪ್ಪಾಗಿ ಒರಟಾಗಿದೆ. ತೊಗಟೆಯಿಂದ ನಿರ್ಯಾಸವು ಹೊರಬರುತ್ತದೆ. ಕಣ್ಣಿನ ಆಕಾರದ ಎಲೆಗಳು ಚೂಪಾಗಿ ಇದ್ದು, ತುದಿಯಲ್ಲಿ ಕತ್ತರಿಸಿದ ಹಾಗೆ ಕಾಣುತ್ತದೆ. ವಸಂತ ಋತುವಿನಲ್ಲಿ ಎಲೆಗಳು ಉದುರಿ, ಹೊಸತಾಗಿ ಕೆಂಪು ಚಿಗುರು ಚಿಗುರುತ್ತದೆ. ಹೂವು ಚಿಕ್ಕದಾಗಿ ಬಿಳಿ ಬಣ್ಣದಿಂದ ಕೂಡಿದೆ. ಕಾಯಿಯು ದಪ್ಪವಾಗಿ ಹಸಿರು ಬಣ್ಣದಿಂದ ಕೂಡಿದೆ. ಕಾಯಿಯಲ್ಲಿ ಒಂದು ಬೀಜವಿದೆ. ಎಲೆಯು ಚಳಿಗಾಲದಲ್ಲಿ ಉದುರುತ್ತದೆ. ಈ ದ್ರವ್ಯವು ಹೂವು ಮತ್ತು ಕಾಯಿಯನ್ನು ಮಳೆಗಾಲದ ಆರಂಭ ಸಮಯದಲ್ಲಿ ಬಿಡುತ್ತದೆ. ಸಾಮಾನ್ಯವಾಗಿ ಭಾರತದೆಲ್ಲೆಡೆ ಬೆಳೆಯುವ ಈ ದ್ರವ್ಯವು ಹೆಚ್ಚಾಗಿ ಒಣಪ್ರದೇಶದಲ್ಲಿ ಬೆಳೆಯುತ್ತದೆ.

ವಿಧಗಳು

ಬೇವಿನಲ್ಲಿ ಮೂರು ಪ್ರಭೇದಗಳಿವೆ. ಅವು

- ನಿಂಬ (Azadirachta indica)
- ಮಹಾನಿಂಬ (Melia azadirachta)
- ಪರ್ವತ ನಿಂಬ (Ailanthus excelsa)

ಉಪಯುಕ್ತ ಅಂಗಗಳು

- ಬೇರಿನ ತೊಗಟೆ
- ಕಾಂಡದ ತೊಗಟೆ
- ನಿರ್ಯಾಸ
- ಹೂವು
- ಎಲೆ
- ಬೀಜ
- ಬೀಜದೆಣ್ಣೆ

ದ್ರವ್ಯದ ಗುಣಧರ್ಮಗಳು

ರಸ : ತಿಕ್ತ, ಕಷಾಯ

ಗುಣ : ಲಘು, ರೂಕ್ಷ

ವೀರ್ಯ : ಶೀತ

ವಿಪಾಕ : ಕಟು

ಕರ್ಮ : ಕಫ ಪಿತ್ತಹರ, ದೀಪನ, ಗ್ರಾಹೀ, ಕ್ರೀಮಿಘ್ನ, ನೇತ್ರ್ಯ, ವಿಷಘ್ನ

ನಿಂಬಫಲಂ ರಸೇ ತಿಕ್ತಂ ಪಾಕೇ ತು ಕಟು ಭೇದನಂ।
ಸ್ನಿಗ್ಧಂ ಲಘೂಷ್ಣಂ ಕುಷ್ಠಘ್ನಂ ಗುಲ್ಮಾರ್ಶಃ ಕ್ರಮಿ ಭೇದನುತ್॥ (ಭಾವಪ್ರಕಾಶ)

ಎಂದರೆ ನಿಂಬೆಹಣ್ಣು ರಸದಲ್ಲಿ ತಿಕ್ತ, ವಿಪಾಕದಲ್ಲಿ ಕಟು, ಲಘು ಮತ್ತು ಸ್ನಿಗ್ಧ ಗುಣಗಳಿಂದ ಕೂಡಿದೆ. ಉಷ್ಣವೀರ್ಯದಿಂದ ಕೂಡಿದೆ. ಕುಷ್ಠ ಗುಲ್ಮ, ಮೂಲವ್ಯಾಧಿ ಕ್ರಿಮಿರೋಗಗಳನ್ನು ನಿವಾರಿಸುತ್ತದೆ.

ಔಷಧಿ ಪ್ರಮಾಣ

ತೊಗಟೆ ಚೂರ್ಣ : 2–4 ಗ್ರಾಂ

ಸ್ವರಸ : 10–20 ಮಿ.ಲೀ.

ಬೀಜದೆಣ್ಣೆ : 5–10 ಬಿಂದು

ಎಲೆರಸ : 10 ಮಿ.ಲೀ.

ತೊಗಟೆ ಕಷಾಯ : 50 ಮಿ.ಲೀ.

ಔಷಧೀಯ ಯೋಗಗಳು

- ನಿಂಬಾದಿ ತೈಲಮ್
- ನಿಂಬಾದಿ ಚೂರ್ಣ
- ನಿಂಬಾರಿಷ್ಟ
- ಆರೋಗ್ಯ ವರ್ಧಿನಿ ರಸ
- ಪಂಚನಿಂಬ ಚೂರ್ಣ
- ಪಂಚತಿಕ್ತ ಗುಗ್ಗುಲು ಘೃತ
- ನಿಂಬಹರಿದ್ರಾಖಂಡ

ಔಷಧೀಯ ಉಪಯೋಗಗಳು

- ಬೇವಿನ ಕಡ್ಡಿಯಲ್ಲಿ ಹಲ್ಲುಜ್ಜುವುದರಿಂದ ಬಾಯಿಯ ದುರ್ಗಂಧ ನಿವಾರಣೆಯಾಗುತ್ತದೆ.
- ನಿದ್ರೆ ಸರಿಯಾಗಿ ಬಾರದಿದ್ದರೆ ಒಂದು ಹಿಡಿ ಹಸಿಬೇವಿನ ಸೊಪ್ಪನ್ನು ತಂದು ಕಲ್ಲಿನಲ್ಲಿ ಹಾಕಿ ಹಾಲು ಸೇರಿಸಿ ನುಣ್ಣಗೆ ಅರೆಯಿರಿ ಮತ್ತು ಮಲಗುವುದಕ್ಕೆ ಮುಂಚೆ ಎರಡು ಅಂಗಾಲುಗಳಿಗೆ ಲೇಪಿಸಿ ತಿಕ್ಕಿರಿ.
- ಪುರಾತನ ಬೇವಿನ ವೃಕ್ಷದ ತೊಗಟೆಯನ್ನು ನೀರಿನಲ್ಲಿ ತಿಕ್ಕಿ ಲೇಪಿಸಿದರೆ ಚರ್ಮರೋಗವು ಗುಣವಾಗುವುದು.
- ಬೇವಿನ ಎಲೆಗೆ ಅರಸಿನ ಸೇರಿಸಿ ಅರೆದು ಮೈಗೆ ಹಚ್ಚಿಕೊಂಡು ಮಲಗಿದರೆ ಸೊಳ್ಳೆಗಳು ಕಡಿಯುವುದಿಲ್ಲ.
- ಬೇವಿನ ತೊಗಟೆಯ ಕಷಾಯ 1/4 ಲೋಟ ತೆಗೆದುಕೊಂಡು ಅದಕ್ಕೆ 5 ಗುಂಜಾ ಕಾಡುಜೀರಿಗೆ ಚೂರ್ಣ ಸೇರಿಸಿ ಕುಡಿಯುವುದರಿಂದ ಮಲೇರಿಯಾ ಜ್ವರ ವಾಸಿಯಾಗುತ್ತದೆ.
- ಆಕಳ ಹಾಲಿನಲ್ಲಿ ಎಲೆಗಳನ್ನು ಅರೆದು 90 ದಿನಗಳವರೆಗೆ ಸೇವಿಸುವುದರಿಂದ ರಕ್ತಪಿತ್ತ ಮತ್ತು ಕುಷ್ಠರೋಗವು ಗುಣವಾಗುವುದು.
- ಬೇವಿನ ಎಲೆಯ ರಸಕ್ಕೆ ಜೇನು ಸೇರಿಸಿ ವಾಂತಿ ಮಾಡಿಸುವುದರಿಂದ ಉರಿಯುಕ್ತ ಜ್ವರವು ನಿವಾರಣೆಯಾಗುತ್ತದೆ.
- ಬೇವಿನ ಎಲೆಯ ರಸವನ್ನು ಜೇನಿನೊಂದಿಗೆ ಸೇವಿಸುವುದರಿಂದ ಗಾಯವು ನಿವಾರಣೆಯಾಗುತ್ತದೆ.
- ಕಹಿಬೇವು ಮತ್ತು ಪಟೋಲದ ಕಷಾಯಕ್ಕೆ ಜೇನುತುಪ್ಪ ಸೇರಿಸಿ ಸೇವಿಸಿದರೆ ವಾತರಕ್ತರೋಗವು ನಿವಾರಣೆಯಾಗುತ್ತದೆ.


- ಬೇವಿನ ರಸವನ್ನು ಚರ್ಮಕ್ಕೆ ಹಚ್ಚುವುದರಿಂದ ಚರ್ಮರೋಗವು ನಿವಾರಣೆ.
- ಬೇವಿನ ಕಷಾಯದಿಂದ ಗಾಯವನ್ನು ತೊಳೆಯುವುದರಿಂದ ಗಾಯವು ನಿವಾರಣೆಯಾಗುತ್ತದೆ.
- ಬೇವು ಮತ್ತು ಅಮೃತಬಳ್ಳಿಯನ್ನು ವೈನ್‌ನೊಂದಿಗೆ ಸೇವನೆ ಮಾಡುವುದರಿಂದ ಕಫಪ್ರದರ ರೋಗವು ನಿವಾರಿಸಲ್ಪಡುತ್ತದೆ.
- ಬೇವಿನ ಕಷಾಯಕ್ಕೆ ಜೇನುತುಪ್ಪ ಬೆರೆಸಿ ಬೆಳಗ್ಗಿನ ಜಾವ ಸೇವಿಸುವುದರಿಂದ ಕಾಮಾಲೆ ರೋಗವು ನಾಶವಾಗುತ್ತದೆ.
- ಬೇವಿನ ಸೊಪ್ಪಿನ ರಸಕ್ಕೆ ಜೇನುತುಪ್ಪ ಬೆರೆಸಿ ಬಿಸಿ ಮಾಡಿ, ಬಾಯಿಗೆ ಹಾಕಿಕೊಂಡು ಬಾಯಿ ಮುಕ್ಕಳಿಸುತ್ತಿದ್ದರೆ ಗಂಟಲು ಹುಣ್ಣು ವಾಸಿಯಾಗುತ್ತದೆ.

ಹೊಟ್ಟೆ ಅರ್ಧ ಹಿಡಿಯುವಷ್ಟು
ಊಟ ಮಾಡಬೇಕು

ಕುಮಾರಿಯಂತೆ ಪ್ರಜ್ವಲಿಸುವ ಕುಮಾರೀ

Aloe vera, Linn.
Liliaceae







ಕುಮಾರಿಯಂತೆ ಮೃದುವಾದ ಎಲೆಗಳನ್ನು ಹೊಂದಿರುವ ಕುಮಾರಿಯು ಭಾರತ ಮತ್ತು ಆಫ್ರಿಕಾದಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಈ ಸಸ್ಯದ ವಿವರಣೆಯನ್ನು ಬೃಹತ್‌ತ್ರಯಿಯಲ್ಲಿ ಕಾಣದಿದ್ದರೂ, ಕೈಯ್ಯದೇವನು ತನ್ನ ನಿಘಂಟಿನಲ್ಲಿ ಕುಮಾರಿಯ ವೃಷ್ಯ ಮತ್ತು ರಸಾಯನ ಗುಣಗಳನ್ನು ವಿವರಿಸಿದ್ದಾನೆ. ಕುಮಾರೀ ಒಂದು ಅಪರೂಪದ ದ್ರವ್ಯ. ಅತ್ತ ಗಿಡವೂ ಅಲ್ಲ, ಇತ್ತ ಬಳ್ಳಿಯೂ ಅಲ್ಲ. ಭಾರತದ ಎಲ್ಲ ರಾಜ್ಯಗಳಲ್ಲಿ ಕುಮಾರಿಯನ್ನು ಬೆಳೆದರೂ ಇದರ ಪರಿಚಯ ಅಥವಾ ಇದನ್ನು ನೋಡಿದವರು ಮಾತ್ರ ಬಹಳ ಕಡಿಮೆ. ಮಾರುಕಟ್ಟೆಯಲ್ಲಿ ಈಗ ಕುಮಾರಿಯನ್ನು ಮಾರಾಟ ಮಾಡುವುದನ್ನು ನಾವು ನೋಡಬಹುದು. ಶೋಢಲನು ಪ್ರಪ್ರಥಮವಾಗಿ ಕುಮಾರೀ ದ್ರವ್ಯದ ವಿವರಣೆಯನ್ನು ನಿಘಂಟಿನಲ್ಲಿ ವಿವರಿಸಿದ್ದನು. ಕುಮಾರಿಯು ಕೈಯ್ಯದೇವನ ನಿಘಂಟಿನಲ್ಲಿ ಕೊನೆಯ ದ್ರವ್ಯವಾಗಿ ವಿವರಿಸಲ್ಪಟ್ಟದೆ. ಕೈಯ್ಯದೇವನ ಪ್ರಕಾರ ಕುಮಾರಿ ವೃಷ್ಯ ಮತ್ತು ರಸಾಯನ ಗುಣದಿಂದ ಕೂಡಿದೆ. ಮಾತ್ರವಲ್ಲದೇ ಇದರ ಹೂವು ಕ್ರಿಮಿಹರ ಮತ್ತು ಗುರು ಗುಣದ್ದಾಗಿದೆ.

ಬಹು ಭಾಷಾ ಹೆಸರುಗಳು

ಕನ್ನಡ : ಲೋಳೆ ಸರ

ಸಂಸ್ಕೃತ : ಕುಮಾರೀ

ತುಳು : ಲೋಳಿಸರ

ಹಿಂದಿ : ಘೀಕುವಾರ್

ಇಂಗ್ಲೀಷ್ : ಇಂಡಿಯನ್ ಅಲೋ

ಪರ್ಯಾಯ ಪದಗಳು

ಕುಮಾರೀ, ಘೃತಕುಮಾರೀ, ಕನ್ಯಾ, ಗೃಹಕನ್ಯಾ, ಘೃತಕುಮಾರಿಕಾ, ವಿಪುಲಸ್ರಾವಾ, ಸ್ಥೂಲಾದಲಾ, ದೀರ್ಘಪತ್ರಾ, ಮಂಡಲಾ, ಗೃಹಕನ್ಯಾ, ಕನ್ಯಾ, ಅಜರಾ, ವೀರಾ, ತರುಣೀ, ರಾಮಾ, ಕಪಿಲಾ, ಅಕ್ಷಯಕಾರಕಾ, ಅತಿಪಿತ್ತಲಾ. ಕುಮಾರಿಯರಸವು ತುಪ್ಪದಂತೆ ಇರುವುದರಿಂದ ಇದನ್ನು 'ಘೃತ ಕುಮಾರಿ' ಎಂದೂ, ಕನ್ಯಾರೋಗದಲ್ಲಿ ಉಪಯೋಗಕ್ಕೆ ಬರುವುದರಿಂದ 'ಕುಮಾರೀ' ಎಂದೂ, ಅಂಟು ದ್ರವವಿರುವುದರಿಂದ ಲೋಳೆಸರ ಎಂದೂ, ತಿರುಳು ಮೃದುವಾಗಿರುವುದರಿಂದ ಇದನ್ನು 'ಕನ್ಯಾ' ಎಂದೂ ಸಂಸ್ಕೃತದಲ್ಲಿ ಕರೆಯುತ್ತಾರೆ.

ದ್ರವ್ಯದ ವರ್ಣನೆ

ಕುಮಾರೀ ಗಿಡವು ಸುಮಾರು 30–60 ಸೆಂ.ಮೀ. ನಷ್ಟು ಎತ್ತರಕ್ಕೆ ಬೆಳೆಯುತ್ತದೆ. ಎಲೆಯು ದಪ್ಪವಾಗಿ 1–2 ಅಡಿ ಉದ್ದವಾಗಿ ರಸಗಳಿಂದ ಕೂಡಿದೆ. ಎಲೆಯ ಬದಿಯು ಮುಳ್ಳುಗಳಿಂದ ಕೂಡಿದೆ. ಗಿಡವು ಬಲಿತಾಗ ಒಂದು ನೇರವಾದ ಕಾಂಡವು ನಡುವಿನಿಂದ ಹುಟ್ಟಿ, ಕೆಂಪು ಬಣ್ಣದ ಹೂಗೊಂಚಲಿನಿಂದ ಕೂಡಿರುತ್ತದೆ. ಈ ದ್ರವ್ಯವು ಹೂವು ಮತ್ತು ಹಣ್ಣನ್ನು ಚಳಿಗಾಲದ ಕೊನೆಯಲ್ಲಿ ಬಿಡುತ್ತದೆ. ಲೋಳೆಸರದ ರಸವನ್ನು ಬಿಸಿ ಮಾಡಿದಾಗ ದಪ್ಪವಾದ ನಿರ್ಯಾಸ ಸಿಗುತ್ತದೆ. ಅದನ್ನು "ಕುಮಾರಿ ಸಾರ" ಎಂದು ಹಿಂದಿಯಲ್ಲಿ, ಇಂಗ್ಲೀಷ್‌ನಲ್ಲಿ ಇದನ್ನು "ಅಲೋಸ್" ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಭಾರತದಲ್ಲೆಡೆ ಬೆಳೆಯುವ ಕುಮಾರೀ ಮೆಡಿಟರೇನಿಯನ್ ಪ್ರದೇಶದಲ್ಲಿ ಹೆಚ್ಚಾಗಿ ಬೆಳೆಯುತ್ತದೆ.

ವಿಧಗಳು

ಸಸ್ಯಶಾಸ್ತ್ರದಲ್ಲಿ ಈ ಕೆಳಗಿನ ವಿಧಗಳನ್ನು 'ಕುಮಾರೀ' ಎಂದು ಗುರುತಿಸಲಾಗಿದೆ. ಅವು

- Aloe vera
- Aloe barbadensis
- Aloe indica
- Aloe officianalis

ಉಪಯುಕ್ತ ಅಂಗ

- ಎಲೆ
- ಎಲೆಯ ರಸ
- ಎಲೆಯ ತಿರುಳು
- ಬೇರು

ದ್ರವ್ಯದ ಗುಣಧರ್ಮಗಳು

ರಸ : ತಿಕ್ತ

ಗುಣ : ಗುರು, ಸ್ನಿಗ್ಧ, ಪಿಚ್ಛಿಲ

ವೀರ್ಯ : ಶೀತ

ವಿಪಾಕ : ಕಟು

ಕರ್ಮ : ಕಫವಾತಹರ, ಚಕ್ಷುಷ್ಯ, ವೃಷ್ಯ, ಬೃಂಹಣ, ರಸಾಯನ, ಭೇದನ, ನೇತ್ರ್ಯ, ಬಲ್ಯ

ಕುಮಾರೀ ಭೇದನೀ ಶೀತಾ ತಿಕ್ತಾ ನೇತ್ರ್ಯಾ ರಸಾಯನೀ।
ಮಧುರಾ ಬೃಂಹಣೀ ಬಲ್ಯಾ ವೃಷ್ಯಾ ವಾತವಿಷಪ್ರಣುತ್॥
ಗುಲ್ಮಪ್ಲೀಹಯಕೃತ್‌ವೃದ್ಧಿಕಫಜ್ವರಹರೀ ಹರೇತ್॥ *(ಭಾವಪ್ರಕಾಶ)*

ಎಂದರೆ, ಕುಮಾರಿ ಭೇದನ ಕರ್ಮ ಮಾಡುತ್ತದೆ. ಶೀತ ವೀರ್ಯದಿಂದ ಕೂಡಿದೆ. ತಿಕ್ತ ರಸದಿಂದ, ಮಧುರ ಅನುರಸದಿಂದ ಕೂಡಿದೆ. ಕಣ್ಣಿಗೆ ಒಳ್ಳೆಯದು, ರಸಾಯನವಾಗಿದೆ. ಬಲವನ್ನು ಹೆಚ್ಚಿಸುತ್ತದೆ. ವೃಷ್ಯ, ವಾತಕಫಹರವಾಗಿದೆ. ಗುಲ್ಮ ಪ್ಲೀಹರೋಗ, ಯಕೃತ್‌ವೃದ್ಧಿ, ಜ್ವರವನ್ನು ನಾಶಮಾಡುವ ಗುಣಹೊಂದಿದೆ.

ಔಷಧಿ ಪ್ರಮಾಣ

ರಸ : 10–20 ಮಿ.ಲೀ.

ಸಾರ : 100–130 ಮಿ.ಗ್ರಾಂ.

ಕುಮಾರ್ಯಾಸವ : 20–50ml

ಕುಮಾರೀವಟಿ : 1–2

ಔಷಧೀಯ ಯೋಗಗಳು

- ಕುಮಾರ್ಯಾಸವ
- ಕುಮಾರೀವಟಿ
- ರಜಪ್ರವರ್ತಿನಿ ವಟಿ
- ಕುಮಾರಿಕಾ ವಟಿ


- ಕುಮಾರೀ ತೈಲಮ್
- ಕುಮಾರೀ ಪಾಕ

ಔಷಧೀಯ ಉಪಯೋಗಗಳು

- ಅರಿಷಿಣ ಚೂರ್ಣಕ್ಕೆ ಕುಮಾರಿ ರಸವನ್ನು ಸೇರಿಸಿ ಕುಡಿಯುವುದರಿಂದ ಪ್ಲೀಹವೃದ್ಧಿ ರೋಗವು ಕಡಿಮೆಯಾಗುತ್ತದೆ.
- ಕುಮಾರಿ ರಸಕ್ಕೆ ಜೇನುತುಪ್ಪ, ಹಿಪ್ಪಲಿ, ಲವಂಗ ಚೂರ್ಣವನ್ನು ಕೂಡಿಸಿ ಸೇವಿಸುವುದರಿಂದ ಕೆಮ್ಮು ನಿವಾರಣೆಯಾಗುವುದು.
- ಕುಮಾರಿಯ ಬೇರನ್ನು ಒಂದು ತೊಲೆ ಪ್ರಮಾಣದಲ್ಲಿ ಬೆಚ್ಚಗಾದ ನೀರಿನಲ್ಲಿ ಸೇವಿಸುವುದರಿಂದ ವಾಂತಿ ಆಗಿ ಕಷಾಯದ ಶೋಷಣೆಯಿಂದ ವಿಷಮ ಜ್ವರವು ಗುಣವಾಗುವುದು.
- ಕುಮಾರಿಯ ಬೇರನ್ನು ನೀರಿನಲ್ಲಿ ತೇದು ಅರಿಷಿಣ ಚೂರ್ಣವನ್ನು ಬೆರೆಸಿ ಲೇಪಿಸುವುದರಿಂದ ಕಣ್ಣು ಬೇನೆ ನಿವಾರಣೆಯಾಗುತ್ತದೆ.
- ಸುಟ್ಟಗಾಯಕ್ಕೆ ಕುಮಾರಿಯ ಸ್ವರಸವನ್ನು ಲೇಪಿಸಬೇಕು.
- ಕುಮಾರಿ ರಸವನ್ನು ಬಿಸಿ ಮಾಡಿ ಶೂಲೆಯಾದ ಕಿವಿಗೆ ವಿರುದ್ಧವಾದ ಕಿವಿಯಲ್ಲಿ ಹಾಕುವುದರಿಂದ ಕಿವಿಶೂಲೆ ದೂರವಾಗುತ್ತದೆ.
- ಕುಮಾರೀ ರಸ, ತುಪ್ಪ, ಮಧುಕದ ಕಷಾಯ ಬೆರೆಸಿ ಬಿಸಿ ಮಾಡಿ, ಅದಕ್ಕೆ ಸಕ್ಕರೆ ಸೇರಿಸಿ ಸೇವಿಸುವುದರಿಂದ ಅಪಸ್ಮಾರ (Epilepsy) ರೋಗವು ನಿವಾರಣೆ ಯಾಗುತ್ತದೆ.
- ಕುಮಾರಿಯ ರಸವನ್ನು ಸೇವಿಸುವುದರಿಂದ ಜ್ವರದಿಂದ ಉಂಟಾದ ಉರಿಮೂತ್ರ, ಮೂತ್ರಕೃಚ್ಛ್ರ ನಿವಾರಣೆಯಾಗುತ್ತದೆ.
- ಕುಮಾರೀ ತಿರುಳು, ತುಪ್ಪ, ತ್ರಿಕಟುಚೂರ್ಣ, ಅಣಿಲೆಕಾಯಿ ಚೂರ್ಣ ಮತ್ತು ಸೈಂಧವ ಲವಣ ಬೆರೆಸಿ ಸೇವಿಸುವುದರಿಂದ ಗುಲ್ಮರೋಗವು ನಿವಾರಣೆಯಾಗುತ್ತದೆ.
- ಎಲೆಯ ರಸವನ್ನು ಹಚ್ಚುವುದರಿಂದ ಸುಟ್ಟ ಗಾಯ, ಕೂದಲುದುರುವಿಕೆ ಒಳ್ಳೆಯದು.
- ಕುಮಾರೀ ರಸಕ್ಕೆ ಶುಂಠಿ ರಸವನ್ನು ಸೇರಿಸಿ ಹಣೆಗೆ ಲೇಪಿಸಿಕೊಂಡರೆ ತಲೆನೋವು ಕಡಿಮೆಯಾಗುತ್ತದೆ.
- ಕುಮಾರೀ ರಸ, ತುಪ್ಪ ಮತ್ತು ಜೇನುತುಪ್ಪ ಬೆರೆಸಿ ಸೇವಿಸುವುದರಿಂದ ಮಕ್ಕಳ ಶ್ವಾಸರೋಗವು ಪರಿಹಾರವಾಗುವುದು.
- ಮಲಬದ್ಧತೆಯಿಂದ ಬಳಲುತ್ತಿರುವವರು ಕುಮಾರ್ಯಾಸವವನ್ನು ಎರಡು ಮೂರು ತಿಂಗಳವರೆಗೆ ಸೇವಿಸಿದರೆ ಮಲಬದ್ಧತೆ ನಿವಾರಣೆಯಾಗುತ್ತದೆ.

ಬುದ್ಧಿ ಚುರುಕಾಗಿಸುವ ಬೂದು ಕುಂಬಳಕಾಯಿ

Benincasa cerifera, Savi.
Cucurbitaceae







ಪ್ರತಿಯೊಂದು ದ್ರವ್ಯದಲ್ಲಿ ಒಂದು ಅಚಿಂತ್ಯ ಶಕ್ತಿ ಇರುತ್ತದೆ. ರುಚಿ, ಸ್ವರೂಪ, ಜೀರ್ಣವಾದ ನಂತರ ಪರಿವರ್ತನೆ ಮುಂತಾದ ಗುಣಗಳೆಲ್ಲಾ ಸಮಾನವಿದ್ದರೂ, ಪರಿಣಾಮದಲ್ಲಿ ಪ್ರತಿಯೊಂದರಲ್ಲಿ ವೈಶಿಷ್ಟ್ಯ ಇದೆ, ಇರುತ್ತದೆ. ಕುಂಬಳಕಾಯ ಈ ವೈಶಿಷ್ಟ್ಯವೇ ಮೇಧ್ಯ ಗುಣ. ಬೇಗ ಅರಿತುಕೊಳ್ಳುವ ಸಾಮರ್ಥ್ಯ, ವಿವೇಚಿಸುವ ಶಕ್ತಿ ಮತ್ತು ನೆನಪಿಟ್ಟುಕೊಳ್ಳುವ ಸಾಮರ್ಥ್ಯಗಳ ಸಂಗಮವೇ ಮೇಧ್ಯ ಎನಿಸುತ್ತದೆ. ಬೂದಿಯ ಮೈಯಾಗಿದ್ದರೂ ನಮ್ಮ ತನುಮನಗಳ ಆರೋಗ್ಯಕ್ಕೆ ಸೈ ಎನಿಸುವ ಕುಂಬಳಕಾಯಿ ಆಯುರ್ವೇದದ ಪ್ರಮುಖ ದ್ರವ್ಯಗಳಲ್ಲಿ ಒಂದು. ಬೃಹತ್ತ್ರಯೀಯು ಅದನ್ನು ಫಲ ವರ್ಗದಲ್ಲಿ ಗುರುತಿಸಿದೆ. ಇದನ್ನು- ಮುಖ್ಯವಾಗಿ ಮೂತ್ರ ವಿಕಾರ ಮತ್ತು ಅಪಸ್ಮಾರ ರೋಗದಲ್ಲಿ ಉಪಯೋಗಿಸುತ್ತಾರೆ. ನಿಘಂಟಿನಲ್ಲಿ ವಿವರಣೆಯಾಗಿ ವಿವರಿಸಲ್ಪಟ್ಟ ಬೂದುಕುಂಬಳ ಕಾಯಿಯನ್ನು ಧನ್ವಂತರಿ ನಿಘಂಟುಕಾರನು ವಲ್ಲೀಫಲ ವರ್ಗದಲ್ಲಿ ಶ್ರೇಷ್ಠ ದ್ರವ್ಯ ಎಂಬುದಾಗಿ ವಿವರಿಸಿದ್ದಾನೆ. ಬೂದು ಕುಂಬಳಕಾಯಿಯನ್ನು ಔಷಧಕ್ಕೆ ಮಾತ್ರವಲ್ಲದೇ ಪಲ್ಯಕ್ಕೆ, ಸಾಂಬಾರಿಗೆ, ಮಜ್ಜಿಗೆ ಹುಳಿಗೆ ಸಹ ಇದನ್ನು ಉಪಯೋಗಿಸುತ್ತಾರೆ. ದೈವದ ಪೂಜೆಯ ಸಂದರ್ಭದಲ್ಲಿ ಬೂದು ಕುಂಬಳಕಾಯಿ ಉಪಯೋಗಿಸುವುದನ್ನು ನಾವು ಈಗಲೂ ಹಳ್ಳಿಗಳಲ್ಲಿ ಕಾಣಬಹುದಾಗಿದೆ.

ಬಹು ಭಾಷಾ ಹೆಸರುಗಳು

ಕನ್ನಡ : ಬೂದಿಕುಂಬಳಕಾಯಿ

ಸಂಸ್ಕೃತ : ಕೂಷ್ಮಾಂಡ

ತುಳು : ಕರುಕುಂಬುಡ

ಹಿಂದಿ : ಕೋಹಲಾ

ಇಂಗ್ಲೀಷ್ : ಆ್ಯಶ್‌ಗಾರ್ಡ್

ಪರ್ಯಾಯ ಪದಗಳು

ಕೂಷ್ಮಾಂಡ, ಪುಷ್ಪಫಲ, ಪೀತಪುಷ್ಪ, ಬೃಹತ್‌ಫಲ, ಸ್ಥಿರಫಲ, ವಲ್ಲಿಫಲ, ಸೋಮಕ, ಕರ್ಕೋಟಿಕ, ಕೂಷ್ಮಾಂಡೀ, ಸುಫಲ, ಕುಂಭಫಲ, ಕ್ಷೀರಫಲ, ಕೂಷ್ಮಾಂಡಿಕ, ಮಹಾಫಲ.

ಹೂವು ಹಳದಿ ಬಣ್ಣದಿಂದ ಕೂಡಿರುವುದರಿಂದ ಇದನ್ನು "ಪೀತಪುಷ್ಪ" ಎಂದೂ, ಫಲವು ದೊಡ್ಡದಾಗಿರುವುದರಿಂದ ಇದನ್ನು "ಬೃಹತ್‌ಫಲ". "ಮಹಾಫಲ" ಎಂದೂ, ಕಾಯಿಯು ದೊಡ್ಡ, ಬಹಳ ಸಮಯದವರೆಗೆ ಉಳಿಯುವುದರಿಂದ ಇದನ್ನು "ಸ್ಥಿರಫಲ" ಎಂದು ಸಂಸ್ಕೃತದಲ್ಲಿ ಕರೆಯುತ್ತಾರೆ.

ದ್ರವ್ಯದ ವರ್ಣನೆ

ಕುಂಬಳಕಾಯಿಯು ಭೂಮಿಯಲ್ಲಿ 15ರಿಂದ 20 ಮೀಟರ್‌ನಷ್ಟು ಉದ್ದಕ್ಕೆ ಹರಡಬಲ್ಲ ಬಳ್ಳಿಯಾಗಿದೆ. ಎಲೆಯು 10–15 ಸೆಂ.ಮೀ.ನಷ್ಟು ಉದ್ದವಾಗಿ ದಪ್ಪವಾಗಿ ಬಿಳಿಬಣ್ಣದ ಬಿರುಕು ಕೂದಲಿನಿಂದ ಕೂಡಿದೆ. ಕಾಂಡವು ದಪ್ಪವಾಗಿ ಒರಟಾದ ಬಿರುಸು, ಕೂದಲಿನಿಂದ ಕೂಡಿದೆ. ಹಣ್ಣು ಸಿಲಿಂಡರ್ ಆಕೃತಿಯಲ್ಲಿದ್ದು 30–45 ಸೆಂ.ಮೀ.ನಷ್ಟು ಉದ್ದವಾಗಿರುತ್ತದೆ. ಬೀಜವು ಚಪ್ಪಟೆಯಾಗಿ ಬಿಳಿಬಣ್ಣದಿಂದ ಕೂಡಿದೆ. ಈ ಸಸ್ಯವು ಚಳಿಗಾಲದಲ್ಲಿ ಹೂವನ್ನು ಮತ್ತು ಬೇಸಿಗೆಕಾಲದಲ್ಲಿ ಹಣ್ಣನ್ನು ಬಿಡುತ್ತದೆ. ಭಾವಮಿಶ್ರನ ಪ್ರಕಾರ ಕುಂಬಳಕಾಯಿಯು ಮನುಷ್ಯನಿಗೆ ಎಲ್ಲ ವಯಸ್ಸುಗಳಲ್ಲಿ ಹಿತಕರ. ಅದು ಬಾಲಕರಲ್ಲಿ ಪಿತ್ತಹರವಾಗಿಯೂ, ತರುಣರಲ್ಲಿ ಕಫಕಾರಕವಾಗಿಯೂ, ವೃದ್ಧರಲ್ಲಿ ಹಸಿವನ್ನು ಉಂಟು ಮಾಡುವುದರಿಂದ ಪ್ರಶಸ್ತವೆನಿಸಿದೆ.

ವಿಧಗಳು

ಬೂದು ಕುಂಬಳಕಾಯಿಯ ಇನ್ನೊಂದು ವಿಧವನ್ನು ಕಾಣಬಹುದು. ಅದು (Cucurbita Moschata)

ಉಪಯುಕ್ತ ಅಂಗ

- ಹಣ್ಣು
- ಬೀಜ

- ಬೀಜದೆಣ್ಣೆ
- ಎಲೆ
- ಹಣ್ಣಿನ ರಸ

ದ್ರವ್ಯದ ಗುಣಧರ್ಮಗಳು

ರಸ : ಮಧುರ

ಗುಣ : ಲಘು, ಸ್ನಿಗ್ಧ

ವೀರ್ಯ : ಶೀತ

ವಿಪಾಕ : ಮಧುರ

ಕರ್ಮ : ಪಿತ್ತವಾತಹರ, ಹೃದ್ಯ, ವೃಷ್ಯ, ಬೃಂಹಣ, ದೀಪನ

ಕೂಷ್ಮಾಂಡಂ ಶೀತಲಂ ವೃಷ್ಯಂ ಸ್ವಾದುಪಾಕರಸಂ ಗುರು।
ಹೃದ್ಯಂ ರೂಕ್ಷಂ ರಸಸ್ಯಂದಿ ಶ್ಲೇಷ್ಮಲಂ ವಾತಪಿತ್ತಜಿತ್॥ (ಕೈಯ್ಯದೇವನಿಘಂಟು)

ಎಂದರೆ ಕೂಷ್ಮಾಂಡವು ಶೀತವೀರ್ಯದಿಂದ ಕೂಡಿದೆ, ಮಧುರ ರಸ ಮತ್ತು ಪಾಕದಿಂದ ಕೂಡಿದೆ. ಸೂಕ್ಷ್ಮ ಗುಣದಿಂದ ಕೂಡಿದೆ. ವೃಷ್ಯ, ಹೃದ್ಯವಾಗಿದೆ, ಕಫಕರವಾಗಿದೆ, ವಾತಪಿತ್ತಹರವಾಗಿದೆ.

ಔಷಧಿ ಪ್ರಮಾಣ

ಹಣ್ಣು : 10–20 ಗ್ರಾಂ.
ಬೀಜ ಚೂರ್ಣ : 3–6 ಗ್ರಾಂ.
ಬೀಜದೆಣ್ಣೆ : 5–10 ಮಿ.ಲೀ.
ಹಣ್ಣು ರಸ : 50–10 ಮಿ.ಲೀ.

ಔಷಧೀಯ ಯೋಗಗಳು


- ಕೂಷ್ಮಾಂಡಾವಲೇಹ
- ಕೂಷ್ಮಾಂಡಖಂಡ
- ಕೂಷ್ಮಾಂಡ ರಸಾಯನ
- ಕೂಷ್ಮಾಂಡ ಘೃತ
- ಕೂಷ್ಮಾಂಡ ಚೂರ್ಣ

ಔಷಧೀಯ ಉಪಯೋಗಗಳು

- ಜನಪ್ರಿಯ ಅವಲೇಹವಾದ ಕೂಷ್ಮಾಂಡ ಅವಲೇಹವನ್ನು ಹಾಲಿನೊಂದಿಗೆ ದಿನಕ್ಕೆ ಎರಡು ಬಾರಿ 1–2 ಚಮಚದಷ್ಟು ಸೇವಿಸುವುದರಿಂದ ರಕ್ತಪಿತ್ತ ಜ್ವರ, ಬಾಯಾರಿಕೆ, ಭ್ರಮೆ, ವಾಂತಿ, ಕೆಮ್ಮು, ಶ್ವಾಸರೋಗಗಳು ನಿವಾರಣೆಯಾಗುತ್ತದೆ.
- ವಿಷ ವಿಕಾರಗಳಲ್ಲಿ ಕುಂಬಳಕಾಯಿ ರಸದಲ್ಲಿ ಬೆಲ್ಲ ಸೇರಿಸಿ ಕುಡಿಸಬೇಕು.
- ನಿಶ್ಶಕ್ತಿ ಉಂಟಾಗಿರುವಾಗ ಕುಂಬಳಕಾಯಿ ಹೆರೆದು ತುಪ್ಪದಲ್ಲಿ ಚೆನ್ನಾಗಿ ಹುರಿದು ಅದಕ್ಕೆ ಸಕ್ಕರೆ ಬೆರೆಸಿ ಪ್ರತಿದಿನ ಸೇವನೆ ಮಾಡಬೇಕು.
- ಕುಂಬಳಕಾಯಿ ರಸಕ್ಕೆ ಸಕ್ಕರೆ ಸೇರಿಸಿ ಕುಡಿಯುವುದರಿಂದ ಮೂತ್ರ ತೊಂದರೆ ರೋಗವು ನಿವಾರಣೆಯಾಗುತ್ತದೆ.
- ಎದೆ ಉರಿ, ಹೊಟ್ಟೆನೋವಿನಿಂದ ಬಳಲುತ್ತಿರುವವರಿಗೆ ಬೂದು ಕುಂಬಳ ರಸದಲ್ಲಿ ಸಕ್ಕರೆ ಬೆರೆಸಿ ಕೊಡಬೇಕು.
- ರಸಶಾಸ್ತ್ರದ ಔಷಧಿಗಳ ಅಹಿತ ಪರಿಣಾಮ ರೂಪವಾಗಿ ಪಾದರಸದ ವಿಷಲಕ್ಷಣಗಳು ಗೋಚರಿಸಿದಾಗ ಕುಂಬಳ ರಸದ ಸೇವನೆ ಅತ್ಯುತ್ತಮ ಚಿಕಿತ್ಸೆ.
- ಒಂದು ಭಾಗ ಉಪ್ಪು 18 ಭಾಗ ಕೂಷ್ಮಾಂಡ ರಸ ಮತ್ತು ಯಷ್ಟಿ ಮಧು ಲೇಪ ಹಾಕಿ ಬೆರೆಸಿ ಬಿಸಿ ಮಾಡಿ ನಂತರ ಸೇವಿಸುವುದರಿಂದ ಅಪಸ್ಮಾರ ರೋಗವು ನಿವಾರಣೆಯಾಗುತ್ತದೆ.
- ಕೂಷ್ಮಾಂಡ ರಸಕ್ಕೆ ಸಕ್ಕರೆ ಸೇರಿಸಿ ಕುಡಿಯುವುದರಿಂದ ಮೂತ್ರ ತೊಂದರೆ, ಮೂತ್ರ ಕೃಚ್ಛ್ರರೋಗವು ನಿವಾರಣೆಯಾಗುತ್ತದೆ.
- ಸುಟ್ಟಗಾಯಕ್ಕೆ ಕುಂಬಳಕಾಯಿ ತಿರುಳು ಮತ್ತು ಎಲೆಯ ರಸವನ್ನು ಹಚ್ಚಿದರೆ ತಂಪು ಉಂಟು ಮಾಡುವುದರ ಜೊತೆಗೆ ಗಾಯವು ನಿವಾರಣೆಯಾಗುತ್ತದೆ.
- ಬೂದುಕಂಬಳಕಾಯಿಯ ರಸ, ಲಿಂಬೆಹುಳಿ ರಸ ನೆಲ್ಲಿಚೆಟ್ಟಿನ ಚೂರ್ಣವನ್ನು ಬೆರೆಸಿ ದಿನದಲ್ಲಿ ಎರಡು ಹೊತ್ತು ಸೇವಿಸುವುದರಿಂದ ರಕ್ತಮೂಲವ್ಯಾಧಿ, ಮೂಗು ಬಾಯಿಯಿಂದ ರಕ್ತ ಸೋರುವಿಕೆಗೆ ಒಳ್ಳೆಯದು.
- ಸಿಪ್ಪೆ ತೆಗೆದು ಕುಂಬಳಕಾಯಿಗೆ ನೀರು ಸೇರಿಸಿ ಬಿಸಿ ಮಾಡಿ, ಪಾನಕ ಮಾಡಿ ಉಪಯೋಗಿಸುತ್ತಾ ಬಂದರೆ ನರಗಳ ದೌರ್ಬಲ್ಯ, ಮೂತ್ರ ಉರಿ, ಕಣ್ಣುರಿ ಮುಂತಾದುವುಗಳು ನಿವಾರಣೆಯಾಗುತ್ತದೆ.
- ಬೂದುಕುಂಬಳಕಾಯಿ 'ರಸಕ್ಕೆ ಸಕ್ಕರೆ ಸೇರಿಸಿ ಕುಡಿದರೆ ಆಮ್ಲಪಿತ್ತ (Acidity) ರೋಗ ನಿವಾರಣೆಯಾಗುತ್ತದೆ.

ತ್ರಿದೋಷಹರವಾದ ಕೊತ್ತಂಬರಿ

Coriandrum sativum, Linn.
Umbelliferae







ಕೊತ್ತಂಬರಿಯು ನಾವು ಅಡುಗೆಗೆ ಬಳಸುವ ಒಂದು ದಿನನಿತ್ಯ ದ್ರವ್ಯವೆನಿಸಿದೆ. ಕೊತ್ತಂಬರಿ ಕೊತ್ತಂಬರಿಯ ಪುಡಿಗೆ ಹಾಲು ಸೇರಿಸಿ ಕಷಾಯ ಮಾಡಿ ಕುಡಿಯುವುದನ್ನು ಹಳ್ಳಿ ಪಟ್ಟಣಗಳಲ್ಲಿ ನಾವು ಈಗಲೂ ಕಾಣಬಹುದು. ಕೊತ್ತಂಬರಿಯೂ ಅನೇಕ ವ್ಯಾಧಿಗಳಿಗೆ ಸಂಜೀವಿನಿಯೂ ಹೌದು. ಮಕ್ಕಳ ಕೆಮ್ಮು, ದಮ್ಮುಗಳು ಯಾವುದೇ ಚಿಕಿತ್ಸೆಯಿಂದ ಗುಣವಾಗದಿದ್ದರೆ ಕೊತ್ತಂಬರಿ ನಮ್ಮ ನೆರವಿಗೆ ಬರುತ್ತದೆ. ಭಾರತದ ಎಲ್ಲ ಕಡೆಗಳಲ್ಲಿ ಇದನ್ನು ಬೆಳೆಸುತ್ತಾರೆ. ಕೊತ್ತಂಬರಿ ಸೊಪ್ಪು ಮಾತ್ರ ಮಾಂಸದ ಪದಾರ್ಥಗಳಿಗೆ, ಚೈನೀಸ್ ಫಾಸ್ಟ್‌ಫುಡ್ ಕಾರ್ನರ್‌ನಲ್ಲಿ ಪ್ರಮುಖವಾದ ಘಟಕ. ಇದು ಆಹಾರಕ್ಕೆ ರುಚಿ ಮತ್ತು ಪರಿಮಳವನ್ನು ತಂದುಕೊಡುತ್ತದೆ. ಕೊತ್ತಂಬರಿ ಬೀಜ ಮತ್ತು ಸೊಪ್ಪಿನ ಆಹಾರ ಉಪಯೋಗ ಎಲ್ಲರು ಬಲ್ಲರು. ಆದರೆ ಹೆಚ್ಚಿನವರಿಗೆ ಇದರ ಔಷಧ ಉಪಯೋಗ ಮಾತ್ರ ಇನ್ನು ತಿಳಿದಿಲ್ಲ. ಕೈಗೆಟುಕುವ ಈ ದ್ರವ್ಯದ ಔಷಧೀಯ ಗುಣಗಳನ್ನು ತಿಳಿದು ಸಂದರ್ಭಕ್ಕೆ ಅನುಸಾರವಾಗಿ ಉಪಯೋಗಿಸಿದರೆ ಹಣದ ಉಳಿತಾಯ ಜೊತೆಗೆ ಆರೋಗ್ಯವನ್ನು ಕಾಪಾಡಬಹುದು.

ಬಹು ಭಾಷಾ ಹೆಸರುಗಳು

ಕನ್ನಡ : ಕೊತ್ತಂಬರಿ

ಸಂಸ್ಕೃತ : ಧಾನ್ಯಕ

ತುಳು : ಕೊತ್ತಂಬರಿ

ಹಿಂದಿ : ಧನಿಯಾ

ಇಂಗ್ಲೀಷ್ : ಕೊರಿಯಾಂಡರ್

ಪರ್ಯಾಯ ಪದಗಳು

ಧಾನ್ಯಕ, ಛತ್ರಾ, ನೀತುನ್ನಕ, ಸೂಕ್ಷ್ಮಪತ್ರ, ಹರಿದ್‌ಗಂಧ, ಹೃದ್ಯ, ವೇಷ್ಣ, ಸುಗಂಧಿ, ಕುಸ್ತುಂಬರು. ಈ ದ್ರವ್ಯದ ಹೂವು ಛತ್ರಿಯಾಕಾರದಲ್ಲಿ ಇರುವುದರಿಂದ ಅದನ್ನು 'ಛತ್ರಾ' ಎಂದೂ, ತೊಂದರೆಗಳನ್ನು ನಿವಾರಿಸುವ ಶಕ್ತಿಹೊಂದಿರುವುದರಿಂದ 'ವೀತುನ್ನಕ' ಎಂದು ರೋಗಗಳನ್ನು ನಿವಾರಿಸುವುದರಿಂದ 'ಕುಸ್ತುಂಬ್ರ' ಎಂದು ಸಂಸ್ಕೃತದಲ್ಲಿ ಕರೆಯುತ್ತಾರೆ.

ದ್ರವ್ಯದ ವರ್ಣನೆ

ಸುಂದರವಾದ ಕೊತ್ತಂಬರಿ ಗಿಡವು ಸುಮಾರು 40–50ಸೆಂ. ಮೀಟರ್‌ನಷ್ಟು ಎತ್ತರಕ್ಕೆ ಬೆಳೆಯುತ್ತದೆ. ಇದು ಅನೇಕ ಶಾಖೆ ಮತ್ತು ಉಪಶಾಖೆಗಳಿಂದ ಕೂಡಿದೆ. ಗಿಡದ ಎಲೆಗಳು ಅತೀ ತೆಳುವಾಗಿರುತ್ತದೆ. ಹುಟ್ಟಿದ ಎಲೆಯು ಮೊದಲು ಅಂಡಾಕಾರದಲ್ಲಿದ್ದು ನಂತರ ಉದ್ದವಾಗಿರುತ್ತದೆ. ಹೂವು ಬಿಳಿ ಬಣ್ಣದಿಂದ ಕೂಡಿದೆ. ಬೀಜವು ವೃತ್ತಾಕಾರದಲ್ಲಿದ್ದೂ ಎರಡು ಭಾಗವಾಗಿ ವಿಂಗಡಿಸಲ್ಪಟ್ಟಿದೆ. ಹಸಿಯಾದ ಕೊತ್ತಂಬರಿ ಸೊಪ್ಪಿನ ಸಾರು ಕೆಲವರಿಗೆ ಬಹಳ ಪ್ರಿಯ. ಈ ದ್ರವ್ಯವು ಹೂವು ಮತ್ತು ಹಣ್ಣನ್ನು ಚಳಿಗಾಲದ ಕೊನೆಯಲ್ಲಿ ಬಿಡುತ್ತದೆ. ಸಾಮಾನ್ಯವಾಗಿ ಭಾರತದೆಲ್ಲೆಡೆ ಬೆಳೆಯುವ ಈ ದ್ರವ್ಯವನ್ನು ಮಳೆ ಕಡಿಮೆ ಪ್ರದೇಶದಲ್ಲಿ, ಗದ್ದೆಗಳಲ್ಲಿ ಬೀಜ ಬಿತ್ತಿ ಬೆಳೆಸುತ್ತಾರೆ.

ವಿಧಗಳು

ಕೊತ್ತಂಬರಿಯಲ್ಲಿ ಎರಡು ವಿಧಗಳಿವೆ. ಅವು,

- ಗ್ರಾಮೀಣ ಕೊತ್ತಂಬರಿ
- ಕಾಡು ಕೊತ್ತಂಬರಿ

ಉಪಯುಕ್ತ ಅಂಗಗಳು

- ಕೊತ್ತಂಬರಿ ಬೀಜ
- ಕೊತ್ತಂಬರಿ ಸೊಪ್ಪು

ದ್ರವ್ಯದ ಗುಣಧರ್ಮಗಳು

ರಸ : ಕಷಾಯ, ತಿಕ್ತ

ಗುಣ : ಲಘು, ಸ್ನಿಗ್ಧ

ವೀರ್ಯ : ಉಷ್ಣ

ವಿಪಾಕ : ಮಧುರ

ಕರ್ಮ : ತ್ರಿದೋಷಹರ, ದೀಪನ, ಪಾಚನ, ಗ್ರಾಹೀ, ರೋಚಕ

ಧಾನ್ಯಕಂ ತುವರಂ ಸ್ನಿಗ್ಧಮವೃಷ್ಯಂ ಮೂತ್ರಲಂ ಲಘು।
ತಿಕ್ತಂ ಕಟುರುಷ್ಣವೀರ್ಯಂ ಚ ದೀಪನಂ ಪಾಚನಂ ಸ್ಮೃತಮ್॥
ಜ್ವರಘ್ನಂ ರೋಚಕಂ ಗ್ರಾಹೀ ಸ್ವಾದುಪಾಕೀ ತ್ರಿದೋಷನುತ್।
ತೃಷ್ಣಾದಾಹವಮಿಶ್ವಾಸಕಾಸಕಾರ್ಶ್ಯಕ್ರಿಮಿಪ್ರಣುತ್॥ (ಭಾವಪ್ರಕಾಶ)

ಎಂದರೆ ಕೊತ್ತಂಬರಿಯು ತಿಕ್ತ, ಕಷಾಯ, ಕಟು ರಸದಿಂದ ಕೂಡಿದೆ. ಮಧುರ ವಿಪಾಕದಿಂದ ಕೂಡಿದೆ. ಸ್ನಿಗ್ಧ ಗುಣದಿಂದ ಕೂಡಿದೆ. ತ್ರಿದೋಷಹರವಾಗಿದೆ. ಅವೃಷ್ಯವಾಗಿದೆ. ದೀಪನ, ಪಾಚನ, ರೋಚಕ, ಗ್ರಾಹೀ ಕಾರ್ಯಗಳನ್ನು ನಿರ್ವಹಿಸುತ್ತದೆ. ತೃಷ್ಣಾ, ದಾಹ, ವಾಂತಿ, ಶ್ವಾಸ, ಕಾಸ, ಕೃಶತ್ವ, ಕ್ರಿಮಿ ರೋಗಗಳನ್ನು ನಿವಾರಿಸುತ್ತದೆ.

ಔಷಧಿ ಪ್ರಮಾಣ

ಬೀಜ ಚೂರ್ಣ : 3–6 ಗ್ರಾಂ

ಹಿಮಾ ಕಲ್ಪ : 20–30 ಮಿ.ಲೀ.

ರಸ : 10–20 ಮಿ.ಲೀ.

ಔಷಧೀಯ ಯೋಗಗಳು

- ಅತ್ಯಂತ ಬಾಯಾರಿಕೆಗೆ ಕೊತ್ತಂಬರಿಯನ್ನು ತಣ್ಣೀರಿನಲ್ಲಿ ಹಾಕಿಟ್ಟು ನಂತರ ಸೋಸಿ ಕುಡಿಯಬೇಕು.
- ಪ್ರತಿದಿನ ಕೊತ್ತಂಬರಿ ರಸದೊಂದಿಗೆ ಅಷ್ಟೇ ಪ್ರಮಾಣದ ಜೇನುತುಪ್ಪ ಬೆರೆಸಿ ಸೇವಿಸುವುದರಿಂದ ನೆನಪಿನ ಶಕ್ತಿ ವೃದ್ಧಿಯಾಗುತ್ತದೆ.
- ಕೊತ್ತಂಬರಿ ಸೊಪ್ಪಿನ ಎಲೆಗಳನ್ನು ಹಸಿಯಾಗಿ ತಿನ್ನುವುದರಿಂದ ಹಲ್ಲು ಹುಳುಕಾಗುವುದಿಲ್ಲ.
- ಕೊತ್ತಂಬರಿಯ ಕಷಾಯ ಮಾಡಿ ಕುಡಿಯುವುದರಿಂದ ರಕ್ತಮೂಲವ್ಯಾಧಿಗೆ ಒಳ್ಳೆಯದು.
- ಬಾಯಿ ಹುಣ್ಣು ಇರುವಾಗ ಕೊತ್ತಂಬರಿ ಸೊಪ್ಪಿನ ರಸದೊಂದಿಗೆ ಬಾಯಿ ಮುಕ್ಕಳಿಸಬೇಕು.

- ಧಾನ್ಯಕದ ಹಿಮಕ್ಕೆ ಸಕ್ಕರೆ ಬೆರೆಸಿ ಬೆಳಿಗ್ಗೆ ಸೇವಿಸುವುದರಿಂದ ಉರಿಯುಕ್ತ ಜ್ವರವು ನಿವಾರಣೆಯಾಗುತ್ತದೆ.
- ಧಾನ್ಯಕ, ಶುಂಠಿ ಮತ್ತು ಬೆಲ್ಲದ ಕಷಾಯ ಮಾಡಿ ಕುಡಿಯುವುದರಿಂದ ಆಮ, ನೋವು ಮಲಬದ್ಧತೆ ನಿವಾರಿಸಿ ಅಗ್ನಿವೃದ್ಧಿಯಾಗಿ ಹಸಿವನ್ನು ಉಂಟುಮಾಡುತ್ತದೆ.
- ಕೊತ್ತಂಬರಿ ಮತ್ತು ಶುಂಠಿಯಿಂದ ತಯಾರಿಸಿದ ಕಷಾಯವನ್ನು ಸೇವಿಸುವುದರಿಂದ ಅಜೀರ್ಣ ರೋಗವು ನಿವಾರಣೆಯಾಗುತ್ತದೆ.
- ಕೊತ್ತಂಬರಿ ಸೇರಿಸಿ ಬಿಸಿ ಮಾಡಿದ ನೀರನ್ನು ಸೇವಿಸುವುದು ಗುಲ್ಮ ರೋಗಕ್ಕೆ ಒಳ್ಳೆಯದು.
- ಕೊತ್ತಂಬರಿ, ಅತಿವಿಷ, ಕಾಕಡಶೃಂಗಿ ಮತ್ತು ಗಜಹಿಪ್ಪಲಿಯ ಚೂರ್ಣವನ್ನು, ಜೇನಿನೊಂದಿಗೆ ಬೆರೆಸಿ ಸೇವಿಸುವುದರಿಂದ ಮಕ್ಕಳ ವಾಂತಿ ಮತ್ತು ಅತಿಸಾರ ರೋಗವು ನಿವಾರಣೆಯಾಗುತ್ತದೆ.
- ಧಾನ್ಯಕ ಹಿಮಕ್ಕೆ ಸಕ್ಕರೆ ಮತ್ತು ಜೇನು ಸೇರಿಸಿ ಸೇವಿಸುವುದರಿಂದ ತೃಷ್ಣಾ ರೋಗವು ನಿವಾರಣೆಯಾಗುತ್ತದೆ.
- ಕೊತ್ತಂಬರಿ ಚೂರ್ಣ 10 ಗ್ರಾಂ ಮತ್ತು ಜೀರಿಗೆ 20 ಗ್ರಾಂನ್ನು ಬೆಲ್ಲದೊಂದಿಗೆ ಬೆರೆಸಿ ಸೇವಿಸುವುದರಿಂದ ವಾತರಕ್ತರೋಗವು ನಿವಾರಣೆಯಾಗುತ್ತದೆ.
- ಕೊತ್ತಂಬರಿ ಚೂರ್ಣಕ್ಕೆ ಸಕ್ಕರೆ ಬೆರೆಸಿ ಅದನ್ನು ಅಕ್ಕಿ ತೊಳೆದ ನೀರಿನಲ್ಲಿ ಸೇವಿಸುವುದರಿಂದ ಮಕ್ಕಳ ಉಬ್ಬಸ ಮತ್ತು ಕೆಮ್ಮು ರೋಗವು ನಿವಾರಣೆಯಾಗುತ್ತದೆ.
- ಕೊತ್ತಂಬರಿ ಬೀಜ, ಕೆಂಪು ಕಲ್ಲುಸಕ್ಕರೆ ಮತ್ತು ಮೇಕೆ ಹಾಲು, ಸೇರಿಸಿ ತೃಪ್ತಿಯಾಗುವವರೆಗೆ ಸೇವಿಸುವುದರಿಂದ ಮೂತ್ರ ಉರಿ ನಿವಾರಣೆ.


ಮೇಲಿಂದ ಮೇಲೆ ಗರ್ಭಪಾತ
ಆರೋಗ್ಯಕ್ಕೆ ಹಾನಿಕರ

ಕೊರಡು ಕೊನರಿಸಬಲ್ಲ ಕೊಮ್ಮೆ

Boerhavia diffusa, Linn.

Nyctaginaceae







ಬೇಸಿಗೆಯಲ್ಲಿ ಕೊರಡಾಗಿದ್ದಕೊಮ್ಮೆ ಮಳೆ ಬೀಳುತ್ತಲೇ ಕೊನರಿ ಪುನರ್ಜೀವ ಪಡೆಯುತ್ತದೆ. ಮಳೆಯಿಂದ ನವಜೀವನ ಪಡೆದ ಕೊಮ್ಮೆ, ಅದನ್ನು ಸೇವಿಸುವವರ ಮುಪ್ಪನ್ನು ಮುಂದೂಡಿ ಕಾಯಿಲೆಗಳನ್ನು ದೂರಮಾಡಿ ಹೊಸ ಚೈತನ್ಯ ನೀಡುವ ಶಕ್ತಿ ಹೊಂದಿದೆ. ಕೊಮ್ಮೆಯನ್ನು ಶೋಥ ರೋಗಕ್ಕೆ ಮುಖ್ಯವಾಗಿ ಬಳಸುತ್ತಾರೆ. ಕೊಮ್ಮೆ ಸಸ್ಯವು ಬೇಸಿಗೆಕಾಲದಲ್ಲಿ ಒಣಗಿ, ಶರತ್ಕಾಲದಲ್ಲಿ ಮತ್ತೆ ಬೆಳೆಯುತ್ತದೆ. ವೈಜ್ಞಾನಿಕವಾಗಿ ಇದರ ಮೂತ್ರಲಗುಣವನ್ನು ವಿವರಿಸಿದರೂ, ಆಯುರ್ವೇದದ ಹೆಚ್ಚಿನ ಗ್ರಂಥಗಳಲ್ಲಿ ಇದರ ಬಗ್ಗೆ ಉಲ್ಲೇಖವಿಲ್ಲ. ಇದು ಒಂದು ಉತ್ತಮ ರಸಾಯನ ದ್ರವ್ಯವು ಹೌದು.

ಬಹು ಭಾಷಾ ಹೆಸರುಗಳು

ಕನ್ನಡ : ಕೊಮ್ಮೆ

ಸಂಸ್ಕೃತ : ಪುನರ್ನವಾ

ತುಳು : ನೀಲ ಬಸಳೆ

ಹಿಂದಿ : ಗದಹಪೂರಣ

ಇಂಗ್ಲೀಷ್ : ಸ್ಪ್ರೆಡಿಂಗ್‌ಹೋಗ್‌ವೀಡ್

ಪರ್ಯಾಯ ಪದಗಳು

ಪುನರ್ನವಾ, ವರ್ಷಾಭೂ, ಶೋಥಘ್ನೀ, ಶೀಲತಿಕ, ಶ್ವೇತಮೂಲ, ದೀರ್ಘಪತ್ರಿಕಾ, ರಕ್ತಪುನರ್ನವಾ, ವರ್ಷಕೇತು, ಕತಿಲ್ಲಕ, ಕ್ಷುದ್ರಪತ್ರ, ವಿಷಘ್ನೀ, ರಕ್ತವರ್ಷಾ, ಪ್ರತಾನಿನೀ.

ಕೊಮ್ಮೆಗೆ ಹರಡುವ ಸ್ವಭಾವವಿರುವುದರಿಂದ ಇದನ್ನು 'ಪ್ರತಾನಿನೀ' ಎಂದು, ಬಿಳಿಯ ಬಣ್ಣದ ಬೇರಿನಿಂದ 'ಶ್ವೇತಮೂಲ' ಎಂದು, ಶೋಥಕ್ಕೆ ಉಪಯುಕ್ತ ವನಸ್ಪತಿಯಾದರಿಂದ 'ಶೋಥಘ್ನೀ' ಎಂದು, ಉದ್ದವಾದ ಎಲೆಗಳಿಂದ ಕೂಡಿದ್ದರಿಂದ 'ದೀರ್ಘಪತ್ರಿಕಾ' ಎಂದು, ಮಳೆಗಾಲದಲ್ಲಿ ಈ ವನಸ್ಪತಿಯು ಬೆಳೆಯುವುದರಿಂದ 'ವರ್ಷಾಭೂ' ಎಂದೂ, ಮತ್ತೆ ಮತ್ತೆ ಬೆಳೆಯುವುದರಿಂದ ಮತ್ತು ದೇಹವನ್ನು ರೋಗದಿಂದ ಮುಕ್ತಿಗೊಳಿಸಿ ಪುನಶ್ಚೇತನ ನೀಡುವುದರಿಂದ ಈ ವನಸ್ಪತಿಯನ್ನು 'ಪುನರ್ನವಾ' ಎಂಬ ಸಂಸ್ಕೃತ ಹೆಸರಿನಿಂದಲೂ ಕರೆಯುತ್ತಾರೆ.

ದ್ರವ್ಯದ ವರ್ಣನೆ

ಕೊಮ್ಮೆಯು ಒಂದು ಚಿಕ್ಕ ಸಸ್ಯ. ಇದು ಹರಡಿಕೊಂಡು ಬೆಳೆಯುತ್ತದೆ. ಇದು ಸುಮಾರು 1–4 ಮೀಟರ್‌ನಷ್ಟು ಉದ್ದಕ್ಕೆ ಬೆಳೆಯುತ್ತದೆ. ಎಲೆಯು 2–4 ಸೆಂ. ಮೀಟರ್‌ನಷ್ಟು ಉದ್ದವಾಗಿ ಮೃದುವಾದ ಕೂದಲುಗಳಿಂದ ಕೂಡಿದೆ. ಬೇರು ದಪ್ಪವಾಗಿ ಗಟ್ಟಿಯಾಗಿ ಇರುತ್ತದೆ. ಹೂವು ಚಿಕ್ಕದಾಗಿ ಬಿಳಿ ಅಥವಾ ಗುಲಾಬಿ ಬಣ್ಣದಿಂದ ಕೂಡಿದೆ. ಕಾಯಿಯು ಒಂದು ಸೆಂ. ಮೀಟರ್ ಉದ್ದವಾಗಿ ವೃತ್ತಾಕಾರದಿಂದ ಕೂಡಿದೆ. ಬೀಜವು ಕಪ್ಪು ಬಣ್ಣದಿಂದ ಕೂಡಿದೆ. ಈ ದ್ರವ್ಯವು ಹೂವು ಮತ್ತು ಹಣ್ಣನ್ನು ಚಳಿಗಾಲದಲ್ಲಿ ಬಿಡುತ್ತದೆ. ಈ ದ್ರವ್ಯವು ಪಂಜಾಬ್‌ನಿಂದ ಅಸ್ಸಾಂನವರೆಗೆ ಎಲ್ಲಾ ಪ್ರದೇಶದಲ್ಲೂ ಕಂಡು ಬರುತ್ತದೆ.

ವಿಧಗಳು

ಕೊಮ್ಮೆಯಲ್ಲಿ ಎರಡು ಪ್ರಕಾರಗಳಿವೆ. ಅವು

- ರಕ್ತ ಪುನರ್ನವಾ (Boerhavia diffusa)
- ಶ್ವೇತ ಪುನರ್ನವಾ (Trainthema portulacastrum)

ಉಪಯುಕ್ತ ಅಂಗಗಳು

- ಸಂಪೂರ್ಣ ಗಿಡ
- ಬೇರು

- ಎಲೆ
- ಬೀಜ

ದ್ರವ್ಯದ ಗುಣಧರ್ಮಗಳು

ರಸ : ಮಧುರ, ತಿಕ್ತ, ಕಷಾಯ

ಗುಣ : ಲಘು, ರೂಕ್ಷ

ವೀರ್ಯ : ಉಷ್ಣ

ವಿಪಾಕ : ಕಟು

ಕರ್ಮ : ಕಫವಾತಹರ, ಶೋಥಹರ, ದೀಪನ, ರುಚ್ಯ, ಹೃದ್ಯ

ಪುನರ್ನವಾ ಭವೇದುಷ್ಣಾ ತಿಕ್ತಾ ರೂಕ್ಷಾ, ಕಫಾಪಹಾ।
ಸಶೋಫಪಾಂಡು ಹೃದ್ರೋಗ ಕಾಸೋರಃಕ್ಷತಶೂಲನುತ್॥ (ಧನ್ವಂತರಿ ನಿಘಂಟು)

ಎಂದರೆ ಕೊಮ್ಮೆಯು ಉಷ್ಣವೀರ್ಯದಿಂದ ಕೂಡಿದೆ. ತಿಕ್ತ ರಸದಿಂದ ಕೂಡಿದೆ. ರೂಕ್ಷ ಗುಣದಿಂದ ಕೂಡಿದೆ. ಕಫಹರವಾಗಿದೆ. ಶೋಥ, ಪಾಂಡು, ಹೃದಯರೋಗ, ಕೆಮ್ಮು, ಉರಕ್ಷತ, ಶೂಲ ಮುಂತಾದ ರೋಗಗಳನ್ನು ನಿವಾರಿಸುತ್ತದೆ.

ಔಷಧಿ ಪ್ರಮಾಣ

ಸ್ವರಸ	:	5–10 ಮಿ.ಲೀ.
ಚೂರ್ಣ	:	1–3 ಗ್ರಾಂ.
ಪುನರ್ನವಾಸವ	:	20–30 ಮಿ.ಲೀ.
ಪುನರ್ನವಾಮಂಡೂರ	:	250 ಮಿ.ಗ್ರಾಂ.
ಬೇರಿನ ಕಷಾಯ	:	5–10 ಮಿ.ಲೀ.
ಬೀಜದ ಚೂರ್ಣ	:	1–2 ಗ್ರಾಂ.

ಔಷಧೀಯ ಯೋಗಗಳು

- ಪುನರ್ನವಾರಿಷ್ಟ
- ಪುನರ್ನವಾಸವ
- ಪುನರ್ನವ ಗೋಕ್ಷುರಾದಿ ಕ್ವಾಥ
- ಪುನರ್ನವ ಮಂಡೂರ
- ಪುನರ್ನವಾಷ್ಟಕ ಚೂರ್ಣ

- ಪುನರ್ನವಾದಿ ತೈಲ
- ಪುನರ್ನವಾ ರಸಾಯನ

ಔಷಧೀಯ ಉಪಯೋಗಗಳು

- ಕೊಮ್ಮೆ ಬೇರಿನ ಕಷಾಯಕ್ಕೆ ಶುಂಠಿ, ಚಿತ್ರಮೂಲ, ಚೂರ್ಣ, ಮತ್ತು ಅಪಾಮಾರ್ಗ, ಕ್ಷಾರಗಳ ಸಮ್ಮಿಶ್ರ ಸೇವನೆಯಿಂದ ಜಲೋದರ (Ascities) ರೋಗವು ನಿವಾರಣೆಯಾಗುತ್ತದೆ. ಹೆಚ್ಚಿನ ಲಾಭಕ್ಕಾಗಿ ಇದನ್ನು ಅಭ್ಯಂತರ ಸೇವನೆಯೊಂದಿಗೆ ಉದರ ಭಾಗಕ್ಕೆ ಲೇಪಿಸಬೇಕು.
- ಶ್ವೇತ ಪುನರ್ನವದ ಬೇರಿಗೆ ಅನ್ನ ಬೇಯಿಸಿದ ನೀರು ಸೇರಿಸಿ, ಅರೆದು ಸೇವಿಸುವುದರಿಂದ ಪ್ಲೀಹೋದರ ರೋಗವು ನಿವಾರಣೆ.
- ಕೊಮ್ಮೆ ಅನೇಕ ಜೀವಸತ್ವಗಳ ಆಕಾರವಾಗಿರುವುದರಿಂದ ಇದರ ಪಲ್ಯರೂಪದ ಸೇವನೆ ಜೀವಸತ್ವಗಳ ಕೊರತೆಯಿಂದುಂಟಾಗುವ ಕಾಯಿಲೆಗಳನ್ನು ದೂರಮಾಡಬಲ್ಲದು.
- ಬಿಳಿಕೊಮ್ಮೆ ಬೇರನ್ನು ತಣ್ಣೀರಿನಲ್ಲಿ ತೇದು ಕಣ್ಣುಗಳಿಗೆ ಅಂಜನವಾಗಿ ಇಡುವುದು ಮತ್ತು ಕೊಮ್ಮೆ ಸೊಪ್ಪನ್ನು ತರಕಾರಿಯಾಗಿ ಉಪಯೋಗಿಸುವುದರಿಂದ ನಿಶಾಂಧತ್ವ (ರಾತ್ರಿ ಕಣ್ಣು ಕಾಣದಿರುವುದು)ಕ್ಕೆ ಒಳ್ಳೆಯದು.
- ಬಿಳಿಕೊಮ್ಮೆಯ ಎಲೆಯಿಂದ ತಯಾರಿಸಿದ ರಸಕ್ಕೆ, ಅದರ ಅರ್ಧಭಾಗದಷ್ಟು ಹಿಪ್ಪಲಿ ಪುಡಿ ಮಿಶ್ರಮಾಡಿ ಜೇನುತುಪ್ಪವನ್ನು ಸೇರಿಸಿ ದಿನಕ್ಕೆ ಒಂದು ವೇಳೆ ಸೇವಿಸುವುದರಿಂದ ದಮ್ಮು ಮತ್ತು ಕೆಮ್ಮಿಗೆ ಒಳ್ಳೆಯದು.
- 10ಗ್ರಾಂ ಕೊಮ್ಮೆ, ಶುಂಠಿ ಮತ್ತು ಭದ್ರಮುಷ್ಠಿಯ ಚೂರ್ಣಕ್ಕೆ 640 ಮಿ.ಲೀ. ಹಾಲನ್ನು ಸೇರಿಸಿ ಸೇವಿಸುವುದರಿಂದ ಊತರೋಗವು ಕಡಿಮೆಯಾಗುತ್ತದೆ.
- 20 ಗ್ರಾಂ. ನಷ್ಟು ಕೊಮ್ಮೆ ಚೂರ್ಣಕ್ಕೆ ಹಾಲು ಸೇರಿಸಿ ಸುಮಾರು 2 ತಿಂಗಳಿನಿಂದ ಒಂದು ವರ್ಷದವರೆಗೆ ರಾತ್ರಿ ಸೇವಿಸುವುದರಿಂದ ಆಯುಷ್ಯ ವೃದ್ಧಿ, ಬಲವೃದ್ಧಿಯಾಗಿ ದೇಹವನ್ನು ರೋಗದಿಂದ ರಕ್ಷಿಸುತ್ತದೆ.
- ಹಾಲು, ಬಿಲ್ವ ಮತ್ತು ಕೊಮ್ಮೆಯ ಚೂರ್ಣಕ್ಕೆ ನೀರು ಬೆರೆಸಿ, ಕಾಯಿಸಿ ಸೇವಿಸುವುದರಿಂದ ಜ್ವರವು ನಿವಾರಣೆಯಾಗುತ್ತದೆ.
- ಕೊಮ್ಮೆಯ ಕಷಾಯವನ್ನು ಸೇವಿಸುವುದರಿಂದ ನಿದ್ರಾನಾಶದಿಂದ ಬಳಲುತ್ತಿರುವವರಿಗೆ ಒಳ್ಳೆಯದು.
- ಬೇರಿನ ಪುಡಿ ಅಥವಾ ರಸಕ್ಕೆ ಶುಂಠಿರಸವನ್ನು ಬೆರೆಸಿ ಸೇವಿಸುವುದರಿಂದ ದಮ್ಮು-ಕೆಮ್ಮು ರೋಗಗಳು ವಾಸಿಯಾಗುವುವು.
- ಬೇರಿನ ಪುಡಿಗೆ ಜೇನನ್ನು ಬೆರೆಸಿ ಸೇವಿಸುವುದರಿಂದ ಶರೀರದಲ್ಲಿ ರಕ್ತ ಹೆಚ್ಚುತ್ತದೆ.

ಕೇಶರಂಜಕ ಗರುಗದ ಸೊಪ್ಪು

Eclipta alba, Hask.
Compositae





ಕಾಲುವೆ ಮತ್ತು ಚರಂಡಿಗಳ ಅಂಚಿನಲ್ಲಿ, ಭತ್ತದ ಗದ್ದೆಯಲ್ಲಿ ಮತ್ತು ನೆರಳು ತೇವವಿರುವ ತೋಟಗಳಲ್ಲಿ ಮೂಲಿಕೆಯು ಕಳೆಯಂತೆ ಬೆಳೆಯುತ್ತದೆ. ಇದರ ಪರಿಚಯವು ಬೃಹತ್ತ್ರಯೀಯಲ್ಲಿ ಕಾಣದಿದ್ದರೂ, ಔಷಧಿ ತಯಾರಿಕೆಯಲ್ಲಿ ಇದು ಒಂದು ಮುಖ್ಯ ದ್ರವ್ಯವೆನಿಸಿದೆ. ಗದ್ದೆಯ ಪಕ್ಕದ ಧರೆಯಲ್ಲಿ ಇದು ಧಾರಾಳವಾಗಿ ಬೆಳೆಯುತ್ತದೆ. ಗರುಗದ ಸೊಪ್ಪು ಕೇಶ ರಂಜಕ, ಚರ್ಮಕ್ಕೆ ಒಳ್ಳೆಯದು, ಎಲುವಿಗೆ ಬಲಕೊಡುವುದು ಕೋಪ ಮತ್ತು ವಿಷನಾಶಕ, ಶೋಥ, ಕಫ ದೋಷಹರ, ದಂತಕ್ಕೆ ಹಿತಕರವಾಗಿದೆ. ಕೇಶ ಚೆನ್ನಾಗಿ ಬೆಳೆಯಲು ನೆರೆಗೂದಲು ನಿವಾರಣೆಗೆ ಅತ್ಯುತ್ತಮ ವನಸ್ಪತಿ ಇದಾಗಿದೆ. ರೋಗನಾಶಕ ಶಕ್ತಿಯಿಂದ ಕೂಡಿದ ಗರುಗವು ಆಯುರ್ವೇದದ ಒಂದು ಅಗ್ರದ್ರವ್ಯ.

ಬಹು ಭಾಷಾ ಹೆಸರುಗಳು

ಕನ್ನಡ : ಗರುಗದ ಸೊಪ್ಪು

ಸಂಸ್ಕೃತ : ಭೃಂಗರಾಜ

ತುಳು : ಗರ್ಗೊ

ಹಿಂದಿ : ಭಾಂಗರಾ
ಇಂಗ್ಲೀಷ್ : –

ಪರ್ಯಾಯ ಪದಗಳು

ಭೃಂಗರಾಜ, ಅಂಗಾರಕ, ಕೇಶರಂಜನ, ರವಿಪ್ರಿಯಾ, ಮರ್ಕವ, ಭೃಂಗರಾ, ಭೃಂಗ, ಮಹಾನೀಲ, ಸೂರ್ಯಾವರ್ತ, ಪಿತೃಪ್ರಿಯ, ಕೇಶರಂಜನ, ಕೇಶಲಿ, ರವಿವಲ್ಲಭ. ಕೂದಲು ಕಪ್ಪುಬಣ್ಣಕ್ಕೆ ತಿರುಗುವಂತೆ ಮಾಡುವುದರಿಂದ ಇದನ್ನು 'ಕೇಶರಂಜನ' ಎಂದು ಸಂಸ್ಕೃತದಲ್ಲಿ ಕರೆಯುತ್ತಾರೆ.

ದ್ರವ್ಯದ ವರ್ಣನೆ

ಕಪ್ಪು ಕಂದು ಬಣ್ಣದ ಕಾಂಡವನ್ನು ಹೊಂದಿದ ಗಿಡವು 8ರಿಂದ 9 ಇಂಚು ಉದ್ದಕ್ಕೆ ಬೆಳೆಯುತ್ತದೆ. ಕಾಂಡದ ಮೇಲೆ ರೋಮಗಳಿದ್ದು, ಎಲೆಗಳು 3–5ಸೆಂ. ಮೀಟರ್‌ನಷ್ಟು ಉದ್ದವಾಗಿ, 1–2 ಸೆಂ. ಮೀಟರ್‌ನಷ್ಟು ಅಗಲವಾಗಿ, ಎಲೆಯ ತುದಿಯು ಚೂಪಾಗಿ ಇರುತ್ತದೆ. ಎಲೆಯ ಕಂಕುಳಲ್ಲಿ ಸೂರ್ಯಕಾಂತಿಹೂವನ್ನು ಹೋಲುವ ಹೂಗಳಿರುತ್ತವೆ. ಹೂವಿನ ಬಣ್ಣ ಬಿಳುವಾಗಿರುತ್ತದೆ. ದ್ರವ್ಯವು ಹೂವನ್ನು ಷರತ್ ಋತುವಿನಲ್ಲಿ ಹೇಮಂತದಲ್ಲಿ ಬೀಜಗಳನ್ನು ಬಿಡುವ ಈ ಗಿಡದ ಬೀಜಗಳು ಕರಿಜೀರಿಗೆ ಹಾಗೆ ಇರುತ್ತದೆ. ಸಾಮಾನ್ಯವಾಗಿ ಭಾರತದಲ್ಲೆಡೆ ಬೆಳೆಯುವ ಈ ದ್ರವ್ಯವು ಹೆಚ್ಚಾಗಿ ಪಂಜಾಬ್, ಕೊಂಕಣ್, ಡೆಖಾನ್ ಪ್ರದೇಶದಲ್ಲಿ ಬೆಳೆಯುತ್ತದೆ.

ವಿಧಗಳು

ರಾಜ ನಿಘಂಟುಕಾರನ ಪ್ರಕಾರ ಈ ದ್ರವ್ಯದಲ್ಲಿ ಮೂರು ಬಗೆಗಳಿವೆ.

- ಶ್ವೇತ ಭೃಂಗರಾಜ
- ಪೀತ ಭೃಂಗರಾಜ
- ನೀಲಿ ಭೃಂಗರಾಜ

ಉಪಯುಕ್ತ ಅಂಗಗಳು

- ಸಂಪೂರ್ಣ ಗಿಡ
- ಬೀಜಗಳು

ದ್ರವ್ಯದ ಗುಣಧರ್ಮಗಳು

ರಸ : ಕಟು, ತಿಕ್ತ
ಗುಣ : ರೂಕ್ಷ, ಲಘು

ವೀರ್ಯ : ಉಷ್ಣ

ವಿಪಾಕ : ಕಟು

ಕರ್ಮ : ಕಫವಾತಹರ, ಕೇಶ್ಯ, ರಸಾಯನ, ಬಲ್ಯ, ಚಕ್ಷುಷ್ಯ, ದಂತ್ಯ, ತ್ವಚ್ಯ.

ಭೃಂಗರಾಜಃ ಸಮಾಖ್ಯಾತಃ ತಿಕ್ತೋಷ್ಣೋ ರೂಕ್ಷ ಏವ ಚ।
ಕಫಶೋಫಾಮಪಾಂಡುತ್ವಕ್‌ಹೃದ್ರೋಗವಿಷನಾಶನಃ॥ *(ಧನ್ವಂತರಿ ನಿಘಂಟು)*

ಎಂದರೆ ಗರುಗದ ಸೊಪ್ಪು ತಿಕ್ತ ರಸದಿಂದ ಕೂಡಿದೆ, ಉಷ್ಣ ವೀರ್ಯದಿಂದ ಕೂಡಿದೆ, ರೂಕ್ಷ ಗುಣದಿಂದ ಕೂಡಿದೆ. ಕಫಹರವಾಗಿದೆ. ಶೋಫ, ಆಮರೋಗ, ಪಾಂಡು, ಚರ್ಮರೋಗ, ಹೃದಯರೋಗ, ವಿಷದ ಬಾಧೆಗಳನ್ನು ನಿವಾರಿಸುತ್ತದೆ.

ಔಷಧಿ ಪ್ರಮಾಣ

ಸ್ವರಸ – 6–12 ಮಿ.ಲೀ.

ಬೀಜಗಳು – 0.5–1.5 ಗ್ರಾಂ.

ಭೃಂಗರಾಜ ತೈಲ ಬೇಕಾಗುವಷ್ಟು

ಔಷಧೀಯ ಯೋಗಗಳು

- ಭೃಂಗರಾಜ ತೈಲ
- ನೀಲಿ ಭೃಂಗಾದಿ ತೈಲ
- ಷಡ್‌ಬಿಂದು ತೈಲ
- ಭೃಂಗರಾಜಾದಿ ಚೂರ್ಣ
- ಭೃಂಗರಾಜ ಘೃತ
- ಭೃಂಗರಾಜ ಆಸವ

ಔಷಧೀಯ ಉಪಯೋಗಗಳು

- ಭೃಂಗಾಮಲಕ ತೈಲವನ್ನು ರಾತ್ರಿ ಮಲಗುವಾಗ ತಲೆಗೆ ತಿಕ್ಕಿ ಬೆಳಿಗ್ಗೆ ಅಭ್ಯಂಜನ ಮಾಡಿದರೆ ಕೂದಲು ಉದುರುವಿಕೆ, ದೃಷ್ಟಿಮಾಂದ್ಯ, ನಿದ್ರಾನಾಶ, ನರೆಗೂದಲು, ತಲೆಯ ಹೊಟ್ಟು ಮುಂತಾದ ತೊಂದರೆಗಳ ಪರಿಹಾರವಾಗುವುದಲ್ಲದೆ, ಮೆದುಳಿಗೆ ಬಲವನ್ನು ಕೊಡುವುದು.
- ಗರುಗದ ಸೊಪ್ಪು ಒಂದು ಭಾಗ, ಹಸಿ ಶುಂಠಿ 1/4 ಭಾಗ ಇವುಗಳನ್ನು ನಿಂಬೆಹಣ್ಣಿನ ರಸದಲ್ಲಿ ಅರೆದು ನಿತ್ಯ ಚಟ್ನಿಯಂತೆ ಉಪಯೋಗಿಸಿದರೆ ಕಫ, ಬಾವು, ಅಜೀರ್ಣ, ರಕ್ತಹೀನತೆ, ಚರ್ಮರೋಗಗಳು ಮತ್ತು ಕ್ಷಯ ಪರಿಹಾರವಾಗುತ್ತದೆ.

- ಗರುಗದ 5 ಚಮಚ ರಸದಲ್ಲಿ 5 ಗುಂಜಿ ಶುಂಠಿ 100 ಮಿ.ಲೀ. ಮಜ್ಜಿಗೆ ಸೇರಿಸಿ 11 ದಿನಗಳವರೆಗೆ ಬೆಳಗ್ಗೆ ಸೇವಿಸಿದರೆ ಕಾಮಾಲೆ ರೋಗ ನಿವಾರಣೆಯಾಗುತ್ತದೆ.
- ಗರುಗಧ ಎಲೆ 5, ಮೆಣಸಿನ ಕಾಳು 5 ಮತ್ತು ಮಜ್ಜಿಗೆ ಸೇರಿಸಿ ಚೆನ್ನಾಗಿ ಅರೆದು ದಿನಾಲು ಬೆಳಗ್ಗೆ ಕುಡಿಯುವುದರಿಂದ ಅಜೀರ್ಣ ರೋಗಕ್ಕೆ ಒಳ್ಳೆಯದು.
- ಗರುಗದ ಸೊಪ್ಪಿನ ರಸವನ್ನು, ಕಾಲಿನ ಬೆರಳುಗಳ ಸಂಧಿಯಲ್ಲಿ ಉಂಟಾಗುವ ಬಿರುಕುಗಳಿಗೆ ಹಚ್ಚುವುದರಿಂದ ಬಿರುಕುಗಳು ಕೂಡಿಕೊಂಡು ಬೇಗ ವಾಸಿಯಾಗುತ್ತದೆ.
- ಒಂದು ಭಾಗ ಎಣ್ಣೆಗೆ 20 ಭಾಗ ಭೃಂಗರಾಜ ರಸ ಮತ್ತು ಸ್ವಲ್ಪ ಅಣಿಲೆಕಾಯಿ ಲೇಪ ಸೇರಿಸಿ ಬಿಸಿ ಮಾಡಿ ಸೇವಿಸುವುದರಿಂದ ಉಬ್ಬಸ ಮತ್ತು ಕೆಮ್ಮು ರೋಗ ನಿವಾರಣೆ.
- ಅಣಿಲೆಕಾಯಿ ಮತ್ತು ಗರುಗದ ಸೊಪ್ಪಿನ ಚೂರ್ಣಕ್ಕೆ ಬೆಲ್ಲ ಬೆರೆಸಿ ಸೇವಿಸುವುದರಿಂದ ಅಮ್ಲಪಿತ್ತರೋಗವು ನಿವಾರಣೆ.
- ಗರುಗದ ಎರಡು ಚಮಚ ರಸಕ್ಕೆ ಎರಡು ಚಮಚ ಜೇನುತುಪ್ಪ ಬೆರೆಸಿ ಸೇವಿಸುವುದರಿಂದ ಮಕ್ಕಳ ಹುಳುಗಳ ಉಪದ್ರವವು ನಿವಾರಣೆಯಾಗುತ್ತದೆ.



ಮಗುವಿನ ಆರೋಗ್ಯ ದೇಶದ ಭಾಗ್ಯ !

ಸುಗಂಧವನ್ನು ಬೀರುವ ಗಂಧದ ಮರ

Santalum album, Linn.

Santalaceae





ಗಂಧದ ತವರು ಕರ್ನಾಟಕ. ಈ ಮರವು ನಮ್ಮ ಅರಣ್ಯದಲ್ಲಿ ಬೆಳೆಯುವ ಅತ್ಯಂತ ಬೆಳೆಬಾಳುವ ಮರವೆಂದು ಹೆಸರು ಪಡೆದಿದೆ. ಗಂಧದ ಮರದಿಂದ ತಿಕ್ಕಿ ತಯಾರಿಸಿದ ಲೇಪವನ್ನು ದೇವಸ್ಥಾನದಲ್ಲಿ ಪ್ರಸಾದವಾಗಿ ಕೊಡುವುದನ್ನು ನಾವು ಹೆಚ್ಚಿನ ದೇವಸ್ಥಾನಗಳಲ್ಲಿ ಕಾಣಬಹುದು. ಕೆಲವರು ಗಂಧದ ಲೇಪವನ್ನು ತಮ್ಮ ಹಣೆಗೆ, ಹಣೆಯ ಬದಿಭಾಗದಲ್ಲಿ ಹಾಕುವುದನ್ನು ನಾವೂ ದಿನನಿತ್ಯವು ಕಾಣುತ್ತೇವೆ. ಗಂಧದಿಂದ ಲೇಪವನ್ನು ಹಣೆಗೆ ಹಚ್ಚುವುದರಿಂದ ತಲೆಯು ಶಾಂತತೆಯಿಂದ ಕೂಡಿ, ಮೆದುಳಿನ ಶಕ್ತಿ ಹೆಚ್ಚುತ್ತದೆ ಎಂಬುದು ಅವರ ನಂಬಿಕೆ ಮಾತ್ರವಲ್ಲದೇ ಸಂಪ್ರದಾಯವೂ ಕೂಡ. ಸುಗಂಧತೆಯಿಂದ ಕೂಡಿದಗಂಧದ ಮರವು ಸಸ್ಯಜಗತ್ತಿನಲ್ಲಿ ಒಂದು ಶ್ರೇಷ್ಠವಾದ ಸಸ್ಯವಾಗಿದೆ.

ಬಹು ಭಾಷಾ ಹೆಸರುಗಳು

ಕನ್ನಡ : ಶ್ರೀಗಂಧ

ಸಂಸ್ಕೃತ : ಚಂದನ

ತುಳು : ಗಂಧದ ಮರ

ಹಿಂದಿ : ಸಫೇದ್ ಚಂದನ

ಇಂಗ್ಲೀಷ್ : ಸ್ಯಾಂಡಲ್ ವುಡ್ ಟ್ರೀ

ಪರ್ಯಾಯ ಪದಗಳು

ಚಂದನ, ಗಂಧಸಾರ, ಮಲಯಜ, ಶ್ರೀಗಂಧ, ಶ್ವೇತ ಚಂದನ, ರಾಜ್ಯಯೋಗ, ಭದ್ರಸಾರ, ಪೀತಸಾರ, ಭದ್ರಶ್ರಿಯ, ಮಹಾರ್ಹ, ಏಕಾಂಗೀ, ಚಂದ್ರಕಂಠ, ಗ್ರಾಮ್ಯ, ಕೃಷ್ಣ ಚಂದನ, ಭದ್ರಶ್ರೀ, ಹರಿಚಂದನ, ಮಲಯೋದ್ಭವ, ಮಾಂಗಲ್ಯ, ಪೀತಸಾರ, ಸರ್ಪೇಷ್ಟ, ತಿಲಪರ್ಣಿ, ವರ್ಣಕ.

ದ್ರವ್ಯದ ವರ್ಣನೆ

ಗಂಧದ ಮರವು ಸುಮಾರು 33 ಅಡಿ ಎತ್ತರದವರೆಗೆ ಬೆಳೆಯುತ್ತದೆ. ಮರವು ಸದಾಕಾಲ ಎಲೆಗಳಿಂದ ತುಂಬಿರುತ್ತದೆ. ಎಲೆಗಳು ಹಸಿರಾಗಿದ್ದು ಶಾಖೆಗಳು ಬಾಗಿ ಗುಂಪಾಗಿರುವುವು. ಕಾಂಡವು ಅಷ್ಟೇನು ದಪ್ಪವಿರುವುದಿಲ್ಲ. ಬಲಿತ ಮರದ ಕಾಂಡದ ದಪ್ಪ $1 - 1^1/_2$ ಅಡಿ ಇರುತ್ತದೆ. ತೊಗಟೆ ಕಂದು ಬಣ್ಣದ್ದು ಮತ್ತು ಒಳಗಡೆ ಬಿಳುಪು. ಮರ ಬೆಳೆದು ಬಲಿತಂತೆ ಒಳಗಡೆ ಹಳದಿ ಕಂದು ಬಣ್ಣದ ಸೇಗು ಬರುವುದು. ಇದು ಬಹಳ ಸುವಾಸನೆಯಿಂದ ಕೂಡಿದೆ. ಪ್ರಕೃತಿಯಲ್ಲಿ ಇಷ್ಟೊಂದು ಸಹಜ ಸುವಾಸನೆಯುಳ್ಳ ಮರ ಅಪರೂಪವೆನ್ನಬಹುದು. ಹಣ್ಣು ನೀಲಿಕಪ್ಪಾಗಿ ಬೀಜದ ಒಳಗಡೆ ಬಿಳಿಯ ಪಪ್ಪಿರುವುದು. ಬಲಿತ ಸೇಗಿನಲ್ಲಿ ತೈಲವಿರುತ್ತದೆ. ಶ್ರೀಗಂಧದ ಮರವು ಹೆಚ್ಚಾಗಿ ಕರ್ನಾಟಕ ತಮಿಳುನಾಡು ರಾಜ್ಯಗಳಲ್ಲಿ ಬೆಳೆಯುತ್ತದೆ.

ವಿಧಗಳು

ಚಂದನದಲ್ಲಿ ಎರಡು ವಿಧಗಳಿವೆ. ಅವು

- ಬಿಳಿ ಚಂದನ
- ಕೆಂಪು ಚಂದನ

ಎರಡರ ಗುಣಗಳು ಸ್ವಲ್ಪ ಹೆಚ್ಚು ಕಡಿಮೆ ಒಂದೇ ರೀತಿಯಾಗಿವೆ, ಆದರೂ ಔಷಧಿಗಳಲ್ಲಿ ಚೂರ್ಣ ಸ್ನೇಹ, ಆಸವಗಳಿಗಾಗಿ ಬಿಳಿಗಂಧವನ್ನು, ಕಷಾಯ ಲೇಪಗಳಿಗಾಗಿ ಕೆಂಪು ಗಂಧವನ್ನು ಉಪಯೋಗಿಸಬೇಕೆಂದು ಶಾರಂಘದರ ಸಂಹಿತೆಯು ಹೇಳುತ್ತದೆ.

ಭಾವಪ್ರಕಾಶನ ಪ್ರಕಾರ ಚಂದನದಲ್ಲಿ ನಾಲು ವಿಧಗಳಿವೆ. ಅವು

- ಚಂದನ
- ರಕ್ತ ಚಂದನ

- ಕಾಲೀಯಕ (ಪೀತ ಚಂದನ)
- ಕುಚಂದನ

ಉಪಯುಕ್ತ ಅಂಗಗಳು

- ಸೇಗು (Heart wood)
- ಗಂಧದೆಣ್ಣೆ
- ಬೇರು

ದ್ರವ್ಯದ ಗುಣಧರ್ಮಗಳು

ರಸ : ತಿಕ್ತ, ಮಧುರ

ಗುಣ : ಲಘು, ರೂಕ್ಷ

ವೀರ್ಯ : ಶೀತ

ವಿಪಾಕ : ಕಟು

ಕರ್ಮ : ಕಫ ಪಿತ್ತಹರ, ವರ್ಣ್ಯ, ದಾಹಪ್ರಶಮನ, ವಿಷಘ್ನ

ಶ್ರೀಗಂಧಂ ಶೀತಲಂ ಸ್ವಾದು ತಿಕ್ತಂ ಪಿತ್ತವಿನಾಶನಂ।
ಪಿತ್ತಾಸ್ರವಿಷತೃಟ್‌ದಾಹ ಕೃಮಿಘ್ನಂ ಗುರು ರೂಕ್ಷಣಂ॥ (ಧನ್ವಂತರಿ ನಿಘಂಟು)

ಎಂದರೆ ಶ್ರೀಗಂಧವು ಕಹಿಪ್ರಧಾನವಾದ ಸಿಹಿರಸವುಳ್ಳದ್ದಾಗಿರುವುದು. ಪಿತ್ತವಿಕಾರಗಳನ್ನು ನಾಶಮಾಡುವುದು. ರಕ್ತಸ್ರಾವವನ್ನು ನಿಲ್ಲಿಸುವುದು. ಸ್ಥಾವರ, ಜಂಗಮ ವಿಷಬಾಧೆಗಳನ್ನು ಗುಣಪಡಿಸುವುದು. ಕ್ರಿಮಿಹರವಾಗಿದೆ. ಗುರು ಮತ್ತು ರೂಕ್ಷ ಗುಣಗಳಿಂದ ಕೂಡಿದೆ.

ಔಷಧಿ ಪ್ರಮಾಣ

ಚೂರ್ಣ : 3–5 ಗ್ರಾಂ.

ಕಷಾಯ : 50–100 ಮಿ.ಲೀ.

ಆಸವ : 100 ಮಿ.ಲೀ.

ತೈಲ : 5–20 ಬಿಂದುಗಳು

ಔಷಧೀಯ ಯೋಗಗಳು

- ಚಂದನಾದಿ ಚೂರ್ಣ
- ಚಂದನಾದಿ ವಟಿ
- ಚಂದನಾಸವ
- ಚಂದನಾದಿ ಘೃತ

- ಚಂದನಾದಿ ತೈಲ
- ಚಂದನಾದಿ ಕ್ವಾಥ

ಔಷಧೀಯ ಉಪಯೋಗಗಳು


- ಅರ್ಜುನ ಮತ್ತು ಗಂಧದ ಮರದ ಕಷಾಯವನ್ನು ಕುಡಿಯುವುದರಿಂದ ಶುಕ್ರಮೇಹವು ನಿವಾರಣೆ.
- ಮಂಜಿಷ್ಠ ಮತ್ತು ಗಂಧದ ಮರದ ಕಷಾಯವನ್ನು ಸೇವಿಸುವುದರಿಂದ ಮಂಜಿಷ್ಠ ಮೇಹವು ಕಡಿಮೆಯಾಗುತ್ತದೆ.
- ಗಂಧವನ್ನು ನೆಲ್ಲಿಕಾಯಿಯ ರಸದೊಂದಿಗೆ ಸೇವಿಸುವುದರಿಂದ ವಾಂತಿಯು ಕಡಿಮೆಯಾಗುತ್ತದೆ.
- ಚಂದನವನ್ನು ಹಾಲು ಅಥವಾ ತುಪ್ಪ ಅಥವಾ ಜೇನುತುಪ್ಪದೊಂದಿಗೆ ಸೇವಿಸುವುದರಿಂದ ಪ್ರದರ ರೋಗವು ಗುಣವಾಗುತ್ತದೆ.
- ಬಲಿತ ಶ್ರೀಗಂಧದ ಕೊರಡನ್ನು ಗಟ್ಟಿ ಮೊಸರಿನಲ್ಲಿ ತೇದು ಹಚ್ಚುವುದರಿಂದ ಕಜ್ಜಿ ತುರಿಕೆ ರೋಗಗಳು ಗುಣವಾಗುವುವು.
- ಗಂಧದ ಮರ ಮತ್ತು ಬಜೆಯನ್ನು ಮಜ್ಜಿಗೆಯಲ್ಲಿ ತೇಯ್ದು, ಎರಡರ ಗಂಧವನ್ನು ಸೇರಿಸಿ, ಕಲಸಿ ಬಿಳಿಯ ಚಿಬ್ಬಿಗೆ ಲೇಪಿಸುವುದರಿಂದ ಚಿಬ್ಬು ವಾಸಿಯಾಗುತ್ತದೆ.
- ಚಂದನಕ್ಕೆ ಸಕ್ಕರೆ ಮತ್ತು ಜೇನುತುಪ್ಪ ಬೆರೆಸಿ, ಅದನ್ನು ಅಕ್ಕಿ ತೊಳೆದ ನೀರಿನಲ್ಲಿ ಸೇವಿಸುವುದರಿಂದ ರಕ್ತಾತಿಸಾರ ನಿವಾರಣೆಯಾಗುತ್ತದೆ.
- ಚಂದನದ ಸಾರವನ್ನು ಶುಂಠಿಯ ರಸದೊಂದಿಗೆ ಸೇವಿಸುವುದರಿಂದ ರಕ್ತ ಸೋರುವ ಮೂಲವ್ಯಾಧಿಗೆ ಒಳ್ಳೆಯದು.
- ಚಂದನದ ಕಷಾಯಕ್ಕೆ ಸಕ್ಕರೆ ಮತ್ತು ಜೇನುತುಪ್ಪ ಸೇರಿಸಿ ಸೇವಿಸುವುದರಿಂದ ವಾತರೋಗವು ನಿವಾರಣೆಯಾಗುತ್ತದೆ.
- ಶ್ರೀಗಂಧದ ಕೊರಡನ್ನು ಅರೆದು, ಅದನ್ನು ಬಿಸಿನೀರಿನಲ್ಲಿ ಕಲಸಿ ಕಾಲು ಬಟ್ಟಲು ಕುಡಿಯುವುದು ಮತ್ತು ಗಂಧವನ್ನು ಅರೆದು ಮೈಗೆ ಹಚ್ಚುವುದರಿಂದ ಜ್ವರ ಮತ್ತು ಮೈ ಉರಿ ಉಪಶಮನವಾಗುತ್ತದೆ.
- ಶ್ರೀಗಂಧದ ಎಣ್ಣೆಯನ್ನು 4–5 ತೊಟ್ಟು ಹಾಲಿನಲ್ಲಿ ಬೆರೆಸಿ ಸೇವಿಸುವುದರಿಂದ ಪ್ರಮೇಹ ರೋಗವು ನಿವಾರಣೆಯಾಗುತ್ತದೆ.
- ಶ್ರೀಗಂಧವನ್ನು ಅರೆದು ಸಕ್ಕರೆ ಬೆರೆಸಿ ಸೇವಿಸುವುದರಿಂದ ಉರಿಮೂತ್ರವು ನಿವಾರಣೆಯಾಗುತ್ತದೆ.

ಅಗ್ನಿ ಸ್ವರೂಪದ ಚಿತ್ರಮೂಲ

Plumbago zeylanica, Linn.

Plumbaginaceae





ಹಳ್ಳಿಗಳಲ್ಲಿ ಬೇಲಿಯ ರೂಪದಲ್ಲಿ, ಹೂದೋಟಗಳಲ್ಲಿ ಬೆಳೆಸುವ ಚಿತ್ರಮೂಲವು ಸಾಮಾನ್ಯವಾಗಿ ಎಲ್ಲರಿಗೂ ಪರಿಚಿತ ದ್ರವ್ಯ. ಹಳ್ಳಿಗಳಲ್ಲಿ ಚಿತ್ರಮೂಲದ ಹೂವನ್ನು ಹೆಣ್ಣು ಮಕ್ಕಳು ಓಲೆಯಂತೆ ಕಿವಿಗಳಿಗೆ ಧರಿಸುವರು. ಬೆಂಕಿಯಂತೆ ಉಷ್ಣವಾಗಿರುವುದರಿಂದಲೇ ಆಯುರ್ವೇದದಲ್ಲಿ ಈ ದ್ರವ್ಯವನ್ನು 'ಚಿತ್ರಕೋಽಗ್ನಿಸಮಃ' ಎಂದರೆ ಚಿತ್ರಮೂಲವು ಅಗ್ನಿಗೆ ಸಮಾನವೆಂದು ವಿವರಿಸಿದ್ದಾರೆ. ಈ ದ್ರವ್ಯದ ಬೇರು ಬಹಳ ಉಷ್ಣವಾದ್ದರಿಂದ ಇದನ್ನು ಗರ್ಭಿಣಿಯರು ಸೇವಿಸಬಾರದು ಯಾಕೆಂದರೆ ಇದು ಅಧಿಕ ಉಷ್ಣ, ತೀಕ್ಷ್ಣ ಗುಣದಿಂದ ಗರ್ಭಸ್ರಾವಕವಾಗಿದೆ. ಚಿತ್ರಮೂಲವನ್ನು ಸೌಮ್ಯಗೊಳಿಸಲಿಕ್ಕೆ, ಚಿತ್ರಕದ ಬೇರನ್ನು ತುಂಡು ತುಂಡು ಮಾಡಿ ಅದನ್ನು ಹಾಲು ಮತ್ತು ನೀರಿನ ಸಮ್ಮಿಶ್ರದ ದ್ರಾವಣದಲ್ಲಿ ಬಿಸಿಮಾಡಿ, ನಂತರ ಬಿಸಿಲಿನಲ್ಲಿ ಒಣಗಿಸಿ, ಪುಡಿಮಾಡಿ ಇಟ್ಟುಕೊಳ್ಳಬೇಕು. ಈ ರೀತಿ ಪುಡಿ ಮಾಡಿದ ಚಿತ್ರಮೂಲದ ಬೇರನ್ನು 4–5 ಗುಂಜಾ ಪ್ರಮಾಣದಷ್ಟು ರಾತ್ರಿ ಊಟದ ನಂತರ ಒಂದು ಹೊತ್ತು ಹಾಲು, ಮಜ್ಜಿಗೆ ಮುಂತಾದ ಅನುಪಾನದಲ್ಲಿ ಸೇವಿಸುವುದು ಉತ್ತಮ. ಹೆಚ್ಚಾಗಿ ಬೇರೆ ವನಸ್ಪತಿಗಳ ಸಮ್ಮಿಶ್ರದೊಂದಿಗೆಯೇ ಚಿತ್ರಮೂಲವನ್ನು ಉಪಯೋಗಿಸುವುದು ಒಳಿತು.

ಬಹು ಭಾಷಾ ಹೆಸರುಗಳು

ಕನ್ನಡ : ಚಿತ್ರಮೂಲ, ಅಗ್ನಿಪಾವಕ
ಸಂಸ್ಕೃತ : ಚಿತ್ರಮೂಲ
ತುಳು : ಚಿತ್ರಮೂಲೊ
ಹಿಂದಿ : ಚಿಟ
ಇಂಗ್ಲೀಷ್ : ಲೆಡ್‌ವರ್ಟ್

ಪರ್ಯಾಯ ಪದಗಳು

ಚಿತ್ರಮೂಲ, ಭಾನು, ದಹನ, ಪೀತೀ, ವಹ್ನಿ, ಚಿತ್ರಕ, ಚಿತ್ರಪಲಿ, ಅನಲ. ಸೂರ್ಯನ ಕಿರಣಗಳಷ್ಟು ಬಿಸಿಯಿಂದ ಕೂಡಿದರಿಂದಲೇ ಚಿತ್ರಮೂಲವನ್ನು 'ಭಾನು' ಎಂದು ಕರೆಯುತ್ತಾರೆ.

ದ್ರವ್ಯದ ವರ್ಣನೆ

ಚಿತ್ರಮೂಲವು ಬಹುಕಾಲ ಬದುಕುವ ಗಿಡಮೂಲಿಕೆಯಾಗಿದೆ. ಇದು ಸುಮಾರು 1–2.5 ಮೀಟರ್‌ನಷ್ಟು ಎತ್ತರಕ್ಕೆ ಬೆಳೆಯುತ್ತದೆ. ತೆಳ್ಳನೆಯ ಕಾಂಡವು ವೃತ್ತಾಕಾರ, ಮೃದುವಾಗಿ, ಗಂಟುಗಳಿಂದ ಕೂಡಿದೆ. ಅಂಡಾಕಾರದ ಎಲೆಗಳು 10ಸೆಂ.ಮೀ.ನಷ್ಟು ಉದ್ದ, 4 ಸೆಂ.ಮೀ. ನಷ್ಟು ಅಗಲವಾಗಿ ಬಿಲ್ವಪತ್ರೆಯ ಎಲೆಗಳಿಗೆ ಹೋಲುತ್ತದೆ. ಎಲೆಯ ಬಣ್ಣ ಹಸುರು. ಹೂವಿನ ತೊಟ್ಟು 10–20 ಸೆಂ.ಮೀ.ನಷ್ಟು ಉದ್ದವಾಗಿ ಅನೇಕ ಉಪಶಾಖೆಗಳಿಂದ ಕೂಡಿದೆ. ಹೂ ಗೊಂಚಲಿನ ಉದ್ದಕ್ಕೂ ಅಂಟು ಅಂಟಾದ ರೋಮಗಳಿರುತ್ತವೆ. ಕಾಯಿಯು ಅಂಡಾಕಾರ ಮತ್ತು ಅಂಟಿನಿಂದ ಕೂಡಿದೆ. ಕಾಯಿಯಲ್ಲಿ ಅಂಡಾಕಾರದ ಒಂದು ಬೀಜವಿರುತ್ತದೆ. ಬೆರಳಿನಷ್ಟು ದಪ್ಪನೆಯ ಬೇರು ಹೊರಗೆ ಕೆಂಪು ಬಣ್ಣದಿಂದ, ಒಳಗೆ ಬಿಳಿ ಬಣ್ಣದಿಂದ ಕೂಡಿದೆ. ಬೇರು ಕಟು ರಸದಿಂದ ಕೂಡಿದೆ. ಈ ದ್ರವ್ಯವು ಹೂವನ್ನು ಚಳಿಗಾಲದಲ್ಲಿ ಒಂದು ತಿಂಗಳ ನಂತರ ಕಾಯಿಯನ್ನು ಬಿಡುತ್ತದೆ. ಸಾಮಾನ್ಯವಾಗಿ ಭಾರತದೆಲ್ಲೆಡೆ ಬೆಳೆಯುವ ಈ ದ್ರವ್ಯವು ಹೆಚ್ಚಾಗಿ ಬಂಗಾಲ, ಉತ್ತರ ಪ್ರದೇಶ, ದಕ್ಷಿಣ ಭಾರತ, ಶ್ರೀಲಂಕಾ, ಸಿಕ್ಕಿಂ ಪ್ರದೇಶಗಳಲ್ಲಿ ಬೆಳೆಯುತ್ತದೆ.

ವಿಧಗಳು

ಹೂವಿನ ಪ್ರಕಾರ ಚಿತ್ರಮೂಲದಲ್ಲಿ ಮೂರು ವಿಧಗಳಿವೆ. ಅವು

- ಬಿಳಿ
- ಕೆಂಪು
- ನೀಲಿ

ಸಸ್ಯಶಾಸ್ತ್ರದಲ್ಲಿ ಈ ಕೆಳಗಿನ ಮೂರು ವಿಧಗಳನ್ನು ಕಾಣಬಹುದು. ಅವು P.rosea, P.indica ಮತ್ತು P.auriculata.

ಉಪಯುಕ್ತ ಅಂಗಗಳು

- ಬೇರಿನ ತೊಗಟೆ

ದ್ರವ್ಯದ ಗುಣಧರ್ಮಗಳು

ರಸ : ಕಟು

ಗುಣ : ಲಘು, ರೂಕ್ಷ, ತೀಕ್ಷ್ಣ

ವೀರ್ಯ : ಉಷ್ಣ

ವಿಪಾಕ : ಕಟು

ಕರ್ಮ : ಕಫವಾತಹರ, ದೀಪನ, ಪಾಚನ, ಗ್ರಾಹೀ

ಚಿತ್ರಕೋಽಗ್ನಿಸಮಃ ಪಾಕೇ ಕಟುಕಃ ಕಫಶೋಫಜಿತ್
ವಾತೋದರಾರ್ಶೋಗ್ರಹಣೀಕ್ಷಯಪಾಂಡುವಿನಾಶನಃ॥ (ಧನ್ವಂತರಿ ನಿಘಂಟು)

ಎಂದರೆ ಚಿತ್ರಮೂಲವು ಅಗ್ನಿಗೆ ಸಮ. ಪಚನ ಕಾರ್ಯ ಮಾಡುತ್ತದೆ. ಕಟು ರಸ ಮತ್ತು ಪಾಕದಿಂದ ಕೂಡಿದೆ, ಕಫಹರ, ಬಾವುಗಳನ್ನು ನಿವಾರಿಸುತ್ತದೆ.

ಔಷಧಿ ಪ್ರಮಾಣ

ಚೂರ್ಣ – 1–2 ಗ್ರಾಂ

ಔಷಧೀಯ ಯೋಗಗಳು

- ಚಿತ್ರಕ ಹರೀತಕೀ
- ಚಿತ್ರಕಾದಿ ವಟಿ
- ಚಿತ್ರಕ ಘೃತ
- ಚಿತ್ರಕಾದಿ ಲೇಹ
- ಸಾಧಾರಣ ಯೋಗ
- ಚಿತ್ರಕ ರಸಾಯನ

ಔಷಧೀಯ ಉಪಯೋಗಗಳು

ಚಿತ್ರಮೂಲ ಬೇರಿನ ಲೇಪವನ್ನು ಶುಂಠಿ ಮತ್ತು ಹುಳಿಗಂಜಿಯಲ್ಲಿ ಬೆರೆಸಿ ಮೂಲವ್ಯಾಧಿಗೆ ಹಚ್ಚುವುದರಿಂದ ಮೂಲವ್ಯಾಧಿಯು ನಿವಾರಣೆಯಾಗುತ್ತದೆ.

- ಚಿತ್ರಮೂಲದ ಬೇರಿನ ಪುಡಿಯನ್ನು ಮಜ್ಜಿಗೆಯೊಂದಿಗೆ ಸೇವಿಸುವುದರಿಂದ ಅತಿಸಾರ ರೋಗವು ನಿವಾರಣೆಯಾಗುತ್ತದೆ.
- ಚಿತ್ರಮೂಲ ದೇವದಾರು ಮತ್ತು ನುಗ್ಗೆಯನ್ನು ಗೋಮೂತ್ರದಲ್ಲಿ ಅರೆದು ಲೇಪ ಮಾಡಿ, ಊತಕ್ಕೆ ಲೇಪಿಸುವುದರಿಂದ ಊತವು ಕಡಿಮೆಯಾಗುತ್ತದೆ.
- ಚಿತ್ರಮೂಲದ ಕಷಾಯ ಸೇವನೆಯಿಂದ ಪ್ರಮೇಹ ರೋಗವು ಕಡಿಮೆಯಾಗುತ್ತದೆ.
- ಕುಷ್ಠರೋಗದಿಂದ ಕಷಾಯ ಸೇವನೆಯಿಂದ ಪ್ರಮೇಹ ರೋಗವು ಕಡಿಮೆಯಾಗುತ್ತದೆ.
- ಕುಷ್ಠರೋಗದಿಂದ ಬಳಲುತ್ತಿರುವವರು ಚಿತ್ರಮೂಲ ಬೇರಿನ ಪುಡಿಯನ್ನು ಗೋಮುತ್ರದೊಂದಿಗೆ ಸೇವಿಸಬೇಕು.
- 10ಗ್ರಾಂ.ನಷ್ಟು ಬಲಾ (ಹೆತ್ತುತ್ತಿ) ಮತ್ತು ಚಿತ್ರಮೂಲದ ಬೇರಿನ ಪುಡಿಗೆ ಸಮ ಪ್ರಮಾಣದಷ್ಟು ಉಪ್ಪು ಬೆರೆಸಿ ಹಾಲಿನೊಂದಿಗೆ ಸೇವಿಸುವುದರಿಂದ ಪಾಂಡುರೋಗವು ನಿವಾರಣೆಯಾಗುತ್ತದೆ.
- ಚಿತ್ರಮೂಲದ ಬೇರಿನ ಲೇಪವನ್ನು ಹಚ್ಚುವುದರಿಂದ ಆನೆಕಾಲು (Filaria) ರೋಗವು ನಿವಾರಣೆಯಾಗುತ್ತದೆ.
- ಚಿತ್ರಮೂಲದ ಬೇರಿನ ಪುಡಿಯನ್ನು ಜೇನಿನೊಂದಿಗೆ ಸೇವಿಸುವುದರಿಂದ ಬೊಜ್ಜು ಕಡಿಮೆಯಾಗುತ್ತದೆ. ಆದರೆ ಮಿತ ಮತ್ತು ಪಥ್ಯ ಆಹಾರವನ್ನು ಸೇವಿಸಬೇಕು.
- ಚಿತ್ರಮೂಲ, ಆಳಲೆಕಾಯಿ, ಹಿಪ್ಪಲಿ, ತಾರೆಕಾಯಿ, ಮೆಣಸು, ವಾಯುವಿಡಂಗ ಮತ್ತು ಸೈಂಧವ ಲವಣವನ್ನು ಸಮತೂಕದಷ್ಟು ಸೇರಿಸಿ ಚೂರ್ಣ ಮಾಡಿ, 3 ಗ್ರಾಂ.ನಷ್ಟು ಚೂರ್ಣವನ್ನು ನೀರಿನೊಂದಿಗೆ ಸೇವಿಸುವುದರಿಂದ ಜೀರ್ಣಶಕ್ತಿ ಹೆಚ್ಚುವುದಲ್ಲದೇ ಕೆಮ್ಮು, ಉಬ್ಬಸ ರೋಗವು ನಿವಾರಣೆಯಾಗುತ್ತದೆ.
- ಚಿತ್ರಮೂಲದ ಬೇರನ್ನು ಅರೆದು ಗಂಟುನೋವಿಗೆ ಹಚ್ಚುವುದರಿಂದ ಗಂಟುನೋವು ನಿವಾರಣೆಯಾಗುತ್ತದೆ.

ಕಷಾಯ ಮಹಿಮೆಯ ಜೀರಿಗೆ

Cuminum cyminum, Linn.
Umbelliferae





ತಿಂಡಿ ತಿನಿಸುಗಳ ನಿಜವಾದ ರುಚಿಯನ್ನು ಮಾತ್ರವಲ್ಲದೇ ತಿಂಡಿ ತಿನಸುಗಳಿಗೆ ಸುವಾಸನೆಯನ್ನು ನೀಡಬಲ್ಲದು. ಇಂತಹ ಅದ್ಭುತ ಮಹಿಮೆಯ ಜೀರಿಗೆ ಅಡುಗೆ ಮನೆಯಲ್ಲಿ ಸರ್ವೇ ಸಾಮಾನ್ಯ ಹಾಗೂ ಎಲ್ಲರಿಗೂ ಪರಿಚಿತ ದ್ರವ್ಯ. ಜೀರಿಗೆಯನ್ನು ಅಡುಗೆಗೆ ಮಾತ್ರವಲ್ಲದೇ ಮನೆ ಮದ್ದಾಗಿಯೂ ಹಿಂದಿನ ಕಾಲದಿಂದಲೂ ಉಪಯೋಗಿಸುತ್ತಿದ್ದರು. ಇದರ ಔಷಧ ಗುಣಗಳಿಂದ ಚಿರಭೇಧಿ. ಮೂಲವ್ಯಾಧಿ, ಹೊಟ್ಟೆಹುಣ್ಣು ಮುಂತಾದ ರೋಗಗಳು ಜನರನ್ನು ಹೆಚ್ಚಾಗಿ ಬಾಧಿಸುತ್ತಿರಲಿಲ್ಲ. ಮಕ್ಕಳಲ್ಲಿ ಕಂಡು ಬರುವ ಉರಿಮೂತ್ರದ ತೊಂದರೆಗೆ ಜೀರಿಗೆಯ ಕಷಾಯ ಶ್ರೇಷ್ಠ ಮನೆಮದ್ದು. ಬೃಹತ್‌ಸಂಹಿತೆಗಳಲ್ಲಿ ವಿವರವಾಗಿ ವಿವರಿಸಲ್ಪಟ್ಟ ಈ ದ್ರವ್ಯವು ಆಯುರ್ವೇದದ ಶ್ರೇಷ್ಠ ದ್ರವ್ಯಗಳಲ್ಲಿ ಒಂದಾಗಿದೆ.

ಬಹು ಭಾಷಾ ಹೆಸರುಗಳು

ಕನ್ನಡ : ಜೀರಿಗೆ

ಸಂಸ್ಕೃತ : ಜೀರಕ

ತುಳು : ಜೀರ್ದರಿ

ಹಿಂದಿ : ಸಫೆದ್‌ಜೀರಾ

ಇಂಗ್ಲಿಷ್ : ಕ್ಯೂಮಿನಮ್‌ಸೀಡ್

ಪರ್ಯಾಯ ಪದಗಳು

ಜೀರಕ, ದೀಪಕ, ದೀಪ್ಯ, ದೀರ್ಘಜೀರಕ, ಮಗಧಾ, ಜರಣ, ಅಜಾಜೀ, ಶೀತ ಜಾಜೀ, ಶುಕ್ಲಜಾಜೀ,

ಜೀರ್ಣಶಕ್ತಿಯನ್ನು ವೃದ್ಧಿಸುವ ಶಕ್ತಿಯನ್ನು ಹೊಂದಿರುವುದರಿಂದಲೇ ದೀಪಕ, ದೀಪ್ಯಾ ಎಂದು ಕರೆಯುತ್ತಾರೆ.

ದ್ರವ್ಯದ ವರ್ಣನೆ

ಜೀರಿಗೆಯು ಸುಮಾರು ಒಂದು ಮೀಟರ್ ಎತ್ತರಕ್ಕೆ ಬೆಳೆಯುವ ವಾರ್ಷಿಕ ಸಸ್ಯ. ಎಲೆಯು ಚಿಕ್ಕದಾಗಿ ಎರಡು ಅಥವಾ ಮೂರು ಭಾಗಗಳಿಂದ ಕೂಡಿದೆ. ಹೂವು ಬಿಳಿ ಬಣ್ಣದಿಂದ ಕೂಡಿದೆ. ಬೀಜ ಕೊಳವೆಯಾಕಾರದಿಂದ ಕೂಡಿದ್ದು, ಬಿಳಿ ಅಥವಾ ಬೂದು ಬಣ್ಣದಿಂದ ಕೂಡಿದೆ. ಈ ಸಸ್ಯವು ಹೂವು ಮತ್ತು ಬೀಜವನ್ನು ಚಳಿಗಾಲದ ಕೊನೆಯ ಸಮಯದಲ್ಲಿ ಬಿಡುತ್ತದೆ. ಸಾಮಾನ್ಯವಾಗಿ ಭಾರತದ ಎಲ್ಲ ಪ್ರದೇಶಗಳಲ್ಲಿ ಬೆಳೆಯುವ ಈ ಸಸ್ಯವು ಹೆಚ್ಚಾಗಿ ಪಂಜಾಬ್, ರಾಜಸ್ಥಾನ್ ಮುಂತಾದ ಪ್ರದೇಶಗಳಲ್ಲಿ ಬೆಳೆಯುತ್ತದೆ. ಬಾಣಂತಿಯರ ಗರ್ಭಾಶಯ ಸಂಕೋಚಗೊಳ್ಳಲು, ಎದೆಹಾಲು ಹೆಚ್ಚಾಗಿ ಬರಲು ಕಹಿ ಜೀರಿಗೆಯನ್ನು ಕೊಡುವ ವಾಡಿಕೆ ಇತ್ತು. ಆದ್ದರಿಂದಲೇ ಕಹಿಜೀರಿಗೆಯನ್ನು 'ಬಾಣಂತಿಜೀರಿಗೆ' ಎಂದು ಕರೆದಿದ್ದಾರೆ.

ವಿಧಗಳು

ಜೀರಿಗೆಯಲ್ಲಿ ಎರಡು ಪ್ರಕಾರಗಳಿವೆ, ಅವು

- ಬಿಳಿ ಜೀರಿಗೆ
- ಕಪ್ಪು ಜೀರಿಗೆ

ಬಿಳಿ ಜೀರಿಗೆಯನ್ನು Cuminum cyminum ಎಂದೂ, ಕಪ್ಪು ಜೀರಿಗೆಯನ್ನು 'Carum carvi' ಎಂದು ಸಸ್ಯಶಾಸ್ತ್ರದಲ್ಲಿ ಹೆಸರಿಸಲಾಗಿದೆ. ಬಿಳಿ ಜೀರಿಗೆಯನ್ನು ಹೆಚ್ಚಾಗಿ ಔಷಧ ತಯಾರಿಕೆಗೆ ಉಪಯೋಗಿಸುತ್ತಾರೆ.

ಉಪಯುಕ್ತ ಅಂಗಗಳು

- ಬೀಜಗಳು

ದ್ರವ್ಯದ ಗುಣಧರ್ಮಗಳು

ರಸ : ಕಟು

ಗುಣ : ಲಘು, ರೂಕ್ಷ

ವೀರ್ಯ : ಉಷ್ಣ

ವಿಪಾಕ : ಕಟು

ಕರ್ಮ : ಕಫವಾತಹರ, ದೀಪನ, ಪಾಚನ, ಗ್ರಾಹೀ, ಗರ್ಭಾಶಯ ಶೋಧಕ, ಬಲ್ಯ

"ಜೀರಕಂ ಕಟು ರೂಕ್ಷಂ ಚ ವಾತಹೃದ್ದೀಪನಂ ಪರಂ।
ಗುಲ್ಮಾಧ್ಮಾನಾತಿಸಾರಘ್ನಂ ಗ್ರಹಣೀಕೃಮಿಹೃತ್‌ಪರಂ॥
(ಧನ್ವಂತರಿ ನಿಘಂಟು)

ಎಂದರೆ ಜೀರಿಗೆಯು ಕಟು ರಸದಿಂದ ಕೂಡಿದೆ. ರೂಕ್ಷ ಗುಣದಿಂದ ಕೂಡಿದೆ. ವಾತನಿವಾರಕ, ಹಸಿವು ಮತ್ತು ಜೀರ್ಣಶಕ್ತಿಯನ್ನು ವೃದ್ಧಿಸುವುದು ಗುಲ್ಮ, ಹೊಟ್ಟೆ ಉಬ್ಬರ, ಅತಿಸಾರ, ಗ್ರಹಣೀರೋಗ, ಹೊಟ್ಟೆಹುಳುಗಳ ಪೀಡೆಯನ್ನು ನಿವಾರಿಸುತ್ತದೆ.

ಔಷಧಿ ಪ್ರಮಾಣ

ಬೀಜದ ಚೂರ್ಣ – 3–6 ಗ್ರಾಂ

ಔಷಧೀಯ ಯೋಗಗಳು

- ಜೀರಕಾದ್ಯರಿಷ್ಟ
- ಜೀರಕಾದಿ ಮೋದಕ
- ಜೀರಕ ಘೃತ
- ಜೀರಕಾದಿ ಚೂರ್ಣ
- ಜೀರಕಾದಿ ತೈಲ

ಔಷಧೀಯ ಉಪಯೋಗಗಳು

- ಜೀರಿಗೆ ಪುಡಿಯನ್ನು ಬೆಲ್ಲದೊಂದಿಗೆ ಬೆರೆಸಿ ಜೇನುತುಪ್ಪದೊಂದಿಗೆ ಸೇವಿಸುವುದರಿಂದ ಮಲೇರಿಯಾ ಜ್ವರವು ನಿವಾರಣೆಯಾಗುವುದರ ಜೊತೆಗೆ ಜೀರ್ಣಕ್ರಿಯೆಯನ್ನು ಹೆಚ್ಚಿಸುತ್ತದೆ, ವಾತದ ರೋಗಗಳನ್ನು ನಿವಾರಿಸುತ್ತದೆ.
- ಜೀರಿಗೆ ಪುಡಿಯನ್ನು ಬೆಲ್ಲದೊಂದಿಗೆ ಬೆರೆಸಿ ಜೇನು ತುಪ್ಪ ಸೇರಿಸಿ ಮಜ್ಜಿಗೆಯಲ್ಲಿ ಸೇವಿಸಿ ನಂತರ ಬೆವರುವ ತನಕ ಬಿಸಿಲಿನಲ್ಲಿ ಕುಳಿತುಕೊಳ್ಳಬೇಕು. ಹೀಗೆ

ಮಾಡುವುದರಿಂದ ವಾತಕಫದಿಂದ ಉಂಟಾದ ಜ್ವರವು ನಿವಾರಣೆಯಾಗುತ್ತದೆ.

- ಜೀರಿಗೆ, ಸಕ್ಕರೆ, ಒಳ್ಳೆಮೆಣಸು ಮತ್ತು ಸುವರ್ಚಲ ಲವಣದ ಪುಡಿಯನ್ನು ಜೇನಿನೊಂದಿಗೆ ಬೆರೆಸಿ ಸೇವಿಸುವುದರಿಂದ ವಾಂತಿಯು ಕಡಿಮೆಯಾಗುತ್ತದೆ.
- ಜೀರಿಗೆ ಮತ್ತು ಕೊತ್ತಂಬರಿಯ ಲೇಪದಿಂದ ತಯಾರಿಸಿದ ತುಪ್ಪವನ್ನು ಸೇವಿಸುವುದರಿಂದ ಆಮ್ಲ ಪಿತ್ತ (Acid gastritis) ರೋಗವು ನಿವಾರಣೆಯಾಗುತ್ತದೆ.
- ಜೀರಿಗೆಯ ಲೇಪವನ್ನು ಊತಕ್ಕೆ ಹಚ್ಚುವುದರಿಂದ ನೋವಿನಿಂದ ಕೂಡಿದ ಊತವು ಕಡಿಮೆಯಾಗುತ್ತದೆ.
- ಜೀರಿಗೆಯ ಕಷಾಯದಿಂದ ಚರ್ಮವನ್ನು ತೊಳೆಯುವುದರಿಂದ ಚರ್ಮರೋಗವು ನಿವಾರಿಸಲ್ಪಡುತ್ತದೆ.
- ಹುರಿದ ಜೀರಿಗೆ ಪುಡಿಯನ್ನು ಜೇನಿನೊಂದಿಗೆ ಸೇವಿಸುವುದರಿಂದ ಅಜೀರ್ಣ, ಹಸಿವಿಲ್ಲದಿರುವಿಕೆ, ಹೊಟ್ಟೆನೋವು ಮುಂತಾದ ರೋಗಗಳು ನಿವಾರಣೆಯಾಗುತ್ತದೆ.
- ಜೀರಿಗೆಯ ಕಷಾಯ ಸೇವಿಸುವುದರಿಂದ ಉರಿಮೂತ್ರ ನಿವಾರಣೆಯಾಗಿ, ಮೂತ್ರವು ಹೆಚ್ಚಾಗಿ ಉತ್ಪತ್ತಿಯಾಗುತ್ತದೆ.
- ಜೀರಿಗೆ ಪುಡಿಯನ್ನು ಸಕ್ಕರೆಯೊಂದಿಗೆ ಸೇವಿಸುವುದರಿಂದ ಮೇಹರೋಗ, ಲೈಂಗಿಕ ರೋಗ (Gonorrhoea) ನಿವಾರಣೆಯಾಗುತ್ತದೆ.
- ಜೀರಿಗೆ ಪುಡಿಯನ್ನು ಬಿಸಿನೀರಿನಲ್ಲಿ ಕಲಸಿ ದಿನಕ್ಕೆ ಎರಡು ಬಾರಿ ಖಾಲಿ ಹೊಟ್ಟೆಗೆ ಸೇವಿಸುವುದರಿಂದ ಹೊಟ್ಟೆ ಹುಳುವಿನ ತೊಂದರೆಯಿಂದ ಬಳಲುತ್ತಿರುವವರಿಗೆ ಒಳ್ಳೆಯದು.
- ಅತಿಯಾದ ಬೆವರಿಗೆ ಜೀರಿಗೆ ಪುಡಿಯನ್ನು ಎರಡು ಬಾರಿ ಬಿಸಿನೀರಿನಲ್ಲಿ ಸೇವಿಸಬೇಕು.

ಜಂಬದಿಂದ ಕೂಡಿದ ಜಂಬು ನೇರಳೆ

Syzygium cumini, (Linn.)
Myrtaceae







ಜಂಬುನೇರಳೆ ಮರವು ಎಲ್ಲ ತರಹದ ಹವಾಗುಣದಲ್ಲಿ ಬೆಳೆಯುತ್ತದೆ. ನದಿಗಳ ಅಸುಪಾಸಿನಲ್ಲಿ ತೊರೆಗಳ, ಕೆರೆಕಟ್ಟೆಗಳ ಸಮೀಪ ತೇವಾಂಶವಿರುವ ಕಡೆ ಹುಲುಸಾಗಿ ಬೆಳೆಯುತ್ತದೆ. ಹಿಂದೂಗಳು ಇದನ್ನು ಪವಿತ್ರವಾದ ವನಸ್ಪತಿಯಾಗಿ ಗುರುತಿಸಿದ್ದಾರೆ. ಮೇಘ ದೇವನು ಜಂಬುವೃಕ್ಷವಾಗಿ ಪರಿವರ್ತನೆಗೊಂಡ ಎಂಬ ಉಲ್ಲೇಖವು ಇದೆ. ಇದರ ಮೊಟ್ಟಮೊದಲ ಪರಿಚಯವನ್ನು ಗಣೇಶ ಪುರಾಣದಲ್ಲಿ ಕಾಣಬಹುದು. ಸುಂದರವಾದ ಕೆಂಪು ಬಣ್ಣದ ಅತ್ತಿಯ ಹಣ್ಣು, ನೋಡಲು ಸುಂದರವಾಗಿದ್ದರೂ ಹುಳುಗಳಿಂದ ಕೂಡಿದೆ. ಆದರೆ 'ನೇರಳೆಹಣ್ಣು' ನೋಡಲು ಕಪ್ಪಾಗಿದ್ದರೂ, ತಿಂದರೆ ಬಾಯಿಗೆ ಬಹಳ ರುಚಿಯನ್ನು ನೀಡುತ್ತದೆ. ಇದರ ಹಣ್ಣು ಎಲ್ಲ ವಯಸ್ಸಿನವರಿಗೆ ಬಹಳ ಇಷ್ಟ.

ಬಹು ಭಾಷಾ ಹೆಸರುಗಳು

ಕನ್ನಡ : ನೇರಳೆ, ಜಂಬುನೇರಳೆ
ಸಂಸ್ಕೃತ : ಜಂಬು
ತುಳು : ಜಂಬುದ್ದೈ

ಹಿಂದಿ : ಜಾಮೂನ್

ಇಂಗ್ಲೀಷ್ : ಬ್ಲ್ಯಾಕ್ ಬೆರ್ರಿ

ಪರ್ಯಾಯ ಪದಗಳು

ಜಂಬು, ಫಲೇಂದ್ರಾ, ಕೋಕಿಲೇಷ್ಟ, ಪಿಕಭಕ್ಷ, ಸುರಭಿಪತ್ರ, ಜಾಂಬವ, ಮಹಾಫಲ. ಫಲಕಗಳ ಒಡೆಯ ಎಂಬ ಕಲ್ಪನೆಯಿಂದ ಜಂಬುನೇರಳೆಯನ್ನು 'ಫಲೇಂದ್ರಾ' ಎಂದು ಸಂಸ್ಕೃತದಲ್ಲಿ ಕರೆಯುತ್ತಾರೆ.

ದ್ರವ್ಯದ ವರ್ಣನೆ

ನೇರಳೆ ಹಣ್ಣು ಭಾರತದೆಲ್ಲೆಡೆ ಬೆಳೆಯುತ್ತಿದ್ದು ಇದರ ಔಷಧಿ ಮಹತ್ವವನ್ನು ಮನುಷ್ಯ ಹಿಂದಿನ ಕಾಲದಿಂದಲೂ ಅರಿತಿದ್ದಾನೆ. ಮರದ ಎತ್ತರ, ಹವಾಮಾನ ಮತ್ತು ಮಣ್ಣಿನ ಫಲವತ್ತತೆಗೆ ಅನುಗುಣವಾಗಿ 15–80 ಅಡಿ ಇರುತ್ತದೆ. ತೊಗಟೆಯ ಬಣ್ಣ ಬೂದು ಇಲ್ಲ, ಕಂದು ಬಣ್ಣದಿಂದ ಕೂಡಿದೆ. ತೊಗಟೆಯು ಬಹಳ ಮೃದುವಾಗಿದೆ. ಒರಟಾದ ಎಲೆಯು ಹೊಳಪಾಗಿದ್ದು ಗಾಢ ಹಸಿರಾಗಿರುತ್ತದೆ ಮತ್ತು ಕೆಳಭಾಗ ತಿಳಿಹಸಿರಾಗಿರುತ್ತದೆ. ಎಲೆಗಳು 2–6 ಇಂಚು ಉದ್ದ, ಸುಮಾರು 2 ಇಂಚು ಅಗಲವಾಗಿದೆ. ಎಲೆಯನ್ನು ತಿಕ್ಕಿದಾಗ ಒಂದು ಬಗೆಯ ಪರಿಮಳ ಬರುತ್ತದೆ. ಹೂವಿನಲ್ಲಿ ನಾಲ್ಕು ಪುಷ್ಪದಳಗಳು ಮತ್ತು ಹಲವಾರು ಕೇಸರಗಳಿವೆ. ಮೊದಲು ಹಸಿರು ಬಣ್ಣದಲ್ಲಿರುವ ಕಾಯಿ ಗುಲಾಬಿ ಬಣ್ಣಕ್ಕೆ ತಿರುಗಿ ನಂತರ ಕಪ್ಪು ಬಣ್ಣಕ್ಕೆ ತಿರುಗುತ್ತದೆ. ಈ ಮರವು ವಸಂತ ಋತುವಿನಲ್ಲಿ ಹೂಗಳನ್ನು, ನಂತರ ಕಾಯಿಯನ್ನು ಬಿಡುತ್ತದೆ.

ವಿಧಗಳು

ಕೈಯ್ಯದೇವ, ಭಾವಮಿಶ್ರ ಮತ್ತು ರಾಜನರಹರಿಯ ಪ್ರಕಾರ ಜಂಬುನೇರಳೆಯಲ್ಲಿ ಮೂರು ವಿಧಗಳಿವೆ. ಅವು

- ರಾಜ ಜಂಬು
- ಕಾಕ ಜಂಬು
- ಜಲ ಜಂಬು

ಸಸ್ಯಶಾಸ್ತ್ರದಲ್ಲಿ ಇದನ್ನು ಕ್ರಮವಾಗಿ Syzygium jambos, Syzygium cumini ಮತ್ತು Eugenia leyneana ಎಂದು ಕರೆಯುತ್ತಾರೆ.

ಉಪಯುಕ್ತ ಅಂಗಗಳು

- ಹಣ್ಣು
- ಎಲೆ
- ತೊಗಟೆ

ದ್ರವ್ಯದ ಗುಣಧರ್ಮಗಳು

ರಸ : ಕಷಾಯ, ಮಧುರ, ಆಮ್ಲ

ಗುಣ : ಲಘು, ರೂಕ್ಷ

ವೀರ್ಯ : ಶೀತ

ವಿಪಾಕ : ಕಟು

ಕರ್ಮ : ವಾತವರ್ಧಕ, ಕಫಪಿತ್ತಹರ, ಗ್ರಾಹೀ, ರೋಚಕ

ಜಂಬೂ ಕಷಾಯಮಧುರಾ ಶ್ರಮಪಿತ್ತದಾಹಕಂಠಾರ್ತಿಶೋಷಶಮನೀ
ಕ್ರಿಮಿದೋಷಹಂತ್ರೀ।
ಶ್ವಾಸಾತಿಸಾರಕಫಕಾಸವಿನಾಶಿನೀ ಚ ವಿಷ್ಟಂಭಿನೀ ಭವತಿ ರೋಚನಪಾಚನೀ ಚ॥
(ರಾಜ ನಿಘಂಟುಕಾರ)

ಎಂದರೆ ಜಂಬು ಕಷಾಯ, ಮಧುರ ರಸದಿಂದ ಕೂಡಿದೆ. ಶ್ರಮ, ಪಿತ್ತ, ದಾಹ, ಕಂಠದ ತೊಂದರೆ, ಶೋಷವನ್ನು ಶಮನಗೊಳಿಸುವುದು. ಕ್ರಿಮಿಯ ತೊಂದರೆ ನಾಶಮಾಡತ್ತದೆ. ಶ್ವಾಸ, ಅತಿಸಾರ, ಕಫ, ಕೆಮ್ಮುಗಳನ್ನು ನಾಶಮಾಡುತ್ತದೆ. ವಿಷ್ಟಂಭ, ರೋಚನ, ಪಾಚನ ಕಾರ್ಯಗಳನ್ನು ಮಾಡುತ್ತದೆ.

ಔಷಧಿ ಪ್ರಮಾಣ

ಸ್ವರಸ : 10–20 ಮಿ.ಲೀ.

ಚೂರ್ಣ : 3–6 ಗ್ರಾಂ

ಬೀಜದ ಚೂರ್ಣ : 500 ಮಿ.ಗ್ರಾಂ–5 ಗ್ರಾಂ

ಎಲೆಯ ಚೂರ್ಣ : 5 ಗ್ರಾಂ

ಔಷಧೀಯ ಯೋಗಗಳು

- ಜಂಬ್ವಾದಿ ತೈಲ
- ಪಂಚಪಲ್ಲವ ಯೋಗ
- ಜಂಬ್ವಾ ಆಸವ
- ಗಂಗಾಧರ ಚೂರ್ಣ
- ಜಂಬ್ವಾದಿ ಘೃತ

ಔಷಧೀಯ ಉಪಯೋಗಗಳು

- ಸಮಪ್ರಮಾಣದಲ್ಲಿ ನೇರಳೆ, ಮಾವು ಮತ್ತು ಬೆಟ್ಟ ನೆಲ್ಲಿಕಾಯಿ ಮರದ ಎಲೆಗಳನ್ನು ತೆಗೆದುಕೊಂಡು ಅರೆದು ರಸಮಾಡಿಕೊಂಡು ಸುಮಾರು 7–14 ಮಿ. ಲೀಟರ್‌ರಸಕ್ಕೆ

ಮೇಕೆ ಹಾಲು ಸೇರಿಸಿ ದಿವಸಕ್ಕೆ ಮೂರು ಸಾರಿ ಕುಡಿಯುವುದರಿಂದ ರಕ್ತಾತಿಸಾರ ಗುಣವಾಗುತ್ತದೆ.

- ಜಂಬುನೇರಳೆಯ ಚಿಗುರೆಲೆಗಳನ್ನು ಅಕ್ಕಿ ತೊಳೆದ ನೀರಿನಲ್ಲಿ ಅರೆದು ಕುಡಿಸುವುದರಿಂದ ಎಲ್ಲ ಬಗೆಯ ಪ್ರದರ ರೋಗಗಳು ವಾಸಿಯಾಗುತ್ತವೆ.
- ತೊಗಟೆಯ ಚೂರ್ಣವನ್ನು ಹುಣ್ಣುಗಳ ಮೇಲೆ ಸಿಂಪಡಿಸುವುದರಿಂದ ಅವು ಬೇಗ ವಾಸಿಯಾಗುತ್ತವೆ.
- 2 ಚಮಚ ನೇರಳೆ ಎಲೆಗಳ ರಸಕ್ಕೆ ಒಂದು ಚಮಚ ಜೇನು ಸೇರಿಸಿ ಕುಡಿಯುವುದರಿಂದ ಕೆಮ್ಮಿಗೆ ಒಳ್ಳೆಯದು.
- ಮೂತ್ರದ ಉರಿಗೆ ನೇರಳೆ ಎಲೆಗಳ ರಸವನ್ನು 2–2 ಚಮಚದಂತೆ ದಿನಕ್ಕೆ ಮೂರು–ನಾಲ್ಕು ಸಲ ಕೊಡಬೇಕು.
- ಚೇಳು ಕಚ್ಚಿದರೆ ನೇರಳೆ ಎಲೆಯ ರಸವನ್ನು ಹಚ್ಚಬೇಕು.
- ನೇರಳೆ ಹಣ್ಣಿನ ಶರ್ಬತ್‌ಸೇವನೆಯಿಂದ ದಣಿವು, ಪಿತ್ತ, ದಾಹ, ಕಡಿಮೆಯಾಗುತ್ತದೆ. ಅಲ್ಲದೆ ಅದು ಹೊಟ್ಟೆ ನೋವಿಗೂ ಪರಿಣಾಮಕಾರಿ.
- ದಿವಸಕ್ಕೆ 1–2 ಗ್ರಾಂ ಪ್ರಮಾಣದಷ್ಟು ಬೀಜ ಚೂರ್ಣ ಸೇವನೆಯಿಂದ ಪ್ರಮೇಹ ಮತ್ತು ಮಧುಮೇಹ ಗುಣವಾಗುತ್ತದೆ.
- ಬಿಲ್ವದ ಹಣ್ಣನ್ನು ಬೇಯಿಸಿ, ಅದನ್ನು ಜಂಬು ನೇರಳೆ, ದಾಳಿಂಬೆ, ಶ್ರೀಖಟ, ಅಗಲ ಶುಂಠಿಯ ಎಲೆಯಲ್ಲಿ ಒಂದು ರಾತ್ರಿ ಇಡೀ ಇಡಬೇಕು. ನಂತರ ಅದಕ್ಕೆ ಬೆಲ್ಲ ಮತ್ತು ಶುಂಠಿ ಬೆರೆಸಿ ಸೇವಿಸುವುದರಿಂದ ಅತಿಸಾರರೋಗವು ನಿವಾರಣೆಯಾಗುತ್ತದೆ.
- ಜಂಬು ನೇರಳೆ ಎಲೆ ಮತ್ತು ಮಾವಿನ ಎಲೆಯಿಂದ ತಯಾರಿಸಿದ ಕಷಾಯವನ್ನು ಜೇನಿನೊಂದಿಗೆ ಸೇವಿಸುವುದರಿಂದ ವಾಂತಿಯು ನಿವಾರಣೆಯಾಗುತ್ತದೆ.
- ಗಾಯಕ್ಕೆ ಜಂಬು ನೇರಳೆಯ ತೊಗಟೆಯ ಚೂರ್ಣವನ್ನು ಸಿಂಪಡಿಸುವುದರಿಂದ ಗಾಯ ನಿವಾರಣೆ.
- ಜಂಬುನೇರಳೆ ತೊಗಟೆಯ ರಸವನ್ನು ಮೇಕೆಯ ಹಾಲಿನಲ್ಲಿ ಬೆರೆಸಿ ಕುಡಿಯುವುದರಿಂದ ಮಕ್ಕಳ ಗ್ರಹಣೀ ರೋಗವು ನಿವಾರಣೆಯಾಗುತ್ತದೆ.

ಪ್ರೀತಿ ಇಲ್ಲದ ಮೇಲೆ
ಹೂವು ಅರಳೀತು ಹೇಗೆ?

ಪೂಜನೀಯ ಮನೆ ಮದ್ದು ತುಳಸಿ

Ocimum sanctum, Linn.

Lamiaceae





ಬೆಳಗ್ಗಿನ ಜಾವ ಎದ್ದು ತುಳಸಿ ಕಟ್ಟೆಗೆ ಪೂಜೆ ಸಲ್ಲಿಸಿ, ತೀರ್ಥದೊಂದಿಗೆ ಒಂದೆರಡು ದಳದ ಸೇವನೆಯ ರೂಢಿಯು ಹಿಂದಿನ ಕಾಲದಿಂದ ಈಗಲೂ ನಡೆಯುತ್ತಾ ಬಂದಿರುವ ಸಂಪ್ರದಾಯ. ಧಾರ್ಮಿಕ ಶ್ರದ್ಧೆಯಿಂದ ಈ ಅಭ್ಯಾಸವನ್ನು ಅಳವಡಿಸಿಕೊಂಡಿದ್ದರೂ ವೈಜ್ಞಾನಿಕ ದೃಷ್ಟಿಯಿಂದಲೂ ಕೂಡ ಅನುಕರಣೀಯ ವಾಗಿದೆ. ವಿಷ್ಣು ಪೂಜೆಗೆ ತುಳಸಿ ಮಾಲೆ ಅತ್ಯಂತ ಶ್ರೇಷ್ಠ. ತುಳಸಿಯನ್ನು ಎಷ್ಟು ಭಕ್ತಿಯಿಂದ ಪೂಜಿಸುತ್ತಾರೋ, ಅಷ್ಟೇ ಭಕ್ತಿಯಿಂದ ರೋಗಕ್ಕೆ ಔಷಧಿಯಾಗಿ ಉಪಯೋಗಿಸಿ ಗೆಲುವನ್ನು ಪಡೆದಿದ್ದಾರೆ. ಸಿಕ್ಕ ಸಿಕ್ಕ ಕಡೆಗಳಲ್ಲಿ ಬೆಳೆಯದ ತುಳಸಿಯು ಸಾಮಾನ್ಯವಾಗಿ ಎಲ್ಲ ಕಡೆಗೆ ಸಿಗುವಂತಹ ಮಗುವಿನಿಂದ ಹಿಡಿದು ಮುದುಕರವರೆಗೂ ತನ್ನ ಔಷಧ ಗುಣಗಳಿಂದ ಆರೋಗ್ಯ ಕಾಪಾಡುವ ಅತ್ಯಂತ ಶ್ರೇಷ್ಠವಾದ ಪೂಜನೀಯ ಮನೆ ಮದ್ದು.

ಬಹು ಭಾಷಾ ಹೆಸರುಗಳು

ಕನ್ನಡ : ಶ್ರೀ ತುಳಸಿ

ಸಂಸ್ಕೃತ : ತುಳಸೀ

ತುಳು : ತುಲಸಿ

ಹಿಂದಿ : ತುಳಸಿ

ಇಂಗ್ಲೀಷ್ :- ಹೋಲಿ ಬೆಸಿಲ್

ಪರ್ಯಾಯ ಪದಗಳು

ತುಳಸಿ, ಅಮೃತ, ಬಹುಪತ್ರಿ, ಭೂತಕ, ಭೂತಪಾತ್ರೀ ಬೃಂದಾ, ದಿವ್ಯ, ಹರಿಪ್ರಿಯ, ಲಕ್ಷ್ಮೀ, ಪುಣ್ಯಾ, ಶ್ಯಾಮ.

ತುಳಸಿಯು ಹಲವರಿಗೆ ಪ್ರಿಯವಾದ ದ್ರವ್ಯವಾದರಿಂದ ಇದನ್ನು 'ಹರಿಪ್ರಿಯ' ಎಂಬ ಹೆಸರಿನಿಂದ ಕರೆಯುತ್ತಾರೆ.

ದ್ರವ್ಯದ ವರ್ಣನೆ

ಮೆಡಿಟರೇನಿಯನ್ ಪ್ರದೇಶ ತವರೂರಾಗಿರುವ ತುಳಸಿ ಒಂದು ಬಹುವಾರ್ಷಿಕ ಸಸ್ಯ. ಪೊದರಿನಂತೆ ಸುಮಾರು 3 ಅಡಿ ಎತ್ತರ ಬೆಳೆಯುತ್ತದೆ. ಕಾಂಡ ಮತ್ತು ಇತರ ಭಾಗಗಳು ಮೃದುವಾಗಿದ್ದು ಸೂಕ್ಷ್ಮ ರೋಮಗಳಿಂದ ಕೂಡಿದೆ. ಸುವಾಸನೆಯ ಎಲೆಗಳು ಕಾಂಡದ ಮೇಲೆ ಅಭಿಮುಖವಾಗಿ ಜೋಡಿಸಲ್ಪಟ್ಟಿವೆ. ಎಲೆಗಳು ಅಂಡಾಕಾರದಿಂದ ಕೂಡಿದೆ. ಎಲೆಯ ಅಂಚು ಗರಗಸದ ಹಲ್ಲಿನಂತಿದೆ. ಪುಷ್ಪಮಂಜರಿಯು 12–24ಸೆಂ. ಮೀಟರ್‌ನಷ್ಟು ಉದ್ದವಾಗಿ ಕಾಂಡದ ತುದಿಯಲ್ಲಿ ಜೋಡಣೆಯಾಗಿರುತ್ತದೆ. ಪುಷ್ಪದ ಬಣ್ಣವು ತಿಳಿನೀಲಿ, ಕಾಯಿಯು ಚಿಕ್ಕದಾಗಿ, ಸೂಕ್ಷ್ಮವಾಗಿ ಬಿಳಿಛಾಯೆಯ ಕಪ್ಪು ಅಥವಾ ಕೆಂಪು ಬಣ್ಣದಿಂದ ಕೂಡಿದೆ. ವರ್ಷದ ಎಲ್ಲ ಸಮಯದಲ್ಲಿ ಹೂವು ಮತ್ತು ಕಾಯಿಯನ್ನು ಬಿಡುವ ಈ ವನಸ್ಪತಿಯೂ ಮುಖ್ಯವಾಗಿ ಸೆಪ್ಟೆಂಬರ್‌ತಿಂಗಳಿನಿಂದ ಫೆಬ್ರವರಿಯಲ್ಲಿ ಹೂ ಬೀಜವನ್ನು ಹೆಚ್ಚಾಗಿ ಬಿಡುತ್ತದೆ. ಎಲ್ಲ ಕಡೆಗಳಲ್ಲಿಯೂ ಬೆಳೆಯುವ ಈ ಸಸ್ಯವು ತಂಪು ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ.

ವಿಧಗಳು

ತುಳಸಿಯಲ್ಲಿ ಎರಡು ಪ್ರಭೇದಗಳಿವೆ. ಅವು

- ಬಿಳಿ ತುಳಸಿ
- ಕಪ್ಪು ತುಳಸಿ

ತುಳಸಿಯು ಒಂದು ವಿಶಿಷ್ಟ ಔಷಧೀಯ ಸಸ್ಯವಾದರಿಂದ ಸಸ್ಯಶಾಸ್ತ್ರದಲ್ಲಿ ಐದು ಪ್ರಭೇದಗಳನ್ನು ಔಷಧಿಗೆ ಉಪಯೋಗಿಸುತ್ತಾರೆ. ಅವು

- Ocimum sanctum
- Ocimum basilicum

- Ocimum gratissimum
- Ocimum americanum
- Ocimum kimendscharicum

ಉಪಯುಕ್ತ ಅಂಗಗಳು

- ಎಲೆ
- ಬೇರು
- ಬೀಜ

ದ್ರವ್ಯದ ಗುಣಧರ್ಮಗಳು

ರಸ : ಕಟು, ತಿಕ್ತ, ಕಷಾಯ

ಗುಣ : ಲಘು, ಸ್ನಿಗ್ಧ

ವೀರ್ಯ : ಉಷ್ಣ

ವಿಪಾಕ : ಕಟು

ಕರ್ಮ : ವಾತಕಫಹರ, ಗ್ರಾಹೀ, ಕ್ರಿಮಿಘ್ನ, ದೀಪನ

"ಕಷಾಯ: ಕಟುಕ: ತಿಕ್ತೋ ಸ್ನಿಗ್ಧೋ ಗುದರೋಗಜಿತ್।
ವಾತಲಂ ಕಫಪಿತ್ತಾಸ್ರಕೃಚ್ಛ್ರಜಿದ್‌ಗ್ರಾಹಿ ಶೀತಲಂ॥
ತೃಟ್‌ದಾಹಶಾಮಕಂ ವಾತರಕ್ತಕುಷ್ಠಹರಂ ಪರಂ॥ *(ಭಾವಪ್ರಕಾಶ)*

ಎಂದರೆ ಮುತ್ತುಗವು ಕಷಾಯ, ಕಟು, ತಿಕ್ತ ರಸದಿಂದ ಕೂಡಿದೆ. ಸ್ನಿಗ್ಧ ಮತ್ತು ಶೀತ ಗುಣದಿಂದ ಕೂಡಿದೆ. ಕಫವಾತಹರವಾಗಿದೆ. ಹೂವು ಕಫಪಿತ್ತ ಶಮಕವಾಗಿದೆ. ಬಾಯಾರಿಕೆ, ಗುದರೋಗ, ವಾತರಕ್ತ, ಕುಷ್ಠರೋಗಗಳನ್ನು ನಿವಾರಿಸುತ್ತದೆ.

ಔಷಧಿ ಪ್ರಮಾಣ

ಚಕ್ಕೆಯ ಕಷಾಯ – 50–100 ಮಿ.ಲೀ

ಬೀಜ ಚೂರ್ಣ – 3–6 ಗ್ರಾಂ

ಹೂವಿನ ಚೂರ್ಣ – 3–6 ಗ್ರಾಂ

ನಿರ್ಯಾಸ – 1–3 ಗ್ರಾಂ

ಔಷಧೀಯ ಯೋಗಗಳು

- ಕ್ರಿಮಿಮುದ್ಗರ ರಸ
- ಪಲಾಶಕ್ಷಾರ ತೈಲ

- ಪಲಾಶಬೀಜಾದಿ ಚೂರ್ಣ
- ಪಲಾಶಕ್ಷಾರ ಘೃತ

ಔಷಧೀಯ ಉಪಯೋಗಗಳು

- ಮುತ್ತುಗದ ಕಷಾಯ ಅಥವಾ ಮುತ್ತುಗ ಬೀಜದ ಕಲ್ಕವನ್ನು ಮಜ್ಜಿಗೆಯಲ್ಲಿ ಸೇವಿಸುವುದರಿಂದ ಕ್ರಿಮಿರೋಗವು ನಿವಾರಣೆಯಾಗುತ್ತದೆ.
- ಮುತ್ತುಗದ ಬೀಜದ ಕಷಾಯವನ್ನು ಹಾಲಿನೊಂದಿಗೆ ಸೇವಿಸುವುದರಿಂದ ಅತಿಸಾರ ರೋಗವು ನಿವಾರಣೆಯಾಗುತ್ತದೆ.
- 160 ಗ್ರಾಂನಷ್ಟು ಮುತ್ತುಗದ ಹೂವಿನ ಪುಡಿಗೆ 320 ಗ್ರಾಂ. ಸಕ್ಕರೆ ಬೆರೆಸಿ ಹಾಲಿನ ಜೊತೆಗೆ ಸೇವಿಸುವುದರಿಂದ ದೇಹದ ಒಳಗಿನ ರಕ್ತಸ್ರಾವಕ್ಕೆ ಒಳ್ಳೆಯದು.
- ಮುತ್ತುಗದಿಂದ ತಯಾರಿಸಿದ ಸಾರಿಗೆ ಸಕ್ಕರೆ ಬೆರೆಸಿ ಸೇವಿಸುವುದರಿಂದ ಹೊಟ್ಟೆನೋವು ನಿವಾರಣೆಯಾಗುತ್ತದೆ.
- ಮುತ್ತುಗದ ಬೀಜದ ಪುಡಿ, ಅತ್ತಿಯ ಹಣ್ಣಿನ ಪುಡಿ ಮತ್ತು ಕರಿಮೆಣಸಿನ ಪುಡಿಯನ್ನು ಬೆರೆಸಿ ಸೇವಿಸುವುದರಿಂದ ಕೆಮ್ಮು ಮೂರು ದಿವಸದೊಳಗೆ ನಿವಾರಣೆಯಾಗುತ್ತದೆ.
- ಮುತ್ತುಗದ ಹೂವನ್ನು ಜೇನಿನಲ್ಲಿ ತೇಯ್ದು ಕಣ್ಣಿಗೆ ಅಂಜನವಾಗಿ ಇಡುವುದರಿಂದ ಕಣ್ಣು ರೋಗವು ನಿವಾರಣೆಯಾಗುತ್ತದೆ.
- ಮುತ್ತುಗದ ಎಲೆಯ ಅಥವಾ ಬೇರಿನ ಕಷಾಯ ಮಾಡಿ ಸೇವಿಸುವುದರಿಂದ ಇರುಳುಗಣ್ಣು, ಆನೆಕಾಲು ರೋಗಕೆ ಒಳ್ಳೆಯದು.
- ಮುತ್ತುಗ ಹೂವಿನ ಕಷಾಯ ಸೇವನೆಯಿಂದ ಚರ್ಮ ರೋಗಗಳು ನಿವಾರಣೆಯಾಗುತ್ತದೆ.
- ಮುತ್ತುಗದ ಬೇರಿನ ತೊಗಟೆಯ ರಸವನ್ನು ವಿಷದ ವೇಗಕ್ಕೆ ತಕ್ಕಂತೆ ಮತ್ತು ರೋಗಿಯ ಶಕ್ತಿಗೆ ತಕ್ಕಂತೆ 9 ರಿಂದ 11 ತೊಲಗಳವರೆಗೆ ಕುಡಿಯುವುದರಿಂದ ಹಾವಿನ ವಿಷವು ನಿವಾರಣೆಯಾಗುತ್ತದೆ.
- ಮುತ್ತುಗದ ಎಲೆಗಳ ರಸವನ್ನು ಹುಣ್ಣಿನ ಮೇಲೆ ಹಚ್ಚಿದರೆ ಹುಣ್ಣು ಮಾಯವಾಗುತ್ತದೆ.
- ರಾತ್ರಿ ನೀರಿನಲ್ಲಿ ನೆನೆ ಹಾಕಿದ ಒಂದು ತೊಲ ಮುತ್ತುಗದ ಹೂವನ್ನು ಕಿವುಚಿ ಅದಕ್ಕೆ ಸಕ್ಕರೆಯನ್ನು ಸೇರಿಸಿ ಕುಡಿಯುವುದರಿಂದ ಮೂಗಿನಿಂದ ಬರುವ ರಕ್ತವು ಮತ್ತು ಮೂತ್ರ ದ್ವಾರದಿಂದ ಬರುವ ರಕ್ತವು ನಿಲ್ಲುತ್ತದೆ.
- ಮುತ್ತುಗದ ಬೀಜಗಳನ್ನು ನಿಂಬೆಯ ರಸದಲ್ಲಿ ತೇಯ್ದು ನವೆ, ಇಸುಬು ಮೊದಲಾದ ಚರ್ಮ ರೋಗಗಳಿಗೆ ಲೇಪಿಸಿದರೆ ಚರ್ಮರೋಗವು ನಿವಾರಣೆಯಾಗುತ್ತದೆ.
- ಮುತ್ತುಗದ ಹೂಗಳನ್ನು ನೀರಿನಲ್ಲಿ ಕಾಯಿಸಿ, ಆ ನೀರಿನಿಂದ ಹೊಕ್ಕಳದ ಕೆಳಭಾಗಕ್ಕೆ ಶಾಖವನ್ನು ಕೊಟ್ಟರೆ ಕಟ್ಟಿಕೊಂಡಿದ್ದ ಮೂತ್ರವು ಸರಳವಾಗಿ ಹೊರಬರುತ್ತದೆ.

ಶಿವನಿಗೆ ಪ್ರಿಯವಾದ ತುಂಬೆ

Leucas indica (L)

Lamiaceae





ಸಾಮಾನ್ಯವಾಗಿ ಎಲ್ಲ ಕಡೆಗಳಲ್ಲಿಯೂ ಕಾಣಸಿಗುವ ಎಲ್ಲರಿಗೂ ಪರಿಚಿತವಾದ ಶಿವಪ್ರಿಯ ತುಂಬೆಯ ರಸದಿಂದ ಮಕ್ಕಳಿಗೆ ಔಷಧಿ ಕೊಡುವುದನ್ನು ನಮ್ಮ ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ ಈಗಲೂ ಕಾಣಬಹುದು. ಶಿವನನ್ನು ಪ್ರತ್ಯಕ್ಷವಾಗಿ ನೋಡದಿದ್ದರೂ ಶಿವನಿಗೆ ಅತ್ಯಂತ ಪ್ರಿಯವಾದ ತುಂಬೆಯ ಹೂವನ್ನು ನೋಡದವರು ತೀರಾ ಸಾಮಾನ್ಯ. ಬೃಹತ್‌ಸಂಹಿತೆಗಳಲ್ಲಿ ಇದರ ಪರಿಚಯವನ್ನು ಕಾಣದಿದ್ದರೂ, ಅಷ್ಟಾಂಗ ಹೃದಯದಲ್ಲಿ ಇದರ ಪರಿಚಯವನ್ನು ಕಾಣಬಹುದು. ಎಲ್ಲ ಬಗೆಯ ಮಣ್ಣಿನಲ್ಲಿ ಹುಲುಸಾಗಿ ಬೆಳೆಯುವ ತುಂಬೆಗಿಡ ಹೆಚ್ಚಾಗಿ ಹೊಲಕುಯ್ದಾದ ನಂತರ ಕಂಡು ಬರುತ್ತದೆ.

ಬಹು ಭಾಷಾ ಹೆಸರುಗಳು

ಕನ್ನಡ : ತುಂಬೆ

ಸಂಸ್ಕೃತ : ದ್ರೋಣಪುಷ್ಪೀ

ತುಳು : ತುಂಬ್ಯ

ಹಿಂದಿ : ಗುಮಾ

ಇಂಗ್ಲೀಷ್ : –

ಪರ್ಯಾಯ ಪದಗಳು

ದ್ರೋಣಪುಷ್ಪೀ, ದ್ರೋಣಾ, ಛತ್ರಿಕಾ, ಚಿತ್ರಪತ್ರಿಕಾ, ಕುಂಭಯೋನೀ, ಕುರುಂಬಿಕಾ, ಶಿವನಿಕಾ, ಫಲಪುಷ್ಪಾ, ಗುಮಾ, ನಕುಲಾ, ಚರಿನೀ.

ಕಳೆಯಂತೆ ಬೆಳೆಯುವ ತುಂಬೆ ಗಿಡದ ಹೂವು ಘಂಟೆಯ ಆಕಾರದಲ್ಲಿ ಇರುವುದರಿಂದ ಇದಕ್ಕೆ ಸಂಸ್ಕೃತದಲ್ಲಿ 'ಕುಂಭಯೋನೀ' ಎಂಬ ಹೆಸರಿನಿಂದ ಕರೆದಿದ್ದಾರೆ.

ದ್ರವ್ಯದ ವರ್ಣನೆ

ರೋಮಗಳಿಂದ ಕೂಡಿದ ತುಂಬೆಯು ಏಕ ವಾರ್ಷಿಕ ಸಸ್ಯ. ಇದು ಸುಮಾರು 1-2 ಮೀಟರ್‌ನಷ್ಟು ಎತ್ತರಕ್ಕೆ ಬೆಳೆಯುತ್ತದೆ. ಅಂಡಾಕಾರದ ಎಲೆಗಳು 2-4 ಸೆಂಟಿ ಮೀಟರ್‌ನಷ್ಟು ಉದ್ದಕ್ಕೆ ಬೆಳೆಯುತ್ತದೆ. ಎಲೆಗಳು ರೋಮಗಳಿಂದ ಕೂಡಿದೆ. ಹೂವಿಗೆ ಎರಡು ತುಟಿಯುಳ್ಳ ಬಿಳಿಯ ಕೂಡುದಳವಿರುತ್ತದೆ. ಇದರ ಪಂಚಾಂಗಗಳು ವಿಶೇಷವಾಗಿ ಸೊಪ್ಪು ಉಪಯುಕ್ತವಾಗಿರುತ್ತದೆ. ಸಾಮಾನ್ಯವಾಗಿ ನಮ್ಮ ದೇಶದ ಎಲ್ಲ ಕಡೆಗಳಲ್ಲಿ ಬೆಳೆಯುವ ಈ ಸಸ್ಯವು ಹೂವು ಮತ್ತು ಹಣ್ಣನ್ನು ಆಗಸ್ಟ್ – ಡಿಸೆಂಬರ್ ತಿಂಗಳಿನಲ್ಲಿ ಬಿಡುತ್ತದೆ.

ವಿಧಗಳು

ರಾಜನಿಘಂಟುವಿನ ಪ್ರಕಾರ ತುಂಬೆಯಲ್ಲಿ ಎರಡು ಪ್ರಕಾರಗಳಿವೆ. ಅವು

- ದ್ರೋಣ (Leucas aspera)
- ಮಹಾದ್ರೋಣ (Leucas cephalotus)

ಸಸ್ಯಶಾಸ್ತ್ರದಲ್ಲಿ ಈ ಕೆಳಗಿನ ಎಲ್ಲ ಪ್ರಭೇದಗಳನ್ನು ಕಾಣಬಹುದು. ಅವು

- Leucas aspera
- Leucas cephalotus
- Leucas lavandifolia
- Leucas linifolia
- Leonurus indicus
- Leucas indica
- Leucas zeylanica

ಉಪಯುಕ್ತ ಅಂಗಗಳು

- ಸಂಪೂರ್ಣ ಗಿಡ
- ಹೂವು
- ಎಲೆ

ದ್ರವ್ಯದ ಗುಣಧರ್ಮಗಳು

ರಸ : ಕಟು
ಗುಣ : ಗುರು, ರೂಕ್ಷ
ವೀರ್ಯ : ಉಷ್ಣ
ವಿಪಾಕ : ಕಟು
ಕರ್ಮ : ಕಫವಾತಹರ, ಜ್ವರಹರ, ದೀಪನ, ಭೇದನ, ಜಂತುಘ್ನ

ದ್ರೋಣಪುಷ್ಪೀ ಗುರುಃ ಸ್ವಾದುಃ ರೂಕ್ಷೋಷ್ಣಾ ವಾತಪಿತ್ತಕೃತ್।
ಸತೀಕ್ಷ್ಣಲವಣಾ ಸ್ವಾದುಪಾಕಾ ಕಟ್ವೀ ಚ ಬೇಧಿನೀ॥
ಕಫಾಮಕಾಮಲಾಶೋಥತಮಕಶ್ವಾಸಜಂತುಜಿತ್॥ (ಭಾವಪ್ರಕಾಶ)

ಎಂದರೆ ತುಂಬೆಯು ಗುರು ಮತ್ತು ರೂಕ್ಷ ಗುಣದಿಂದ ಕೂಡಿದೆ, ಮಧುರ ಕಟು ರಸದಿಂದ ಕೂಡಿದೆ. ವಾತಪಿತ್ತಗಳನ್ನು ವೃದ್ಧಿಸುತ್ತದೆ, ಉಷ್ಣ ವೀರ್ಯದಿಂದ ಕೂಡಿದೆ, ಮಧುರ ವಿಪಾಕದಿಂದ ಕೂಡಿದೆ. ಕಾಮಾಲೆ, ಶೋಥ, ತಮಕಶ್ವಾಸ, ಜಂತುರೋಗಗಳನ್ನು ನಿವಾರಿಸುತ್ತದೆ.

ಔಷಧಿ ಪ್ರಮಾಣ

ಸ್ವರಸ – 10–20 ಮಿ.ಲೀ

ಔಷಧೀಯ ಉಪಯೋಗಗಳು

- ತುಂಬೆಯ ಸ್ವರಸವನ್ನು ಅಂಜನವಾಗಿ ಉಪಯೋಗಿಸುವುದರಿಂದ ಕಾಮಾಲೆ ರೋಗವು ಕಡಿಮೆಯಾಗುತ್ತದೆ.
- ತುಂಬೆಯ ಸ್ವರಸವನ್ನು ಸೇವಿಸುವುದರಿಂದ ವಿಷಮ ಶೀತಜ್ವರಕ್ಕೆ ಒಳ್ಳೆಯದು.
- ತುಂಬೆಯ ಸ್ವರಸಕ್ಕೆ ಜೇನುತುಪ್ಪ ಸೇರಿಸಿ ಮಕ್ಕಳಿಗೆ ನೆಕ್ಕಿಸುವುದರಿಂದ ಮಕ್ಕಳ ಕಫವು ಕಡಿಮೆಯಾಗುತ್ತದೆ.
- ತುಂಬೆಯ ಎಲೆಯನ್ನು ಶುದ್ಧ ಅರಿಶಿನ ಪುಡಿಯೊಂದಿಗೆ ಅರೆದು ಕಲ್ಕ ಮಾಡಿ ಚರ್ಮಕ್ಕೆ ಲೇಪಿಸುವುದರಿಂದ ಕಜ್ಜಿ, ಇಸುಬು (Eczema) ಮೊದಲಾದ ಚರ್ಮ ವ್ಯಾಧಿಗಳನ್ನು ತಡೆಗಟ್ಟಬಹುದು.

- 15 ಮಿ.ಲೀ. ತುಂಬೆ ಎಲೆಯ ರಸಕ್ಕೆ ಸ್ವಲ್ಪ ಮೆಣಸಿನ ಪುಡಿ ಮತ್ತು ಮೂರು ಚಮಚ ಜೇನು ಬೆರೆಸಿ ದಿನಕ್ಕೆ 3–4 ಸಲ ಸೇವಿಸಿದ್ದಲ್ಲಿ ವಿಷಮ ಶೀತಜ್ವರ ಕಡಿಮೆಯಾಗುವುದು.
- ತುಂಬೆಗಿಡದ ಪಂಚಾಂಗಗಳ ರಸವನ್ನು ಸೇವಿಸುವುದರಿಂದ ಕೆಮ್ಮು ಮತ್ತು ದಮ್ಮಿನಿಂದ ಬಳಲುತ್ತಿರುವವರಿಗೆ ಒಳ್ಳೆಯದು.
- ತುಂಬೆಯ ರಸವನ್ನು ಎರಡರಿಂದ ಮೂರು ಹನಿಯಷ್ಟು ಮೂಗಿಗೆ ಬಿಡುವುದರಿಂದ ತಲೆನೋವು ಕಡಿಮೆಯಾಗುತ್ತದೆ.
- ಹಾವು ಕಚ್ಚಿದ ಜಾಗಕ್ಕೂ ತುಂಬೆಯ ರಸವನ್ನು ಹಚ್ಚುತ್ತಾರೆ.
- ತುಂಬೆಯ ಕಷಾಯವನ್ನು ಸೇವಿಸುವುದರಿಂದ ಕೆಮ್ಮು, ನೆಗಡಿ ಮತ್ತು ದಮ್ಮಿಗೆ ಒಳ್ಳೆಯದು.
- ತುಂಬೆಯ ಸ್ವರಸಕ್ಕೆ ಅಷ್ಟೇ ಪ್ರಮಾಣದ ಸುಣ್ಣ ತಿಳಿನೀರನ್ನು ಬೆರೆಸಿ ದಿವಸಕ್ಕೆ ಒಂದು ಬಾರಿ ಎರಡು ಚಮಚದಷ್ಟು ಮೂರು ವಾರದವರೆಗೆ ಸೇವಿಸಿದರೆ ಮೂಲವ್ಯಾಧಿ ವಾಸಿಯಾಗುತ್ತದೆ.
- ತುಂಬೆಯ ಸ್ವರಸಕ್ಕೆ ಬಾಳೆದಿಂಡಿನ ರಸವನ್ನು ಬೆರೆಸಿ ಕುಡಿಯುವುದರಿಂದ ಹಾವಿನ ವಿಷಕ್ಕೆ ಒಳ್ಳೆಯದು.
- ತುಂಬೆ ಸೊಪ್ಪಿನ ಕಷಾಯದಿಂದ ಊತವಿರುವ ಜಾಗಕ್ಕೆ ಶಾಖ ಕೊಡುವುದರಿಂದ ಊತವೂ ಕಡಿಮೆಯಾಗುತ್ತದೆ.
- ತುಂಬೆಯ ಕಷಾಯಕ್ಕೆ ಸೈಂಧವ ಲವಣವನ್ನು ಬೆರೆಸಿ ಸೇವಿಸುವುದರಿಂದ ಅಜೀರ್ಣಕ್ಕೆ ಒಳ್ಳೆಯದು.
- ತುಂಬೆ ಎಲೆಗೆ ಅರ್ಧಭಾಗದಷ್ಟು ಮೆಣಸು ಸೇರಿಸಿ ಅರೆದು ಚಿಕ್ಕ ಪ್ರಮಾಣದ ಗುಳಿಗೆ ಮಾಡಿ ಜೇನುತುಪ್ಪದೊಡನೆ ಕಲಸಿ ಎರಡು ಹೊತ್ತಿನಂತೆ ಮೂರು ದಿವಸ ಸೇವಿಸುವುದರಿಂದ ಚಳಿಜ್ವರ ವಾಸಿಯಾಗುತ್ತದೆ.

ಊರಿಗೊಂದು ವನ ಮನೆಗೊಂದು ಮಗು

ದಾಲ್ಚಿನಿ ಮರದ ಸೊಬಗಿಗೆ

Cinnamomum zeylanica, Blume.
Lauraceae





ರೋಗವನ್ನು ನಾಶಮಾಡಿ ಆರೋಗ್ಯ ಕಾಪಾಡುವ ದಾಲ್ಚಿನಿಯು ಸಾಮಾನ್ಯವಾಗಿ ಎಲ್ಲರಿಗೂ ಪರಿಚಿತ ದ್ರವ್ಯ. ದಾಲ್ಚಿನಿ ಮರವನ್ನು ಕಾಣದಿದ್ದರೂ, ದಾಲ್ಚಿನಿಯ ಚಕ್ಕೆ ಹಾಕಿ ತಯಾರಿಸಿದ ಮಾಂಸದ ಪದಾರ್ಥಗಳನ್ನು ಸೇವಿಸದವರನ್ನು ಕಾಣುವುದು ಬಲು ಅಪರೂಪ. ಯಾಕೆಂದರೆ ಮಾಂಸದ ಪದಾರ್ಥಕ್ಕೆ ತನ್ನದೇ ಆದ ರುಚಿಯನ್ನು ನೀಡುವುದರ ಜೊತೆಗೆ ಔಷಧಕ್ಕೂ ಈ ದ್ರವ್ಯವನ್ನು ಉಪಯೋಗಿಸುತ್ತಾರೆ. ಈ ದ್ರವ್ಯದ ತೊಗಟೆಯನ್ನು ಪದಾರ್ಥಗಳಿಗೆ ಉಪಯೋಗಿಸುವುದರಿಂದ ಇದನ್ನು ಚಕ್ಕೆ ಎಂಬುದಾಗಿ ಕರೆಯುತ್ತಾರೆ. ದಾಲ್ಚಿನಿಯಿಂದ ತೆಗೆದ ತೈಲವನ್ನು ಬೇಕರಿ ತಿನಸುಗಳು, ಸೋಪ್, ಮಧ್ಯಪಾನೀಯ ಔಷಧಿ ತಯಾರಿಕೆಗೆ ಉಪಯೋಗಿಸುತ್ತಾರೆ. ದಾಲ್ಚಿನಿಯ ಅತಿಸೇವನೆಯಿಂದ ಪಿತ್ತ ವೃದ್ಧಿಗೊಂಡು ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುವ ಸಾಧ್ಯತೆ ಇರುವುದರಿಂದ ಏಕಮೂಲಿಕ ಔಷಧಿಯಾಗಿ ಹೆಚ್ಚಾಗಿ ಇದನ್ನು ಬಳಸುವುದಿಲ್ಲ. ಹೆಚ್ಚಾಗಿ ಇದನ್ನು ಬೇರೆ ಮೂಲಿಕೆಗಳ ಜೊತೆಗೆ ಬಳಸುತ್ತಾರೆ. ದಾಲ್ಚಿನಿಯ ಎಲೆಗಳನ್ನು 'ತೇಜಪತ್ರ' ಎಂದು ಕರೆಯುತ್ತಾರೆ. ಚರಕ, ಸುಶ್ರುತ, ವಾಗ್ಭಟ ಸಂಹಿತೆಗಳಲ್ಲಿ ವಿವರಿಸಲ್ಪಟ್ಟಿರುವ ಈ ದ್ರವ್ಯವು ಆಯುರ್ವೇದದ ಪ್ರಮುಖ ದ್ರವ್ಯಗಳಲ್ಲಿ ಒಂದು.

ಬಹು ಭಾಷಾ ಹೆಸರುಗಳು

ಕನ್ನಡ : ದಾಲ್ಚಿನಿ, ಚೆಕ್ಕೆ

ಸಂಸ್ಕೃತ : ತ್ವಕ್

ತುಳು : ಕಾರಿಇಜಿನ್

ಹಿಂದಿ : ದಾಲ್ಚಿನಿ

ಇಂಗ್ಲೀಷ್ : ಸಿನಿಮಾನ್‌ಬಾರ್ಕ್

ಪರ್ಯಾಯ ಪದಗಳು

ತ್ವಕ್, ಹೃದ್ಯಾ, ಉತ್ಕಟಾ, ಬಹುಗಂಧಾ, ಬಲ್ಯಾ, ಭೃಂಗಾ, ದಾರುಶೀಲಾ, ಲತಾಪರ್ಣ, ಮುಖಶೋಧನಾ, ಸುರಸಾ, ತಮಲಪತ್ರಾ, ತನುತ್ವಕ್, ತ್ವಚ, ವರಾಂಗ, ಸ್ವಾದ್ವೀ, ಕವಚ, ಸೈಹಲ, ವಲ್ಕಲ, ವನ್ಯ

ಈ ದ್ರವ್ಯದ ಚಕ್ಕೆಯು ಹೃದಯಕ್ಕೆ ಪರಿಣಾಮಕಾರಿಯಾದರಿಂದಲೇ ಇದನ್ನು "ಹೃದ್ಯಾ" ಎಂಬುದಾಗಿ ಕರೆಯುತ್ತಾರೆ.

ದ್ರವ್ಯದ ವರ್ಣನೆ

ದಾಲ್ಚಿನಿಯು ಮಧ್ಯಮ ಗಾತ್ರದ ಮರವಾಗಿ ಬೆಳೆಯುತ್ತದೆ. ಇದು ಸುಮಾರು 20–30 ಅಡಿ ಎತ್ತರದವರೆಗೆ ಬೆಳೆಯುತ್ತದೆ. ಇದು ಬೂದು ಮಿಶ್ರಿತ ಕಂದು ಬಣ್ಣದ ತೊಗಟೆಯನ್ನು ಹೊಂದಿದೆ. ತೊಗಟೆಯು ಸುಮಾರು 16 ಸೆಂ.ಮೀಟರ್‌ನಷ್ಟು ದಪ್ಪವಾಗಿರುತ್ತದೆ. ತೊಗಟೆಯ ಒಳಭಾಗವು ಕೆಂಪು ಬಣ್ಣದಿಂದ ಕೂಡಿದೆ. ಚರ್ಮವನ್ನು ಹೋಲುವ ಎಲೆಗಳು ಅಭಿಮುಖವಾಗಿದ್ದು 4–7 ಅಂಗುಲ ಉದ್ದವಿರುತ್ತದೆ. ಒರಟಾದ ಎಲೆಗಳು ಹೊಳಪಿನಿಂದ ಕೂಡಿರುತ್ತದೆ. ಎಲೆಗಳ ಮೇಲೆ 3–5 ಪತ್ರನರಗಳು ಮುಖ್ಯವಾಗಿ ಕಾಣುತ್ತವೆ. ಬಲಿತ ಎಲೆಯು ವಿಶೇಷ ಪರಿಮಳದಿಂದ ಕೂಡಿದೆ. ಹೂವು ಮಬ್ಬಾದ ಅಥವಾ ಕಪ್ಪಾದ ಬಣ್ಣದಿಂದ ಕೂಡಿದೆ. ಫಲವು 12 ಸೆಂ.ಮೀಟರ್‌ನಷ್ಟು ಉದ್ದವಾಗಿದ್ದು, ನೇರಳೆ ಬಣ್ಣದಲ್ಲಿರುತ್ತದೆ. ಈ ದ್ರವ್ಯವು ಹೂವನ್ನು ಜನವರಿ ತಿಂಗಳಿನಲ್ಲಿ, ಫಲವನ್ನು ಮೇ – ಆಗಸ್ಟ್ ತಿಂಗಳಿನಲ್ಲಿ ಬಿಡುತ್ತದೆ. ದಕ್ಷಿಣ ಭಾರತ, ಕೇರಳ, ಕರ್ನಾಟಕ, ತಮಿಳುನಾಡು ರಾಜ್ಯಗಳಲ್ಲಿ ಬೆಳೆಯುವ ಈ ದ್ರವ್ಯವು ಶ್ರೀಲಂಕಾ, ಚೀನಾ, ಬ್ರಹ್ಮದೇಶ ಮುಂತಾದ ದೇಶಗಳಲ್ಲಿ ಹೆಚ್ಚಾಗಿ ಬೆಳೆಯುತ್ತದೆ.

ವಿಧಗಳು

ದಾಲ್ಚಿನಿಯಲ್ಲಿ ಮೂರು ವಿಧಗಳಿವೆ. ಅವು

1. ಇಂಡಿಯನ್ (Cinnamomum tamala)

2. ಸಿಲೋನಿಸ್ (Cinnamomum zeylanica)

3. ಚೀನ (Cinnamomum cassia)

ಉಪಯುಕ್ತ ಅಂಗಗಳು

- ತೊಗಟೆ
- ಎಣ್ಣೆ
- ಎಲೆ

ದ್ರವ್ಯದ ಗುಣಧರ್ಮಗಳು

ರಸ : ಕಟು, ತಿಕ್ತ, ಮಧುರ

ಗುಣ : ಲಘು, ರೂಕ್ಷ, ತೀಕ್ಷ್ಣ

ವೀರ್ಯ : ಉಷ್ಣ

ವಿಪಾಕ : ಕಟು

ಕರ್ಮ : ವಾತಪಿತ್ತಹರ, ಶುಕ್ರಲ, ಬಲ್ಯ, ಗ್ರಾಹಿ, ವರ್ಣ್ಯ

"ತ್ವಚಂ ಲಘೂಷ್ಣಂ ಕಟುಕಂ ಸ್ವಾದು ತಿಕ್ತಂ ಚ ರೂಕ್ಷಕಂ।
ಪಿತ್ತಲಂ ಕಫವಾತಘ್ನಂ ಕಂಡ್ವಾಮಾರುಚಿನಾಶನಮ್॥
ಹೃತ್‌ಬಸ್ತಿರೋಗವಾತಾರ್ಶಕ್ರಿಮಿಪೀನಸಶುಕ್ರಹೃತ್"॥ *(ಭಾವಪ್ರಕಾಶ)*

ಎಂದರೆ ದಾಲ್ಚಿನಿಯ ಲಘು ಮತ್ತು ರೂಕ್ಷ ಗುಣದಿಂದ ಕೂಡಿದೆ. ಉಷ್ಣ ವೀರ್ಯದಿಂದ ಕೂಡಿದೆ. ಕಟು, ಸ್ವಾದು, ತಿಕ್ತ ರಸದಿಂದ ಕೂಡಿದೆ. ಪಿತ್ತವನ್ನು ವೃದ್ಧಿಸುತ್ತದೆ. ಕಫವಾತಹರವಾಗಿದೆ. ತುರಿಕೆ, ಅರುಚಿ, ಹೃದಯರೋಗ, ಬಸ್ತಿರೋಗ, ಮೂಲವ್ಯಾಧಿ, ಕ್ರಿಮಿರೋಗ, ಪೀನಸ ರೋಗಗಳನ್ನು ನಿವಾರಿಸುತ್ತದೆ.

ಔಷಧಿ ಪ್ರಮಾಣ

ಚೂರ್ಣ – 1–3 ಗ್ರಾಂ

ಎಣ್ಣೆ – 2–5 ಬಿಂದು

ಔಷಧೀಯ ಯೋಗಗಳು

- ಏಲಾದಿ ರಸಾಯನ
- ಸೀತೋಪಲಾದಿ ಚೂರ್ಣ
- ಸಮಶರ್ಕರ ಚೂರ್ಣ

ಔಷಧೀಯ ಉಪಯೋಗಗಳು

- ದಾಲ್ಚಿನಿ, ಏಲಕ್ಕಿ, ಕೊತ್ತಂಬರಿಯ ಪುಡಿಯನ್ನು ನೀರಿನಲ್ಲಿ ಬೆರೆಸಿ, ಆ ನೀರಿನಲ್ಲಿ ಬಾಯಿ ಮುಕ್ಕಳಿಸುವುದರಿಂದ ಬಾಯಿಯು ತಂಪಾಗಿರುವುದಲ್ಲದೇ ಬಾಯಿಯ ರುಚಿಯು ಹೆಚ್ಚುತ್ತದೆ.
- ದಾಲ್ಚಿನಿ ಚೆಕ್ಕೆ, ಎಲೆ ಮತ್ತು ಸಕ್ಕರೆಯನ್ನು ಅಕ್ಕಿ ತೊಳೆದ ನೀರಿನಲ್ಲಿ ಅರೆದು ಮೂಗಿಗೆ 2–3 ಹನಿಯಷ್ಟು ಬಿಡುವುದರಿಂದ ಪಿತ್ತದ ತಲೆನೋವು ನಿವಾರಣೆಯಾಗುತ್ತದೆ.
- ದಾಲ್ಚಿನಿಯ ಚೆಕ್ಕೆಯನ್ನು ಬಾಯಿಯಲ್ಲಿ ಜಗಿಯುತ್ತಿದ್ದರೆ ನೆಗಡಿ ರೋಗವು ನಿವಾರಣೆ.
- ದಾಲ್ಚಿನಿಯ ಲೇಪವನ್ನು ಮಚ್ಚೆಗೆ ಹಚ್ಚುವುದರಿಂದ ಮಚ್ಚೆಯು ಕಡಿಮೆಯಾಗುತ್ತದೆ.
- ಹಲ್ಲುನೋವು ಉಂಟಾದಾಗ ದಾಲ್ಚಿನಿಯ ಎಣ್ಣೆಯಲ್ಲಿ ಹತ್ತಿಯನ್ನು ಮುಳುಗಿಸಿ, ಅದನ್ನು ನೋವಿರುವ ಜಾಗಕ್ಕೆ ತಾಗಿಸುವುದರಿಂದ ಹಲ್ಲುನೋವು ನಿವಾರಣೆಯಾಗುತ್ತದೆ.
- ದಾಲ್ಚಿನಿಯ ಲೇಪವನ್ನು ಚೇಳು ಕಡಿತದ ಮೇಲೆ ಲೇಪಿಸುವುದರಿಂದ ಚೇಳು ಕಡಿತದ ನೋವು, ಉರಿಬಾವು ನಿವಾರಣೆಯಾಗುತ್ತದೆ.
- ದಾಲ್ಚಿನಿ, ತೇಜಪತ್ರೆ, ಏಲಕ್ಕಿಯನ್ನು 12 ಗ್ರಾಂನಂತೆ, ಅದಕ್ಕೆ 24 ಗ್ರಾಂನಂತೆ ಹಿಪ್ಪಲಿ, ಕಲ್ಲುಸಕ್ಕರೆ, ಒಣದ್ರಾಕ್ಷಿ, ಜೇಷ್ಠ ಮಧು, ಬೆರೆಸಿ, ಅರೆದು 3 ಹೊತ್ತಿಗೆ 1 ಗ್ರಾಂನಷ್ಟು ನಾಲ್ಕು ವಾರ ಸೇವಿಸುವುದರಿಂದ ಉಬ್ಬಸರೋಗವು ಕಡಿಮೆಯಾಗುತ್ತದೆ.
- ದಾಲ್ಚಿನಿಯನ್ನು ಬಿಸಿ ನೀರಿನಲ್ಲಿ ಅರೆದು ಊತಕ್ಕೆ ಹಚ್ಚುವುದರಿಂದ ಊತವು ನಿವಾರಣೆಯಾಗುತ್ತದೆ.
- ದಾಲ್ಚಿನಿಯನ್ನು ಬಾಯಿಯಲ್ಲಿ ಹಾಕಿ ಜಗಿಯುವುದರಿಂದ ಹಲ್ಲುಗಳು ಗಟ್ಟಿಯಾಗಿ ಬಾಯಿಯ ದುರ್ಗಂಧ ನಿವಾರಣೆಯಾಗುತ್ತದೆ.
- ದಾಲ್ಚಿನಿ ಮತ್ತು ಕರಿಮೆಣಸಿನ ಪುಡಿ ಕಷಾಯ ಮಾಡಿ, ಅದಕ್ಕೆ ಜೇನುತುಪ್ಪ ಸೇರಿಸಿ ಸೇವಿಸುವುದರಿಂದ ಗಂಟಲು ಕೆರೆತ, ನೆಗಡಿ ಗುಣವಾಗುತ್ತದೆ.
- ಯೌವನದಲ್ಲಿ ಉಂಟಾಗುವ ಮೊಡವೆಯ ತೊಂದರೆಗೆ ದಾಲ್ಚಿನಿಯನ್ನು ನಿಂಬೆರಸದಲ್ಲಿ ಅರೆದು ಮೊಡವೆಗೆ ಹಚ್ಚಬೇಕು.
- ಹೆಚ್ಚು ಹೆಚ್ಚು ಮೂತ್ರ ವಿಸರ್ಜನೆಯಾಗುತ್ತಿದ್ದರೆ ದಾಲ್ಚಿನಿಯ ಪುಡಿಯನ್ನು ಜೇನುತುಪ್ಪದಲ್ಲಿ ಬೆರೆಸಿ ಸೇವಿಸುವುದರಿಂದ ಮೂತ್ರ ವಿಸರ್ಜನೆ ಹತೋಟಿಗೆ ಬರುತ್ತದೆ.
- ತಲೆಯ ಹಣೆಯ ಭಾಗಕ್ಕೆ ದಾಲ್ಚಿನಿಯ ಎಣ್ಣೆಯನ್ನು ಲೇಪಿಸಿದರೆ ಸಹಿಸಲಾರದ ತಲೆಸಿಡಿತವು ನಿವಾರಣೆಯಾಗುತ್ತದೆ.

- ವಾಂತಿ ಬರುವ ಸಂದರ್ಭದಲ್ಲಿ ದಾಲ್ಚಿನಿ ಚೆಕ್ಕೆಯನ್ನು ಅಗಿದು ಎಂಜಲು ನುಂಗುತ್ತಿದ್ದರೆ ಅರ್ಧಗಂಟೆಯೊಳಗೆ ವಾಂತಿಯು ನಿವಾರಣೆಯಾಗುತ್ತದೆ.
- ದಾಲ್ಚಿನಿ ಚೆಕ್ಕೆ, ಒಣಶುಂಠಿ 20 ಗ್ರಾಂನಂತೆ, ಲವಂಗವನ್ನು 10 ಗ್ರಾಂನಷ್ಟು, ಏಲಕ್ಕಿ 5 ಗ್ರಾಂ, ಬೆಲ್ಲ 50 ಗ್ರಾಂನಷ್ಟು ತೆಗೆದುಕೊಂಡು 200 ಮಿ.ಲೀ. ನೀರಿಗೆ ಹಾಕಿ ಕಲಸಿ, ಕುದಿಸಿ 100 ಮಿ.ಲೀ ಕಷಾಯ ಮಾಡಿ, ಈ ಕಷಾಯವನ್ನು ಮೂರು ಹೊತ್ತು 30 ಮಿ.ಲೀಟರ್‌ನಷ್ಟು ಕುಡಿದರೆ ಶೀತಜ್ವರವು (Influenza) ನಿವಾರಣೆ.
- ಹೆರಿಗೆಯ ನಂತರ ಬಾಣಂತಿಯರ ಹೊಟ್ಟೆನೋವಿಗೆ ದಾಲ್ಚಿನಿಯ ಕಷಾಯ ಸೇವನೆ ಬಹಳ ಪ್ರಯೋಜನಕಾರಿ.
- ಹೃದಯ ಸಂಬಂಧಿ ರೋಗಗಳಲ್ಲಿ ದಾಲ್ಚಿನಿಯ ಚೂರ್ಣವನ್ನು 1–3 ಗ್ರಾಂನಷ್ಟು ಸೇವಿಸಬಹುದು.


ಆರೋಗ್ಯವನ್ನು ಸೂರ್ಯ ಪ್ರಭೆಯಿಂದ ಪಡೆಯತಕ್ಕದ್ದು

ಬಾಯಿ ನೀರಿಳಿಸುವ ದಾಳಿಂಬೆ

Punica granatum, Linn.

Punicaceae





ಜೇನುದುಂಬಿಗಳು ಹೇಗೆ ಹೂವಿನ ಮಕರಂದವನ್ನು ಹೀರುತ್ತವೆಯೋ ಹಾಗೆಯೇ ಮಾನವರು ದಾಳಿಂಬೆಯ ರುಚಿಯನ್ನು ಸವಿಯುತ್ತಾರೆ. ಸಾಮಾನ್ಯವಾಗಿ ನಮ್ಮ ಸುತ್ತಮುತ್ತಲೂ ಹೇರಳವಾಗಿ ಬೆಳೆಯದಿದ್ದರೂ, ಕೆಲಮನೆಗಳಲ್ಲಿ ಬೆಳೆಸುವ ದಾಳಿಂಬೆಯು ಎಲ್ಲರಿಗೂ ಪರಿಚಿತ ದ್ರವ್ಯ. ದಾಳಿಂಬೆಯ ಬೀಜಗಳನ್ನು ಸುಂದರಿಯರ ದಂತಕ್ಕೆ ಹೋಲಿಸಿದ ವರ್ಣನೆಯನ್ನು ಕಾವ್ಯಗಳಲ್ಲಿ ನಾವೂ ಕಾಣಬಹುದು. ಪರ್ಷಿಯಾದ ಅಡವಿಗಳಲ್ಲಿ ನೈಸರ್ಗಿಕವಾಗಿ ಬೆಳೆಯುವ ದಾಳಿಂಬೆಯನ್ನು ಭಾರತಾದ್ಯಂತ ಹಣ್ಣಿಗಾಗಿ ಬೆಳೆಸಲಾಗುತ್ತಿದೆ. ಬಹು ಪುರಾತನದಿಂದಲೇ ಭಾರತದಲ್ಲಿ ದಾಳಿಂಬೆಯನ್ನು ಬೆಳೆಯುವುದರಿಂದ ಆಯುರ್ವೇದ ಗ್ರಂಥಗಳಲ್ಲಿ ಅವುಗಳ ವಿವರಣೆಯನ್ನು, ಔಷಧಿ ಗುಣಗಳನ್ನು ಹೇರಳವಾಗಿ ಕಾಣಬಹುದು. ದಾಳಿಂಬೆ ತಳಿಗಳಾದ ಚಿಂತಾಮಣಿ, ಮಧುಗಿರಿ, ಜರಗಿನ ಹಳ್ಳಿ ತಳಿಗಳನ್ನು ನಾವು ಕರ್ನಾಟಕದ ಬೇಸಾಯದಲ್ಲಿ ಕಾಣಬಹುದು. ನಿತ್ಯ ಹರಿದ್ವರ್ಣ ಗಿಡವಾಗಿ ಬೆಳೆಯುವ ಈ ಗಿಡ ಅಥವಾ ಸಣ್ಣ ಮರ ಚಳಿ ತೀವ್ರ ಪ್ರದೇಶದಲ್ಲಿ ಪರ್ಣಪಾತಿಗಿಡ ಅಥವಾ ಸಣ್ಣ ಮರವಾಗಿ ಬೆಳೆಯುತ್ತವೆ. ಆಯುರ್ವೇದದಲ್ಲಿ ಯಥೇಚ್ಛವಾಗಿ ಉಪಯೋಗಕ್ಕೆ ಬರುವ ಇದೊಂದು ಮುಖ್ಯವಾದ ಫಲವರ್ಗ ದ್ರವ್ಯ.

ಬಹು ಭಾಷಾ ಹೆಸರುಗಳು

ಕನ್ನಡ : ದಾಳಿಂಬೆ, ಸೀದಾಳಿಂಬೆ

ಸಂಸ್ಕೃತ : ದಾಡಿಮ

ತುಳು : ದಾಳಿಂಬೋ, ದಾಳಿಂಬೆ

ಹಿಂದಿ : ಅನಾರ್

ಇಂಗ್ಲೀಷ್ : ಪೊಮಗ್ರನೇಟ್

ಪರ್ಯಾಯ ಪದಗಳು

ದಾಡಿಮ, ದಂತಬೀಜಾ, ಲೋಹಿತಪುಷ್ಪ, ಫಲಾಮ್ಲ, ಕುಚಫಲಾ, ಶೂಕವಲ್ಲಭಾ, ಕುಟ್ಟಿಮಾ, ರಕ್ತಬೀಜಾ, ನೀಲಪತ್ರಾ, ರಕ್ತಪುಷ್ಪಾ

ದ್ರವ್ಯದ ವರ್ಣನೆ

ದಾಳಿಂಬೆ ಒಂದು ಚಿಕ್ಕದಾದ ಗಿಡ ಅಥವಾ ಮರ. ಇದು ಸುಮಾರು ಮೂರರಿಂದ ಐದು ಮೀಟರ್‌ನಷ್ಟು ಎತ್ತರಕ್ಕೆ ಬೆಳೆಯುತ್ತದೆ. ಕಾಂಡದ ಚಿಕ್ಕೆಯು ಹೊರಗಿನಿಂದ ಕೆಂಪು ಬಣ್ಣದಿಂದ, ಒಳಗೆ ಹಳದಿ ಬಣ್ಣದಿಂದ ಕೂಡಿದೆ. ಕಿರುರೆಂಬೆಗಳ ಮೇಲೆ ಮುಳ್ಳುಗಳಿರುತ್ತವೆ. ಎಲೆಯು 5–7 ಸೆಂ.ಮೀನಷ್ಟು ಉದ್ದ, 3 ಸೆಂ.ಮೀನಷ್ಟು ಅಗಲವಾಗಿ ಚೂಪಾದ ತುದಿಯಿಂದ ಕೂಡಿದೆ. ಹೂವು ಕೆಂಬಣ್ಣವನ್ನು ಹೊಂದಿರುತ್ತದೆ. ಕಾಯಿಯು ಹಸಿರಾಗಿದ್ದೂ, ಹಣ್ಣು ಕೇಸರಿ ಮಿಶ್ರ ಕೆಂಪು ಬಣ್ಣದಿಂದ ಕೂಡಿ ಅನೇಕ ಬೀಜಗಳನ್ನು ಹೊಂದಿರುತ್ತವೆ. ಆಫ್ರಿಕಾ, ಅಫ್ಘಾನಿಸ್ಥಾನ್, ಇರಾನ್ ಮೂಲದ ದಾಳಿಂಬೆಯನ್ನು ಭಾರತದೆಲ್ಲೆಡೆ ಬೆಳೆಸುತ್ತಾರೆ. ಈ ದ್ರವ್ಯವು ಹೂವನ್ನು ಎಪ್ರಿಲ್–ಜೂನ್ ತಿಂಗಳಿನಲ್ಲಿ, ಜೂನ್–ಆಗಸ್ಟ್ ತಿಂಗಳಿನಲ್ಲಿ ಬಿಡುತ್ತದೆ.

ವಿಧಗಳು

ದಾಳಿಂಬೆಯಲ್ಲಿ ಶಾಸ್ತ್ರೀಯವಾಗಿ ಎರಡು ವಿಧಗಳಿವೆ. ಅವು

- ಮಧುರ ದಾಳಿಂಬೆ
- ಆಮ್ಲ ದಾಳಿಂಬೆ.

ಭಾವ ಮಿಶ್ರನು ಮೂರು ವಿಧದ ದಾಳಿಂಬೆಯನ್ನು ವಿವರಿಸಿದ್ದಾನೆ. ಅವು

- ಮಧುರ
- ಆಮ್ಲ
- ಮಧುರಾಮ್ಲ

ಆದರೆ ಮಾರುಕಟ್ಟೆಯಲ್ಲಿ ಅನೇಕ ತರಹದ ತಳಿಗಳನ್ನು ನಾವೂ ಕಾಣಬಹುದು.

ಉಪಯುಕ್ತ ಅಂಗಗಳು

- ಹಣ್ಣು
- ಹಣ್ಣಿನ ತೊಗಟೆ
- ಬೇರಿನ ತೊಗಟೆ
- ಮೊಗ್ಗು

ದ್ರವ್ಯದ ಗುಣಧರ್ಮಗಳು

ರಸ : ಕಷಾಯ, ಮಧುರ, ಆಮ್ಲ

ಗುಣ : ಲಘು, ಸ್ನಿಗ್ಧ

ವೀರ್ಯ : ಉಷ್ಣ

ವಿಪಾಕ : ಮಧುರ/ಆಮ್ಲ

ಕರ್ಮ : ತ್ರಿದೋಷಹರ, ಹೃದ್ಯ, ಶುಕ್ರಲ, ಗ್ರಾಹೀ

"ಸ್ನಿಗ್ಧೋಷ್ಣಂ ದಾಡಿಮಂ ಹೃದ್ಯಂ ಕಫ ಪಿತ್ತ ವಿರೋಧಿ ಚ"॥

(ಧನ್ವಂತರಿ ನಿಘಂಟು)

ಎಂದರೆ, ದಾಳಿಂಬೆಯು ಸ್ನಿಗ್ಧ ಮತ್ತು ಉಷ್ಣ ಗುಣಗಳಿಂದ ಕೂಡಿದೆ. ಹೃದಯಕ್ಕೆ ಬಲವನ್ನು ಕೊಡುವುದು. ಕಫನಾಶಕವಾಗಿದೆ, ಪಿತ್ತಶಾಮಕವೂ ಆಗಿದೆ.

ಔಷಧಿ ಪ್ರಮಾಣ

ಹಣ್ಣಿನ ರಸ – 20–50 ಮಿ.ಲೀ

ಕಷಾಯ – 40–80 ಮಿ.ಲೀ

ತೊಗಟೆ ಚೂರ್ಣ – 3–5 ಗ್ರಾಂ

ಔಷಧೀಯ ಯೋಗಗಳು

- ದಾಡಿಮಾಷ್ಟಕ ಚೂರ್ಣ
- ಬಾಸ್ಕರ ಲವಣ ಚೂರ್ಣ
- ದಾಡಿಮಾದಿ ಘೃತ
- ದಾಡಿಮಾದಿ ತೈಲ

- ಗಂಗಾಧರ ಚೂರ್ಣ
- ದಾಡಿಮಾವಲೇಹ

ಔಷಧೀಯ ಉಪಯೋಗಗಳು


- ದಾಳಿಂಬೆಯ ಚೆಕ್ಕೆಯಿಂದ ತಯಾರಿಸಿದ ಕಷಾಯದಿಂದ ಬಾಯಿ ಮುಕ್ಕಳಿಸುವುದರಿಂದ ಗಂಟಲು ಮತ್ತು ಬಾಯಿಯ ರೋಗಕ್ಕೆ ಒಳ್ಳೆಯದು.
- ದಾಳಿಂಬೆ ಮತ್ತು ಕೋಡಸಿಗೆಯಿಂದ ತಯಾರಿಸಿದ ಕಷಾಯವನ್ನು ಸೇವಿಸುವುದರಿಂದ ರಕ್ತಮೂಲವ್ಯಾಧಿಗೆ ಒಳ್ಳೆಯದು.
- ಬಿಕ್ಕಳಿಕೆ ಬಂದಾಗ ದಾಳಿಂಬೆ ಎಲೆಯ ರಸವನ್ನು ಸಕ್ಕರೆ ಹಾಕಿ ಸೇವಿಸಬೇಕು.
- ದಾಳಿಂಬೆ ಹೂವನ್ನು ಅರೆದು ಜೇನಿನೊಂದಿಗೆ ಕುಡಿಯುವುದರಿಂದ ರಕ್ತಾತಿಸಾರ ನಿಲ್ಲುತ್ತದೆ.
- ದಾಳಿಂಬೆಯ ಬೇರಿನ ಚೆಕ್ಕೆಯ ಕಷಾಯದ ಸೇವನೆಯಿಂದ ಹೊಟ್ಟೆಹುಳುಗಳು ನಾಶವಾಗುತ್ತವೆ.
- ದಾಳಿಂಬೆ ಹಣ್ಣಿನ ರಸಕ್ಕೆ ಅದರ ಅರ್ಧಭಾಗದಷ್ಟು ಜೀರಿಗೆ ಚೂರ್ಣ ಬೆರೆಸಿ ಕುಡಿಯುವುದರಿಂದ ಅರುಚಿ (ನಾಲಿಗೆಗೆ ರುಚಿ ಇಲ್ಲದಿರುವಿಕೆ)ಯಿಂದ ಬಳಲುತ್ತಿರುವವರಿಗೆ ಒಳ್ಳೆಯದು.
- ದಾಳಿಂಬೆ ಹಣ್ಣಿನ ರಸ ಸೇವನೆಯಿಂದ ರಕ್ತ ಶುದ್ಧಿಯಾಗಿ, ಪಿತ್ತ ಶಮನವಾಗುತ್ತದೆ.
- ಸುಟ್ಟ ಗಾಯದಿಂದ ಉಂಟಾದ ಉರಿಯನ್ನು ಹೋಗಲಾಡಿಸಲು ದಾಳಿಂಬೆ ಎಲೆಗಳನ್ನು ಅರೆದು ಲೇಪಿಸಬೇಕು.
- ದಾಳಿಂಬೆ ಹಣ್ಣಿನ ತೊಗಟೆಯಿಂದ ತಯಾರಿಸಿದ ಕಷಾಯವನ್ನು ಮೂಗಿಗೆ ಬಿಡುವುದರಿಂದ ಮೂಗಿನಿಂದ ರಕ್ತ ಸುರಿಯುವಿಕೆಗೆ ಒಳ್ಳೆಯದು.
- ಹೂವಿನ ಪುಡಿಯನ್ನು ಜೇನಿನೊಂದಿಗೆ ಸೇವಿಸುವುದರಿಂದ ಒಣಕೆಮ್ಮು ಕಡಿಮೆಯಾಗುತ್ತದೆ.
- ದಾಳಿಂಬೆ ಹಣ್ಣಿನ ರಸವನ್ನು ದಿನಾಲೂ ಸೇವಿಸುವುದರಿಂದ ಬಲಹೀನತೆಗೆ ಒಳ್ಳೆಯದು.
- ದಾಳಿಂಬೆಯ ತೊಗಟೆಯನ್ನು ಮೇಕೆಯ ಹಾಲಿನಲ್ಲಿ ಅರೆದು ಮಚ್ಚೆ (ಕಲೆ)ಯಿರುವ ಕಡೆಗೆ ಹಚ್ಚುವುದರಿಂದ ಕಲೆಯು ಇಲ್ಲದಾಗುತ್ತದೆ.
- ದಾಳಿಂಬೆಯ ಬೇರನ್ನು ನೀರಿನಲ್ಲಿ ಅರೆದು ಹಣೆಗೆ ಲೇಪಿಸುವುದರಿಂದ ಆಯಾಸದಿಂದ ಬಂದ ತಲೆನೋವು ವಾಸಿಯಾಗುತ್ತದೆ.
- ದಾಳಿಂಬೆ ಹಣ್ಣಿನ ತೊಗಟೆಯನ್ನು ಅರೆದು ಮಜ್ಜಿಗೆಯೊಡನೆ ಸೇವಿಸುವುದರಿಂದ ರಕ್ತ ಭೇದಿ ನಿಲ್ಲುತ್ತದೆ.

ತ್ರಿದೋಷಶಮಕ ನಸಗುನ್ನಿ

Mucuna pruriens, Linn.

Fabaceae





ಸಾಮಾನ್ಯವಾಗಿ ನಮ್ಮ ಸುತ್ತಮುತ್ತಲೂ ಕಾಣಸಿಗುವ ನಸಗುನ್ನಿಯು ಮರಗಿಡಗಳಿಗೆ ಹಬ್ಬಿಕೊಂಡು ಬಳ್ಳಿಯಂತೆ ಬೆಳೆಯುತ್ತದೆ. ನಸಗುನ್ನಿಯ ಕಾಯಿಯು ರೋಮಗಳಿಂದ ಕೂಡಿದ್ದು, ಇದು ನಮ್ಮ ದೇಹಕ್ಕೆ ತಗುಲಿದರೆ ತುರಿಕೆ, ಉರಿಯನ್ನು ಉಂಟು ಮಾಡುತ್ತದೆ. ವೀರ್ಯವರ್ಧನೆ, ಪುಷ್ಠಿ, ಬಲವೃದ್ಧಿ, ವಾಜೀಕರಣ, ಕ್ರಿಮಿಘ್ನ, ತ್ರಿದೋಷಶಾಮಕ ಮುಂತಾದ ಹಲವು ನಸಗುನ್ನಿಯ ಗುಣಗಳನ್ನು ನಾವು ವಿವಿಧ ಆಯುರ್ವೇದ ಸಂಹಿತೆ, ನಿಘಂಟುಗಳಲ್ಲಿ ಕಾಣಬಹುದು. ಇದರ ಬೀಜವನ್ನು ಮಾರುಕಟ್ಟೆಯಲ್ಲಿ ಪಡೆಯುವ ಬದಲು ಖುದ್ದಾಗಿ ಅರಣ್ಯದಲ್ಲಿ ಸಂಗ್ರಹಿಸಿ ತರುವುದೇ ಉತ್ತಮ. ಆದರೆ ಸಂಗ್ರಹಿಸುವ ಮೊದಲು ಮೇಲೆ ತಿಳಿಸಿರುವ ರೀತಿಯಲ್ಲಿ ಎಚ್ಚರಿಕೆಯನ್ನು ವಹಿಸಿಕೊಳ್ಳಬೇಕು. ಇಲ್ಲವಾದಲ್ಲಿ ಅನೇಕ ತರಹದ ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ. ಚರಕ, ಸುಶ್ರುತ ವಾಗ್ಭಟಾದಿ ಪ್ರಾಚೀನ ಆಚಾರ್ಯರು ಇದಕ್ಕೆ ಶ್ರೇಷ್ಠ ಸ್ಥಾನ ಕೊಟ್ಟಿದ್ದಾರೆ ಎಂಬ ಉಲ್ಲೇಖವು ಇದೆ. ನಸಗುನ್ನಿಯನ್ನು ಪ್ರಮಾಣಕ್ಕಿಂತ ಅಧಿಕ ಸೇವನೆ ಮಾಡುವುದು ಸೂಕ್ತವಲ್ಲ.

ಬಹು ಭಾಷಾ ಹೆಸರುಗಳು

ಕನ್ನಡ : ನಸಗುನ್ನಿ, ನಾಯಿ ಸೋಣಗು

ಸಂಸ್ಕೃತ : ಕಪಿಕಚ್ಛು

ತುಳು : ನೈಸೋಡಂಕ್, ನಾಯಿ ನೊನಂಗ್

ಹಿಂದಿ : ಕೌಂಚ್

ಇಂಗ್ಲೀಷ್ : ಕೌಹೇಜ್

ಪರ್ಯಾಯ ಪದಗಳು

ಕಪಿಕಚ್ಛು, ಆತ್ಮಗುಪ್ತ, ಮರ್ಕಟಿ, ದುಸ್ಪರ್ಶ, ಕಂಡುರಾ, ಕಂಡೂಕರೀ, ಶೂಕಶಿಂಬೀ, ಸ್ವಯಂಗುಪ್ತಾ, ಗುಪ್ತಫಲಾ, ಸ್ವಗುಪ್ತಾ, ಅಜದಾಫಲ ಪ್ರವೃಶಯನಾ, ತೀಕ್ಷ್ಣಾ, ಕೋಮಲಾ, ವಿಷರೋಮಾ, ರೋಮವಲ್ಲೀ.

ಈ ದ್ರವ್ಯದ ಕಾಯಿಯು ತನ್ನನ್ನು ತಾನು ರೋಮಗಳಿಂದ ರಕ್ಷಿಸುವುದರಿಂದ ಇದನ್ನು 'ಆತ್ಮಗುಪ್ತ' ಎಂದು ಕರೆಯುತ್ತಾರೆ.

ದ್ರವ್ಯದ ವರ್ಣನೆ

ನಸುಗುನ್ನಿಯು ಮೃದುವಾದ ರೋಮಗಳಿಂದ ಕೂಡಿದ ಬಳ್ಳಿ, ಎಲೆಯು 7–13 ಸೆಂ.ಮೀಟರ್‌ಉದ್ದವಾಗಿದ್ದು, ಮೂರೆಲೆಗಳ ಗುಚ್ಛದಿಂದ ಕೂಡಿರುತ್ತದೆ. ಹೂವಿನ ತೊಟ್ಟು ಬಾಗಿ 15–30 ಸೆಂ.ಮೀಟರ್ ಉದ್ದವಾಗಿದೆ. ಹೂಗಳು ಗುಂಪಿನಲ್ಲಿ ಇದ್ದು ನೀಲಿ ಬಣ್ಣದಾಗಿರುತ್ತದೆ. ಇದರ ಕಾಯಿಯು 5–7 ಸೆಂ.ಮೀಟರ್‌ನಷ್ಟು ಉದ್ದವಾಗಿ ಸ್ವಲ್ಪ ಬಾಗಿ ಹುಣಸೆ ಹಣ್ಣಿನಂತಿದೆ. ಕಾಯಿಯು ರೋಮಗಳಿಂದ ಕೂಡಿದೆ. ಕಾಯಿಯಲ್ಲಿ 5–6 ಚಪ್ಪಟೆಯಾದ ಬೀಜಗಳಿವೆ. ನಸಗುನ್ನಿ ಬಳ್ಳಿಯು ಮಳೆಗಾಲದಲ್ಲಿ ಬೆಳೆಯುತ್ತದೆ. ಈ ದ್ರವ್ಯವು ಹೂವು ಮತ್ತು ಹಣ್ಣನ್ನು ನವೆಂಬರ್–ಫೆಬ್ರವರಿ ತಿಂಗಳಿನಲ್ಲಿ ಬಿಡುತ್ತದೆ. ಸಾಮಾನ್ಯವಾಗಿ ಭಾರತದೆಲ್ಲೆಡೆ ಬೆಳೆಯುವ ಈ ದ್ರವ್ಯವು ಉಷ್ಣಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಯುತ್ತದೆ.

ವಿಧಗಳು

ಶಾಸ್ತ್ರೀಯವಾಗಿ ಯಾವುದೇ ವಿಧವನ್ನು ಕಾಣದಿದ್ದರೂ ನಸಗುನ್ನಿಯಲ್ಲಿ ಎರಡು ವಿಧವನ್ನು ಕಾಣಬಹುದು.

ಒಂದರಲ್ಲಿ ರೋಮ ಅಧಿಕವಾಗಿದ್ದು, ತುರಿಕೆ ಉಂಟು ಮಾಡುತ್ತದೆ.

ಇನ್ನೊಂದರಲ್ಲಿ ರೋಮ ಕಡಿಮೆಯಿದ್ದು ತುರಿಕೆ ಕಡಿಮೆ, ಆದುದರಿಂದ ತುರಿಕೆ ಕಡಿಮೆಯ

ನಸಗುನ್ನಿಯನ್ನು ಹೆಚ್ಚಾಗಿ ಮಾರಾಟಮಾಡುತ್ತಾರೆ. ಆದರೆ ಔಷಧೀಯ ದೃಷ್ಟಿಯಲ್ಲಿ ತುರಿಕೆ ಹೆಚ್ಚಾಗಿರುವ ಜಾತಿಯೇ ಶ್ರೇಷ್ಠ.

ಉಪಯುಕ್ತ ಅಂಗಗಳು

- ಬೇರು
- ಬೀಜ
- ರೋಮ

ದ್ರವ್ಯದ ಗುಣಧರ್ಮಗಳು

ರಸ : ಮಧುರ, ತಿಕ್ತ

ಗುಣ : ಗುರು, ಸ್ನಿಗ್ಧ

ವೀರ್ಯ : ಉಷ್ಣ, ಶೀತ, (ಧ.ನಿ)

ವಿಪಾಕ : ಮಧುರ

ಕರ್ಮ : ವಾತಪಿತ್ತಹರ, ಬಲ್ಯ, ಬೃಹ್ಮಣ, ವಾಜೀಕರಣ

"ಕಪಿಕಚ್ಛುಃ ಸ್ವಾದುತಿಕ್ತಾ ವಾತಪಿತ್ತಕಫಾಸ್ರಜಿತ್।
ಶೀತಲಂ ಬೃಂಹಣಂ ವೃಷ್ಯಂ ಮಾಷತುಲ್ಯಂ ತಯೋಃ ಫಲಂ॥ (ಭಾವಪ್ರಕಾಶ)

ಎಂದರೆ ನಸಗುನ್ನಿ ಮಧುರ ಮತ್ತು ತಿಕ್ತ ರಸದಿಂದ ಕೂಡಿದೆ, ವಾತಪಿತ್ತಕಫ ರಕ್ತಶಾಮಕವಾಗಿದೆ, ಬಲಹೆಚ್ಚಿಸುತ್ತದೆ, ವೀರ್ಯವೃದ್ಧಿಸುತ್ತದೆ. ಇದರ ಗುಣವು ಮಾಷದ ಗುಣದಂತಿದೆ.

ಔಷಧಿ ಪ್ರಮಾಣ

ಬೀಜ ಚೂರ್ಣ – 3–6 ಗ್ರಾಂ.

ಬೇರಿನ ಕಷಾಯ – 50–100 ಮಿ.ಲೀ.

ಕೋಡಿನ ರೋಮ – 125 ಮಿ.ಗ್ರಾಂ

ಔಷಧೀಯ ಯೋಗಗಳು

- ವಾನರಿ ಗುಟಿಕ
- ಮಾಶಬಲಾದಿ ಪಾಚನ

ಔಷಧೀಯ ಉಪಯೋಗಗಳು

- ನಸಗುನ್ನಿ ಬೀಜದ ಕಷಾಯವನ್ನು ಒಂದು ತಿಂಗಳಿನವರೆಗೆ ಸೇವಿಸಿದರೆ ಕೈಗೆ ಬಲವು ಪುನಃ ಬರುತ್ತದೆ.


ತ್ರಿದೋಷಶಮಕ ನಸಗುನ್ನಿ

- ನಸಗುನ್ನಿಯ ರೋಮದ ಪುಡಿಯನ್ನು 125 ಮಿ.ಗ್ರಾಂನಷ್ಟು ಬೆಲ್ಲ ಅಥವಾ ಜೇನುತುಪ್ಪ ಬೆರೆಸಿ ಸೇವಿಸುವುದರಿಂದ ಕ್ರಿಮಿರೋಗಕ್ಕೆ ಒಳ್ಳೆಯದು. ಇದನ್ನು ಸೇವಿಸುವ ಮೊದಲು ತುಟಿ ಮತ್ತು ಬಾಯಿಗೆ ತುಪ್ಪವನ್ನು ಹಚ್ಚಿ ನಂತರ ಸೇವಿಸಬೇಕು.
- ಗೋಧಿ ಪುಡಿಗೆ ನಸಗುನ್ನಿ ಬೀಜದ ಪುಡಿಯನ್ನು ಬೆರೆಸಿ, ಅದನ್ನು ಹಾಲಿನಲ್ಲಿ ಕಾಯಿಸಿ, ನಂತರ ಅದಕ್ಕೆ ತುಪ್ಪ ಬೆರೆಸಿ ಸೇವಿಸಬೇಕು. ನಂತರ ಮತ್ತೆ ಹಾಲನ್ನು ಕುಡಿಯಬೇಕು, ಹೀಗೆ ಮಾಡುವುದರಿಂದ ಕಾಮೋತ್ತೇಜಕತೆ ಉಂಟಾಗುತ್ತದೆ.
- ನಸಗುನ್ನಿ ಬೇರಿನ ಕಷಾಯ ಸೇವಿಸುವುದರಿಂದ ಸುಖ ಮೂತ್ರ ವಿಸರ್ಜನೆಯಾಗುವುದರ ಜೊತೆಗೆ ಅನೇಕ ತರಹದ ವಾತವ್ಯಾಧಿಗಳನ್ನು ನಿವಾರಿಸುತ್ತದೆ.
- ನಸಗುನ್ನಿ ಬೀಜದ ಚೂರ್ಣವನ್ನು 1 ಗ್ರಾಂನಷ್ಟು ದಿವಸಕ್ಕೆ ಮೂರು ಹೊತ್ತು ಸೇವಿಸುವುದರಿಂದ ಶ್ವಾಸ (ಉಬ್ಬಸ) ರೋಗವು ನಿವಾರಣೆ.
- ಒಂದು ಚಮಚ ನಸಗುನ್ನಿಯ ಬೀಜದ ಚೂರ್ಣವನ್ನು ಬೆಳಗ್ಗೆ ಒಂದು ಹೊತ್ತು ಹಾಲು ಸಕ್ಕರೆಯ ಜೊತೆಗೆ ಸೇವಿಸುವುದರಿಂದ ಪುಷ್ಟಿ, ವೀರ್ಯವೃದ್ಧಿ, ಶಕ್ತಿ, ಬಲ ಹೆಚ್ಚುತ್ತದೆ.

ನಾಗಸಂಪಿಗೆಯ ಸೊಬಗು

Mesua ferrea, Linn.

Guttiferae



ನಾಗಸಂಪಿಗೆಯೂ ವೇದಕಾಲದಿಂದಲೂ ಔಷಧಕ್ಕೆ ಉಪಯೋಗಿಸುತ್ತಿರುವ ದ್ರವ್ಯ. ಹಳದಿ ಗುಚ್ಛಗಳಿಂದ ಕೂಡಿದ ಪುಂಕೇಸರಗಳನ್ನು ಔಷಧಿಗಾಗಿ ಉಪಯೋಗಿಸುತ್ತಾರೆ. ಕಾರ್ಲ್‌ವಾನ್‌ಲಿನ್ನೆಯಸ್ ಎಂಬವರು ಈ ದ್ರವ್ಯವನ್ನು ವಿಜ್ಞಾನ ಜಗತ್ತಿಗೆ ಕ್ರಿ.ಶ. 1737ರಲ್ಲಿ ಪರಿಚಯಿಸಿದರು. ಫ್ಲೋರಾ ಜೈಲಾನಿಕಾ ಎಂಬ ಗ್ರಂಥದಲ್ಲಿ ಈ ದ್ರವ್ಯದ ಪೂರ್ಣ ವಿವರಣೆಯನ್ನು ಕಾಣಬಹುದಾಗಿದೆ. ಶ್ರೀಲಂಕಾದಲ್ಲಿ ಬೌದ್ಧ ದೇವಾಲಯಗಳ ಸಮೀಪದಲ್ಲಿ ಈ ಮರವನ್ನು ಬೆಳೆಸುವ ಸಂಪ್ರದಾಯವಿದೆ ಎಂಬ ಉಲ್ಲೇಖವು ಇದೆ. ಅಗ್ನಿಮಾಂದ್ಯ, ಅಜೀರ್ಣ, ವಾಂತಿ, ಕ್ರಿಮಿ, ಪ್ರವಾಹಿಕಾ, ಪಾಚನ, ಅತಿಬೆವರಿಕೆ, ಹೃದಯ ದೌರ್ಬಲ್ಯ, ಬಾಯಿ ವಾಸನೆ ಮುಂತಾದ ರೋಗಗಳಲ್ಲಿ ನಾಗಸಂಪಿಗೆ ಉಪಯುಕ್ತ ಔಷಧಿಯಾಗಿದೆ.

ಬಹು ಭಾಷಾ ಹೆಸರುಗಳು

ಕನ್ನಡ : ನಾಗಸಂಪಿಗೆ

ಸಂಸ್ಕೃತ : ನಾಗಕೇಸರ

ತುಳು : ನಾಗಸಂಪೈ

ಹಿಂದಿ : ನಾಗ್‌ಕೇಸರ್

ಇಂಗ್ಲೀಷ್ : ಸಿಲೋನ್ ಐರಾನ್ ವುಡ್

ಪರ್ಯಾಯ ಪದಗಳು

ನಾಗಕೇಸರ, ಸುವರ್ಣ, ನಾಗಪುಷ್ಪ, ಚಾಂಪೇಯ, ಅಹಿಪುಷ್ಪ, ಕೇಸರಂ, ನಟಂ, ನಾಗಂ, ನಾಗರೇಣುಕ, ಪಿಂಜರಂ, ಹೇಮಾಪುಷ್ಪ, ರುಕ್ಮ, ಮಹಾಪುಷ್ಪ, ಗಜ, ಕಿಂಜಲ್ಕ, ಫಲಕಾ, ಹೇಮಾ, ಕಾಂಚನ.

ನಾಗಸಂಪಿಗೆಯ ಕೇಸರಗಳು ಬಂಗಾರದ ಹಳದಿ ರಂಗು ಹೊಂದಿರುವುದರಿಂದಲೇ ಇದನ್ನು 'ಸುವರ್ಣ' ಎಂದು ಸಂಸ್ಕೃತದಲ್ಲಿ ಕರೆಯುತ್ತಾರೆ.

ದ್ರವ್ಯದ ವರ್ಣನೆ

ನಾಗಸಂಪಿಗೆ ಸದಾ ಹಸಿರಾಗಿರುವ, ಸುಂದರವಾದ ಮಧ್ಯಮ ಗಾತ್ರದ ಮರ. ಇದು ಸುಮಾರು 45ರಿಂದ 60 ಅಡಿ ಎತ್ತರಕ್ಕೆ ಬೆಳೆಯುತ್ತದೆ. ತೆಳುವಾದ ತೊಗಟೆಯು ಕೆಂಪು ಅಥವಾ ಕಂದು ಬಣ್ಣದಿಂದ ಕೂಡಿದೆ. ತೊಗಟೆಯಿಂದ ಒಂದು ತರಹದ ಅಂಟು ಹೊರಬರುತ್ತದೆ. ಎಲೆಯು 5ರಿಂದ 15 ಸೆಂ.ಮೀ. ಉದ್ದವಾಗಿ, 47 ಸೆಂ.ಮೀ. ಅಗಲವಾಗಿದೆ. ಎಲೆಯ ಎರಡು ಭಾಗವು ಚೂಪಾಗಿದೆ. ಎಲೆಯ ಹೊರ ಮೈ ಹಸಿರಾಗಿದ್ದು, ಒಳಮೈ ಬಿಳಿ ಮಿಶ್ರಿತ ಬಣ್ಣದಿಂದ ಕೂಡಿದೆ. ಬಿಳಿ ಬಣ್ಣದ ಹೂಗಳು ಸುಗಂಧಯುಕ್ತವಾಗಿದೆ. ಹೂವಿನಲ್ಲಿರುವ ಕೇಸರವು ಬಂಗಾರದ ಹಳದಿ ಬಣ್ಣದಿಂದ ಕೂಡಿದೆ. ನಾಗಸಂಪಿಗೆಯ ಅಂಡಾಕಾರದ ಕಾಯಿಯಲ್ಲಿ 14 ಕಂದು ಬಣ್ಣದ ಬೀಜಗಳಿವೆ. ಬೀಜದಲ್ಲಿ ಅಂಟು ರೀತಿಯ ಪದಾರ್ಥವಿರುತ್ತದೆ. ಇದರಲ್ಲಿ ಸುವಾಸನೆ ಭರಿತ ತೈಲವಿರುತ್ತದೆ. ಈ ದ್ರವ್ಯವು ಹೂವನ್ನು ಫೆಬ್ರವರಿ ಮೇ ತಿಂಗಳಲ್ಲಿ, ಕಾಯಿಯನ್ನು ಮೇ ಅಕ್ಟೋಬರ್ ತಿಂಗಳಿನಲ್ಲಿ ಬಿಡುತ್ತದೆ. ಉಷ್ಣವಲಯದ ತೇವ ಪೂರಿತ ನಿತ್ಯ ಹರಿದ್ವರ್ಣ ಸಸ್ಯಾವರಣ ಮತ್ತು ಭಾಗಶಃ ನಿತ್ಯಹರಿದ್ವರ್ಣ ಸಸ್ಯಾವರಣದಲ್ಲಿ ಕಂಡು ಬರುವ ಈ ದ್ರವ್ಯವನ್ನು ನೇಪಾಲ, ಹಿಮಾಲಯ, ಬಂಗಾಳ, ಅಸ್ಸಾಂ, ಕೊಂಕಣ್, ಕೇರಳ, ಅಂಡಮಾನ್, ಬ್ರಹ್ಮದೇಶಗಳಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ.

ಉಪಯುಕ್ತ ಅಂಗಗಳು

- ಎಲೆ
- ಕೇಸರ

ದ್ರವ್ಯದ ಗುಣಧರ್ಮಗಳು

ರಸ : ಕಷಾಯ, ತಿಕ್ತ

ಗುಣ : ರೂಕ್ಷ, ತೀಕ್ಷ್ಣ, ಲಘು

ವೀರ್ಯ : ಉಷ್ಣ/ಅನುಷ್ಣ

ವಿಪಾಕ : ಕಟು

ಕರ್ಮ : ಕಫಪಿತ್ತಹರ, ಪ್ರಮಥಿ, ಗ್ರಾಹೀ, ಪಾಚನ, ವಿಷಹರ, ಶೋಥಹರ, ಕಂಡೂಘ್ನ, ಕುಷ್ಠಘ್ನ

"ನಾಗಪುಷ್ಪಂ ಕಷಾಯೋಷ್ಣಂ ತೀಕ್ಷ್ಣಂ ಲಘ್ವಾಮಪಾಚನಂ।
ಜ್ವರಕಂಡೂ ತೃಷಾಸ್ವೇದಛರ್ದಿಹೃಲ್ಲಾಸನಾಶನಂ॥
ದೌರ್ಗಂಧ್ಯ ಕುಷ್ಠ ವೀಸರ್ಪಕಫಪಿತ್ತವಿಷಾಪಹಮ್॥ *(ಭಾವಪ್ರಕಾಶ)*

ಎಂದರೆ ನಾಗಕೇಸರವು ಕಷಾಯ ಮತ್ತು ತಿಕ್ತ ರಸದಿಂದ ಕೂಡಿದೆ. ತೀಕ್ಷ್ಣ ಮತ್ತು ಲಘು ಗುಣದಿಂದ ಕೂಡಿದೆ. ಅಜೀರ್ಣ, ಪಾಚನ ಸಂಬಂಧಿ ರೋಗ, ಜ್ವರ, ತುರಿಕೆ, ಅತಿಬೆವರು, ವಾಂತಿ, ಹೃಲ್ಲಾಸ, ದುರ್ಗಂಧ, ಕುಷ್ಠ, ವಿಸರ್ಪ, ವಿಷರೋಗಗಳನ್ನು ನಿವಾರಿಸುತ್ತದೆ. ಕಫ ಮತ್ತು ಪಿತ್ತ ಶಾಮಕವಾಗಿದೆ.

ಔಷಧಿ ಪ್ರಮಾಣ

ನಾಗಕೇಸರ ಚೂರ್ಣ : 1–3 ಗ್ರಾಂ

ಔಷಧೀಯ ಯೋಗಗಳು

- ಕನಕಾರಿಷ್ಠ
- ಚತುರ್ಜಾತಕ
- ಏಲಾದಿ ಚೂರ್ಣ
- ಕೇಸರಾದಿ ಕಷಾಯಂ

ಔಷಧೀಯ ಉಪಯೋಗಗಳು


ನಾಗಕೇಸರ ಪುಡಿಯನ್ನು ಸಕ್ಕರೆ ಮತ್ತು ಜೇನುತುಪ್ಪದೊಂದಿಗೆ ಬೆರೆಸಿ ಕಬ್ಬು ಮತ್ತು ಮಧುಕ (ಇಪ್ಪೆ)ದ ರಸದಲ್ಲಿ ಸೇವಿಸುವುದರಿಂದ ಬಿಕ್ಕಳಿಕೆ (ಹಿಕಪ್) ರೋಗವು ನಿವಾರಣೆಯಾಗುತ್ತದೆ.

ನಾಗಕೇಸರ ಪುಡಿಯನ್ನು ಮಜ್ಜಿಗೆಯಲ್ಲಿ ಮೂರು ದಿವಸದವರೆಗೆ ಸೇವಿಸುವುದರೊಂದಿಗೆ, ಆಹಾರದಲ್ಲಿ ಮಜ್ಜಿಗೆಯನ್ನು ಸೇವಿಸುತ್ತಾ ಬಂದರೆ ಶ್ವೇತಪ್ರದರ ರೋಗವು ನಿವಾರಣೆಯಾಗುತ್ತದೆ.

- ನಾಗಕೇಸರವನ್ನು ಸೇವಿಸುವುದರಿಂದ ರಕ್ತಾತಿಸಾರ ರೋಗವು ನಿವಾರಣೆಯಾಗುತ್ತದೆ.
- ನಾಗಕೇಸರ ಮತ್ತು ಅಡಿಕೆಯ ಚೂರ್ಣವನ್ನು ಸೇವಿಸುವುದರಿಂದ ಗರ್ಭಧಾರಣೆಗೆ ಒಳ್ಳೆಯದು.
- ನಾಗಕೇಸರ, ಬೆಣ್ಣೆ ಮತ್ತು ಸಕ್ಕರೆಯನ್ನು ಬೆರೆಸಿ ಸೇವಿಸುವುದರಿಂದ ರಕ್ತಸ್ರಾವದಿಂದ ಕೂಡಿದ ಮೂಲವ್ಯಾಧಿಗೆ ಒಳ್ಳೆಯದು.
- ನಾಗಕೇಸರದ ಚೂರ್ಣದ ಲೇಪವೂ ಚರ್ಮರೋಗದಲ್ಲಿ ಅದರಲ್ಲೂ ವಿಸರ್ಪ ರೋಗಕ್ಕೆ ಪರಿಣಾಮಕಾರಿ.
- ನಾಗಕೇಸರ, ಮತ್ತು ಕೆಂಪು ಕಲ್ಲುಸಕ್ಕರೆಯ ಪುಡಿಯನ್ನು ಬಾಯಲ್ಲಿ ಹಾಕಿ, ರಸ ನುಂಗುವುದರಿಂದ ಸ್ವರ ಭಂಗವನ್ನು ಸರಿಪಡಿಸಬಹುದು.
- ನಾಗಕೇಸರ, ಮರಡಿಪಪ್ಪು, ಬಿಲ್ವಪತ್ರೆ ಬೀಜದ ಪಪ್ಪು, ಭತ್ತದ ಅರಳು, ಜೋಳದ ಅರಳು, ಏಲಕ್ಕಿ, ಲವಂಗದ ಚೂರ್ಣಕ್ಕೆ ಕಲ್ಲುಸಕ್ಕರೆ ಪುಡಿ ಮತ್ತು ಜೇನುತುಪ್ಪ ಬೆರೆಸಿ 1/2 ಟೀ ಚಮಚದಷ್ಟು ದಿವಸಕ್ಕೆ ಎರಡು ಹೊತ್ತಿನ ಹಾಗೆ 5 ದಿವಸ ಸೇವಿಸುವುದರಿಂದ ವಾಂತಿನಿಲ್ಲುತ್ತದೆ.
- ನಾಗಕೇಸರವನ್ನು ತುಪ್ಪದಲ್ಲಿ ಬೆರೆಸಿ ಅದಕ್ಕೆ ಸಕ್ಕರೆ ಪುಡಿ ಸೇರಿಸಿ ಪ್ರತಿದಿವಸ ಒಂದು ಹೊತ್ತು 5–7 ದಿವಸ 1/4 ಚಮಚದಷ್ಟು ಸೇವಿಸುತ್ತಾ ಬಂದರೆ ಸ್ತ್ರೀಯರ ರಕ್ತಪ್ರದರ ನಿವಾರಣೆಯಾಗುತ್ತದೆ.
- ನಾಗಕೇಸರ ಪುಡಿಗೆ ಜೀರಿಗೆ ಪುಡಿ ಬೆರೆಸಿ ಅದಕ್ಕೆ ಅಷ್ಟೇ ಪ್ರಮಾಣದ ಸಕ್ಕರೆ ಪುಡಿ ಬೆರೆಸಿ ಎರಡು ಹೊತ್ತು ಒಂದು ಚಮಚದಷ್ಟು 5–7 ದಿವಸ ಸೇವಿಸುವುದರಿಂದ ಹೊಟ್ಟೆಯುಬ್ಬರ ನಿವಾರಣೆಯಾಗುತ್ತದೆ.
- ಸಂಧಿವಾತದಲ್ಲಿ ನಾಗಕೇಸರ ತೈಲವನ್ನು ಬಳಸುವುದರಿಂದ ನೋವು ನಿವಾರಣೆ.

ನಿಂಬೆ ಹಣ್ಣಿನ ಮಹಿಮೆಗೆ

Citrus limon, Linn.
Rutaceae



ನಾಲಿಗೆಗೆ ತನ್ನದೇ ಆದ ರುಚಿಯನ್ನು ನೀಡುವ ನಿಂಬೆಹಣ್ಣು ಅಡುಗೆ ಮನೆಯಲ್ಲಿ ಸಾಮಾನ್ಯವಾಗಿ ಕಂಡು ಬರುವ ಒಂದು ದ್ರವ್ಯ. ನಿಂಬೆಹಣ್ಣನ್ನು ನೋಡದವರು, ಅದರ ರುಚಿಯನ್ನು ಸವಿಯದವರು ಸಿಗುವುದು ತೀರಾ ಕಡಿಮೆ. ಯಾಕೆಂದರೆ ಅದು ಎಲ್ಲರಿಗೂ ಅಷ್ಟೇ ಪರಿಚಿತ ದ್ರವ್ಯ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ನಿಂಬೆಯಿಂದ ತಯಾರಿಸಿದ ಪಾನಕವನ್ನು ಪಿತ್ತದ ರೋಗಗಳಿಗೆ ತೆಗೆದುಕೊಳ್ಳುವುದು ವಾಡಿಕೆ. ತತ್ಕಾಲಿಕವಾಗಿ ನಮಗೆ ರೋಗದಿಂದ ಮುಕ್ತಿ ದೊರೆತರು, ಇದನ್ನು ಮತ್ತೆ ಮತ್ತೆ ಅನುಸರಿಸುವುದು ಸೂಕ್ತವಲ್ಲ. ಯಾಕೆಂದರೆ ಆಯುರ್ವೇದದಲ್ಲಿ ನಿಂಬೆಹಣ್ಣು ಶೀತವಾಗಿರದೆ ಉಷ್ಣವಾಗಿದೆ. ಉಷ್ಣದಿಂದ ಕೂಡಿದ ನಿಂಬೆಹಣ್ಣನ್ನು ಪಿತ್ತ ಪ್ರಕೃತಿಯವರು ಸೇವಿಸುವುದು ಸೂಕ್ತವಲ್ಲ. ನಿಂಬೆಹಣ್ಣಿನ ವಿವರಣೆಯನ್ನು ಬೃಹತ್‌ಸಂಹಿತೆಗಳಲ್ಲಿ ಹೆಚ್ಚಾಗಿ ಕಾಣದಿದ್ದರೂ ರಸಶಾಸ್ತ್ರ ಪುಸ್ತಕಗಳಲ್ಲಿ ಮತ್ತು ನಿಘಂಟುಗಳಲ್ಲಿ ಇದರ ವಿವರಣೆಯನ್ನು ಕಾಣಬಹುದು. ಮಹಾರಸ, ಉಪರಸ, ಸಾಧಾರಣ ರಸ ಮುಂತಾದ ಅನೇಕ ವರ್ಗಗಳ ರಸದ್ರವ್ಯಗಳನ್ನು ಶುದ್ಧಿಗೊಳಿಸಲು ಸಾಮಾನ್ಯವಾಗಿ ನಿಂಬೆಹಣ್ಣಿನ ಸ್ವರಸವನ್ನು ಉಪಯೋಗಿಸುತ್ತಾರೆ.

ಬಹು ಭಾಷಾ ಹೆಸರುಗಳು

ಕನ್ನಡ : ನಿಂಬೆ

ಸಂಸ್ಕೃತ : ನಿಂಬುಕ

ತುಳು : ನಿಂಬೆಪುಳಿ

ಹಿಂದಿ : ನಿಂಬು

ಇಂಗ್ಲೀಷ್ : ಲೆಮನ್

ಪರ್ಯಾಯ ಪದಗಳು

ನಿಂಬುಕ, ಜಂಭೀರ, ದಂತಶಠ, ಬೀಜಪೂರ, ಮಾತುಲುಂಗ, ರುಚಕ, ಮಹಾಲುಂಗ, ಬೀಜಾಪ್ಪ, ಫಲಪೂರಕ, ಲುಂಗ, ಆಮ್ಲಕೇಸರ ಅನೇಕ ಬೀಜಗಳಿಂದ ಕೂಡಿದರಿಂದಲೇ 'ಬೀಜಪೂರಕ' ಎಂದು ಕರೆಯುತ್ತಾರೆ.

ದ್ರವ್ಯದ ವರ್ಣನೆ

ನಿಂಬೆಯು ಮುಳ್ಳುಗಳಿಂದ ಕೂಡಿದ ಸುಮಾರು 3-4 ಮೀಟರ್ ಎತ್ತರಕ್ಕೆ ಬೆಳೆಯುವ ಸಣ್ಣ ಗಿಡ, ಎಲೆಯು ಅಂಡಾಕಾರವಾಗಿ ಹಸುರು ಬಣ್ಣದಿಂದ ಕೂಡಿದೆ. ಎಲೆಗಳನ್ನು ಉಜ್ಜಿದಾಗ ನಿಂಬೆಹಣ್ಣಿನ ಪರಿಮಳ ಬರುವುದು ಹೂವು ಚಿಕ್ಕದಾಗಿ ಬಿಳಿ ಅಥವಾ ಗುಲಾಬಿ ಬಣ್ಣವನ್ನು ಹೊಂದಿದ್ದು ಸುವಾಸನೆಯಿಂದ ಕೂಡಿದೆ. ಹಣ್ಣು ಅಂಡಾಕಾರ ಅಥವಾ ಆಯತಾಕಾರದಿಂದ ಹಳದಿ ಬಣ್ಣದಿಂದ ಕೂಡಿದೆ. ಸಾಮಾನ್ಯವಾಗಿ ಎಲ್ಲ ಪ್ರದೇಶಗಳಲ್ಲಿ ಬೆಳೆಯುತ್ತಾರೆ.

ವಿಧಗಳು

ನಿಂಬೆಯಲ್ಲಿ ಏಳು ವಿಧಗಳಿವೆ. ಅವು

- ವನಜಂಬೀರ
- ಜಂಬೀರ
- ಮಿಷ್ಠ ನಿಂಬೂಫಲ
- ನಾರಂಗ
- ಮಧುಕರ್ಕಟೀ
- ನಿಂಬುಕ
- ಬೀಜಪೂರ

ಸಸ್ಯಶಾಸ್ತ್ರದಲ್ಲಿ ಇದನ್ನು Atalantia malabarica, Cirus aurantifolla, C. limetta

C. reticulata, C. maxima, C.Limon ಮತ್ತು C. medical ಎಂದು ಕ್ರಮವಾಗಿ ಗುರುತಿಸಲಾಗಿದೆ.

ಉಪಯುಕ್ತ ಅಂಗಗಳ

- ಹಣ್ಣು
- ಹಣ್ಣಿನ ತೊಗಟೆ
- ಬೇರಿನಚಿಕ್ಕೆ
- ಬೀಜ
- ಎಲೆ

ದ್ರವ್ಯದ ಗುಣಧರ್ಮಗಳು

ರಸ : ಆಮ್ಲ ಕಟು

ಗುಣ : ಲಘು, ತೀಕ್ಷ್ಣ

ವೀರ್ಯ : ಉಷ್ಣ

ವಿಪಾಕ : ಆಮ್ಲ

ಕರ್ಮ : ವಾತಕಫಹರ ದೀಪನ, ಪಾಚನ, ಚಕ್ಷುಷ್ಯ

"ನಿಂಬೂಫಲಂ ಪ್ರಥಿತಮಮ್ಲರಸಂ ಕಟೂಷ್ಣಂ ।
ಗುಲ್ಮಾಮವಾತಹರಮಗ್ನಿವಿವೃದ್ಧಿಕಾರೀ ॥
ಚಕ್ಷುಷ್ಯಮೇತದಥಕಾಸಕಫಾತಿಕಂಠ ॥
ವಿಚ್ಛರ್ದಿಹಾರಿಪರಿಪಕ್ವಮತೀವರುಚ್ಯಮ್॥ *(ರಾಜ ನಿಘಂಟು)*

ಎಂದರೆ ನಿಂಬೆಹಣ್ಣು ಆಮ್ಲ ಮತ್ತು ಕಟುರಸದಿಂದ ಕೂಡಿದೆ, ಉಷ್ಣವಾಗಿದೆ. ಗುಲ್ಮ, ಆಮವಾತ, ವಾಂತಿ, ಕೆಮ್ಮು, ವಾಂತಿಗಳನ್ನು ನಿವಾರಿಸುವುದು, ಕಫಹರವಾಗಿ ರುಚಿಯನ್ನು ಹೆಚ್ಚಿಸುವುದು.

ಔಷಧಿ ಪ್ರಮಾಣ

ಸ್ವರಸ – 10–20 ಮಿ.ಲೀ

ಔಷಧೀಯ ಯೋಗಗಳು

- ಜಂಬೀರಾಧಿ ಪಾನಕಂ
- ಲಶುನ ಕ್ಷೀರ
- ಲಶುನಾದಿಘೃತ

ಔಷಧೀಯ ಉಪಯೋಗಗಳು

- ನಿಂಬೆ ಎಲೆಯ ಲೇಪವನ್ನು ಬಿಸಿ ಮಾಡಿ ಊತಕ್ಕೆ ಹಚ್ಚುವುದರಿಂದ ನೋವಿನಿಂದ ಕೂಡಿದ ಊತವು ಕಡಿಮೆಯಾಗುತ್ತದೆ.
- ನಿಂಬೆಯ ರಸವನ್ನು ಸೇವಿಸುವುದರಿಂದ ಆಮ್ಲಪಿತ್ತ ರೋಗವು ನಿವಾರಣೆಯಾಗುತ್ತದೆ.
- ನಿಂಬೆಹಣ್ಣಿನ ತುಂಡಿಗೆ ಜೇನುತುಪ್ಪ ಮತ್ತು ಸೈಂಧವಲವಣವನ್ನು ಬೆರೆಸಿ ಬಾಯಿಯಲ್ಲಿ ಇಟ್ಟುಕೊಳ್ಳುವುದರಿಂದ ಜ್ವರದಿಂದ ಬಂದ ಅರುಚಿಯು ನಿವಾರಣೆಯಾಗುತ್ತದೆ.
- ನಿಂಬೆ, ಮಾವು ಮತ್ತು ಜಂಬುನೇರಳೆಯ ಎಲೆ ಮತ್ತು ಬೇರಿನ ರಸವನ್ನು ಜೇನಿನೊಂದಿಗೆ ಬೆರೆಸಿ ಸೇವಿಸುವುದರಿಂದ ವಾಂತಿಯು ನಿವಾರಣೆಯಾಗುತ್ತದೆ.
- ನಿಂಬೆಯ ರಸಕ್ಕೆ ಸೈಂಧವ ಲವಣವನ್ನು ಬೆರೆಸಿ ಸೇವಿಸುವುದರಿಂದ ಹೃದಯ ನೋವು ನಿವಾರಣೆಯಾಗುತ್ತದೆ.
- ನಿಂಬೆಯ ಚೆಕ್ಕೆಯ ಪುಡಿಯನ್ನು ಜೇನಿನೊಂದಿಗೆ ಸೇವಿಸುವುದರಿಂದ ದುರ್ನಾತದಿಂದ ಕೂಡಿದ ಜಠರ ವಾಯುವಿಗೆ ಒಳ್ಳೆಯದು.
- ನಿಂಬೆಹಣ್ಣಿನ ಲೇಪವನ್ನು ತಲೆಗೆ ಹಚ್ಚುವುದರಿಂದ ತಲೆಗೆ ಸಂಬಂಧಿತ ರೋಗವು ನಿವಾರಣೆಯಾಗುತ್ತದೆ.
- ಕಿವಿಗೆ ನಿಂಬೆ ಮತ್ತುಕಪಿತ್ಥದ ರಸವನ್ನು ಬಿಡುವುದರಿಂದ ಕಿವಿನೋವು ಕಡಿಮೆಯಾಗುತ್ತದೆ.
- ನಿಂಬೆಯ ರಸವನ್ನು ತುಪ್ಪದೊಂದಿಗೆ ಸೇವಿಸುವುದರಿಂದ ಅಜೀರ್ಣ ರೋಗವು ನಿವಾರಣೆಯಾಗುತ್ತದೆ.
- ನಿಂಬೆಯ ತುಂಡನ್ನು ಹುಳಿ ಗಂಜಿಯಲ್ಲಿ ಅರೆದು ಹಚ್ಚುವುದರಿಂದ ಸಿಡುಬು (Pox) ನಿವಾರಣೆಯಾಗುತ್ತದೆ.
- ನಿಂಬೆರಸಕ್ಕೆ ಲವಂಗಪುಡಿ ಬೆರೆಸಿ ಹಲ್ಲು ನೋವಿರುವ ಜಾಗಕ್ಕೆ ಹಚ್ಚುವುದರಿಂದ ಹಲ್ಲುನೋವು ನಿವಾರಣೆಯಾಗುತ್ತದೆ.
- ನಿಂಬೆರಸವನ್ನು ನೀರಿನಲ್ಲಿ ಬೆರೆಸಿ, ಆ ನೀರಿನಿಂದ ಮೈ ತಿಕ್ಕಿಕೊಳ್ಳುವುದರಿಂದ ಕಜ್ಜಿ, ತುರಿಕೆ, ಮುಂತಾದ ಚರ್ಮವ್ಯಾಧಿಗಳು ನಿವಾರಣೆಯಾಗುತ್ತದೆ.

ಎಚ್ಚರಿಕೆ

ಯಾವಾಗಲೂ ನಿಂಬೆರಸ ಸೇವಿಸಿದ ಮೇಲೆ ಬಾಯಿ ಮುಕ್ಕಳಿಸಿಕೊಳ್ಳಬೇಕು, ಯಾಕೆಂದರೆ ನಿಂಬೆಹುಳಿ ಹಲ್ಲಿನ ಮೇಲೆ ನಿಂತರೆ ಹಲ್ಲು ನಾಶವಾಗಬಹುದು.

ನುಗ್ಗೆಕಾಯಿ ನುಗ್ಗೆಕಾಯಿ ಮಹಿಮೆಗೆ

Moringa oleifera, Lam.
Moringaceae





ತನ್ನ ಎಲೆ ಮತ್ತು ರೆಂಬೆಕೊಂಬೆಗಳ ವಿನ್ಯಾಸದಿಂದ ಅತ್ಯಂತ ಸುಂದರವಾದ ಕಲಾಕೃತಿಯಂತೆ ಕಾಣುವ ಈ ಮರವು ನಮ್ಮ ಸುತ್ತಲೂ ಕಾಣಸಿಗುವ ಎಲ್ಲರಿಗೂ ಪರಿಚಯವಾಗಿರುವ ಮರವಾಗಿದೆ. ನುಗ್ಗೆ ಎಂದ ಕೂಡಲೇ ನೆನಪು ಬರುವುದು ಸಾಂಬಾರು ಪದಾರ್ಥ. ನುಗ್ಗೆಯ ಕಾಯಿಯಿಂದ ತಯಾರಿಸಿದ ಪಲ್ಯದಲ್ಲಿ ಊಟ ಮಾಡುವುದೆಂದರೆ ಎಲ್ಲರಿಗೂ ಪ್ರೀತಿ, ಇದು ಅಷ್ಟು ರುಚಿಕರವೂ ಹೌದು. ಋಗ್ವೇದದ ಪ್ರಕಾರ ಇದೊಂದು ಸ್ವದೇಶದ ಸಸ್ಯವಾಗಿದೆ. ಹಿಂದಿನ ಕಾಲದಲ್ಲಿ ಇದನ್ನು ಧಾರ್ಮಿಕ ಕೆಲಸಕ್ಕೆ ಉಪಯೋಗಿಸುತ್ತಿದ್ದರು ಎಂಬ ಉಲ್ಲೇಖವು ಇದೆ. ಔಷಧ ಗುಣಗಳಿಂದ ಮಾನವರ ರೋಗರುಜಿನ ದೂರ ಮಾಡಿ ಆರೋಗ್ಯ ಕಾಪಾಡುವ ದ್ರವ್ಯಗಳಲ್ಲಿ ನುಗ್ಗೆಯು ಕೂಡ ಪ್ರಮುಖವಾದ ದ್ರವ್ಯ.

ಬಹು ಭಾಷಾ ಹೆಸರುಗಳು

ಕನ್ನಡ : ನುಗ್ಗೆ ಮರ

ಸಂಸ್ಕೃತ : ಶಿಗ್ರು

ತುಳು : ನುರ್ಗೆ

ಹಿಂದಿ : ಸಹಿಜನ

ಇಂಗ್ಲೀಷ್ : ಡ್ರಂಸ್ಟಿಕ್‌ಟ್ರೀ

ಪರ್ಯಾಯ ಪದಗಳು

ಶಿಗ್ರು, ಶೋಭಾಂಜನ, ತೀಕ್ಷ್ಣಗಂಧಾ, ಮೋಚಕಾ, ಬಹುಪತ್ರಾ, ಅಕ್ಷೀವ, ಬಹುಮೂಲಾ, ಚಕ್ಷುಷ್ಯಾ, ಗಂಧಕಾ, ಹರೀತಪತ್ರಾ, ಹರೀತಶಾಖಾ, ಜನಪ್ರಿಯಾ, ಕೋಮಲಪತ್ರಕಾ, ಮೇಚಕಾ, ರೋಚನಾ, ಮುಖಭಂಗಾ, ಸುಪತ್ರಕಾ, ಸುತೀಕ್ಷ್ಣಾ.

ನುಗ್ಗೆಯ ಕಾಯಿಯು ಡೋಲು ಬಾರಿಸುವ ಕಡ್ಡಿಯಂತೆ ಉದ್ದವಾಗಿರುವುದರಿಂದಲೇ ಈ ಮರಕ್ಕೆ 'ಡ್ರಂ ಸ್ಟೀಕ್‌ಟ್ರೀ' ಎಂದು ಇಂಗ್ಲೀಷ್‌ನಲ್ಲಿ ಕರೆಯುತ್ತಾರೆ

ದ್ರವ್ಯದ ವರ್ಣನೆ

ಮೂಲತಃ ಭಾರತ ದೇಶಕ್ಕೆ ಸೇರಿದ ನುಗ್ಗೆ ಮರವನ್ನು ತೋಟದಲ್ಲಿ ಮನೆಯ ಹಿತ್ತಲಿನಲ್ಲಿ ಬೆಳೆಸುತ್ತಾರೆ, ಈ ಮರವು ಸುಮಾರು 10-15 ಅಡಿ ಎತ್ತರ ಬೆಳೆಯುತ್ತದೆ. ತೊಗಟೆಯು ಬಿಳಿ ಬಣ್ಣದಾಗಿ ಮೃದುವಾಗಿ ಹಗುರವಾಗಿದೆ. ಸಂಯುಕ್ತ ಎಲೆಗಳ ತೊಟ್ಟು ದಪ್ಪವಾಗಿರುತ್ತದೆ. ಎಲೆಗಳು ಬಹಳ ಚಿಕ್ಕವು. ಜೇನಿನ ವಾಸನೆಯಿಂದ ಕೂಡಿದ ಉಭಯಲಿಂಗ ಪುಷ್ಪಗಳು ಬೆಳ್ಳಗಿನ ಹೂಗಳನ್ನು ಬಿಡುತ್ತದೆ. ಈ ಮರದ ಕಾಯಿಯು ಕಕ್ಕೆಕಾಯಿಯ ಕೋಡಿನಂತೆ ಉದ್ದವಾಗಿ, ಒಗರು ರುಚಿಯಿಂದ ಕೂಡಿದೆ. ಈ ಮರವು ಹೂವನ್ನು ಫೆಬ್ರವರಿ-ಮಾರ್ಚ್ ತಿಂಗಳಿನಲ್ಲಿ, ಕಾಯಿಯನ್ನು ಮಾರ್ಚ್-ಎಪ್ರಿಲ್ ತಿಂಗಳಿನಲ್ಲಿ ಬಿಡುತ್ತದೆ. ಈ ದ್ರವ್ಯವನ್ನು ಭಾರತದ ಎಲ್ಲ ಪ್ರದೇಶಗಳಲ್ಲಿ ಬೆಳೆಯುತ್ತಾರೆ.

ವಿಧಗಳು

ನುಗ್ಗೆಕಾಯಿಯಲ್ಲಿ ಎರಡು ಪ್ರಕಾರಗಳಿವೆ. ಅವು

- ಶ್ವೇತ ಶಿಗ್ರು
- ರಕ್ತ ಶಿಗ್ರು

ಸಸ್ಯಶಾಸ್ತ್ರದಲ್ಲಿ ಇದನ್ನು Moringa oleifera ಮತ್ತು Moringa concanensis ಎಂದು ಕ್ರಮವಾಗಿ ಕರೆಯುತ್ತಾರೆ.

ಉಪಯುಕ್ತ ಅಂಗಗಳು

- ಬೇರಿನ ತೊಗಟೆ
- ಕಾಂಡದ ತೊಗಟೆ

- ಎಲೆ
- ಬೀಜ

ದ್ರವ್ಯದ ಗುಣಧರ್ಮಗಳು

ರಸ : ಕಟು, ತಿಕ್ತ

ಗುಣ : ಲಘು, ರೂಕ್ಷ, ತೀಕ್ಷ್ಣ

ವೀರ್ಯ : ಉಷ್ಣ

ವಿಪಾಕ : ಕಟು

ಕರ್ಮ : ಕಫವಾತಹರ, ಶುಕ್ರಲ, ಗ್ರಾಹೀ ದೀಪನ, ಹೃದ್ಯ, ಕ್ರಿಮಿಘ್ನ, ಚಕ್ಷುಷ್ಯ.

ಶಿಗ್ರುಃ ಕಟುಃ ಕಟುಃ ಪಾಕೇ ತೀಕ್ಷ್ಣೋಷ್ಣೋ ಮಧುರೋ ಲಘುಃ।
ದೀಪನೋ ರೋಚನೋ ರೂಕ್ಷಃ ಕ್ಷಾರಃ ತಿಕ್ತೋ ವಿದಾಹಕೃತ್॥
ಸಂಗ್ರಾಹೀ ಶುಕ್ರಲೋ ಹೃದ್ಯೋ ಪಿತ್ತರಕ್ತಪ್ರಕೋಪಣಃ।
ಚಕ್ಷುಷ್ಯಃ ಕಫವಾತಘ್ನೋ ವಿದ್ರಧಿಶ್ವಯಥುಕ್ರಿಮೀನ್॥ *(ಭಾವಪ್ರಕಾಶ)*

ಎಂದರೆ ನುಗ್ಗೆಯು ಕಟು, ಮಧುರ ರಸದಿಂದ ಕೂಡಿದೆ. ಕಟು ವಿಪಾಕದಿಂದ ಕೂಡಿದೆ. ಲಘು, ತೀಕ್ಷ್ಣ ರೂಕ್ಷ ಗುಣಗಳಿಂದ ಕೂಡಿದೆ. ಇದು ಅಗ್ನಿ ವೃದ್ಧಿಸುತ್ತದೆ. ಪಾಚನ ಕಾರ್ಯವನ್ನು ಮಾಡುತ್ತದೆ. ಇದು ಶುಕ್ರಧಾತು, ಪಿತ್ತರಕ್ತಗಳನ್ನು ವೃದ್ಧಿಸುತ್ತದೆ. ಇದು ಕಣ್ಣಿಗೆ ಒಳ್ಳೆಯದು. ಕಫವಾತಹರವಾಗಿದೆ. ಕ್ರಿಮಿ, ವಿದ್ರಧಿ, ಶೋಥ, ತಲೆನೋವು, ಗಂಡಮಾಲೆ ರೋಗಗಳನ್ನು ನಿವಾರಿಸುತ್ತದೆ.

ಔಷಧಿ ಪ್ರಮಾಣ

ಬೇರಿನ ತೊಗಟೆ ರಸ	–	10–20 ಮಿ.ಲೀ
ಬೀಜದ ಚೂರ್ಣ	–	1–3 ಗ್ರಾಂ
ಕಾಂಡದ ತೊಗಟೆ ಕಷಾಯ	–	50–100 ಮಿ.ಲೀ
ಹೂವಿನ ರಸ	–	50 ಮಿ.ಲೀ

ಔಷಧಿ ಯೋಗಗಳು

- ಶಿಗ್ರು ಪುಷ್ಪರಸಾಯನ
- ಶಿಗ್ರುತ್ವಗಾದಿ ಲೇಪನ

- ಶೋಭಾಂಜನಾದಿ ಲೇಪ
- ಶ್ಯಾಮಾದಿ ಚೂರ್ಣ

ಔಷಧೀಯ ಉಪಯೋಗಗಳು

- ನುಗ್ಗೆ ಹೂವನ್ನು ಚೆನ್ನಾಗಿ ಕಾದಿರುವ ಒಂದು ಲೋಟ ಹಾಲಿಗೆ ಹಾಕಿ ಹಾರಿದ ನಂತರ ಹೂ ಸಮೇತ ಹಾಲನ್ನು ಕುಡಿಯುವುದರಿಂದ ಪಿತ್ತ ಶಮನವಾಗಿ ಧಾತು ವೃದ್ಧಿಯಾಗುವುದು.
- ನುಗ್ಗೆ ಸೊಪ್ಪನ್ನು ಒಂದು ಹಿಡಿ ಪ್ರಮಾಣ ತೆಗೆದುಕೊಂಡು ಜಜ್ಜಿ ರಸ ಮಾಡಿಕೊಂಡು ಅದಕ್ಕೆ ಸಕ್ಕರೆ ಅಥವಾ ಜೇನುತುಪ್ಪ ಸೇರಿಸಿ ಬೆಳಗ್ಗೆ ಸಂಜೆ ಕುಡಿಯುವುದರಿಂದ ಹೊಟ್ಟೆನೋವು ಗುಣ.
- ನುಗ್ಗೆ ಸೊಪ್ಪನ್ನು ಎದೆ ಹಾಲಿನಲ್ಲಿ ಅರೆದು ಹಣೆಗೆ ಪಟ್ಟು ಹಾಕುವುದರಿಂದ ತಲೆಸುತ್ತುವಿಕೆ ವಾಸಿ.
- ನುಗ್ಗೆಕಾಯಿ ಬೀಜ ಮತ್ತು ಮೂಲಂಗಿ ಬೀಜಗಳನ್ನು ಎಮ್ಮೆಯ ಮಜ್ಜಿಗೆಯಲ್ಲಿ ಅರೆದು ಲೇಪಿಸುವುದರಿಂದ ಗಂಡಮಾಲೆ ಮುಂತಾದ ಇತರ ಗಡ್ಡೆಗಳು ಕರಗುತ್ತವೆ.
- ನುಗ್ಗೆ ಮರದ ಬೇರನ್ನು ನೀರಿನೊಡನೆ ಅರೆದು ಮೈಗೆ ಹಚ್ಚುವುದರಿಂದ ನವೆ ವಾಸಿಯಾಗುತ್ತದೆ.
- ನುಗ್ಗೆ ಎಲೆ ಮತ್ತು ಎಕ್ಕದ ಎಲೆಗಳನ್ನು ಅರೆದು ಲೇಪಿಸುವುದರಿಂದ ಮೂಲವ್ಯಾಧಿಯಲ್ಲಿ ಬರುವ ಮೊಳಕೆಗಳು ವಾಸಿಯಾಗುತ್ತವೆ.
- ನುಗ್ಗೆ ಸೊಪ್ಪಿನ ರಸಕ್ಕೆ ಜೇನುತುಪ್ಪ ಸೇರಿಸಿ ಕಣ್ಣಿಗೆ ಹಚ್ಚಲು ತ್ರಿದೋಷಗಳಿಂದುಂಟಾದ ಸಕಲ ನೇತ್ರರೋಗಗಳು ವಾಸಿಯಾಗುತ್ತದೆ.
- ನುಗ್ಗೆಯ ಎಲೆ ಮತ್ತು ಮೂಲಂಗಿಯ ಎಲೆಗಳನ್ನು ಅರೆದು ಮೂಲವ್ಯಾಧಿಯ ಮೊಳಕೆಯ ಮೇಲೆ ಲೇಪಿಸುವುದರಿಂದ ಮೊಳಕೆಗಳು ನಿವಾರಣೆಯಾಗುತ್ತದೆ.
- ನುಗ್ಗೆ ಮರದ ತೊಗಟೆ, ಹರಳು ಗಿಡದ ತೊಗಟೆ ಮತ್ತು ನೇರಳೆ ಮರದ ತೊಗಟೆ ಈ ಮೂರನ್ನು ಚೆನ್ನಾಗಿ ಅರೆದು ಬಿಸಿ ಮಾಡಿ ಲೇಪಿಸುವುದರಿಂದ ಮೈ ಮೇಲೆದ್ದಿರುವ ಎಲ್ಲ ವಿಧದ ಗುಳ್ಳೆಗಳು ವಾಸಿಯಾಗುತ್ತದೆ.
- ನುಗ್ಗೆ ಮರದ ಒಣ ತೊಗಟೆಯ ಪುಡಿಗೆ 5 ಭಾಗದಷ್ಟು ನೀರು, ಒಂದು ಚಮಚ ಜೇನುತುಪ್ಪ ಬೆರೆಸಿ ದಿನಕ್ಕೆ ಮೂರು ಸಲದಂತೆ ಒಂದು ತಿಂಗಳ ಕಾಲ ತೆಗೆದುಕೊಳ್ಳುವುದರಿಂದ ವೀರ್ಯವೃದ್ಧಿಯಾಗಿ ಲೈಂಗಿಕ ದುರ್ಬಲತೆಯನ್ನು ಹೋಗಲಾಡಿಸಬಹುದು.
- ಒಣಗಿದ ಬೀಜವನ್ನು ತುಪ್ಪದಲ್ಲಿ ತೇದು ಹಚ್ಚಿದರೆ ಇರುಳುಗಣ್ಣು, ದೃಷ್ಟಿಮಾಂದ್ಯ ವಾಸಿ.

- ನುಗ್ಗೆ ಮರಕ್ಕೆ ಗಾಯ ಮಾಡಿದರೆ ಅದರ ಅಂಟು ಜಿನುಗುತ್ತದೆ. ಇದನ್ನು ಎಳ್ಳೆಣ್ಣೆಯೊಂದಿಗೆ ಮಿಶ್ರ ಮಾಡಿ ಕಿವಿಗೆ ಬಿಡುವುದರಿಂದ ಕಿವಿಯ ಶ್ರವಣ ಶಕ್ತಿಯೂ ಹೆಚ್ಚುತ್ತದೆ.
- ನುಗ್ಗೆಯ ತೊಗಟೆಯನ್ನು ಜಜ್ಜಿ ಕಲ್ಕ ಮಾಡಿ ಲೇಪಿಸುವುದರಿಂದ ಕಾಲುಗಂಟಿನಲ್ಲಿ ಬರುವ ಜಾನುಶೋಥ (Synovities) ವಾಸಿಯಾಗುತ್ತದೆ. ದಿನಕ್ಕೆ ಈ ರೀತಿ 3–4 ಬಾರಿ ಹಚ್ಚಬೇಕು.
- ಬೇರಿನ ತೊಗಟೆಯನ್ನು ಎಳ್ಳೆಣ್ಣೆಯೊಂದಿಗೆ ಕಷಾಯ ಮಾಡಿ ಕುಡಿಯುವುದರಿಂದ ಜಲೋದರ ರೋಗವು ವಾಸಿಯಾಗುವುದು.
- ಗಂಟಲು ಒಡೆದು ಸ್ವರ ಹಾನಿಯಾದಾಗ ಇದರ ಕಷಾಯದಿಂದ ಬಾಯಿ ಮುಕ್ಕಳಿಸುವುದು ಹಿತಕರ.
- ನುಗ್ಗೆ ಎಲೆಯ ಒಂದು ಚಮಚ ರಸವನ್ನು ಒಂದು ಲೋಟ ಎಳನೀರಿಗೆ ಹಾಕಿ, ಸ್ವಲ್ಪ ಜೇನುತುಪ್ಪ ಬೆರೆಸಿ ಕುಡಿಯುವುದರಿಂದ ಕಾಮಾಲೆ ರೋಗಕ್ಕೆ ಒಳ್ಳೆಯದು.

ಏಡ್ಸ್ ತಡೆಗಟ್ಟಿ, ವಚನ ಬದ್ಧರಾಗಿರಿ

ರೋಗದಿಂದ ದೇಹ ರಕ್ಷಿಸುವ ನೆಕ್ಕಿ

Vitex negundo, Linn.

Verbenaceae





ಸಾಮಾನ್ಯವಾಗಿ ನಮ್ಮ ಕಣ್ಣೆದುರಿಗೆ ಕಾಣುವ ನೆಕ್ಕಿ ಗಿಡವನ್ನು ದಿನಕ್ಕೊಂದು ಬಾರಿಯಾದರೂ ನೋಡದವರು ತೀರಾ ಕಡಿಮೆ. ಈ ಗಿಡವು ಹೊಲಗದ್ದೆ ಬದಿಗಳಲ್ಲಿ, ಕಾಡುಗಳಲ್ಲಿ, ಮನೆಯ ಬೇಲಿಗಳಲ್ಲಿ ಬೆಳೆಯುತ್ತದೆ. ಸಂಸ್ಕೃತದಲ್ಲಿ 'ನಿರ್ಗಡತಿ ಶರೀರಂ ರಕ್ಷತಿರೋಗೇಭ್ಯ' ಎಂದರೆ ನೆಕ್ಕಿ ಗಿಡವು ರೋಗದಿಂದ ಶರೀರವನ್ನು ರಕ್ಷಿಸುತ್ತದೆ ಎಂಬುದು ಇದರ ಅರ್ಥವಾಗಿದೆ. ಚಕ್ರದತ್ತನು ನೆಕ್ಕಿಯು ದೇವತೆಗಳ ದೇಹದಂತೆ ನಮ್ಮ ದೇಹವನ್ನು ರೋಗರಹಿತವಾಗಿಸಬಲ್ಲುದು ಎಂಬುದಾಗಿ ಹೇಳಿದ್ದಾನೆ. ಹೌದು ಇದು ರೋಗಕ್ಕೆ ಅಷ್ಟು ಪರಿಣಾಮಕಾರಿಯಾದರಿಂದಲೇ ಅವನು ಮೇಲಿನ ರೀತಿ ಹೇಳಿರುವನು.

ಬಹು ಭಾಷಾ ಹೆಸರುಗಳು

ಕನ್ನಡ : ನೆಕ್ಕಿ

ಸಂಸ್ಕೃತ : ನಿರ್ಗುಂಡೀ

ತುಳು : ಕರಿನೆಕ್ಕಿ, ನೆಕ್ಕಿದ ದೈ

ಹಿಂದಿ : ನಿರ್ಗಂಡ

ಇಂಗ್ಲೀಷ್ : ಫೈವ್‌ಲೀವ್ಡ್ ಚೇಸ್ಟ್‌ಮ್ ಟ್ರೀ.

ಪರ್ಯಾಯ ಪದಗಳು

ನಿರ್ಗುಂಡೀ, ಸಿಂಧುವಾರ, ಶೆಫಾಲಿಕಾ, ಸುವಹಾ, ಸಿಂಧುಕಾ, ಸುರಸಾ, ಶ್ವೇತಪುಷ್ಪಾ, ನೀಲಪುಷ್ಪಾ, ನೀಲಮಂಜರೀ, ವನಜಾ, ಭೂತಕೇಶೀ, 'ಇಂದ್ರಾಣೀ, ನೀಲನಿಗುಂಡೀ, ಶ್ವೇತ ಸುರಸಾ, ಶೆಫಾಲೀ "ಸಿಂಧುಂ ಶೋಥಂ ವಾರಯತಿ ಇತಿಸಿಂಧುವಾರ" ಎಂದರೆ ನೆಕ್ಕಿಯು ಶೋಥವನ್ನು ನಿವಾರಿಸುವ ಕಾರಣದಿಂದಲೇ ಇದನ್ನು 'ಸಿಂಧುವಾರ' ಎಂದು ಸಂಸ್ಕೃತದಲ್ಲಿ ಕರೆಯುತ್ತಾರೆ.

ದ್ರವ್ಯದ ವರ್ಣನೆ

ನೆಕ್ಕಿಯು ಪೊದರು ಜಾತಿಗೆ ಸೇರಿದ ಸಸ್ಯ. ಇದು ಸುಮಾರು 3–4 ಮೀಟರ್‌ಗಳಷ್ಟು ಎತ್ತರಕ್ಕೆ ಬೆಳೆಯುತ್ತದೆ. ಎಲೆಯು 5–10 ಸೆಂ.ಮೀಟರ್‌ನಷ್ಟು ಉದ್ದವಾಗಿ ಬೇವಿನ ಎಲೆಯಂತಿದೆ. ಎಲೆಗಳು ಮೂರು ಅಥವಾ ಐದೈದಾಗಿ ಕೂಡಿಕಂಡು ಸೂಕ್ಷ್ಮ ರೋಮಗಳನ್ನು ಹೊಂದಿರುತ್ತವೆ. ತೊಗಟೆಯು ದಪ್ಪವಾಗಿ ನೀಲ ಮಿಶ್ರಿತ ಬೂದು ಬಣ್ಣದಿಂದ ಕೂಡಿದೆ. ಎಲೆಯನ್ನು ಜಜ್ಜಿದಾಗ ಒಂದು ತರಹದ ವಿಶಿಷ್ಟ ವಾಸನೆ ಬರುತ್ತದೆ. ಹೂವು ಚಿಕ್ಕದಾಗಿ ಸಣ್ಣ ಸಣ್ಣ ಗೊಂಚಲುಗಳಲ್ಲಿ ನೀಲ ಅಥವಾ ಬಿಳಿ ಬಣ್ಣದಿಂದ ಕೂಡಿದೆ. ಗೋಲಾಕಾರದ ಫಲವು ಹಣ್ಣಾದಾಗ ಕಪ್ಪು ಬಣ್ಣಕ್ಕೆ ತಿರುಗುತ್ತದೆ. ಈ ದ್ರವ್ಯವು ಹೂವು ಮತ್ತು ಹಣ್ಣನ್ನು ಮಾರ್ಚ್–ಆಗಸ್ಟ್ ತಿಂಗಳಿನಲ್ಲಿ ಬಿಡುತ್ತದೆ. ಸಾಮಾನ್ಯವಾಗಿ ಭಾರತದಲ್ಲೆಡೆ ಬೆಳೆಯುವ ಈ ವನಸ್ಪತಿಯು ಹೆಚ್ಚಾಗಿ ಕಾಡುಗಳಲ್ಲಿ, ಉದ್ಯಾನವನಗಳಲ್ಲಿ ಬೆಳೆಯುತ್ತದೆ.

ವಿಧಗಳು

ಆಚಾರ್ಯರ ಪ್ರಕಾರ ನೆಕ್ಕಿಯಲ್ಲಿ ಅನೇಕ ವಿಧಗಳಿವೆ. ಅವು ಕರಿನೆಕ್ಕಿ, ಬಿಳಿನೆಕ್ಕಿ, ಕರ್ತರಿನೆಕ್ಕಿ, ಕಾಡನೆಕ್ಕಿ ಆದರೆ ಸುಶ್ರುತನು ಎರಡು ವಿಧವಾಗಿ ವಿಂಗಡಿಸಿದ್ದಾನೆ. ಅವು

- ಶ್ವೇತ ಪುಷ್ಪ
- ನೀಲ ಪುಷ್ಪ

ಉಪಯುಕ್ತ ಅಂಗಗಳು

- ಎಲೆ
- ಬೇರು
- ಬೀಜ

ದ್ರವ್ಯದ ಗುಣಧರ್ಮಗಳು

ರಸ : ಕಟು, ತಿಕ್ತ

ಗುಣ : ಲಘು, ರೂಕ್ಷ

ವೀರ್ಯ : ಉಷ್ಣ

ವಿಪಾಕ : ಕಟು

ಕರ್ಮ : ವಾತಕಫಹರ, ಚಕ್ಷುಷ್ಯ, ಕೇಶ್ಯ, ಕ್ರಿಮಿಘ್ನ, ವ್ರಣರೋಪಣ

ಸಿಂಧುಕಃ ಸ್ಮೃತಿದಃ ತಿಕ್ತಃ ಕಷಾಯಃ ಕಟುಕೋ ಲಘುಃ।
ಕೇಶ್ಯೋ ನೇತ್ರಹಿತೋ ಹಂತಿ ಶೂಲಶೋಥಾಮಮಾರುತಾನ್॥ (ಭಾವಪ್ರಕಾಶ)

ಎಂದರೆ ನೆಕ್ಕಿಯು ತಿಕ್ತ, ಕಷಾಯ, ಕಟುರಸದಿಂದ ಕೂಡಿದೆ. ಲಘು ಗುಣದಿಂದ ಕೂಡಿದೆ. ಕೇಶಕ್ಕೆ ಒಳ್ಳೆಯದು. ನೇತ್ರರೋಗ, ಶೂಲ, ಶೋಥ, ಆಮ, ವಾತರೋಗಗಳನ್ನು ನಿವಾರಿಸುತ್ತದೆ.

ಔಷಧಿ ಪ್ರಮಾಣ

ಎಲೆ ಸ್ವರಸ : 10–20 ಮಿ.ಲೀ.

ಬೇರಿನ ತೊಗಟೆ ಚೂರ್ಣ : 3–6 ಗ್ರಾಂ

ಬೀಜದ ಚೂರ್ಣ : 3–6 ಗ್ರಾಂ

ಔಷಧಿ ಯೋಗಗಳು

- ನಿರ್ಗುಂಡೀ ತೈಲ
- ನಿರ್ಗುಂಡೀ ಕಲ್ಪ

ಔಷಧೀಯ ಉಪಯೋಗಗಳು

- ನೆಕ್ಕಿ, ಅಮೃತಬಳ್ಳಿ, ಅಣಿಲೆಕಾಯಿ, ಕರಿಮೆಣಸಿನ ಪುಡಿ ಸಮ ಪ್ರಮಾಣದ ಕಷಾಯ ಮಾಡಿ ಸ್ವಲ್ಪ ಲವಣ ಬೆರೆಸಿ ಸೇವಿಸುವುದರಿಂದ ಕೆಮ್ಮು ಮತ್ತು ಉಬ್ಬಸ ರೋಗ ನಿವಾರಣೆ.
- ಬಿಳಿ ನೆಕ್ಕಿಯ ಕಷಾಯಕ್ಕೆ ಹಿಪ್ಪಲಿ ಪುಡಿ ಬೆರೆಸಿ ಸೇವಿಸುವುದರಿಂದ ಕಫ ಭಾದೆಯಿಂದ ಉಂಟಾದ ಜ್ವರವು ನಿವಾರಣೆ.
- ಮೂರು ದಿನ ತುಪ್ಪ ಮತ್ತು ಮೂರು ದಿವಸ ನೆಕ್ಕಿಯ ರಸ ಸೇವಿಸುವುದರಿಂದ ಬಿಳಿ ಮಚ್ಚೆಯು ನಿವಾರಣೆ.
- ನೆಕ್ಕಿಯ ಬೇರನ್ನು ನೀರಿನಲ್ಲಿ ಅರೆದು, ಆದನ್ನು ಮೂಗಿಗೆ 2–3 ಹನಿಯಷ್ಟು ಬಿಡುವುದರಿಂದ ಗಂಡಮಾಲಾ ರೋಗ ನಿವಾರಣೆ.

- ನೆಕ್ಕಿಯ ಬೇರಿನ ಕಷಾಯ ಸೇವನೆಯಿಂದ ಅಪಸ್ಮಾರ (Epilepsy) ರೋಗ ಕಡಿಮೆಯಾಗುತ್ತದೆ.
- ನೆಕ್ಕಿಯ ಎಲೆಯಿಂದ ತಯಾರಿಸಿದ ತಲೆದಿಂಬನ್ನು ಉಪಯೋಗಿಸುವುದರಿಂದ ತಲೆನೋವು ನಿವಾರಣೆ.
- ನೆಕ್ಕಿಯ ಎಲೆಯ ರಸವನ್ನು ಹಚ್ಚುವುದರಿಂದ ತಲೆನೋವು, ಗಂಟುನೋವು, ಕಾಲುನೋವು ಮುಂತಾದ ಆಮವಾತ ರೋಗಗಳು ನಿವಾರಣೆಯಾಗುತ್ತವೆ.
- ನೆಕ್ಕಿಯ ಎಲೆಗಳ ಕಲ್ಕವನ್ನು ಸಂಧಿ ಬಾವುಗಳಿಗೆ ಬಿಸಿಮಾಡಿ ಕಟ್ಟುವುದರಿಂದ ಬಾವು ಅಥವಾ ಶೋಥ ನಿವಾರಣೆ. ಅಂಡ ಶೋಥಕ್ಕೂ ಅದು ಉಪಯೋಗಕಾರಿ.
- ನೆಕ್ಕಿಯ ಬೇರಿನ ಕಲ್ಕವನ್ನು ಎಳನೀರಿನಲ್ಲಿ ಸೇವಿಸುವುದರಿಂದ ಮೂತ್ರಕಲ್ಲು ರೋಗವು ನಿವಾರಣೆ.
- ನೆಕ್ಕಿ ಎಲೆ ಕಷಾಯದಿಂದ ಬಾಯಿ ತೊಳೆಯುವುದರಿಂದ ಗಂಟಲು ನೋವು ಮತ್ತು ಹುಣ್ಣು ವಾಸಿಯಾಗುತ್ತದೆ.
- ನೆಕ್ಕಿಯ ಒಣಎಲೆಯ ಹೊಗೆಯನ್ನು ಸೇವಿಸುವುದರಿಂದ ನೆಗಡಿ, ತಲೆನೋವು ನಿವಾರಣೆ.
- ನೆಕ್ಕಿಯ ಬೇರಿನ ಕಷಾಯ ಸೇವನೆಯಿಂದ ಅಗ್ನಿಮಾಂದ್ಯ, ಹೊಟ್ಟೆನೋವು, ಮೈನೋವು, ಚರ್ಮರೋಗಗಳು ನಿವಾರಣೆಯಾಗುತ್ತದೆ.
- ಕರಿನೆಕ್ಕಿಯ ರಸಕ್ಕೆ ನಿಂಬೆಹಣ್ಣಿನ ರಸ ಬೆರೆಸಿ, ಅದನ್ನು ಕೂದಲುಗಳ ಬುಡಕ್ಕೆ ಲೇಪನ ಮಾಡಿ, ಒಂದೆರಡು ಗಂಟೆಗಳ ನಂತರ ಸ್ನಾನ ಮಾಡಬೇಕು ಹೀಗೆ ಮಾಡುವುದರಿಂದ ಕೂದಲು ಕಪ್ಪಾಗಿ, ಉದ್ದವಾಗಿ ಬೆಳೆಯುವುದು. ಮಾತ್ರವಲ್ಲದೇ ಕೂದಲು ಉದುರುವಿಕೆ ನಿಲ್ಲುವುದು.
- ನೆಕ್ಕಿಯ ರಸ ಅಥವಾ ಕಷಾಯಕ್ಕೆ ಹಿಪ್ಪಲಿ ಚೂರ್ಣ ಬೆರೆಸಿ ಸೇವಿಸುವುದರಿಂದ ಚಳಿಜ್ವರ, ಕಫಜ್ವರ, ನೆಗಡಿ, ಗಂಟಲು ನೋವು ನಿವಾರಣೆ.
- ನೆಕ್ಕಿಯ ಬೀಜದಿಂದ ತಯಾರಿಸಿದ ಚೂರ್ಣ ಸೇವನೆಯಿಂದ ಹೊಟ್ಟೆ ಹುಳವು ನಿವಾರಣೆ.

ಎಚ್ಚರಿಕೆ

ನೆಕ್ಕಿಯ ಅತಿಯಾದ ಅಥವಾ ತಪ್ಪು ಸೇವನೆಯಿಂದ ಅನೇಕ ತರಹದ ರೋಗಗಳು ಬರುವ ಸಾಧ್ಯತೆಗಳಿವೆ. ನೆಕ್ಕಿ ಸೇವನೆಯ ಮೊದಲು ಸೂಕ್ತ ವೈದ್ಯರ ಸಲಹೆ ಪಡೆದುಕೊಂಡು ಬಳಸುವುದು ಸೂಕ್ತ.


ಚಿಕ್ಕ ಸಂಸಾರ ಚೊಕ್ಕ ಸಂಸಾರ

ಸರ್ವದೋಷಹರ ನೆಲ್ಲಿಕಾಯಿ

Emblica officinalis, Gaertn.

Euphorbiaceae







ಪ್ರಾಣರಕ್ಷಕ ವನಸ್ಪತಿಯೆಂದೇ ಪ್ರಸಿದ್ಧಿ ಪಡೆದಿರುವ ನೆಲ್ಲಿಕಾಯಿಯು ಎಲ್ಲರಿಗೂ ಪರಿಚಿತ ದ್ರವ್ಯ. ಈ ಪ್ರಪಂಚದಲ್ಲಿ ಅದೆಷ್ಟೋ ವಸ್ತುಗಳನ್ನು ಕಾಣದ ಜನರಿರಬಹುದು. ಆದರೆ ನೆಲ್ಲಿಯ ರುಚಿಯನ್ನು ಸವಿಯದವರನ್ನು ಕಾಣುವುದು ತೀರಾ ಕಡಿಮೆ. ನೆಲ್ಲಿಯನ್ನು ಜಗಿದು ತಿಂದು ಕೊನೆಗೆ ಸ್ವಲ್ಪ ನೀರು ಕುಡಿದಾಗ ಬರುವ ಅನುಭವ ವರ್ಣಿಸಲು ಅಸಾಧ್ಯ ಅಲ್ಲವೇ! ಅದನ್ನು ಅನುಭವಿಸಿದರೆ ಮಾತ್ರ ಅನುಭವ ತಿಳಿಯುತ್ತದೆ. ಸರ್ವದೋಷಹರವಾದ ನೆಲ್ಲಿಕಾಯಿಯು ಮಿಕ್ಕ ಫಲಗಳಿಗಿಂತ ಭಿನ್ನ. ಕಿತ್ತಳೆಯು ಉತ್ತಮ ಫಲವಾಗಿದ್ದರೂ ಕೆಮ್ಮು ಉಬ್ಬಸದವರು ಸೇವಿಸಕೂಡದು. ಆದರೆ ನೆಲ್ಲಿಕಾಯಿ "ಚಕ್ಷುಷ್ಯಂ ಸರ್ವದೋಷಘ್ನಂ" ಎಂದರೆ ನೆಲ್ಲಿಯೂ ಸರ್ವದೋಷಹರವೂ ನಯನಕ್ಕೆ ಬಲಕೊಡುವಂತಹುದಾಗಿದೆ. ನೆಲ್ಲಿಯಿಂದ ತಯಾರಿಸಿದ ಚ್ಯವನಪ್ರಾಶ ಅವಲೇಹಕ್ಕೆ ಮಾರುಕಟ್ಟೆಯಲ್ಲಿ ಈಗ ಭಾರೀ ಬೇಡಿಕೆ. ವರ್ಷವಾದರೂ ಪೌಷ್ಠಿಕಾಂಶ, ವಿಟಮಿನ್‌ಸಿ ನಾಶವಾಗದ ನೆಲ್ಲಿಕಾಯಿಯು ವೇದಕಾಲದಿಂದ ಔಷಧಕ್ಕೆ ಉಪಯೋಗಿಸುವ ಆಯುರ್ವೇದದ ಶ್ರೇಷ್ಠ ದ್ರವ್ಯಗಳಲ್ಲಿ ಒಂದಾಗಿದೆ. ಆಮ್ಲರಸವು ಯಾವಾಗಲೂ ಪಿತ್ತವನ್ನು ವೃದ್ಧಿಸುತ್ತದೆ. ಆದರೆ ಅದಕ್ಕೆ ಅವಿರೋಧವಾದ ನೆಲ್ಲಿಕಾಯಿ ಪಿತ್ತಶಾಮಕವಾಗಿದೆ. ಹೀಗೆ

ಪೀಠಿಕೆ ನೀಡಿದಷ್ಟು ಮುಗಿಯದ ನೆಲ್ಲಿಕಾಯಿಯನ್ನು ಬೃಹತ್‌ಸಂಹಿತೆ, ನಿಘಂಟುಗಳಲ್ಲಿ ಆಚಾರ್ಯರು ಸುಧೀರ್ಘವಾಗಿ ವಿವರಿಸಿದ್ದಾರೆ.

ಬಹು ಭಾಷಾ ಹೆಸರುಗಳು

ಕನ್ನಡ : ನೆಲ್ಲಿಕಾಯಿ
ಸಂಸ್ಕೃತ : ಆಮಲಕೀ
ತುಳು : ನೆಲ್ಲಿ
ಹಿಂದಿ : ಆಮ್ಲ
ಇಂಗ್ಲೀಷ್ : ಎಂಬ್ಲಿಕ್ ಮೈರೋಬಾಲನ್

ಪರ್ಯಾಯ ಪದಗಳು

ಆಮಲಕೀ, ವಯಸ್ಥಾ, ಧಾತ್ರೀ, ವಯಸ್ಯಾ, ವೃಷ್ಯಾ, ಅಭಯಾ, ಕಾಯಸ್ಥಾ, ಅಮ್ರಫಲಾ, ಜಾತಿಫಲಾ, ಆದಿಫಲಾ, ಆಮ್ಲೀಕಾ, ಅಮೃತಫಲಾ, ರೋಚನೀ ಶಿವಾ.
ಮುದಿತನವನ್ನು ದೂರ ಮಾಡಿ ಯೌವನವನ್ನು ನೀಡುವ ಗುಣದಿಂದಲೇ ಇದನ್ನು 'ವಯಸ್ಥಾ' ಎಂಬ ನಾಮದಿಂದ ಕರೆಯಲಾಗಿದೆ.

ದ್ರವ್ಯದ ವರ್ಣನೆ

ನೆಲ್ಲಿಕಾಯಿಯು ಮಧ್ಯಮಗಾತ್ರದ, ದೊಡ್ಡದಾಗಿ ಸುಮಾರು 8 ರಿಂದ 10 ಮೀಟರ್ ಎತ್ತರಕ್ಕೆ ಬೆಳೆಯುವ ಮರ. ಇದರ ತೊಗಟೆಯೂ ಹಸಿರು ಮಿಶ್ರಿತ ಬೂದು ಬಣ್ಣ ಅಥವಾ ಕೆಂಪು ಬಣ್ಣದಿಂದ ಕೂಡಿದ್ದು, ಹುಣಸೆ ಎಲೆಗೆ ಹೋಲುವ ರೀತಿಯಲ್ಲಿದೆ. ಆದರೆ ಹುಣಸೆ ಎಲೆಗಿಂತ ಚಿಕ್ಕದಾಗಿ ಬಹಳ ತೆಳುವಾಗಿದೆ. ಹೂಗಳು ಚಿಕ್ಕದಾಗಿ ಹಳದಿ ಬಣ್ಣದಿಂದ ಕೂಡಿದೆ. ಕಾಯಿಯು ಗುಂಡಾಕಾರದಿಂದ ಕೂಡಿದ್ದು, ಹಸಿರು ಮಿಶ್ರಿತ ಹಳದಿ ಬಣ್ಣದಿಂದ ಕೂಡಿದೆ. ಈ ದ್ರವ್ಯವು ಹೂವನ್ನು ಫೆಬ್ರವರಿ – ಮೇ ತಿಂಗಳಿನಲ್ಲಿ, ಕಾಯಿಯನ್ನು ದೀಪಾವಳಿ ಸಮಯದಲ್ಲಿ ಅಂದರೆ ಆಕ್ಟೋಬರ್‌ನಿಂದ ಎಪ್ರಿಲ್ ತನಕ ಬಿಡುತ್ತದೆ. ಸಾಮಾನ್ಯವಾಗಿ ಎಲ್ಲ ಪ್ರದೇಶಗಳಲ್ಲಿ ಬೆಳೆಯುವ ನೆಲ್ಲಿಕಾಯಿಯನ್ನು ಔಷಧ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ.

ವಿಧಗಳು

ಶಾಸ್ತ್ರೀಯವಾಗಿ ಎರಡು ವಿಧದ ನೆಲ್ಲಿಕಾಯಿಯನ್ನು ಕಾಣಬಹುದು. ಅವು

- ವನ್ಯ ನೆಲ್ಲಿಕಾಯಿ
- ಗ್ರಾಮ್ಯ ನೆಲ್ಲಿಕಾಯಿ

ಉಪಯುಕ್ತ ಅಂಗ

- ಹಣ್ಣು
- ಹಣ್ಣಿನ ತಿರುಳು

ದ್ರವ್ಯದ ಗುಣಧರ್ಮಗಳು

ರಸ : ಆಮ್ಲ ಪ್ರಧಾನ ಪಂಚ ರಸ

ಗುಣ : ಲಘು, ರೂಕ್ಷ

ವೀರ್ಯ : ಶೀತ

ವಿಪಾಕ : ಮಧುರ

ಕರ್ಮ : ತ್ರಿದೋಷಹರ, ವಯಸ್ಥಾಪನ, ರಸಾಯನ ಚಕ್ಷುಷ್ಯ, ವೃಷ್ಯ

ಆಮಲಕಂ ಕಷಾಯಾಮ್ಲಂ ಮಧುರಂ ಶಿಶಿರಂ ಲಘು।
ದಾಹಪಿತ್ತವಮೀಮೇಹಶೋಫಘ್ನಂ ಚ ರಸಾಯನಂ॥ *(ರಾಜನಿಘಂಟು)*

ಎಂದರೆ ನೆಲ್ಲಿಕಾಯಿಯು ಕಷಾಯ, ಆಮ್ಲ ಮತ್ತು ಮಧುರ ರಸದಿಂದ ಕೂಡಿದೆ. ಲಘು ಗುಣದಿಂದ ಕೂಡಿದೆ. ದಾಹ, ಪಿತ್ತ, ವಾಂತಿ, ಮೇಹ, ಶೋಫ ಮುಂತಾದ ತೊಂದರೆಗಳನ್ನು ನಿವಾರಿಸುತ್ತದೆ. ಇದು ರಸಾಯನವಾಗಿದೆ.

ಔಷಧಿ ಪ್ರಮಾಣ

ಸ್ವರಸ : 10–20 ಮಿ.ಲೀ

ಚೂರ್ಣ : 3–6 ಗ್ರಾಂ

ಲೇಹ : 20 ಗ್ರಾಂ

ಔಷಧೀಯ ಯೋಗಗಳು

- ಚ್ಯವನಪ್ರಾಶ ಅವಲೇಹ
- ಧಾತ್ರೀಲೋಹ
- ಆಮಲಕೀ ರಸಾಯನ
- ಫಲಾಸವ
- ಕನಕಾರಿಷ್ಟ
- ಧಾತ್ರ್ಯಾರಿಷ್ಟ

ಔಷಧೀಯ ಉಪಯೋಗಗಳು

- ನೆಲ್ಲಿಕಾಯಿ ಮತ್ತು ಅರಿಶಿಣದ ರಸವನ್ನು ಜೇನಿನೊಡನೆ ಸೇವಿಸುವುದರಿಂದ ಪ್ರಮೇಹ ರೋಗವು ನಿವಾರಣೆಯಾಗುತ್ತದೆ.

- ನೆಲ್ಲಿಕಾಯಿ ತಿರುಳನ್ನು ತುಪ್ಪದೊಂದಿಗೆ ಬೆರೆಸಿ, ಹುರಿದು ಸೇವಿಸುವುದರಿಂದ ಜ್ವರವು ನಾಶವಾಗುತ್ತದೆ.
- ನೆಲ್ಲಿಕಾಯಿಯ ರಸವನ್ನು ಜೇನಿನೊಡನೆ ಬೆರೆಸಿ ಅನುಪಾನವಾಗಿ ಕ್ರಿಮಿರೋಗದಲ್ಲಿ ಉಪಯೋಗಿಸಬಹುದು.
- ಆಹಾರ ಅಥವಾ ಪಾನೀಯವಾಗಿ ದ್ರಾಕ್ಷಿ ಮತ್ತು ನೆಲ್ಲಿಕಾಯಿ ರಸವನ್ನು ಸೇವಿಸುವುದರಿಂದ ಕಾಮಾಲೆ ರೋಗವು ಕಡಿಮೆಯಾಗುತ್ತದೆ.
- ಒರಟಾದ ಸ್ವರದಿಂದ ಬಳಲುತ್ತಿರುವವರು ನೆಲ್ಲಿಕಾಯಿಯನ್ನು ಹಾಲಿನೊಡನೆ ಸೇವಿಸಬೇಕು.
- ನೆಲ್ಲಿಕಾಯಿಯ ಪುಡಿಗೆ ಸ್ವಲ್ಪ ಹಾಲು ಮತ್ತು ತುಪ್ಪ ಸೇರಿಸಿ ಬಿಸಿ ಮಾಡಿ ಕುಡಿಯುವುದರಿಂದ ಕೆಮ್ಮು ಕಡಿಮೆಯಾಗುತ್ತದೆ.
- ನೆಲ್ಲಿಕಾಯಿ ರಸವನ್ನು ತುಪ್ಪದೊಂದಿಗೆ ಬಿಸಿ ಮಾಡಿ ಸೇವಿಸುವುದರಿಂದ ಮೂರ್ಛೆ ರೋಗವು ಕಡಿಮೆಯಾಗುತ್ತದೆ.
- ನೆಲ್ಲಿಕಾಯಿ, ದ್ರಾಕ್ಷಿ, ಜೇನನ್ನು 40 ಗ್ರಾಂನಷ್ಟು ತೆಗೆದುಕೊಂಡು ಅದಕ್ಕೆ 100 ಮಿ. ಲೀಟರ್‌ನಷ್ಟು ನೀರನ್ನು ಸೇರಿಸಿಕೊಂಡು, ಬಟ್ಟೆಯಿಂದ ಶೋಧಿಸಿ ಸೇವಿಸುವುದರಿಂದ ವಾಂತಿರೋಗದಿಂದ ಬಳಲುತ್ತಿರುವವರಿಗೆ ಒಳ್ಳೆಯದು.
- ನೆಲ್ಲಿಕಾಯಿ ಪುಡಿಯಿಂದ ಬಾಯಿ ಮುಕ್ಕಳಿಸುವುದರಿಂದ ಬಾಯಿಯ ರುಚಿ ಇಲ್ಲದಿರುವವರಿಗೆ ಒಳ್ಳೆಯದು.
- ನೆಲ್ಲಿಯ ರಸಕ್ಕೆ ಸ್ವಲ್ಪ ಜೇನುತುಪ್ಪ, ಸ್ವಲ್ಪ ತುಪ್ಪ ಸೇರಿಸಿ ದಿನಾಲೂ ಬೆಳಗ್ಗೆ ಒಂದೆರಡು ತಿಂಗಳು ನೆಕ್ಕುವುದರಿಂದ ಮೂಗು, ಬಾಯಿ, ಗುದ ಮುಂತಾದ ಅಂಗಗಳಲ್ಲಿ ಆಗಾಗ ಆಗುವ ರಕ್ತಸ್ರಾವದಿಂದ ಬಳಲುತ್ತಿರುವವರಿಗೆ ಒಳ್ಳೆಯದು.
- ಒಂದು ಚಮಚ ನೆಲ್ಲಿಕಾಯಿ ಪುಡಿಯನ್ನು ಬಿಸಿನೀರಿನೊಡನೆ ಬೆರೆಸಿ ಬೆಳಿಗ್ಗೆ ಸಂಜೆ ಕುಡಿಯುವುದರಿಂದ ಬೊಜ್ಜಿನಿಂದ ಬಳಲುತ್ತಿರುವವರಿಗೆ ಒಳ್ಳೆಯದು.
- ನೆಲ್ಲಿಕಾಯಿ ರಸಕ್ಕೆ ಸಕ್ಕರೆ ಸೇರಿಸಿ ಕುಡಿಯುವುದರೊಂದಿಗೆ ಬೀಜವಿಲ್ಲದ ನೆಲ್ಲಿಕಾಯಿಯನ್ನು ನೀರಿನಲ್ಲಿ ನುಣ್ಣಗೆ ಅರೆದು ಹೊಕ್ಕಳ ಸುತ್ತ ಲೇಪಿಸುವುದರಿಂದ ಅಸಾಧ್ಯ ಹೊಟ್ಟೆ ನೋವು ನಿವಾರಣೆ.
- ಪ್ರಸಿದ್ಧ ಅವಲೇಹವಾದ ಚ್ಯವನಪ್ರಾಶ ಅವಲೇಹವನ್ನು ದಿನಾಲೂ ಸೇವಿಸುವುದರಿಂದ ಶರೀರದ ದುರ್ಬಲತೆ, ಕೆಮ್ಮು, ದಮ್ಮು, ಧಾತುಕ್ಷಯ, ವೀರ್ಯ ದೋಷಗಳು, ಎದೆನೋವು, ಹೊಟ್ಟೆಯ ರೋಗ, ಎದೆಬಡಿತ, ವಾತರಕ್ತ ವಾಸಿಯಾಗುವುದರ ಜೊತೆಗೆ ಜ್ಞಾಪಕ ಶಕ್ತಿ, ಮೈ ಕಾಂತಿ ಹೆಚ್ಚುತ್ತದೆ. ಎಲ್ಲ ವಯಸ್ಸಿನವರಿಗೂ ಬಲವನ್ನು ಹೆಚ್ಚಿಸುತ್ತದೆ.

ಬಾಳ ಬೆಳಕಾಗಿಸುವ ಬಜೆ

Acorus calamus, Linn.

Araceae





ಬಜೆ ಎಂದ ಕೂಡಲೇ ನೆನಪು ಬರುವುದು ಬಾಲ್ಯತನ. ನಮ್ಮ ಬಾಲ್ಯತನವನ್ನು ನಾವು ಸ್ವಲ್ಪ ಸ್ವಲ್ಪ ಮೆಲುಕು ಹಾಕುತ್ತ ಹೋದಾಗ, ಒಂದು ಕಡೆ ತಾಯಿಯು ಯಾವುದೋ ನಾವು ತಿಳಿಯದ ವಸ್ತುವನ್ನು ನಮ್ಮ ಬಾಯಿಗೆ ಅಥವಾ ನಮ್ಮ ತಂಗಿ, ತಮ್ಮನ ಬಾಯಿಗೆ ನೆಕ್ಕಿಸಿದ ನೆನಪು ಬರುವುದು. ನಿಮಗೂ ಬರುತ್ತದೆಯಲ್ಲವೇ? ಹೌದು ಖಂಡಿತ. ಅಪ್ಪ ನೆಟ್ಟ ಆಲದ ಮರಕ್ಕೆ ಕಾರಣವಿಲ್ಲದೆ ಸುತ್ತು ಬರುವವರ ಜಾತಿಗೆ ಸೇರಿದ ನಾನು, ತಾಯಿಯಲ್ಲಿ ಅದು ಯಾವ ದ್ರವ್ಯ, ಅದರ ಉಪಯೋಗ ಏನು ಮುಂತಾದ ಪ್ರಶ್ನೆಯನ್ನು ಹಾಕಲೂ ಸಾಧ್ಯವೇ! ನೀವೇ ಹೇಳಿ. ನಾನು ಬಿಡಿ ನೀವೂ ಸಹ ಹಾಕದಿರಬಹುದು. ಆದರೆ ನನಗೆ ನಿಜವಾಗಿ ಆ ಪ್ರಶ್ನೆಯು ಮೂಡಿದ್ದು, ಈ ಅಂಕಣವನ್ನು ಬರೆಯುತ್ತಿರುವಾಗ, ಕೂಡಲೇ ಹೋಗಿ ತಾಯಿಯಲ್ಲಿ ವಿಚಾರಿಸಿದಾಗ ತಾಯಿಯ ಸೊಗಸಾದ ಉತ್ತರ 'ಪಾತೆರ್‌ನಗ ಉಚ್ಛಾರ ಸರಿಯಾದ್ ಬರ್ರ್, ಬೊಕ್ಕ ಸರಿಯಾದ್ ಪಾತೆರರೇ'. ಈ ಮುತ್ತನ್ನೇ ಮುಖ್ಯವಾಗಿ ಇಟ್ಟುಕೊಂಡು ಬೇರೆ ಬೇರೆ ಪುಸ್ತಕ ಓದಿದಾಗ ತಾಯಿಯ ಮಾತು ನೂರಕ್ಕೆ ನೂರ ಸತ್ಯ ಎಂಬುದು ತಿಳಿಯಿತು. ಬಜೆಯ ತುಂಡನ್ನು ಶುದ್ಧ ಕಲ್ಲಿನಲ್ಲಿ ಜೇನುತುಪ್ಪದೊಂದಿಗೆ ಅರೆದು ರಸವನ್ನು ಮಕ್ಕಳ ನಾಲಿಗೆಗೆ ನೆಕ್ಕಿಸಿದರೆ ಮಕ್ಕಳ ರೋಗ ನಿರೋಧಕ ಶಕ್ತಿ ಹೆಚ್ಚಿ, ಮಾತು ಶುದ್ಧವಾಗಿ,

ಬುದ್ಧಿಶಕ್ತಿಯೂ ಹೆಚ್ಚುತ್ತದೆ. ಹೀಗೆ ಬಾಲ್ಯದಿಂದಲೇ ಮಾತು ಸ್ಪಷ್ಟವಾಗಲೂ ಕಾರಣ ಕರ್ತೃವಾಗಿ ಬಾಳ ಬೆಳಕಾಗಿಸಿದ ಬಜೆಯನ್ನು ನೋಡಿದವರು ಬಹಳ ಕಡಿಮೆ. ಬಜೆಯ ಔಷಧಿ ಗುಣಗಳನ್ನು ಅದರ ವಿವರಣೆಯನ್ನು ನಿಘಂಟುಗಳಲ್ಲಿ ಬೃಹತ್ ಸಂಹಿತೆಗಳಲ್ಲಿ ಯಥೇಚ್ಛವಾಗಿ ಕಾಣಬಹುದು.

ಬಹು ಭಾಷಾ ಹೆಸರುಗಳು

ಕನ್ನಡ : ಬಜೆ, ದಗಡೆ

ಸಂಸ್ಕೃತ : ವಚಾ

ತುಳು : ಬಜೆ

ಹಿಂದಿ : ಬಚ್

ಇಂಗ್ಲೀಷ್ : ಸ್ವೀಟ್‌ಫ್ಲಾಗ್

ಪರ್ಯಾಯ ಪದಗಳು

ವಚಾ, ಸ್ಮರಣೀ, ಉಗ್ರಗಂಧಾ, ಗೋಲೋಮೀ, ಶತಪರ್ವಿಕಾ, ಷಡ್‌ಗ್ರಂಥಾ, ಭದ್ರೀ, ಭೂತಘ್ನೀ, ಕ್ಷೂದಪತ್ರಾ, ಲೋಮಷಾ, ರಕ್ಷೋಘ್ನೀ. ಸ್ಮರಣ ಶಕ್ತಿಯನ್ನು ಹೆಚ್ಚಿಸುವುದರಿಂದ ಸ್ಮರಣೀ ಎಂದು ಕರೆಯುತ್ತಾರೆ.

ದ್ರವ್ಯದ ವರ್ಣನೆ

ಬಜೆಯು ಒಂದು ಸುವಾಸನೆಭರಿತ ಜೌಗು ಪ್ರದೇಶದಲ್ಲಿ ಬೆಳೆಯುವ ಸಸ್ಯ. ಇದು ಸುಮಾರು 150 ಸೆಂ.ಮೀಟರ್‌ನಷ್ಟು ಎತ್ತರಕ್ಕೆ ಬೆಳೆಯುತ್ತದೆ. ಇದರ ಅಗಲವು ನಡು ಬೆರಳಿನ ಅಳತೆಗೆ ಸರಿ ಹೊಂದುತ್ತದೆ. ಇದರಲ್ಲಿ ರೋಮಗಳಿಂದ ಕೂಡಿದ 6 ಬೇರಿನ ಗಂಟಿದ್ದು ಅದು ಸುವಾಸನೆಯಿಂದ ಕೂಡಿದೆ. ಹೊಳಪಿನ ಎಲೆಯು ಹಸಿರಾಗಿದ್ದು ಕಬ್ಬಿನ ಎಲೆಯಂತೆ ಉದ್ದವಾಗಿದೆ. ಹೂಗಳು ಸಣ್ಣ ಸಣ್ಣದಾಗಿದ್ದು ಹಸಿರಾಗಿರುವುವು. ಸಾಮಾನ್ಯವಾಗಿ ಜೌಗು ಪ್ರದೇಶದಲ್ಲಿ ಬೆಳೆಯುವ ಈ ಸಸ್ಯವು ಅಸ್ಸಾಂ, ಮಣಿಪುರ, ಕೇರಳ, ತಮಿಳುನಾಡು, ಕರ್ನಾಟಕ ಮುಂತಾದ ರಾಜ್ಯಗಳಲ್ಲಿ ಹೆಚ್ಚಾಗಿ ಬೆಳೆಯುತ್ತದೆ. ಬಜೆಗಿಡದ ಕಂದ ಅಥವಾ ಬೇರನ್ನು ಒಣಗಿಸಿ ತುಂಡುಗಳಾಗಿ ಕತ್ತರಿಸಿ ಸಂಗ್ರಹಿಸಿಡುತ್ತಾರೆ. ಈ ತುಂಡುಗಳನ್ನು ಔಷಧಿ ತಯಾರಿಕೆಗೆ ಉಪಯೋಗಿಸುತ್ತಾರೆ.

ವಿಧಗಳು

ಭಾವಮಿಶ್ರನ ಪ್ರಕಾರ ಬಜೆಯಲ್ಲಿ 5 ವಿಧಗಳಿವೆ, ಅವು

- ವಚಾ (Acorus calamus)

- ಪಾರಸೀಕಾ ವಚಾ (Iris germanica)
- ಮಹಾ ಭಾರೀ ವಚಾ (Alpinia galanga)
- ಸ್ಥೂಲ ಗ್ರಂಥಿ (Zingiber zerumbet)
- ದ್ವೀಪಾಂತರ ವಚಾ (Smilax china)

ಉಪಯುಕ್ತ ಅಂಗ

- ಕಂದ ಅಥವಾ ಬೇರು

ದ್ರವ್ಯದ ಗುಣಧರ್ಮಗಳು

ರಸ : ಕಟು, ತಿಕ್ತ

ಗುಣ : ಲಘು, ತೀಕ್ಷ್ಣ

ವೀರ್ಯ : ಉಷ್ಣ

ವಿಪಾಕ : ಕಟು

ಕರ್ಮ : ಕಫವಾತಹರ, ಮೇಧ್ಯ, ದೀಪಕ, ಪಾಚಕ, ಕ್ರಿಮಿಘ್ನ, ವಾಮಕ

ವಚೋಗ್ರಗಂಧಾ ಕಟುಕಾ ತಿಕ್ತೋಷ್ಣಾ ವಾಂತಿವಹ್ನಿಕೃತ್।
ವಿಬಂಧಾಧ್ಮಾನಶೂಲಘ್ನೀ ಶಕೃನ್ಮೂತ್ರ ವಿಶೋಧಿನೀ॥
ಅಪಸ್ಮಾರಕಫೋನ್ಮಾದ ಭೂತಜಂತ್ವನಿಲಾನ್ ಹರೇತ್॥ (*ಭಾವಪ್ರಕಾಶ್*)

ಎಂದರೆ ಬಜೆಯು ಉಗ್ರ ಸುವಾಸನೆಯಿಂದ ಕೂಡಿದೆ. ಕಟು ಮತ್ತು ತಿಕ್ತ ರಸದಿಂದ ಕೂಡಿದೆ. ವಾಂತಿ ಮತ್ತು ಅಗ್ನಿಯನ್ನು ವೃದ್ಧಿಸುತ್ತದೆ. ಮಲಬದ್ಧತೆ, ಹೊಟ್ಟೆಯುಬ್ಬರ, ಉದರಶೂಲ, ಅಪಸ್ಮಾರ, ಉನ್ಮಾದ, ಕ್ರಿಮಿ ರೋಗಗಳನ್ನು ನಿವಾರಿಸುತ್ತದೆ. ಮಲಮೂತ್ರದ ವಿಸರ್ಜನೆಗೆ ಪ್ರಚೋದಿಸುತ್ತದೆ.

ಔಷಧಿ ಪ್ರಮಾಣ

ಚೂರ್ಣ : 125–500 ಮಿ.ಗ್ರಾಂ

ವಮನಾರ್ಥ : 2–4 ಮಾಷ

ಔಷಧೀಯ ಯೋಗಗಳು

- ವಚಾದಿ ಚೂರ್ಣ
- ವಚಾದಿ ಘೃತ
- ಬಾಲ ಚಾತುರ್ಭದ್ರ ಚೂರ್ಣ

- ವಚಾವಲೇಹ
- ಮೇಧ್ಯ ರಸಾಯನ

ಔಷಧೀಯ ಉಪಯೋಗಗಳು

- ಬಜೆಯ ಪುಡಿಯನ್ನು ಜೇನುತುಪ್ಪ ಮತ್ತು ಬೆಲ್ಲದೊಂದಿಗೆ ಸೇವಿಸುವುದರಿಂದ ಆಮ್ಲಪಿತ್ತ ರೋಗವು ಕಡಿಮೆಯಾಗುತ್ತದೆ.
- ಮಾನಸಿಕ ರೋಗವಾದ ಅಪಸ್ಮಾರದಿಂದ ಬಳಲುತ್ತಿರುವವರು 10 ಗ್ರಾಂನಷ್ಟು ಬಜೆಯ ಪುಡಿಗೆ ಸ್ವಲ್ಪ ಜೇನುತುಪ್ಪ ಮತ್ತು ತುಪ್ಪವನ್ನು ಬೆರೆಸಿ ಮೂರುದಿವಸ ಸೇವಿಸುವುದರೊಂದಿಗೆ ಹಾಲನ್ನು ಆಹಾರದಲ್ಲಿ ಉಪಯೋಗಿಸಬೇಕು.
- ಬಜೆ, ಭದ್ರಮುಷ್ಠಿ, ಅರಿಷಿಣ ಮತ್ತು ಶುಂಠಿಯ ಕಷಾಯ ಮಾಡಿ ಕುಡಿಯುವುದರಿಂದ ಅತಿಸಾರವು ಕಡಿಮೆಯಾಗುತ್ತದೆ.
- ಚರ್ಮರೋಗದಿಂದ ಬಳಲುತ್ತಿರುವವರು ಬಜೆ, ಕುಷ್ಠ ಮತ್ತು ವಿಡಂಗದ ಲೇಪವನ್ನು ಮಾಡಿ, ಚರ್ಮಕ್ಕೆ ಹಚ್ಚಬೇಕು.
- ಬಜೆ ಮತ್ತು ಶ್ರೀಗಂಧವನ್ನು ಅರೆದು ಚೆಬ್ಬಿರುವ ಸ್ಥಳಕ್ಕೆ ಲೇಪಿಸುವುದರಿಂದ ಬಿಳಿಚೆಬ್ಬು ನಾಶವಾಗುತ್ತದೆ.
- ಬಜೆಯನ್ನು ಹಾಲಿನೊಂದಿಗೆ ಸುಮಾರು ಒಂದು ತಿಂಗಳಿನಷ್ಟು ಕಾಲ ಸೇವಿಸುವುದರಿಂದ ಆಯುಷ್ಯ ವೃದ್ಧಿಯಾಗಿ, ಬುದ್ಧಿ ಮತ್ತು ಸ್ವರವು ಹೆಚ್ಚುತ್ತದೆ.
- ಆಮಾಜೀರ್ಣರೋಗದಿಂದ ಬಳಲುತ್ತಿರುವವರಿಗೆ ಬಜೆ ಮತ್ತು ಉಪ್ಪನ್ನು ಸೇರಿಸಿದ ಕಷಾಯ ಕುದಿಸಿ ವಾಂತಿಬರಿಸುವುದರಿಂದ ಆಮಾಜೀರ್ಣರೋಗ ನಿವಾರಣೆ.
- ಬಜೆ ಮತ್ತು ಕಹಿಬೇವಿನ ಕಷಾಯದಿಂದ ವಾಂತಿಮಾಡಿಸುವುದರಿಂದ ಕಫದಿಂದ ಉಂಟಾದ ಹೃದಯರೋಗಕ್ಕೆ ಒಳ್ಳೆಯದು.
- ಬಜೆಯ ರಸ 2–3 ಹನಿಯಷ್ಟು ಕಿವಿಗೆ ಬಿಡುವುದರಿಂದ ಕಿವಿನೋವು ಕಡಿಮೆಯಾಗುತ್ತದೆ.
- ಬಜೆ, ಅಣಿಲೆಕಾಯಿ, ತಾರೇಕಾಯಿ, ಹಿಪ್ಪಲಿ ಪುಡಿಯ ಕಷಾಯ ಮಾಡಿ ಕಲ್ಲುಸಕ್ಕರೆ ಪುಡಿ ಸೇರಿಸಿ ದಿವಸಕ್ಕೆ 4–5 ಬಾರಿ ಕುಡಿಯುವುದರಿಂದ ಮಕ್ಕಳ ಕೆಮ್ಮು ನಿವಾರಣೆ.
- ಚಿಕ್ಕ ಮಕ್ಕಳಿಗೆ ಬಜೆಯ ಬೇರನ್ನು ಜೇನಿನಲ್ಲಿ ತೇಯ್ದು ನೆಕ್ಕಿಸುವುದರಿಂದ ಜೀರ್ಣಶಕ್ತಿ, ಬುದ್ಧಿಶಕ್ತಿ ಹೆಚ್ಚುತ್ತದೆ.
- ಬಜೆಯ ಪುಡಿಯನ್ನು ಮಜ್ಜಿಗೆಯಲ್ಲಿ ಸೇವನೆ ಮಾಡುವುದರಿಂದ ಹೊಟ್ಟೆನೋವು ನಿವಾರಣೆ.

- ಬಜೆಯ ಚೂರ್ಣಕ್ಕೆ ಅಮೃತ ಬಳ್ಳಿಯ ರಸ ಸೇರಿಸಿ ಕುಡಿಯುವುದರಿಂದ ಜ್ವರ ನಿವಾರಣೆ.
- ಸಂಧಿವಾತದಿಂದ ಬಳಲುತ್ತಿರುವವರು ಬಜೆಯ ಲೇಪವನ್ನು ಸಂಧಿಗಳಿಗೆ ಲೇಪಿಸಬೇಕು.


ಎಚ್ಚರಿಕೆ

ಬಜೆಯನ್ನು ಉಷ್ಣ ಮತ್ತು ಪಿತ್ತ ಅಧಿಕವಿರುವವರು ಸೇವಿಸುವುದು ಸೂಕ್ತವಲ್ಲ. ಬಜೆಯ ಅಹಿತ ಪರಿಣಾಮಕ್ಕೆ ನಿಂಬೆಹಣ್ಣಿನ ರಸ ಸೇವಿಸಬೇಕು.

ಬಹುರುಚಿಯ ಬಡೇಸೋಪು

Foeniculum vulgare, Mill.
Umbelliferae





ಬಡೇಸೋಪು ಜೀರಿಗೆಗಿಂತ ಸ್ವಲ್ಪ ದೊಡ್ಡದಾಗಿರುವ ಎಲ್ಲರಿಗೂ ಪರಿಚಿತ ದ್ರವ್ಯ. ಬಡೇಸೋಪು ಎಂದ ಕೂಡಲೇ ನೆನಪು ಬರುವುದು ಫೈವ್‌ಸ್ಟಾರ್ ಹೋಟೆಲುಗಳು. ಫೈವ್‌ಸ್ಟಾರ್‌ಹೋಟೆಲುಗಳಲ್ಲಿ ಬಿಲ್‌ಗಳನ್ನು ಬಡೇಸೋಪಿನಲ್ಲಿ ಕೊಡುವುದು ಹಿಂದಿನಿಂದ ಬಂದಿರುವ ವಾಡಿಕೆ. ಬಡೇಸೋಪಿನ ರುಚಿಯನ್ನು ಕಂಡವರು ಅದನ್ನು ಗುಟ್ಕಾದ ಹಾಗೆ ಜಗಿಯುವುದನ್ನು ನಾವು ಸಾಮಾನ್ಯವಾಗಿ ಕಾಣಬಹುದು. ಬಡೇಸೋಪನ್ನು ವೀಳ್ಯದೆಲೆಯಲ್ಲಿ ಹಾಕಿ ಸೇವಿಸುವುದರಿಂದ ವೀಳ್ಯದ ರುಚಿಯು ಹೆಚ್ಚಾಗಿ, ಪಚನ ಕ್ರಿಯೆಗೆ ಸಹಾಯಮಾಡುತ್ತದೆ. ಅದೇನೆ ಇರಲಿ ಆದರೆ ಬಡೇಸೋಪು ಆಯುರ್ವೇದದಲ್ಲಿ ಪ್ರಮುಖ ದ್ರವ್ಯಗಳಲ್ಲಿ ಒಂದಾಗಿದೆ. ಊಟದ ನಂತರ ಬಡೇಸೋಪು ತಿನ್ನುವುದನ್ನು ನಾವು ಸಾಮಾನ್ಯವಾಗಿ ಕೆಲಮನೆಗಳಲ್ಲಿ ಕಾಣಬಹುದು.... ಯಾಕೆ?.... ಯಾಕೆಂದರೆ ಇದು ಪಾಚನ ಶಕ್ತಿಯನ್ನು ಹೊಂದಿದೆ.

ಬಹು ಭಾಷಾ ಹೆಸರುಗಳು

ಕನ್ನಡ : ಬಡೇಸೋಪು

ಸಂಸ್ಕೃತ : ಮಿಶ್ರೇಯಾ

ತುಳು : ಬಡೇಸೋಪು

ಹಿಂದಿ : ಸೌನ್ಫ್

ಇಂಗ್ಲೀಷ್ : ಫೆನಲ್

ಪರ್ಯಾಯ ಪದಗಳು

ಮಿಶ್ರೆಯಾ, ಶಾಲೇಯಃ, ಶಾಲೀನೋ, ಮಧುರಿಕ, ಶತಾವ್ಹ, ಶತಪುಷ್ಪಾ, ಸುಗಂಧ, ಮಾಧವಿ, ಮಿಶಿ, ಶೀತಶಿವ, ವನಜಾ

ದ್ರವ್ಯದ ವರ್ಣನೆ

ಬಡೇಸೋಪು ಚಿಕ್ಕದಾದ ಬಹುವಾರ್ಷಿಕ ಸಸ್ಯ. ಎಲೆಯು 5–10 ಸೆಂ.ಮೀಟರ್‌ನಷ್ಟು ಉದ್ದವಾಗಿ ರೆಕ್ಕೆಗಳಂತಿರುತ್ತದೆ. ಹೂವು ಹಳದಿ ಮಿಶ್ರಿತ ಬಿಳಿ ಬಣ್ಣದಿಂದ ಕೂಡಿದೆ. ಅಂಡಾಕಾರದ ಬೀಜಗಳು ಹಸಿರು ಬಣ್ಣದಿಂದ ಕೂಡಿದ್ದು, ಉದ್ದವಾಗಿದೆ. ಈ ದ್ರವ್ಯದ ಬೀಜ, ಬೀಜದೆಣ್ಣೆ, ಬೇರನ್ನು ಔಷಧಕ್ಕೆ ಉಪಯೋಗಿಸುತ್ತಾರೆ.

ವಿಧಗಳು

ಬಡೆಸೋಪಿನಲ್ಲಿ ಎರಡು ಪ್ರಭೇದಗಳುಂಟು. ಅವು

- ವನ್ಯ
- ಗ್ರಾಮ್ಯ

ಉಪಯುಕ್ತ ಅಂಗಗಳು

- ಬೀಜಗಳು

ದ್ರವ್ಯದ ಗುಣಧರ್ಮಗಳು

ರಸ : ಮಧುರ, ಕಟು, ತಿಕ್ತ

ಗುಣ : ಲಘು, ರೂಕ್ಷ

ವೀರ್ಯ : ಶೀತ

ವಿಪಾಕ : ಮಧುರ

ಕರ್ಮ : ದೀಪನ, ಪಾಚನ, ಹೃದ್ಯ, ಶುಕ್ರಹರ, ವೃಷ್ಯ

"ಮಿಶ್ರೇಯಾ ಮಧುರಾ ಸ್ನಿಗ್ಧಾ ಕಟುಃ ಕಫಹರಾ ಪರಾ।
ವಾತಪಿತ್ತೋತ್ಥದೋಷಘ್ನೀ ಕ್ಲೀಹಜಂತುವಿನಾಶಿನೀ॥ (ರಾಜನಿಘಂಟು)

ಎಂದರೆ ಬಡೇಸೋಪು ಮಧುರ, ಕಟು ರಸದಿಂದ ಕೂಡಿದೆ. ಸ್ನಿಗ್ಧ ಗುಣದಿಂದ ಕೂಡಿದೆ, ಕಫಹರವಾಗಿದೆ, ವಾತಪಿತ್ತದೋಷಘ್ನವು, ಪ್ಲೀಹರೋಗ, ಜಂತುರೋಗಗಳನ್ನು ನಿವಾರಿಸುತ್ತದೆ.

ಔಷಧಿ ಪ್ರಮಾಣ

ಹಣ್ಣಿನ ಚೂರ್ಣ	:	3–6 ಗ್ರಾಂ
ಎಣ್ಣೆ	:	5–10 ಬಿಂದು
ಬೇರಿನ ಚೂರ್ಣ	:	3–6 ಗ್ರಾಂ
ಸಾರ	:	20–40 ಮಿ.ಲೀ

ಔಷಧೀಯ ಯೋಗಗಳು

- ಶತಪುಷ್ಪಾದಿ ಅರ್ಕ
- ಶತಪುಷ್ಪಾದಿ ಚೂರ್ಣ
- ಶತಪುಷ್ಪಾದಿ ಘೃತ

ಔಷಧೀಯ ಉಪಯೋಗಗಳು




- ಬಡೇಸೋಪು ಮತ್ತು ಹಾಲನ್ನು ಬಿಸಿ ಮಾಡಿ ಸೇವಿಸುವುದರಿಂದ ಮಕ್ಕಳ ಹೊಟ್ಟೆನೋವು ನಿವಾರಣೆಯಾಗುತ್ತದೆ.
- ಬಡೇಸೋಪು 10 ಗ್ರಾಂನಷ್ಟು ಪುಡಿಯನ್ನು ಜೇನುತುಪ್ಪ ಮತ್ತು ತುಪ್ಪದೊಂದಿಗೆ ಸೇವಿಸುವುದರಿಂದ ಬುದ್ಧಿಯು ವೃದ್ಧಿಸುತ್ತದೆ.
- ಬಜೆ ಮತ್ತು ಬಡೇಸೋಪು ದ್ರವ್ಯಕ್ಕೆ ಸ್ನಿಗ್ಧ ವಸ್ತುವನ್ನು ಬೆರೆಸಿ ಒಣ ಮೂಲವ್ಯಾಧಿಗೆ ಶಾಖಕೊಡುವುದರಿಂದ ಮೂಲವ್ಯಾಧಿಯು ನಿವಾರಣೆಯಾಗುತ್ತದೆ.
- ಬಡೇಸೋಪು, ಸೈಂಧವ ಲವಣ ಮತ್ತು ತುಪ್ಪವನ್ನು ಬೆರೆಸಿ ಲೇಪ ಮಾಡಿ, ಲೇಪವನ್ನು ಹಚ್ಚುವುದರಿಂದ ಜೇನುನೊಣದ ವಿಷವು ನಿವಾರಣೆ.
- ಬಡೇಸೋಪಿನ ಸೇವನೆಯಿಂದ ಹೆಂಗಸರ ಜನನೇಂದ್ರೀಯಗಳಿಗೆ ಸಂಬಂಧಿತ ರೋಗವು ನಿವಾರಣೆಯಾಗುತ್ತದೆ.
- ಬಡೇಸೋಪನ್ನು ಒಣದ್ರಾಕ್ಷಿಯೊಡನೆ ಅಗಿದು ತಿಂದರೆ ಬಾಯಿಹುಣ್ಣು ನಿವಾರಣೆಯಾಗುತ್ತದೆ.
- ಹೊಟ್ಟೆನೋವಿನಿಂದ ಕೂಡಿದ ಮುಟ್ಟಾಗುವ ಮಹಿಳೆಯರು, ಮುಟ್ಟಿಗೆ ಒಂದು ವಾರ ಮೊದಲು ಬಡೇಸೋಪನ್ನು ಬಾಳೆಹಣ್ಣು ತುಂಡಿನ ಜೊತೆಗೆ ದಿನ ಬೆಳಗ್ಗೆ ಸೇವಿಸುವುದರಿಂದ ಮುಟ್ಟಿನ ಸಮಯದ ಹೊಟ್ಟೆನೋವು ನಿವಾರಣೆಯಾಗುತ್ತದೆ.

- ಬಡೇಸೋಪಿನ ಕಷಾಯಕ್ಕೆ ಜೇನು ಬೆರೆಸಿ ಅರ್ಧಗಂಟೆಗೊಮ್ಮೆ ಸೇವಿಸುವುದರಿಂದ ಉಬ್ಬಸರೋಗವು ನಿವಾರಣೆಯಾಗುತ್ತದೆ.
- ಬಾಣಂತಿಯರು ಬಡೇಸೋಪನ್ನು ವೀಳ್ಯದೆಲೆಯಲ್ಲಿ ಸ್ವಲ್ಪ ಸೇವಿಸುವುದರಿಂದ ಮೊಲೆ ಹಾಲು ವೃದ್ಧಿಯಾಗುತ್ತದೆ.
- ಬಡೇಸೋಪಿನ ಪುಡಿಯನ್ನು ಬಿಸಿ ನೀರಿನೊಡನೆ ಸೇವಿಸುವುದರಿಂದ ಅರುಚಿರೋಗವು ನಿವಾರಣೆಯಾಗುತ್ತದೆ.
- ಬಡೇಸೋಪಿನ ಕಷಾಯಕ್ಕೆ ಹಾಲುಸಕ್ಕರೆ ಬೆರೆಸಿ ಸೇವಿಸುವುದರಿಂದ ಚಿಕ್ಕಮಕ್ಕಳಲ್ಲಿ ಅಜೀರ್ಣದಿಂದ ಉಂಟಾದ ಹೊಟ್ಟೆನೋವು ನಿವಾರಣೆಯಾಗುತ್ತದೆ.
- ಬಡೇಸೋಪು ಮತ್ತು ಹಿಪ್ಪಲಿ ಪುಡಿಯನ್ನು ಬೆರೆಸಿ ಜೇನುತುಪ್ಪದೊಂದಿಗೆ ಸೇವಿಸುವುದರಿಂದ ಜ್ವರವು ನಿವಾರಣೆಯಾಗುತ್ತದೆ.
- ಬಡೇಸೋಪಿನ ಕಷಾಯದಿಂದ ಕಣ್ಣಿನ ಮೇಲ್ಭಾಗಕ್ಕೆ ಶಾಖ ಕೊಡುವುದರಿಂದ ಕಣ್ಣುನೋವು ನಿವಾರಣೆಯಾಗುತ್ತದೆ.
- ಬಡೇಸೋಪಿನ ಕಷಾಯ ಸೇವನೆಯಿಂದ ಉರಿಮೂತ್ರ ನಿವಾರಣೆಯಾಗುತ್ತದೆ.

ವ್ಯಸನವು ರೋಗವನ್ನು ವೃದ್ಧಿ
ಮಾಡುವುದರಲ್ಲಿ ಶ್ರೇಷ್ಠ

ಬುದ್ಧಿವರ್ಧಕ ಬ್ರಾಹ್ಮೀ

Herpestis monnieria, Linn.
Scropulariaceae

ರಸಾಯನ ಗುಣದ ಬ್ರಾಹ್ಮಿಯ ಆಯುರ್ವೇದದಲ್ಲಿ ಮುಖ್ಯವಾದ ಬುದ್ಧಿವರ್ಧಕ ದ್ರವ್ಯ. ಈ ವನಸ್ಪತಿಯು ಹೆಚ್ಚಾಗಿ ತಂಪು ಪ್ರದೇಶದಲ್ಲಿ ಬೆಳೆಯುತ್ತದೆ. ನಾನಾ ಪ್ರದೇಶದಲ್ಲಿ ಯಥೇಚ್ಛವಾಗಿ ಬೆಳೆಯುವ ಬ್ರಾಹ್ಮೀಯ ಗುಣದ ಬಗ್ಗೆ ಯಾರಿಗೂ ಸರಿಯಾಗಿ ಇನ್ನೂ ತಿಳಿದಿಲ್ಲ. ಬುದ್ಧಿವರ್ಧಿಸುವ ಗುಣ ಹೊಂದಿರುವುದರಿಂದಲೇ ಈ ವನಸ್ಪತಿಗೆ ಸರಸ್ವತಿಯ ಹೆಸರಾಗಿರುವ 'ಬ್ರಾಹ್ಮೀ' ಎಂಬ ಹೆಸರು ಬಂದಿರುತ್ತದೆ. ಸ್ಮರಣಶಕ್ತಿನಾಶ, ಚಂಚಲ ಮನಸ್ಸು, ಮೆದುಳಿನ ವಿಕಾರತೆ ಮುಂತಾದ ತೊಂದರೆಯನ್ನು ಬ್ರಾಹ್ಮೀ ವನಸ್ಪತಿಯಿಂದ ನಿವಾರಿಸಲು ಸಾಧ್ಯ. ಈ ವನಸ್ಪತಿಯ ರಸ ಸೇವನೆಯಿಂದ ಆಯುಷ್ಯ ಹೆಚ್ಚುತ್ತದೆ. ರೋಗ ನಾಶವಾಗುತ್ತದೆ, ದೇಹದ ಬಲ ವೃದ್ಧಿಯಾಗುತ್ತದೆ, ಶರೀರದ ಸೌಂದರ್ಯ, ಕಾಂತಿ ಹೆಚ್ಚುತ್ತದೆ.

ಬಹು ಭಾಷಾ ಹೆಸರುಗಳು

ಕನ್ನಡ : ಬ್ರಾಹ್ಮೀ, ನೀರ್‌ಬ್ರಾಹ್ಮೀ

ಸಂಸ್ಕೃತ : ಬ್ರಾಹ್ಮೀ

ತುಳು : ನೀರ್‌ಬ್ರಾಹ್ಮೀ

ಹಿಂದಿ : ಜಲನಿಮ

ಇಂಗ್ಲೀಷ್ : ಇಂಡಿಯನ್ ಪೆನ್ನಿವರ್ಟ್

ಪರ್ಯಾಯ ಪದಗಳು

ಬ್ರಾಹ್ಮೀ, ಸೋಮವಲ್ಲೀ, ಇಂದ್ರಿ, ಸರಸ್ವತಿ, ಮಹೌಷಧೀ, ಸ್ವಯಂಭುವಿ, ಮಂಡೂಕಮಾಲಾ, ಮೇದ್ಯಾ, ಸತ್ಯವತೀ, ಸ್ಮರಣೀ.

ಬುದ್ಧಿ ವೃದ್ಧಿಸುವ ಶಕ್ತಿ ಹೊಂದಿರುವುದರಿಂದ ಮೇದ್ಯಾ ಎಂಬ ಹೆಸರಿನಿಂದ ಕರೆಯಲ್ಪಡುತ್ತದೆ.

ದ್ರವ್ಯದ ವರ್ಣನೆ

ಬ್ರಾಹ್ಮೀಯು ಒಂದು ಬಳ್ಳಿ, ಇದು ಭೂಮಿಯಲ್ಲಿ ಪಸರಿಸುತ್ತ ಬೆಳೆಯುತ್ತದೆ. ಚಿಕ್ಕದಾಗಿರುವ ಎಲೆಗಳು 6x2.5 ಮಿ.ಮೀಟರ್‌ನಷ್ಟು ಗಾತ್ರದಿಂದ ಕೂಡಿದೆ. ಒಂದು ಗೊಂಚಲಿನಲ್ಲಿ 5–7 ಎಲೆಗಳಿರುತ್ತದೆ. ಬ್ರಾಹ್ಮೀಯ ಎಲೆಯು ಮೃದುವಾಗಿ, ದಪ್ಪವಾಗಿದೆ. ಹೂವು ಕೆನ್ನೀಲಿ ಮಿಶ್ರಿತ ಬಿಳಿ ಬಣ್ಣದಿಂದ ಕೂಡಿದೆ. ಇದು ಹೂವು ಮತ್ತು ಹಣ್ಣನ್ನು ಸಾಮಾನ್ಯವಾಗಿ ಇಡೀ ವರ್ಷ ಹೆಚ್ಚಾಗಿ ಫೆಬ್ರವರಿ ಎಪ್ರಿಲ್ ತಿಂಗಳಿನಲ್ಲಿ ಬಿಡುತ್ತದೆ. ಈ ವನಸ್ಪತಿಯೂ ನೀರಿರುವ ಪ್ರದೇಶದಲ್ಲಿ, ಕೆರೆಯ ಬದಿಗಳಲ್ಲಿ ವಿಶೇಷವಾಗಿ ಬೆಳೆಯುತ್ತದೆ. ಉತ್ತರಪ್ರದೇಶದಲ್ಲಿ ಎಲ್ಲಿ ನೋಡಿದರು ಬ್ರಾಹ್ಮೀಯೇ ಕಾಣಿಸುತ್ತದೆ. ಹಿಮಾಲಯದಲ್ಲಿ ಬೆಳೆಯುವ ಬ್ರಾಹ್ಮೀ ಇತರ ಪ್ರದೇಶದಲ್ಲಿ ಬೆಳೆಯುವ ಬ್ರಾಹ್ಮೀಗಿಂತ ಹೆಚ್ಚು ಶಕ್ತಿಯುಳ್ಳದ್ದಾಗಿದೆ ಎಂಬ ಉಲ್ಲೇಖವು ಇದೆ.

ವಿಧಗಳು

ಬ್ರಾಹ್ಮೀಯಲ್ಲಿ ಎರಡು ವಿಧಗಳಿವೆ. ಅವು

- ಬ್ರಾಹ್ಮೀ
- ಮಂಡೂಕ ಬ್ರಾಹ್ಮೀ

ಉಪಯುಕ್ತ ಅಂಗಗಳು

- ಸರ್ವಾಂಗ

ದ್ರವ್ಯದ ಗುಣಧರ್ಮಗಳು

ರಸ : ತಿಕ್ತ, ಕಷಾಯ

ಗುಣ : ಲಘು

ವೀರ್ಯ : ಶೀತ

ವಿಪಾಕ : ಮಧುರ

ಕರ್ಮ : ಕಫಪಿತ್ತಹರ, ಮೇಧ್ಯ, ರಸಾಯನ.

ಬ್ರಾಹ್ಮೀ ಹಿಮಾ ಸರಾ ತಿಕ್ತಾ ಲಘುರ್ಮೇಧ್ಯಾ ಚ ಶೀತಲಾ।
ಕಷಾಯಾ ಮಧುರಾ ಸ್ವಾದುಪಾಕಾಯುಷ್ಯಾ ರಸಾಯನೀ॥
ಸ್ವರ್ಯಾ ಸ್ಮೃತಿಪ್ರದಾಕುಷ್ಠ ಪಾಂಡುಮೇಹಾಸ್ರಕಾಸಜಿತ್।
ವಿಷಶೋಥಜ್ವರಹರೀ॥ *(ಭಾವಪ್ರಕಾಶ)*

ಎಂದರೆ ಬ್ರಾಹ್ಮೀಯ ತಿಕ್ತ ಮತ್ತು ಕಷಾಯ ರಸದಿಂದ ಕೂಡಿದೆ. ಲಘು ಗುಣದಿಂದ ಕೂಡಿದೆ, ಶೀತವೀರ್ಯದಿಂದ ಕೂಡಿದೆ, ಮಧುರ ವಿಪಾಕದಿಂದ ಕೂಡಿದೆ. ಇದು ರಸಾಯನವಾಗಿದೆ. ಇದು ಸ್ವರ, ಬುದ್ಧಿಯನ್ನು ವೃದ್ಧಿಸುತ್ತದೆ. ಕುಷ್ಠ, ಪಾಂಡು, ಕೆಮ್ಮು, ರಕ್ತಪಿತ್ತ, ನೆಗಡಿ, ವಿಷಬಾಧೆ, ಊತ, ಜ್ವರವನ್ನು ನಾಶಮಾಡುತ್ತದೆ.

ಔಷಧಿ ಪ್ರಮಾಣ

ಸ್ವರಸ : 10–20 ಮಿ.ಲೀ.

ಮೂಲ ಚೂರ್ಣ : 3–12 ಗ್ರೈನ್ಸ್

ಪಂಚಾಂಗ ಚೂರ್ಣ : 20–50 ಗ್ರೇನ್ಸ್

ಔಷಧಿ ಯೋಗಗಳು

- ಬ್ರಾಹ್ಮೀ ರಸಾಯನ
- ಬ್ರಾಹ್ಮೀ ಘೃತ

ಔಷಧೀಯ ಉಪಯೋಗಗಳು

- ಬ್ರಾಹ್ಮೀ ಕೂಷ್ಮಾಂಡ, ಬಜೆ ಮತ್ತು ಶಂಖಪುಷ್ಪಿಯ ರಸವನ್ನು ಕುಷ್ಠದ್ರವ್ಯದೊಂದಿಗೆ ಬೆರೆಸಿ ಸೇವಿಸುವುದರಿಂದ ಉನ್ಮಾಧ (ಬುದ್ಧಿ ಭ್ರಂಶ) ರೋಗವು ನಿವಾರಣೆಯಾಗುತ್ತದೆ..
- ಬ್ರಾಹ್ಮೀಯ ರಸ ಸೇವನೆಯಿಂದ ಅಪಸ್ಮಾರ (ಮೂರ್ಛೆರೋಗ) ನಿವಾರಣೆ.
- ಬ್ರಾಹ್ಮೀಯ ರಸವನ್ನು ಜೇನಿನೊಂದಿಗೆ ಸೇವಿಸುವುದರಿಂದ ಸಿಡುಬು (Pox) ರೋಗದಿಂದ ಗುಣ ಹೊಂದಬಹುದು.

- ಮಕ್ಕಳ ಕೆಮ್ಮು ಮತ್ತು ನೆಗಡಿಗೆ, ಒಂದು ಚಮಚ ಬ್ರಾಹ್ಮೀಯ ರಸವನ್ನು ನೀಡಿದರೆ, ವಾಂತಿಯು ಉಂಟಾಗಿ ಕೆಮ್ಮು, ನೆಗಡಿ ರೋಗವು ನಿವಾರಣೆಯಾಗುತ್ತದೆ.
- ಬ್ರಾಹ್ಮೀಯ ಎಲೆ, ಬಜೆ, ಹಿಪ್ಪಲಿ, ಅಣಿಲೆಕಾಯಿ ಮತ್ತು ಆಡುಸೋಗೆಗಳಿಂದ ತಯಾರಿಸಿದ ಮಾತ್ರೆಯನ್ನು ಬಾಯಲ್ಲಿ ಹಾಕಿ ಜಗಿಯುವುದರಿಂದ ಸ್ವರಭಂಗಕ್ಕೆ ಒಳ್ಳೆಯದು.
- ಬ್ರಾಹ್ಮೀಯ ಸ್ವರಸವನ್ನು ಊತ ಇರುವ ಜಾಗಕ್ಕೆ ಹಚ್ಚುವುದರಿಂದ ಊತವು ನಿವಾರಣೆ.
- ಬ್ರಾಹ್ಮೀ ಎಲೆಯ ಎರಡು ಚಮಚದಷ್ಟು ಪುಡಿಯನ್ನು ಎರಡು ಗಂಟೆಗೊಮ್ಮೆ ಸೇವಿಸಿದರೆ ಕ್ಷಯರೋಗಕ್ಕೆ ಒಳ್ಳೆಯದು.
- ಬ್ರಾಹ್ಮೀ ಎಲೆಯ ರಸಕ್ಕೆ ತೆಂಗಿನೆಣ್ಣೆ ಸೇರಿಸಿ, ತಲೆಗೆ ಹಚ್ಚುವುದರಿಂದ ತಲೆಕೂದಲು ಬೆಳವಣಿಗೆ ಮತ್ತು ತಲೆ ಕೂದಲಿಗೆ ಪೋಷಣೆ ದೊರೆಯುತ್ತದೆ.
- ಬ್ರಾಹ್ಮೀಯ ರಸವನ್ನು ಜೇನುತುಪ್ಪದೊಂದಿಗೆ ಸೇವಿಸುವುದರಿಂದ ಕಾಮಾಲೆ ರೋಗವು ಕಡಿಮೆಯಾಗುತ್ತದೆ.
- ಮಕ್ಕಳಲ್ಲಿ ಅತಿಸಾರ, ಆಮಶಂಕೆ, ಭೇದಿ ಕಂಡಲ್ಲಿ ಬ್ರಾಹ್ಮೀಯ 3–4 ಎಲೆಗಳನ್ನು ಜೀರಿಗೆ ಹಾಗೂ ಸಕ್ಕರೆಯೊಂದಿಗೆ ಜಜ್ಜಿ, ತಿನ್ನಿಸಿ ಎಲೆಯ ಕಲ್ಕವನ್ನು (ಲೇಪ) ಹೊಕ್ಕಳ ಸುತ್ತ ಲೇಪಿಸಬೇಕು.
- ಕಣ್ಣುರಿ, ನಿದ್ರೆ ಬಾರದಿರುವಿಕೆ, ಅಂಗೈ – ಅಂಗಾಲು ಉರಿ, ಕೂದಲು ಉದುರುವಿಕೆ ಮತ್ತು ಬೇಗನೆ ಬಿಳಿಯಾಗುವುದು ಮೊದಲಾದ ತೊಂದರೆಗಳನ್ನು ನಿವಾರಿಸಬಲ್ಲ ಬ್ರಾಹ್ಮೀಯುಕ್ತ ಹೇರ್ ಆಯಿಲ್ ಅಧಿಕ ಖ್ಯಾತಿ ಪಡೆದಿದೆ.
- ಬ್ರಾಹ್ಮೀಯ ರಸ ಸೇವನೆಯಿಂದ ಹೃದಯದ ತೊಂದರೆ, ಬಾವು, ನೋವು, ರಕ್ತಪಿತ್ತ, ರೋಗಗಳು ನಿವಾರಣೆಯಾಗುತ್ತದೆ.
- ಬ್ರಾಹ್ಮೀಯ ರಸ ಸೇವನೆಯಿಂದ ಆನೆಕಾಲು ರೋಗವು ಕಡಿಮೆಯಾಗಬಹುದು.
- ಬ್ರಾಹ್ಮೀಯ ಎಲೆಗಳ ಚೂರ್ಣವನ್ನು ಉಪ್ಪು ಬೆಣ್ಣೆಯೊಂದಿಗೆ ಬೆರೆಸಿ ಗಾಯಗಳ ಮೇಲೆ ಲೇಪಿಸುವುದರಿಂದ ಗಾಯಗಳು ಬೇಗ ನಿವಾರಣೆಯಾಗುತ್ತದೆ.
- ಬ್ರಾಹ್ಮೀಯ ನಾಲ್ಕು ಚಮಚ ರಸಕ್ಕೆ 100 ಮಿ.ಲೀ ಹಾಲು ಸೇರಿಸಿ ದಿನಕ್ಕೆ ಎರಡು ಹೊತ್ತು ಸೇವನೆ ಮಾಡುವುದರಿಂದ ಬಿಳಿಸೆರಗು ರೋಗವು ನಿವಾರಣೆಯಾಗುವುದರ ಜೊತೆಗೆ ಶರೀರಕ್ಕೆ ಬಲ, ಕಾಂತಿಯೂ ಲಭಿಸುತ್ತದೆ.

ಎಚ್ಚರಿಕೆ

- ಬ್ರಾಹ್ಮೀಯ ಎಲೆಗಳನ್ನು ಬಿಸಿಲಿನಲ್ಲಿ ಒಣಗಿಸಿದರೆ ಅದರಲ್ಲಿರುವ ಸತ್ವವು ನಾಶವಾಗುತ್ತದೆ. ಆದಕ್ಕಾಗಿ ನೆರಳಿನಲ್ಲಿ ಒಣಗಿಸಿ ಚೂರ್ಣ ಮಾಡಿಟ್ಟುಕೊಳ್ಳಬೇಕು.


ಶೈಲೂಷ್ ಖ್ಯಾತಿಯ ಬಿಲ್ವಪತ್ರ ಮರ

Aegel marmelos, Linn.

Rutaceae







ಭಾರತವು ಸಂಸ್ಕೃತಿ, ಕಲೆ, ಸಾಹಿತ್ಯ ಮುಂತಾದ ಕ್ಷೇತ್ರಗಳಲ್ಲಿ ಪ್ರಪಂಚದಲ್ಲಿ ಹೆಸರುವಾಸಿಯಾದ ದೇಶ. ಅಂತಹ ಭಾರತ ಮಾತೆಯ ಮಡಿಲಲ್ಲಿ ಜನಿಸಿದ ಭಾರತೀಯರು ಅನೇಕ ತರಹದ ಧಾರ್ಮಿಕ ಕಾರ್ಯಗಳನ್ನು ಮಾಡುತ್ತಾರೆ. ಈ ಧಾರ್ಮಿಕ ಕಾರ್ಯಗಳಿಗೆ ಅನೇಕ ತರಹದ ವನಸ್ಪತಿಗಳನ್ನು ಉಪಯೋಗಿಸುತ್ತಾರೆ. ಅಂತಹ ವನಸ್ಪತಿಗಳಲ್ಲಿ ಬಿಲ್ವವು ಒಂದು ಶ್ರೇಷ್ಠ ಸ್ಥಾನದಲ್ಲಿದೆ. ಬಿಲ್ವಪತ್ರೆಯನ್ನು ಯಜ್ಞ, ಹೋಮ ಮುಂತಾದ ಧಾರ್ಮಿಕ ಕೆಲಸಕ್ಕೆ ಉಪಯೋಗಿಸುವುದರಿಂದ ಪುಣ್ಯ, ದೇವರ ಪ್ರೀತಿಯೊಂದಿಗೆ, ಔಷಧಿ ಗುಣಗಳಿಂದ ರೋಗರುಜಿನ ದೂರವಾಗುತ್ತದೆ ಎಂಬ ತಿಳುವಳಿಕೆಯು ವೇದಕಾಲದಿಂದಲೂ ಇದೆ. ಶಿವನ ಪೂಜೆಗೆ ಬಿಲ್ವಪತ್ರೆಯು ಒಂದು ಶ್ರೇಷ್ಠ ದ್ರವ್ಯ. ಬಿಲ್ವಪತ್ರೆಯಿಂದ ಶಿವನನ್ನು ಪೂಜಿಸಿದರೆ ಶಿವನು ಒಲಿಯುವನೆಂಬ ನಂಬಿಕೆಯಿಂದ. ಆ ನಿಟ್ಟಿನಿಂದಲೇ ಬಿಲ್ವಪತ್ರೆಯನ್ನು ಸಂಸ್ಕೃತದಲ್ಲಿ ಶೈವಪತ್ರ, ಶಿವದ್ರುಮ ಎಂದು ಕರೆಯುತ್ತಾರೆ. ಬಿಲ್ವ ಮಣಿ ಧರಿಸುವುದರಿಂದ ಕೆಟ್ಟ ಕನಸುಗಳ ಪರಿಣಾಮ, ವಿಷದ ಪರಿಣಾಮದಿಂದ ದೇಹವನ್ನು ರಕ್ಷಿಸಬಹುದೆಂಬ ವ್ಯಾಖ್ಯಾನವು ಇದೆ.

ಬಹು ಭಾಷಾ ಹೆಸರುಗಳು

ಕನ್ನಡ : ಬಿಲ್ವಪತ್ರೆ

ಸಂಸ್ಕೃತ : ಬಿಲ್ವ

ತುಳು : ಬಿಲ್ಲಫತ್ರೆ

ಹಿಂದಿ : ಬೆಲ್

ಇಂಗ್ಲೀಷ್ : ಬೇಲ್‌ಟ್ರೀ

ಪರ್ಯಾಯ ಪದಗಳು

ಬಿಲ್ವ, ಶ್ರೀಫಲ, ಶಾಂಡಿಲ್ಯ, ಶೈಲೂಷ, ಮಾಲೂರ, ಗಂಧಗರ್ಭ, ಸದಾಫಲಾ, ಕಂಟಕೀ, ಗ್ರಂಥಿಲಾ, ಶಲ್ಯಾ, ಶಿವದ್ರುಮ, ಶೈವಪತ್ರಾ, ಕರ್ಕಟಾ. ಸುಂದರವಾದ ಫಲಗಳನ್ನು ಹೊಂದಿರುವುದರಿಂದಲೇ "ಶೈಲೂಷ" ಎಂದು ಈ ದ್ರವ್ಯವನ್ನು ಕರೆಯುತ್ತಾರೆ.

ದ್ರವ್ಯದ ವರ್ಣನೆ

ಬಿಲ್ವಪತ್ರೆಯು ಮಧ್ಯಮಗಾತ್ರ, ವಾರ್ಷಿಕ ಎಲೆ ಉದುರುವ ಮರ. ಸುಮಾರು 8 ರಿಂದ 10 ಮೀಟರ್‌ನಷ್ಟು ಎತ್ತರಕ್ಕೆ ಬೆಳೆಯುವ ಈ ಮರವು ಮುಳ್ಳುಗಳಿಂದ ಕೂಡಿದೆ. ಪತ್ರವು ಮೂರು ಎಲೆಗಳಿಂದ ಕೂಡಿ ದೊಡ್ಡದಾಗಿ ಸುವಾಸನೆಯಿಂದ ಕೂಡಿದೆ ಬಿಳಿಬಣ್ಣದ ಹೂವಿನಲ್ಲಿ 4 ರಿಂದ 5 ಹೂವಿನ ಎಸಳುಗಳಿವೆ. ವೃತ್ತಾಕಾರದ ಕಾಯಿಯು ದೊಡ್ಡದಾಗಿ ಬೂದು ಬಣ್ಣದಿಂದ ಕೂಡಿದೆ. ಹಣ್ಣಾದಾಗ ಕಾಯಿಯು ಹಳದಿ ಬಣ್ಣಕ್ಕೆ ಬರುತ್ತದೆ. ಹಣ್ಣಿನಲ್ಲಿ ಅನೇಕ ಬೀಜಗಳಿದ್ದು ಚಿಕ್ಕದಾಗಿರುತ್ತದೆ. ಕಾಂಡ ಮತ್ತು ರೆಂಬೆಗಳಲ್ಲಿ ಉದ್ದವಾದ ಮುಳ್ಳುಗಳಿರುತ್ತವೆ. ಈ ಮರವು ಹೂವನ್ನು ಮೇ ತಿಂಗಳಿನಲ್ಲಿ ಬಿಡುತ್ತದೆ. ಸಾಮಾನ್ಯವಾಗಿ ಎಲ್ಲ ಪ್ರದೇಶದಲ್ಲಿ ಬೆಳೆಯುವ ಈ ಮರವು ದೇವಸ್ಥಾನಗಳಲ್ಲಿ ಬಂಗಾಳ ಬಿಹಾರ ಮುಂತಾದ ರಾಜ್ಯಗಳಲ್ಲಿ ಹೆಚ್ಚಾಗಿ ಬೆಳೆಯುತ್ತದೆ.

ವಿಧಗಳು

ಬಿಲ್ವ ಪತ್ರೆಯಲ್ಲಿ ಎರಡು ಪ್ರಭೇದಗಳನ್ನು ಗುರುತಿಸಬಹುದು. ಅವು

- ಬಿಲ್ವ
- ವನ್ಯ ಬಿಲ್ವ

ಉಪಯುಕ್ತ ಅಂಗ

- ಹಣ್ಣು
- ಎಲೆ

- ಬೇರು
- ತೊಗಟೆ

ದ್ರವ್ಯದ ಗುಣಧರ್ಮಗಳು

ರಸ : ಕಷಾಯ, ತಿಕ್ತ

ಗುಣ : ಲಘು, ರೂಕ್ಷ

ವೀರ್ಯ : ಉಷ್ಣ

ವಿಪಾಕ : ಕಟು

ಕರ್ಮ : ವಾತಕಫಹರ, ಗ್ರಾಹೀ, ದೀಪನ, ಪಾಚನ, ಬಲ್ಯ

ಶ್ರೀಫಲಃ ತುವರಃ ತಿಕ್ತೋಗ್ರಾಹೀ ರೂಕ್ಷೋಽಗ್ನಿಪಿತ್ತಕೃತ್ ।
ವಾತಶ್ಲೇಷ್ಮಹರೋ ಬಲ್ಯೋ ಲಘುರುಷ್ಣಶ್ಚ ಪಾಚನಃ ॥ *(ಭಾವಪ್ರಕಾಶ)*

ಎಂದರೆ ಬಿಲ್ವವು ಕಷಾಯ ಮತ್ತು ತಿಕ್ತ ರಸಗಳಿಂದ ಕೂಡಿದೆ. ರೂಕ್ಷ ಗುಣದಿಂದ ಕೂಡಿದೆ. ಅಗ್ನಿ ಮತ್ತು ಪಿತ್ತವನ್ನು ವೃದ್ಧಿಸುತ್ತದೆ. ವಾತ ಮತ್ತು ಕಫನಾಶಕವಾಗಿದೆ. ಬಲವನ್ನು ಉಂಟು ಮಾಡುತ್ತದೆ. ಪಚನ ಕ್ರಿಯೆಯನ್ನು ಮಾಡುತ್ತದೆ.

ಔಷಧಿ ಪ್ರಮಾಣ

ಕಷಾಯ : 50–100 ಮಿ.ಲೀ

ಚೂರ್ಣ : 3–5ಗ್ರಾಂ

ಎಲೆಯ ಸ್ವರಸ : 10–20 ಮಿ.ಲೀ

ಔಷಧೀಯ ಯೋಗಗಳು

- ಬಿಲ್ವ ತೈಲ
- ಬಿಲ್ವ ರಸಾಯನ
- ಅಸನ ಬಿಲ್ವಾದಿ ತೈಲ
- ಬಿಲ್ವಾವಲೇಹ
- ದಶಮೂಲಾರಿಷ್ಟ

ಔಷಧೀಯ ಉಪಯೋಗಗಳು


- ಬಿಲ್ವದ ಎಲೆಯ ರಸಕ್ಕೆ ತ್ರಿಕಟು (ಶುಂಠಿ, ಒಳ್ಳೆಮೆಣಸು, ಹಿಪ್ಪಲಿ)ಯನ್ನು ಬೆರೆಸಿ ಸೇವಿಸುವುದರಿಂದ ಕಾಮಾಲೆ ರೋಗವು ಕಡಿಮೆಯಾಗುತ್ತದೆ.

- ಬಿಲ್ವ ಮತ್ತು ಮಧುಕ (ಹಿಪ್ಪೇ) ಹಣ್ಣಿನ ತಿರುಳಿಗೆ ಸಕ್ಕರೆ ಮತ್ತು ಜೇನುತುಪ್ಪವನ್ನು ಸೇರಿಸಿ ಅಕ್ಕಿ ತೊಳೆದ ನೀರಿನಲ್ಲಿ ಸೇವಿಸುವುದರಿಂದ ಪಿತ್ತಾತಿಸಾರಕ್ಕೆ ಒಳ್ಳೆಯದು.
- ಬಿಲ್ವ ಪತ್ರೆಯ ರಸವನ್ನು ದಿನಾಲೂ ಮೂರು ಬಾರಿ ಹೊಟ್ಟೆಗೆ ಹಾಲಿನೊಡನೆ ಸೇವಿಸುವದರಿಂದ ಮೂತ್ರಾಂಗ ರೋಗ, ಹೆಂಗಸರ ಮುಟ್ಟಿನ ನೋವಿಗೆ ಒಳ್ಳೆಯದು.
- ಬಿಲ್ವದ ಬೇರಿಗೆ ನಿಂಬೆ ರಸ ಸೇರಿಸಿ. ತೇಯ್ದು ಕುರುಗಳಿಗೆ ಹಚ್ಚಿದರೆ ಕುರುಗಳು ಬೇಗ ಹಣ್ಣಾಗಿ ಒಡೆಯುವುವು.
- ಬಿಲ್ವದ ಎಲೆಯ ರಸಕ್ಕೆ ಒಳ್ಳೆ ಮೆಣಸಿನ ಪುಡಿ ಸ್ವಲ್ಪ ಸೇರಿಸಿ ಕುಡಿಯುವುದರಿಂದ ಮಲಬದ್ಧತೆ, ಮೂಲವ್ಯಾಧಿ, ಕಮಾಲೆರೋಗಕ್ಕೆ ಒಳ್ಳೆಯದು.
- ಬೃಹತ್‌ಪಂಚಮೂಲ (ಬಿಲ್ವ, ಅಗ್ನಿಮಂಥ, ಆನೆಮುಂಗು, ಶಿವನಿ, ಪದರಿ) ಗಳ ಕಷಾಯವನ್ನು ಜೇನಿನೊಂದಿಗೆ ಸೇವಿಸುವುದರಿಂದ ಬೊಜ್ಜು ಕಡಿಮೆಯಾಗುತ್ತದೆ.
- ಬಿಲ್ವ ಎಲೆಯ ರಸವನ್ನು ದೇಹಕ್ಕೆ ಹಚ್ಚುವುದರಿಂದ ದೇಹದ ದುರ್ವಾಸನೆಯು ನಿವಾರಣೆ.
- ಬಿಲ್ವ ಫಲದ ತೊಗಟೆಯನ್ನು ಚೆನ್ನಾಗಿ ಒಣಗಿಸಿ ಪುಡಿ ಮಾಡಿ, ಮೂರು ಗ್ರಾಂನಷ್ಟು ದಿನಾಲು ಎರಡು ಸಲ ಬಿಸಿನೀರಿನಲ್ಲಿ ಸೇರಿಸಿ ಕುಡಿಯುವುದರಿಂದ ಭೇದಿರೋಗದಿಂದ ಬಳಲುತ್ತಿರುವವರಿಗೆ ಒಳ್ಳೆಯದು.
- ಬಿಲ್ವದ ಕಾಯಿಯ ಲೇಪಕ್ಕೆ ಸ್ವಲ್ಪ ಸಕ್ಕರೆ ಬೆರೆಸಿ, ಬಿಸಿ ಮಾಡಿ ಸೇವಿಸುವುದರಿಂದ ರಕ್ತ ಮೂಲವ್ಯಾಧಿಯೂ ಗುಣವಾಗುವುದು.
- ಕಫದ ಬಾಧೆಯಿಂದ ಬಂದ ಕೆಮ್ಮು, ದಮ್ಮು ಶ್ವಾಸಕಾಸದ ರೋಗಕ್ಕೆ ಬಿಲ್ವಪತ್ರೆಯ ಎಲೆಯನ್ನು ನುಣ್ಣಗೆ ನೀರಿನಲ್ಲಿ ಅರೆದು ಎದೆಯ ಭಾಗಕ್ಕೆ ಹಚ್ಚಬೇಕು.
- ಬಿಲ್ವ ಮರದ ಚೆಕ್ಕೆಯ ಪುಡಿಗೆ ಸ್ವಲ್ಪ ಸಕ್ಕರೆ ಸೇರಿಸಿ ಸೇವಿಸುವುದು. ನಂತರ ನೀರು ಕುಡಿಯುವುದರಿಂದ ವಾಂತಿಯು ಹತೋಟಿಗೆ ಬರುತ್ತದೆ.
- ಬಿಲ್ವಪತ್ರೆಯ ಎಲೆಯ ರಸವನ್ನು ದಿನಾಲೂ ಎರಡು ಬಾರಿ ಸೇವಿಸುವುದರಿಂದ ಮಧುಮೇಹ ನಿವಾರಣೆ.
- ಬಿಲ್ವ ಹಣ್ಣಿನ ತಿರುಳನ್ನು ಸ್ವಲ್ಪ ನೀರಿನಲ್ಲಿ ಬೆರೆಸಿ ಶೋಧಿಸಿ ಸ್ವಲ್ಪ ಹಾಲು, ಸಕ್ಕರೆ ಸೇರಿಸಿ ಕುಡಿಯುವುದರಿಂದ ಮೂತ್ರ ಬಂಧನಕ್ಕೆ ಒಳ್ಳೆಯದು.

ಆರೋಗ್ಯವಂತ ಕಣ್ಣುಗಳು
ಪ್ರಕೃತಿ ಸೌಂದರ್ಯವನ್ನು ಸವಿಯಲಿ

ಬದುಕಲು ಬೂರುಗದ ಮರ

Bombax malabaricum, Dc.
Bombocaceae





ಹಿಂದಿನ ಕಾಲದಲ್ಲಿ ಬೂರುಗದ ಮರವನ್ನು ಮದುವೆ ಸಂದರ್ಭದಲ್ಲಿ ರಥವನ್ನು ತಯಾರಿಸಲು ಉಪಯೋಗಿಸುತ್ತಿದ್ದರು. ಇದರ ಹಣ್ಣು ವಿಷ ಆದರೆ ಮರವು ಇತರ ಮರಗಳಿಗಿಂತ ಶ್ರೇಷ್ಠ. ಈ ಮರವು ನಮ್ಮ ಕಾವ್ಯ ಮತ್ತು ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿ ಬೆರೆತುಕೊಂಡಿದೆ. ಮರಗಳಲ್ಲಿ ಅತಿದೊಡ್ಡದು ಎಂಬ ವ್ಯಖ್ಯಾನವು ಇದೆ. ಜನವರಿ ತಿಂಗಳ ಕೊನೆಗೆ ಎಲೆಗಳೆಲ್ಲ ಉದುರಿ, ಫೆಬ್ರವರಿ ತಿಂಗಳಿನಲ್ಲಿ ಕೆಂಪು ಬಣ್ಣದ ಹೂವು ಮರದಲ್ಲಿ ಕಾಣಸಿಗುತ್ತದೆ. ಇದು ಜಾನಪದದಲ್ಲಿ 'ಅಂಗೈಯಲ್ಲಿ ಕಡುಗೆಂಪು ದೀಪಗಳನ್ನು ಹಿಡಿದಿದ್ದ ಲಕ್ಷ್ಮಿಯ ಭುಜಗಳಂತೆ ಕಾಣಿಸುತ್ತದೆ' ಎಂದು ವರ್ಣಿಸಲ್ಪಟ್ಟಿದೆ

ಬಹು ಭಾಷಾ ಹೆಸರುಗಳು

ಕನ್ನಡ : ಬೂರುಗದ ಮರ

ಸಂಸ್ಕೃತ : ಶಾಲ್ಮಲೀ

ತುಳು : ಆಲ್ಲೊ,ಕೆಂಪಾಲ

ಹಿಂದಿ : ಸೇಮಲ್

ಇಂಗ್ಲಿಷ್ : Silk Cotton tree (ಸಿಲ್ಕ್ ಕಾಟನ್ ಟ್ರೀ)

ಪರ್ಯಾಯ ಪದಗಳು

ಶಾಲ್ಮಲೀ, ಸ್ಥಿರಾಯು, ಕಂಟಕಾಢ್ಯಾ, ಪಿಚ್ಛಿಲ, ಪೂರಾನಿ, ಮೋಚ, ಮೋಚರಸ, ರಕ್ತಪುಷ್ಪ, ತೂಲಿನೀ ಚಿರಾಯು, ರೋಚನ, ಕುಂಕುಮ. ಬೂರುಗದ್ದ ಮರವು ಸಾವಿರ ವರ್ಷದವರೆಗೆ ಬದುಕುವುದರಿಂದ ಇದನ್ನು 'ಸ್ಥಿರಾಯು' ಎಂದು ಕರೆದಿರಬಹುದು. ಈ ದ್ರವ್ಯವು ಮುಳ್ಳುಗಳಿಂದ ಕೂಡಿರುವುದರಿಂದ ಇದನ್ನು 'ಕಂಟಕಾಢ್ಯಾ' ಎಂಬ ಹೆಸರಿನಿಂದ ಕರೆದಿರಬಹುದು.

ದ್ರವ್ಯದ ವರ್ಣನೆ

ಬೂರುಗವು ದೊಡ್ಡದಾಗಿ ಎತ್ತರವಾಗಿ ದಪ್ಪವಾದ ಮುಳ್ಳುಗಳಿಂದ ಕೂಡಿದ ಮರ. ಎಲೆಯು ಬೆರಳಿನ ಹಾಗೆ ಇದ್ದು ಸುಮಾರು 10 ರಿಂದ 15 ಸೆಂ.ಮೀಟರ್‌ನಷ್ಟು ಉದ್ದವಾಗಿದೆ. ನೆಲದಿಂದ ಸುಮಾರು 60–80ಅಡಿ ಎತ್ತರದವರೆಗೂ ಯಾವ ಶಾಲೆಯು ಇರದೆ, ಅಲ್ಲಿಂದ ಒಂದೊಂದು ಗಿಣ್ಣಿಗೂ ನಾಲ್ಕರಿಂದ ಐದು ರೆಂಬೆಗಳು ಹರಡಿಕೊಂಡಿರುತ್ತವೆ. ಕೆಂಪು ಬಣ್ಣದಿಂದ ಕೂಡಿದ ಹೂವಿನಲ್ಲಿ ದೊಡ್ಡದಾದ ಎಸಳುಗಳಿವೆ. ಹಣ್ಣು ಸುಮಾರು 13 ರಿಂದ 15 ಸೆಂ. ಮೀಟರ್‌ನಷ್ಟು ಉದ್ದವಾಗಿ ಬಾಳೆಹಣ್ಣಿಗೆ ಹೋಲುತ್ತದೆ. ಹಣ್ಣಿನ ಒಳಗಡೆ ಹತ್ತಿ ಮತ್ತು ಕಪ್ಪು ಬಣ್ಣದ ಬೀಜಗಳಿವೆ. ತೊಗಟೆಯಿಂದ ಒಂದು ತರಹದ ಅಂತು ಬರುತ್ತದೆ. ಇದನ್ನು 'ಮೋಚರಸ' ಎಂದು ಕರೆಯುತ್ತಾರೆ. ಈ ಮರವು ಹೂವನ್ನು ಡಿಸೆಂಬರ್ – ಜನವರಿ ತಿಂಗಳಿನಲ್ಲಿ ಮತ್ತು ಹಣ್ಣನ್ನು ಏಪ್ರಿಲ್–ಮೇ ತಿಂಗಳಲ್ಲಿ ಬಿಡುತ್ತದೆ. ಸಾಮಾನ್ಯವಾಗಿ ಭಾರತದ ಎಲ್ಲ ಪ್ರದೇಶದಲ್ಲಿ ಕಾಣಸಿಗುವ ಈ ಮರವು ರಸ್ತೆಯ ಬದಿಗಳಲ್ಲಿ, ಉದ್ಯಾನವನಗಳಲ್ಲಿ, ಬೆಚ್ಚನೆಯ ಪ್ರದೇಶದಲ್ಲಿ, ಕಾಡುಗಳಲ್ಲಿ ಹೆಚ್ಚಾಗಿ ಕಾಣುತ್ತದೆ.

ವಿಧಗಳು

ಶಾಲ್ಮಲೀಯಲ್ಲಿ ಎರಡು ವಿಧಗಳಿವೆ. ಅವು

1. ಶಾಲ್ಮಲೀ
2. ಕೂಟ ಶಾಲ್ಮಲೀ

ಸಸ್ಯಶಾಸ್ತ್ರದಲ್ಲಿ ಇದನ್ನು ಕ್ರಮವಾಗಿ Bombax malabaricum ಮತ್ತು Ceiba pentandra ಎಂಬುದಾಗಿ ಕರೆಯುತ್ತಾರೆ.

ಉಪಯುಕ್ತ ಅಂಗಗಳು

- ಹೂವು
- ನಿರ್ಯಾಸ
- ಹಣ್ಣು
- ತೊಗಟೆ
- ಮುಳ್ಳು

ದ್ರವ್ಯದ ಗುಣಧರ್ಮಗಳು

ರಸ : ಕಷಾಯ

ಗುಣ : ಲಘು, ಸ್ನಿಗ್ಧ

ವೀರ್ಯ : ಶೀತ

ವಿಪಾಕ : ಮಧುರ

ಕರ್ಮ : ಪಿತ್ತವಾತಹರ, ವೃಷ್ಯ, ಬಲ್ಯ, ಗ್ರಾಹೀ ರಸಾಯನ

"ಶಾಲ್ಮಲೀ ಶೀತಲಾ ಸ್ವಾದ್ವೀ ರಸೇ ಪಾಕೇ ರಸಾಯನೀ ।
ಶ್ಲೇಷ್ಮಲಾ ಬೃಂಹಣೀ ವೃಷ್ಯಾ ಸ್ನಿಗ್ಧಾ ಪಿತ್ತಾಸ್ರನಾಶನೀ ॥ (ಕೈಯ್ಯದೇವನಿಘಂಟು)

ಎಂದರೆ ಬೂರುಗವು ಶೀತ ಮತ್ತು ಸ್ನಿಗ್ಧ ಗುಣದಿಂದ ಕೂಡಿದೆ. ಶೀತ ವೀರ್ಯದಿಂದ ಕೂಡಿದೆ. ಮಧುರ ರಸ ಮತ್ತು ವಿಪಾಕದಿಂದ ಕೂಡಿದೆ. ರಸಾಯನವಾಗಿದೆ. ಕಫವನ್ನು ವೃದ್ಧಿಸುತ್ತದೆ. ದೇಹಕ್ಕೆ ಪುಷ್ಟಿ ನೀಡುತ್ತದೆ. ವೃಷ್ಯ, ಪಿತ್ತ ಮತ್ತು ರಕ್ತದ ರೋಗಗಳನ್ನು ನಿವಾರಿಸುತ್ತದೆ.

ಔಷಧಿ ಪ್ರಮಾಣ

ಬೇರಿನ ಚೂರ್ಣ	:	3–4 ಗ್ರಾಂ
ನಿರ್ಯಾಸ	:	1–3 ಗ್ರಾಂ
ಹೂವಿನ ಸ್ವರಸ	:	10–20 ಮಿ.ಲೀ
ತೊಗಟೆ ಚೂರ್ಣ	:	250–500 ಮಿ.ಗ್ರಾಂ
ಕಷಾಯ	:	50 ಮಿ.ಲೀ

ಔಷಧಿ ಯೋಗಗಳು

- ಶಾಲ್ಮಲೀ ಘೃತ

ಔಷಧಿ ಉಪಯೋಗಗಳು


- ಬೂರುಗದ ಮುಳ್ಳನ್ನು ಹಾಲಿನಲ್ಲಿ ಅರೆದು ಮೊಡವೆಗೆ ಹಚ್ಚುವುದರಿಂದ ಮೊಡವೆಯ ನಿವಾರಣೆಯಾಗುತ್ತದೆ.
- ಬೂರುಗದ ಹೂವಿನ ಪುಡಿಯನ್ನು ತುಪ್ಪ ಮತ್ತು ಸೈಂಧವ ಲವಣದಲ್ಲಿ ಬೆರೆಸಿ, ಕಾಯಿಸಿ ಸೇವಿಸುವುದರಿಂದ ಪ್ರದರ ರೋಗವು ನಿವಾರಣೆಯಾಗುತ್ತದೆ.
- ಬೂರುಗದ ತೊಗಟೆ ಮತ್ತು ಬಲಾದ ಬೇರಿನ ಲೇಪ ಮಾಡಿ ಗಾಯಕ್ಕೆ ಹಚ್ಚುವುದರಿಂದ ಗಾಯವು ನಿವಾರಣೆಯಾಗುತ್ತದೆ.
- ಮೂಗು ಬಾಯಿಯಲ್ಲಿ ಆಗುವ ರಕ್ತಸ್ರಾವದಿಂದ ಕೂಡಿದ ರಕ್ತಪಿತ್ತಕಾಯಿಲೆಗೆ ಬೂರುಗದ ಹೂವು ಪರಿಣಾಮಕಾರಿ.
- ಬೂರುಗದ ಕಾಯಿಯಿಂದ ತಯಾರಿಸಿದ ಕಷಾಯವನ್ನು ಸೇವಿಸುವುದರಿಂದ ಉರಿಮೂತ್ರ, ಮೂತ್ರ ವಿಸರ್ಜನೆಯ ಬಳಿಕನೋವು, ಮೂತ್ರ ಜನಕಾಂಗಕ್ಕೆ ಸಂಬಂಧಿಸಿದ ರೋಗಗಳು ನಿವಾರಣೆಯಾಗುತ್ತದೆ.
- ಬೂರುಗದ ಅಂಟು ಎಲ್ಲ ಆರ್ಯುವೇದಿಕ್ ಹಲ್ಲು ಪುಡಿಯ ಪ್ರಮುಖ ಘಟಕ. ಇದು ಬಾಯಿ ಹುಣ್ಣು, ದಂತರೋಗ, ಹೊಟ್ಟೆನೋವು, ಅತಿಸಾರ, ರಕ್ತಪ್ರದರ ಮುಂತಾದ ರೋಗಗಳನ್ನು ನಿವಾರಿಸುತ್ತದೆ.
- ಮೋಚ ರಸವನ್ನು ಹಾಲಿನಲ್ಲಿ ಕಾಯಿಸಿ, ಅದಕ್ಕೆ ತುಪ್ಪವನ್ನು ಸೇರಿಸಿ ಸೇವಿಸುವುದರಿಂದ ಅತಿಸಾರ ರೋಗವು ನಿವಾರಣೆ.
- ಬೂರುಗದ ಹೂವಿನ ಪುಡಿಯನ್ನು ಜೇನಿನಲ್ಲಿ ಸೇವಿಸುವುದರಿಂದ ಒಳರಕ್ತಸ್ರಾವಕ್ಕೆ ಒಳ್ಳೆಯದು.
- ಬೂರುಗದ ಬೇರನ್ನು ಹಾಲಿನೊಂದಿಗೆ ಸೇವಿಸುವುದರಿಂದ ಕಾಮೋತ್ತೇಜಕತೆ ಉಂಟಾಗುತ್ತದೆ.
- ಬೂರುಗದ ತೊಗಟೆಯ ಲೇಪವನ್ನು ಹಚ್ಚುವುದರಿಂದ ಕಾಲಿನ ಉರಿಯು ನಿವಾರಣೆಯಾಗುತ್ತದೆ.
- ಬೂರುಗದ ಹೂವಿನ ರಸವನ್ನು ಗಾಯಕ್ಕೆ ಹಚ್ಚುವುದರಿಂದ ಗಾಯವು ನಿವಾರಣೆ.
- ಬೂರುಗದ ತೊಗಟೆಯ ಲೇಪವನ್ನು ಊತಕ್ಕೆ ಹಚ್ಚುವುದರಿಂದ ಊತವು ನಿವಾರಣೆಯಾಗುವುದು.

ಪೋಲಿಯೋ ಹನಿ ಹಾಕಿಸಿ,
ಮಕ್ಕಳ ಅಂಗವಿಕಲತೆ ತಪ್ಪಿಸಿ.

ಬೆಳ್ಳ ಬೆಳ್ಳನೆಯ ಬೆಳ್ಳುಳ್ಳಿ

Allium sativum, Linn.
Liliaceae





ಬೃಹತ್‌ಸಂಹಿತೆಗಳಲ್ಲಿ ವಿವರಿಸಲ್ಪಟ್ಟ ಈ ದ್ರವ್ಯವು ಒಂದು ಉತ್ತಮ ವಾತ ನಿವಾರಕ ದ್ರವ್ಯ. ಸುಪ್ರಸಿದ್ಧ ಅಡುಗೆ ದ್ರವ್ಯವಾದ ಬೆಳ್ಳುಳ್ಳಿ ಎಲ್ಲರಿಗೂ ಪರಿಚಿತ ದ್ರವ್ಯ. ಬೆಳ್ಳುಳ್ಳಿಯಿಂದ ಸಾಂಬಾರಿಗೆ ಒಗ್ಗರಣೆ ಹಾಕಿದ ನಂತರ ಸಾಂಬಾರಿನ ರುಚಿ, ಸುವಾಸನೆ ಹೆಚ್ಚಾಗಿ ಮತ್ತೆ ಮತ್ತೆ ಊಟ ಮಾಡಬೇಕೆನಿಸುತ್ತದೆಯಲ್ಲವೇ! ಹೌದು ಖಂಡಿತ, ನಮ್ಮನ್ನು ಬಿಡಿ, ಅದರ ಸುವಾಸನೆಯು ಇಡೀ ವಠಾರವನ್ನು ತನ್ನಲ್ಲಿಗೆ ಎಳೆದುಕೊಳ್ಳುವ ಸಾಮರ್ಥ್ಯ ಹೊಂದಿದೆ. ಬೆಳ್ಳುಳ್ಳಿಯು ಔಷಧ ಗುಣಗಳನ್ನು ಹಿಂದಿನ ಕಾಲದಿಂದಲೂ ನಮ್ಮ ಅಜ್ಜಮ್ಮಂದಿರು ತಮ್ಮ ಮನೆ ಮದ್ದುಗಳಲ್ಲಿ ಉಪಯೋಗಿಸುತ್ತಿದ್ದರು. ಹಳ್ಳಿಗಳಲ್ಲಿ ಚಿಕ್ಕ ಮಕ್ಕಳಿಗೆ ಕ್ರಿಮಿ ಭಾದೆಯಾಗಬಾರದೆಂದು ಬೆಳ್ಳುಳ್ಳಿಯ ಮಾಲೆಗಳನ್ನು ತೊಡಿಸುತ್ತಿದ್ದರು. ಬೆಳ್ಳುಳ್ಳಿಯು ರೋಗ ನಿರೋಧಕವಾಗಿಯೂ, ರೋಗ ನಿವಾರಕವಾಗಿಯೂ ಕೆಲಸ ಮಾಡುತ್ತಿದೆ. ಬೆಳ್ಳುಳ್ಳಿಯನ್ನು ವಿಶೇಷವಾಗಿ ಬಳಸುವ ಭಾರತದಲ್ಲಿ ಕ್ಯಾನ್ಸರ್‌ರೋಗವು ಹೆಚ್ಚಾಗಿ ಆಕ್ರಮಿಸುವುದಿಲ್ಲ ಎಂದು ಪರಿಶೀಲನೆಯಿಂದ ತಿಳಿದು ಬಂದಿದೆ. ಭಾವಮಿಶ್ರನು ಬೆಳ್ಳುಳ್ಳಿಯ ಸೇವನೆಯ ನಂತರ ಮಧ್ಯಸಾರ, ಮೀನು, ಆಮ್ಲ ಆಹಾರ, ಬಿಸಿಲು ಸೇವನೆ ವ್ಯಾಯಾಮ, ಕೋಪಗೊಳ್ಳುವುದು ಹೆಚ್ಚು ನೀರು ಕುಡಿಯುವುದು, ಹಾಲು, ಬೆಲ್ಲ ಮುಂತಾದವುಗಳ ಸೇವನೆಯನ್ನು ಮಾಡಬಾರದಾಗಿ ತಿಳಿಸಿದ್ದಾನೆ.

ಬಹು ಭಾಷಾ ಹೆಸರುಗಳು

ಕನ್ನಡ : ಬೆಳ್ಳುಳ್ಳಿ

ಸಂಸ್ಕೃತ : ಲಶುನ

ತುಳು : ಬೊಳ್ಳುಳ್ಳಿ, ಸಂಬರದರಿ

ಹಿಂದಿ : ಲಹಸುನ್

ಇಂಗ್ಲೀಷ್ : ಗಾರ್ಲಿಕ್

ಪರ್ಯಾಯ ಪದಗಳು

ಲಶುನ, ರಸೋನ, ಉಗ್ರಗಂಧಾ, ಯುವನೇಷ್ಟ, ಮಹೌಷಧಾ, ಭೂತಘ್ನಾ, ದೀರ್ಘಪತ್ರಕಾ, ಕಟುಕಂದಾ, ಮಹಾಕಂದಾ, ರಸೋನಕ, ಶುಕ್ಲಕಂದಾ, ವಾತಾರೀ ರಸಾಯನವರಾ.

ಬಿಳುಪಾದ ಗೆಡ್ಡೆಗಳಿಂದ ಕೂಡಿರುವುದರಿಂದಲೇ 'ಬೆಳ್ಳುಳ್ಳಿ' ಎದು ಕರೆಯುತ್ತಾರೆ.

ದ್ರವ್ಯದ ವರ್ಣನೆ

ಬೆಳ್ಳುಳ್ಳಿಯು ಗಡ್ಡೆಯುಳ್ಳ ಒಂದು ಬಹುವಾರ್ಷಿಕ ಸಸ್ಯ. ಇದು ಸುಮಾರು 30–60 ಸೆಂ. ಮೀಟರ್‌ನಷ್ಟು ಎತ್ತರಕ್ಕೆ ಬೆಳೆಯುತ್ತದೆ. ಕಾಂಡವೂ ಮೃದುವಾಗಿದ್ದು, ಎಲೆಯು ತೆಳ್ಳಗೆ ಉದ್ದವಾಗಿ ಚಪ್ಪಟೆಯಾಕಾರದಿಂದ ಕೂಡಿದೆ. ಎಲೆಯನ್ನು ತಿಕ್ಕಿದರೆ ಉಗ್ರವಾಸನೆ ಬರುತ್ತದೆ. ಗಡ್ಡೆಯು ಬಿಳಿ ಬಣ್ಣವನ್ನು ಹೊಂದಿದ್ದು, 5–12 ಕಿರುಗಡ್ಡೆಗಳಿಂದ ಕೂಡಿದೆ. ಕಿರುಗಡ್ಡೆಗಳಿಗೆ ತುಳುವಿನಲ್ಲಿ 'ಬೊಳ್ಳುಳ್ಳಿದರಿ' ಎಂದು ಕರೆಯುತ್ತಾರೆ. ಹೂವು ಚಿಕ್ಕದಾಗಿ ಬಿಳಿ ಬಣ್ಣದಿಂದ ಕೂಡಿದೆ. ಈ ದ್ರವ್ಯವು ಫೆಬ್ರವರಿ – ಏಪ್ರಿಲ್ ತಿಂಗಳಿನಲ್ಲಿ ಹೂವು ಮತ್ತು ಕಾಯಿಯನ್ನು ಬಿಡುತ್ತದೆ. ಸಾಮಾನ್ಯವಾಗಿ ಭಾರತದ ಎಲ್ಲೆಡೆ ಬೆಳೆಯುವ ಈ ಸಸ್ಯವು ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ ಮತ್ತು ಗುಜರಾತ್ ಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಯುತ್ತದೆ.

ವಿಧಗಳು

ಬೆಳ್ಳುಳ್ಳಿಯಲ್ಲಿ ಎರಡು ವಿಧಗಳಿವೆ. ಅವು

1. ಬೆಳ್ಳುಳ್ಳಿ
2. ಮಹಾ ಬೆಳ್ಳುಳ್ಳಿ

ಸಸ್ಯಶಾಸ್ತ್ರದಲ್ಲಿ ಎರಡು ವಿಧವನ್ನು ಕಾಣಬಹುದು. ಅವು

1. Alium sativum
2. Alium ascalonium.

ಉಪಯುಕ್ತ ಅಂಗಗಳು

- ಬೆಳ್ಳುಳ್ಳಿ ಗಡ್ಡೆ
- ಬೆಳ್ಳುಳ್ಳಿ ಎಣ್ಣೆ.

ದ್ರವ್ಯದ ಗುಣಧರ್ಮಗಳು

ರಸ	:	ಮಧುರ, ಲವಣ, ಕಟು, ತಿಕ್ತ, ಕಷಾಯ
ಗುಣ	:	ಗುರು, ಸ್ನಿಗ್ಧ, ತೀಕ್ಷ್ಣ, ಸರ
ವೀರ್ಯ	:	ಉಷ್ಣ
ವಿಪಾಕ	:	ಕಟು
ಕರ್ಮ	:	ವಾತಕಫಹರ, ಬಲ್ಯ, ಬೃಂಹಣ, ರಸಾಯನ, ವೃಷ್ಯ, ನೇತ್ರ್ಯ

"ಕ್ರಿಮಿಕುಷ್ಠಕಿಲಾಸಘ್ನೋವಾತಘ್ನೋ ಗುಲ್ಮನಾಶನಃ॥
ಸ್ನಿಗ್ಧಶ್ಚೋಷ್ಣಶ್ಚ ವೃಷ್ಯಶ್ಚ ಲಶುನಃ ಕಟುಕೋ ಗುರುಃ॥ *(ಚ.ಸೂ. 26)*

ಎಂದರೆ, ಬೆಳ್ಳುಳ್ಳಿಯು ಕಟುರಸದಿಂದ ಕೂಡಿದೆ. ಗುರು, ಸ್ನಿಗ್ಧ, ಉಷ್ಣ ಗುಣದಿಂದ ಕೂಡಿದೆ. ಉಷ್ಣ ವೀರ್ಯದಿಂದ ಕೂಡಿದೆ. ವಾತಹರವಾಗಿದೆ. ಗುಲ್ಮ, ಕ್ರಿಮಿ, ಕುಷ್ಠ ಬಿಳಿತೊನ್ನು ಮುಂತಾದ ರೋಗಗಳನ್ನು ನಿವಾರಿಸುತ್ತದೆ. ವೀರ್ಯಬಲವನ್ನು ಹೆಚ್ಚಿಸುತ್ತದೆ.

ಔಷಧಿ ಪ್ರಮಾಣ

ಲೇಪ – 3–6 ಗ್ರಾಂ
ಎಣ್ಣೆ – 1–2 ಬಿಂದು

ಔಷಧೀಯ ಯೋಗಗಳು

- ಲಶುನಾದಿ ವಟಿ
- ರಸೋನ ಪಿಂಡ
- ಹಿಂಗುತ್ರಿಗುಣ ತೈಲ
- ರಸೋನಸುರಾ
- ಲಶುನಕಲ್ಪ
- ರಸೋನ ರಸಾಯನ

- ರಸೋನಾಷ್ಟಕ
- ರಸೋನ ವಟಿಕ

ಔಷಧೀಯ ಉಪಯೋಗಗಳು


- ಬೆಳ್ಳುಳ್ಳಿಗೆ ತುಪ್ಪ ಬೆರೆಸಿ ಪ್ರತಿದಿನ ಬೆಳಗ್ಗೆ ಸೇವಿಸುವುದರಿಂದ ಮಲೇರಿಯಾ ಜ್ವರವು ನಿವಾರಣೆಯಾಗುತ್ತದೆ.
- ಬೆಳ್ಳುಳ್ಳಿ ಮತ್ತು ಈರುಳ್ಳಿ ರಸವನ್ನು ಮೊಲೆಹಾಲಿನಲ್ಲಿ ಬೆರೆಸಿ ಮೂಗಿಗೆ ಬಿಡುವುದರಿಂದ ಕೆಮ್ಮು, ಉಬ್ಬಸರೋಗವು ನಿವಾರಣೆಯಾಗುತ್ತದೆ.
- ಬೆಳ್ಳುಳ್ಳಿ ರಸವನ್ನು ಹಾಲಿನೊಂದಿಗೆ ಬೆರೆಸಿ ಬೆಳಗ್ಗೆ ಸೇವಿಸುವುದರಿಂದ ಯೋನಿರೋಗವು ನಿವಾರಣೆಯಾಗುತ್ತದೆ.
- ಬೆಳ್ಳುಳ್ಳಿ, ಶುಂಠಿ, ನೆಕ್ಕಿಯ ಕಷಾಯ ಸೇವನೆಯಿಂದ ಆಮವಾತ ರೋಗವು ನಿವಾರಣೆಯಾಗುತ್ತದೆ.
- ಬೆಳ್ಳುಳ್ಳಿಯನ್ನು ವೈನ್‌ನೊಂದಿಗೆ ಬೆರೆಸಿ ಬೆಳಗ್ಗೆ ಖಾಲಿಹೊಟ್ಟೆಯಲ್ಲಿ ಸೇವಿಸುವುದರಿಂದ ಹೊಟ್ಟೆನೋವು ನಿವಾರಣೆಯಾಗಿ, ಜೀರ್ಣಶಕ್ತಿಯೂ ಹೆಚ್ಚುತ್ತದೆ.
- ಬೆಳ್ಳುಳ್ಳಿ, ಹಿಪ್ಪಲಿಮೂಲ, ಅಣಿಲೆಕಾಯಿಯನ್ನು ಗೋಮೂತ್ರದೊಂದಿಗೆ ಸೇವಿಸುವುದರಿಂದ ಪ್ಲೀಹವೃದ್ಧಿ (Splenomegaly) ಕಡಿಮೆಯಾಗುತ್ತದೆ.
- ಬೆಳ್ಳುಳ್ಳಿಯ ಲೇಪವನ್ನು ಗಾಯಕ್ಕೆ ಲೇಪಿಸುವುದರಿಂದ ಗಾಯವು ನಿವಾರಣೆಯಾಗುತ್ತದೆ.
- ಮಕ್ಕಳ ಕೆಮ್ಮಿಗೆ ಬೆಳ್ಳುಳ್ಳಿಯ ಮಾಲೆಗಳನ್ನು ಹಾರವಾಗಿ ಧರಿಸಬೇಕು.
- ಬೆಳ್ಳುಳ್ಳಿಯ ರಸವನ್ನು ಚರ್ಮಕ್ಕೆ ಹಚ್ಚುವುದರಿಂದ ಕಜ್ಜಿ, ತುರಿಕೆ, ಇಸುಬು ಮುಂತಾದ ಚರ್ಮರೋಗಗಳು ನಿವಾರಣೆಯಾಗುತ್ತವೆ.
- ಬೆಳ್ಳುಳ್ಳಿ ಮತ್ತು ಸೈಂಧವ ಲವಣವನ್ನು ಬೆರೆಸಿ ಮಜ್ಜಿಗೆಯೊಂದಿಗೆ ಸೇವಿಸುವುದರಿಂದ ಅಜೀರ್ಣರೋಗವು ನಿವಾರಣೆಯಾಗುತ್ತವೆ.
- ಬೆಳ್ಳುಳ್ಳಿ ತೈಲವನ್ನು ಹಚ್ಚುವುದರಿಂದ ಆಮವಾತ, ಬೆನ್ನುನೋವುಗಳು ನಿವಾರಣೆಯಾಗುತ್ತದೆ.
- ಪಿತ್ತವಿಕಾರ ಮತ್ತು ಮೈ, ಕೈ, ಕಾಲು ಉರಿ ಇರುವವರಿಗೆ ಬೆಳ್ಳುಳ್ಳಿ ಸೇವನೆ ನಿಷೇಧ.
- ಬೆಳ್ಳುಳ್ಳಿಯ ಹಸಿ ರಸ ಸಹನೆಯಾಗದಲ್ಲಿ ಅದನ್ನು ಕೆಂಡದಲ್ಲಿ ಸುಟ್ಟು ರಸ ತೆಗೆದು ನಂತರ ಔಷಧಿಯಾಗಿ ಉಪಯೋಗಿಸಬಹುದು.

ಜ್ವರ ನಿವಾರಕ ಭದ್ರಮುಷ್ಠಿ

Cyperus rotundus, Linn.

Cyperaceae





ಕಳೆಯಲ್ಲೂ ಉಂಟು ಔಷಧ ನಂಟು ಎಂಬುದಾಗಿ ತೋರಿಸುವ ದ್ರವ್ಯಗಳಲ್ಲಿ ಭದ್ರಮುಷ್ಠಿಯು ಒಂದು. ಹೊಲ, ತೋಟ, ತೇವಾಂಶವಿರುವ ಪ್ರದೇಶಗಳಲ್ಲಿ ಅಧಿಕವಾಗಿ ಬೆಳೆಯುವ ಈ ದ್ರವ್ಯವನ್ನು ಕೀಳುವುದು ಬಹಳ ಕಷ್ಟವಾದ ಕೆಲಸ. ಕಾಯಿಲೆಗಳ ಕಳೆಯನ್ನು ದೂರ ಮಾಡಿ ದೇಹಕ್ಕೆ ಆರೋಗ್ಯವೆಂಬ ಕಳೆತುಂಬುವ ಈ ದ್ರವ್ಯವು ಆಯುರ್ವೇದದ ಪ್ರಮುಖ ದ್ರವ್ಯಗಳಲ್ಲಿ ಒಂದು. ವೇದ ಕಾಲದಿಂದ ಬಳಕೆಯಲ್ಲಿರುವ ಈ ದ್ರವ್ಯದ ವಿವರಣೆಯನ್ನು ಸಂಹಿತೆ ಮತ್ತು ನಿಘಂಟುಗಳಲ್ಲಿ ಕಾಣಬಹುದು. ಚೈನೀಸ್ ಔಷಧಗಳಲ್ಲಿ ಇದನ್ನು ಯಕೃತ್ ಮತ್ತು ಶ್ವಾಸಕೋಶದ ರೋಗಕ್ಕೆ ಉಪಯೋಗಿಸುತ್ತಿದ್ದರು ಎಂಬ ವ್ಯಾಖ್ಯಾನವು ಇದೆ. ಭದ್ರಮುಷ್ಠಿಯು ಮುಖ್ಯವಾಗಿ ಜ್ವರಹರವಾಗಿ, ಸ್ತಂಭಕವಾಗಿ, ರಸಾಯನವಾಗಿ ಮತ್ತು ಜಠರಾಗ್ನಿ ಪ್ರದೀಪಕವಾಗಿ ಕೆಲಸ ಮಾಡುತ್ತದೆ.

ಬಹು ಭಾಷಾ ಹೆಸರುಗಳು

ಕನ್ನಡ : ಭದ್ರಮುಷ್ಠಿ, ಜೇಕಿನಗಡ್ಡೆ

ಸಂಸ್ಕೃತ : ಮುಸ್ತಾ

ತುಳು : ಭದ್ರಮುಷ್ಠಿ

ಹಿಂದಿ : ಮೋಥ

ಇಂಗ್ಲೀಷ್ : ನಟ್‌ಗ್ರಾಸ್

ಪರ್ಯಾಯ ಪದಗಳು

ಮುಸ್ತಾ, ಮುಸ್ತಾಕಾ, ಧನಕೋಟಾ, ಭದ್ರಮುಸ್ತಾ, ನಾಗರಮುಸ್ತಾ, ಶಿಶಿರಾ, ಭದ್ರಾ, ಗುಹಗ್ರಂಥಿ, ಸುಗಂಧೀ, ಹಿಮಾ, ಗಾಂಗೇಯಾ, ಘನಾ, ಮೇಘಾ, ಕ್ರೋಡೇಷ್ಟಾ. ಈ ದ್ರವ್ಯಕ್ಕೆ ಶೀತ ಸ್ವಭಾವವಿರುವುದರಿಂದಲೇ ಇದನ್ನು 'ಶಿಶಿರಾ' ಎಂದು ಕರೆಯುತ್ತಾರೆ.

ದ್ರವ್ಯದ ವರ್ಣನೆ

ಭದ್ರಮುಷ್ಠಿಯು ಒಂದು ಕುರುಚಲ ಸಸ್ಯ. ಹುಲ್ಲು ಜಾತಿಗೆ ಸೇರಿದ ಈ ಸಸ್ಯವು ಸುಮಾರು 0.3–1 ಮೀಟರ್‌ನಷ್ಟು ಎತ್ತರಕ್ಕೆ ಬೆಳೆಯುತ್ತದೆ. ಎಲೆಯು ಉದ್ದವಾಗಿ, ಚೂಪಾಗಿ ಹುಲ್ಲಿನ ಎಲೆಯಂತಿದೆ. ಎಲೆಯು ಹಸಿರು ಬಣ್ಣದಿಂದ ಕೂಡಿದೆ. ಸಸ್ಯವನ್ನು ಭೂಮಿಯಿಂದ ತೆಗೆದಾಗ ಒಂದಕ್ಕೊಂದು ಜೋಡಣೆಯಿರುವ ಕಪ್ಪಾದ ಗಡ್ಡೆಗಳಿರುತ್ತದೆ. ಗಡ್ಡೆಗಳ ಮೇಲೆ ರೋಮಗಳಿರುತ್ತವೆ. ಗಡ್ಡೆಯು ಒಗರು ರುಚಿಯಿಂದ ಕೂಡಿದೆ. ಸಸ್ಯದ ತುದಿಯಲ್ಲಿ ಗೊಂಚಲಾದ ಹೂಗಳು ಉತ್ಪತ್ತಿಯಾಗುತ್ತವೆ. ತೇವಾಂಶವಿಲ್ಲದ ಸಮಯದಲ್ಲಿ ಈ ಸಸ್ಯವು ಒಣಗಿ, ಮಳೆಗಾಲದಲಿ ಚಿಗುರುತ್ತವೆ. ಕಣಿವೆ, ತೋಟ, ತೇವಾಂಶವಿರುವ ಪ್ರದೇಶಗಳಲ್ಲಿ ವರ್ಷವಿಡೀ ಬೆಳೆಯುವ ಈ ದ್ರವ್ಯವನ್ನು ಪಂಜಾಬಿನಿಂದ ನೀಲಗಿರಿಯ ಪರ್ವತ ಪ್ರದೇಶಗಳಲ್ಲಿ ದಕ್ಷಿಣ ಯುರೋಪ್, ಆಫ್ರಿಕಾ, ಅಮೇರಿಕ ಮುಂತಾದ ದೇಶಗಳಲ್ಲಿ ಹೆಚ್ಚಾಗಿ ಕಾಣಬಹುದು. ಈ ದ್ರವ್ಯದ ಗಡ್ಡೆಯನ್ನು ಔಷಧ ತಯಾರಿಕೆಗೆ ಉಪಯೋಗಿಸುತ್ತಾರೆ.

ವಿಧಗಳು

ಭಾವಮಿಶ್ರನ ಪ್ರಕಾರ ಭದ್ರಮುಷ್ಠಿಯಲ್ಲಿ ಮೂರು ವಿಧಗಳಿವೆ. ಅವು

- ನಾಗರಮುಸ್ತಾ (Cyperus scariosus)
- ಭದ್ರಮುಸ್ತಾ (Cyperus rotundus)
- ಜಲಮುಸ್ತಾ (Cyperus esculentus)

ಉಪಯುಕ್ತ ಅಂಗಗಳು

- ಗಡ್ಡೆ

ದ್ರವ್ಯದ ಗುಣಧರ್ಮಗಳು

ರಸ : ತಿಕ್ತ, ಕಟು, ಕಷಾಯ

ಗುಣ : ಲಘು, ರೂಕ್ಷ

ವೀರ್ಯ : ಶೀತ

ವಿಪಾಕ : ಕಟು

ಕರ್ಮ : ಕಫಪಿತ್ತಹರ, ದೀಪನ, ಪಾಚನ, ಗ್ರಾಹೀ

ಮುಸ್ತಾ ತಿಕ್ತಾ ಕಷಾಯಾತಿಶಿಶಿರಾ ಶ್ಲೇಷ್ಮರಕ್ತಜಿತ್
ಪಿತ್ತಜ್ವರಾತಿಸಾರಘ್ನೀ ತೃಷ್ಣಾಕ್ರಿಮಿವಿನಾಶಿನೀ॥ *(ಧನ್ವಂತರಿ ನಿಘಂಟು)*

ಎಂದರೆ ಭದ್ರಮುಷ್ಟಿಯು ತಿಕ್ತ ಮತ್ತು ಕಷಾಯ ರಸದಿಂದ ಕೂಡಿದೆ. ತಂಪನ್ನು ನೀಡುತ್ತದೆ. ಕಫಹರವಾಗಿದೆ. ರಕ್ತಸ್ರಾವಗಳನ್ನು ಗುಣಪಡಿಸುತ್ತದೆ. ಪಿತ್ತಪ್ರಧಾನ ಜ್ವರ, ಅತಿಸಾರಗಳನ್ನು ನಿವಾರಿಸುತ್ತದೆ. ಬಾಯಾರಿಕೆಯನ್ನು ಹೋಗಲಾಡಿಸುತ್ತದೆ. ಹೊಟ್ಟೆಹುಳುಗಳ ಭಾದೆಯನ್ನು ಪರಿಹರಿಸುತ್ತದೆ.

ಔಷಧಿ ಪ್ರಮಾಣ

ಚೂರ್ಣ : 3–6 ಗ್ರಾಂ.

ಕಷಾಯ : 50–100 ಮಿ.ಲೀ.

ಔಷಧಿ ಯೋಗಗಳು

- ಮುಸ್ತಾರಿಷ್ಟ
- ಗಂಗಾಧರ ಚೂರ್ಣ
- ಮುಸ್ತಾದಿವಟಿ
- ಮುಸ್ತಾದಿ ಕಷಾಯ
- ಮುಸ್ತಕಾದಿ ಚೂರ್ಣ
- ಷಡಂಗ ಪಾನೀಯಮ್

ಔಷಧೀಯ ಉಪಯೋಗಗಳು

- ಭದ್ರಮುಷ್ಟಿಯ ಕಷಾಯವನ್ನು ಜೇನಿನೊಂದಿಗೆ ಸೇವಿಸುವುದರಿಂದ ಅತಿಸಾರ ರೋಗವು ಕಡಿಮೆಯಾಗುತ್ತದೆ.
- ಮಕ್ಕಳ ಭೇದಿಗೆ ಗಡ್ಡೆಯನ್ನು ಜೇನಿನಲ್ಲಿ ತೇಯ್ದು ನೆಕ್ಕಿಸಬೇಕು.


- ಭದ್ರಮುಷ್ಠಿ, ನೆಲ್ಲಿಕಾಯಿ ಮತ್ತು ಅರಿಶಿಣದ ಕಷಾಯವನ್ನು ಜೇನಿನೊಂದಿಗೆ ಸೇವಿಸುವುದರಿಂದ ವಾತರಕ್ತರೋಗವು ನಿವಾರಣೆಯಾಗುತ್ತದೆ.
- ಭದ್ರಮುಷ್ಠಿ, ಭೋರೆಹಣ್ಣು, ನೇರಳೆ ಬೀಜ, ಕಾಕಡಶೃಂಗಿಯ ಪುಡಿಯನ್ನು ಜೇನಿನೊಂದಿಗೆ ಸೇವಿಸುವುದರಿಂದ ಕಫದ ವಾಂತಿಯು ನಿವಾರಣೆ
- ಭದ್ರಮುಸ್ತಾದಿಂದ ತಯಾರಿಸಿದ ನೀರನ್ನು ಸೇವಿಸುವುದರಿಂದ ಬಾಯಾರಿಕೆ, ದಾಹ, ಕಡಿಮೆಯಾಗುತ್ತದೆ.
- ಭದ್ರಮುಸ್ತಾದ ಗಡ್ಡೆಯನ್ನು ಮೇಕೆಯ ಮೂತ್ರದಲ್ಲಿ ಅರೆದು ಕಣ್ಣಿಗೆ ಅಂಜನವಾಗಿ ಲೇಪಿಸುವುದರಿಂದ ಕಣ್ಣಿನ ರೋಗವು ನಿವಾರಣೆ.
- ಭದ್ರಮುಷ್ಠಿಯ ಗಡ್ಡೆಯ ಪುಡಿಯನ್ನು ದಿವಸಕ್ಕೆ ಎರಡು ಬಾರಿ ಹಾಲಿನಲ್ಲಿ ಬೆರೆಸಿ ಕುಡಿಯುವುದರಿಂದ ಮುಟ್ಟಿನಿಂದ ಮಕ್ಕಳ ಮೂಗಿನಿಂದ, ಮೂಲವ್ಯಾಧಿಯಿಂದ ಆಗುವ ರಕ್ತಸ್ರಾವ ನಿಲ್ಲುತ್ತದೆ.
- ಭದ್ರಮುಷ್ಠಿಯ ಗಡ್ಡೆಯ ಕಷಾಯವನ್ನು ದಿನಾಲೂ 4–5 ಬಾರಿ ಸೇವಿಸುವುದರಿಂದ ಜ್ವರದಿಂದ ಉಂಟಾದ ದಾಹ ನಿವಾರಣೆ.
- ಅಣಿಲೆಕಾಯಿ, ಶುಂಠಿ, ಭದ್ರಮುಷ್ಠಿಯ ಸಮತೂಕ ಚೂರ್ಣಕ್ಕೆ ಅಷ್ಟೇ ಪ್ರಮಾಣದ ಹಳೇ ಬೆಲ್ಲವನ್ನು ಸೇರಿಸಿ ಸರಿಯಾಗಿ ಬೆರೆದು ಕಡಲೆ ಗಾತ್ರದ ಮಾತ್ರೆಗಳನ್ನು ಮಾಡಿ ದಿವಸಕ್ಕೆ 4–5 ಬಾರಿ ಬಾಯಲ್ಲಿ ಹಾಕಿಕೊಂಡು ರಸ ನುಂಗುವುದರಿಂದ ಗಂಟಲುನೋವು, ಕೆಮ್ಮು, ದಮ್ಮಿನ ತೊಂದರೆಯಿಂದ ಬಳಲುತ್ತಿರುವವರಿಗೆ ಒಳ್ಳೆಯದು.
- ಭದ್ರಮುಷ್ಠಿ, ಒಲಾದ ಬೇರು, ಬಿಲ್ವಪತ್ರೆಕಾಯಿ, ಶುಂಠಿ ಮತ್ತು ಕೊತ್ತಂಬರಿಯ ಬೀಜದ ಪುಡಿಗೆ ನಾಲ್ಕರಷ್ಟು ನೀರು ಸೇರಿಸಿ ಕಾಲು ಭಾಗದಷ್ಟು ಕಷಾಯ ಮಾಡಿ ಸೇವಿಸುವುದರಿಂದ ಹೊಟ್ಟೆನೋವು, ಹೊಟ್ಟೆ ಭಾರ, ಹೊಟ್ಟೆಯುಬ್ಬರ ಕಡಿಮೆಯಾಗುತ್ತದೆ.
- ಭದ್ರಮುಷ್ಠಿ, ಒಂದೆಲಗ, ಕಾಳುಮೆಣಸು, ಜೀರಿಗೆ, ಕೊತ್ತಂಬರಿ, ಕಿರಾತಕಡ್ಡಿ, ಸೇವಿಸುವುದರಿಂದ ಶೀತಜ್ವರ, ಕೆಮ್ಮು, ಚಳಿಜ್ವರ ನಿವಾರಣೆಯಾಗುತ್ತದೆ.
- ಗಡ್ಡೆಯ ಚೂರ್ಣವನ್ನು ಸೇವಿಸುವುದರಿಂದ ಮುಟ್ಟಿನ ತೊಂದರೆ ನಿವಾರಣೆ.
- ಗಡ್ಡೆಯ ಲೇಪ ಮೈಗೆ ಹಚ್ಚುವುದರಿಂದ ನವೆಯು ನಿವಾರಣೆಯಾಗುತ್ತದೆ.

ಮಕ್ಕಳ ಕಣ್ಣಿನ ದೃಷ್ಠಿ
ಮತ್ತು ಆರೋಗ್ಯವನ್ನು ರಕ್ಷಿಸಿ

ರಂಗು ರಂಗಿನ ಮದರಂಗಿ

Lawsonia inermis, Linn.

Lythraceae



ಕೈಯನ್ನು ತನ್ನ ಬಣ್ಣದಿಂದ ರಂಗಾಗಿಸುವ ಮದರಂಗಿ ಗಿಡವು ಹಬ್ಬ ಹರಿದಿನಗಳಲ್ಲಿ, ಮದುವೆ ಸಮಾರಂಭಗಳಲ್ಲಿ ಯಥೇಚ್ಛವಾಗಿ ಉಪಯೋಗಿಸುವ ದ್ರವ್ಯವಾಗಿದೆ. ಇತ್ತೀಚಿನ ದಿನಗಳಲ್ಲಿ ತಲೆಗೂದಲು ಬಿಳುಪುಗೊಂಡಾಗ ಅಥವಾ ತಲೆಗೂದಲಿನ ಸೌಂದರ್ಯವನ್ನು ಹೆಚ್ಚಿಸಲು ಮದರಂಗಿಯ ಲೇಪವನ್ನು ಉಪಯೋಗಿಸುವುದನ್ನು ನಾವು ಸುತ್ತಮುತ್ತಲೂ ಕಾಣಬಹುದು. ಸೌಂದರ್ಯಕ್ಕಾಗಿ ಬಳಸುವ ಈ ದ್ರವ್ಯದ ಔಷಧ ಗುಣದ ಬಗ್ಗೆ ಅರಿತವರು ಬಹಳ ವಿರಳ. ಸಾಮಾನ್ಯವಾಗಿ ಎಲ್ಲರೂ ಅರಿತಿರುವ ರಂಗನ್ನು ಬರಿಸುವ ಮದರಂಗಿಯು ಆಯುರ್ವೇದದ ಒಂದು ಶ್ರೇಷ್ಠ ದ್ರವ್ಯ.

ಬಹು ಭಾಷಾ ಹೆಸರುಗಳು

ಕನ್ನಡ : ಮದರಂಗಿ

ಸಂಸ್ಕೃತ : ಮದಯಂತಿಕಾ

ತುಳು : ಮದ್ರೆಂಗಿ

ಹಿಂದಿ : ಮೆಹೆಂದಿ

ಇಂಗ್ಲೀಷ್ : ಹೆನ್ನಾ

ಪರ್ಯಾಯ ಪದಗಳು

ಮದಯಂತಿಕಾ, ಮಲ್ಲಿಕಾ, ಮೋದಯಂತೀ, ದ್ವಿಪ್ರಂತಾ, ನಖರಂಜಕಾ, ನಖರಂಜನೀ, ರಂಜಕಾ, ರಾಗಗರ್ಭಾ, ಸುಗಂಧ ಪುಷ್ಪಾ, ತಿಮಿರಾ, ಮೆಂದಿಕಾ, ರಕ್ತಗರ್ಭಾ, ಮೇಧಿಕ.

ಇದು ಉಗುರನ್ನು ಕೆಂಪು ಬಣ್ಣವಾಗಿ ಪರಿವರ್ತಿಸುವುದರಿಂದ ಇದನ್ನು 'ನಖರಂಜನೀ' ಎಂದು, ಇದರ ಹೂವು ಪರಿಮಳದಿಂದ ಕೂಡಿರುವುದರಿಂದ 'ಸುಗಂಧ ಪುಷ್ಪಾ' ಎಂದು, ಇದರ ಎಲೆಯಲ್ಲಿ ಬಣ್ಣ ಬರಿಸುವ ಅಂಶವಿರುವುದರಿಂದ 'ರಾಗಗರ್ಭಾ' ಎಂದು ಇದನ್ನು ಸಂಸ್ಕೃತದಲ್ಲಿ ಕರೆಯುತ್ತಾರೆ.

ದ್ರವ್ಯದ ವರ್ಣನೆ

ಮದರಂಗಿಯು ಒಂದು ಕುರುಚಲು ಗಿಡ. ಮುಳ್ಳುಗಳಿಂದ ಕೂಡಿದ ಪೊದೆ. ಸಣ್ಣ ಗಾತ್ರದ ಮರವಾಗಿಯೂ ಸಹ ಬೆಳೆಯುತ್ತದೆ. ರೆಂಬೆಗಳು ನೀಳವಾಗಿ ಬೆಳೆಯುವುದು ಮತ್ತು ಕವಲಿನ ತುದಿಯಲ್ಲಿ ಕೆಂಪು ಬಣ್ಣಗಳಿಂದ ಕೂಡಿದೆ. ಬಲಿತ ರೆಂಬೆಗಳ ತುದಿಯಲ್ಲಿ ಪುಷ್ಪಗುಚ್ಛಗಳು ಇರುವುವು. ಹೂವುಗಳು ಸುವಾಸನೆಯಿಂದ ಬಿಳಿ ಅಥವಾ ತಿಳಿಯ ಗುಲಾಬಿ ಬಣ್ಣ ಹೊಂದಿರುವುವು. ಕಾಯಿ ಚಿಕ್ಕದಾಗಿ ವೃತ್ತಾಕಾರದಿಂದ ಕೂಡಿದೆ. ಬಲಿತ ಕಾಯಿಯಲ್ಲಿ ಹೆಚ್ಚು ಗಟ್ಟಿಯಾದ ಬೀಜಗಳು ಇರುವುವು. ವರ್ಷದ ಬಹುಕಾಲ ಹೂ ಕಾಯಿ ಬಿಡುವುದು. ಸಾಮಾನ್ಯವಾಗಿ ಭಾರತದೆಲ್ಲೆಡೆ ಬೆಳೆಯುವ ಈ ದ್ರವ್ಯವು ಸಿಲೋನ್, ಅರೇಬಿಯಾ, ಪರ್ಶಿಯ ಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಯುತ್ತದೆ.

ವಿಧಗಳು

ಮದರಂಗಿಯ ಯಾವುದೇ ತರಹದ ವಿಧಗಳು ಶಾಸ್ತ್ರೀಯವಾಗಿ ಕಾಣಸಿಗುವುದಿಲ್ಲ.

ಉಪಯುಕ್ತ ಅಂಗಗಳು

- ಎಲೆ
- ಹೂವು
- ಬೀಜಗಳು

ದ್ರವ್ಯದ ಗುಣಧರ್ಮಗಳು

ರಸ : ಕಷಾಯ, ತಿಕ್ತ

ಗುಣ : ಲಘು, ರೂಕ್ಷ

ವೀರ್ಯ : ಶೀತ

ವಿಪಾಕ : ಕಟು

ಕರ್ಮ : ಕಫಪಿತ್ತಹರ, ಕಂಡೂಘ್ನ, ರಂಜಕ, ವ್ರಣರೋಪಕ

ಮದಯಂತೀ ಲಘೂ ರೂಕ್ಷಕಷಾಯತಿಕ್ತಶೀತಲಾ।
ಕಫಪಿತ್ತಪ್ರಶಮನೀ ಕುಷ್ಠಘ್ನೀ ಸಾ ಪ್ರಕೀರ್ತಿತಾ॥
ನಿಹಂತಿ ಜ್ವರ ಕಂಡೂತಿದಾಹಾಸೃಕ್ ಪಿತ್ತಕಾಮಾಲಾಃ।
ರಕ್ತಾತಿಸಾರ ಹೃದ್ರೋಗಮೂತ್ರಕೃಚ್ಛ್ರಭ್ರಮವ್ರಣಾನ್॥ *(ದ್ರವ್ಯಗುಣ ವಿಜ್ಞಾನ)*

ಎಂದರೆ ಮದರಂಗಿ ಗಿಡವು ಲಘು ಮತ್ತು ರೂಕ್ಷ ಗುಣಗಳಿಂದ ಕೂಡಿದೆ. ಕಷಾಯ, ತಿಕ್ತ ರಸದಿಂದ ಕೂಡಿದೆ. ದ್ರವ್ಯದ ಶಕ್ತಿಯೂ ಶೀತತೆಯಿಂದ ಕೂಡಿದೆ. ಕಫ ಮತ್ತು ಪಿತ್ತ ಪ್ರಶಮನ ಮಾಡುತ್ತದೆ. ಇದನ್ನು ಜ್ವರ, ಕುಷ್ಠ, ತುರಿಸುವಿಕೆ, ಉರಿ, ಕಾಮಾಲೆ, ತಲೆಸುತ್ತು, ರಕ್ತಾತಿಸಾರ, ಹೃದಯ ಸಂಬಂಧಿ ರೋಗ, ಮೂತ್ರ ಉರಿಗಳಿಗೆ ಉಪಯೋಗಿಸುತ್ತಾರೆ.

ಔಷಧಿ ಪ್ರಮಾಣ

ಸ್ವರಸ – 5–10 ಮಿ.ಲೀ.

ಬೀಜ ಚೂರ್ಣ – 1–3 ಗ್ರಾಂ.

ಔಷಧಿ ಯೋಗಗಳು

- ಮದಯಂತ್ಯಾದಿ ಚೂರ್ಣ

ಔಷಧೀಯ ಉಪಯೋಗಗಳು


- ಮದರಂಗಿಯ ಎಲೆಯ ರಸವನ್ನು ಸೇವಿಸುವುದರಿಂದ ಕಾಮಾಲೆ ರೋಗವು ನಿವಾರಣೆಯಾಗುತ್ತದೆ.
- ಮದರಂಗಿ ಹೂವಿನ ಫಾಂಟ ಮಾಡಿ ಸೇವಿಸುವುದರಿಂದ ಜ್ವರ, ಹೃದಯ ರೋಗಕ್ಕೆ ಒಳ್ಳೆಯದು.
- ಮದರಂಗಿ ಕಷಾಯದ ಸೇವನೆಯಿಂದ ರಕ್ತ ದೋಷದಿಂದ ಬಂದ ರೋಗವು ನಿವಾರಣೆಯಾಗುತ್ತದೆ.
- ಎಲೆಯ ರಸಕ್ಕೆ ಸಕ್ಕರೆ ಸೇರಿಸಿ ಕುಡಿಯುವುದರಿಂದ ಮೂತ್ರತೊಂದರೆ, ಮೂತ್ರಕೃಚ್ಛ್ರರೋಗವು ನಿವಾರಣೆಯಾಗುತ್ತದೆ.
- ಮದರಂಗಿಯ ಲೇಪಕ್ಕೆ ಜೇನು ಬೆರೆಸಿ ಸೇವಿಸುವುದರಿಂದ ಪ್ರಮೇಹ ರೋಗವು ನಿವಾರಣೆಯಾಗುತ್ತದೆ.

- ಮದರಂಗಿಯ ಎಲೆಯನ್ನು ಅರೆದು ಹಿಮ್ಮಡಿ ಭಾಗಕ್ಕೆ ಹಚ್ಚಿದರೆ ಹಿಮ್ಮಡಿ ಒಡೆಯುವುದು ನಿಲ್ಲುತ್ತದೆ.
- ಎಲೆಯ ರಸಕ್ಕೆ ಸಕ್ಕರೆ ಹಾಕಿ ಸೇವಿಸುವುದರಿಂದ ಮೂತ್ರ ಉರಿ ಕಡಿಮೆಯಾಗುತ್ತದೆ.
- ಹಸಿ ಮದರಂಗಿ ಸೊಪ್ಪನ್ನು ಜಜ್ಜಿ ಉಂಡೆ ಮಾಡಿ ನೋವಿರುವ ಜಾಗದಲ್ಲಿ ಇಡುವುದರಿಂದ ಹಲ್ಲುನೋವು ಮತ್ತು ಹುಳುಕು ಹಲ್ಲು ನೋವಿಗೆ ಒಳ್ಳೆಯದು. ಆದರೆ ರಸವನ್ನು ಆಗ್ಗಾಗ್ಗೆ ಉಗುಳುತ್ತಿರಬೇಕು.
- ಹಸಿಗೋರಂಟಿ ಸೊಪ್ಪನ್ನು ನುಣ್ಣಗೆ ಅರೆದು ಸ್ವಲ್ಪ ನಿಂಬೆ ಹುಳಿ ಸೇರಿಸಿ ಚೆನ್ನಾಗಿ ಮಸೆದು ಅಂಗೈ ಅಂಗಾಲುಗಳಿಗೆ ಲೇಪಿಸುವುದರಿಂದ ಅಂಗೈ ಅಂಗಾಲು ಉರಿ ಕಡಿಮೆಯಾಗುತ್ತದೆ.
- ಎರಡು ಗ್ರಾಂ ಮದರಂಗಿ ಬೀಜಗಳನ್ನು ನಯವಾಗಿ ಅರೆದು ಒಂದು ಟೀ ಚಮಚ ಶುದ್ಧ ಜೇನಿನಲ್ಲಿ ಮಿಶ್ರಮಾಡಿ ಸೇವಿಸುವುದರಿಂದ ತಲೆಸುತ್ತು ಗುಣವಾಗುತ್ತದೆ.
- ಹಸಿ ಮದರಂಗಿ ಎಲೆಯ ರಸವನ್ನು ಬೆವರು ಸೆಲೆಗೆ ಹಚ್ಚುವುದರಿಂದ ಬೆವರು ಸೆಲೆಯು ಕಡಿಮೆಯಾಗುತ್ತದೆ.

ಜೀರ್ಣಶಕ್ತಿಯನ್ನು ಮೀರಿ
ಆಹಾರ ಸೇವಿಸುವುದು ಒಳ್ಳೆಯದಲ್ಲ

ಅರಸಿನ ಬಣ್ಣದ ಮರದರಸಿನ
Berberis aristata, Dc.
Berberidaceae





ಮರದರಸಿನ ಎಂದ ಕೂಡಲೇ ಅರಸಿನ ಮರದಲ್ಲಿ ಆಗುತ್ತದಾ ಎಂಬ ಪ್ರಶ್ನೆ ಬರ ಬಹುದು. ಇನ್ನು ಕೆಲವರು ಎಲ್ಲಾ ಓಕೆ ಮರದರಸಿನ ಹೆಸರು ಬಂದದ್ದು ಯಾಕೆ ಎಂದು ಕೇಳಲು ಬಹುದು! ಇಂತಹ ಪ್ರಶ್ನೆಗಳು ಬರುವುದು ಸರ್ವೇ ಸಾಮಾನ್ಯವು ಕೂಡ. ಈ ದ್ರವ್ಯದ ಸೌದೆ ಅಥವಾ ಕಟ್ಟಿಗೆ ಅರಸಿನ ಬಣ್ಣದಿಂದ ಕೂಡಿದ್ದರಿಂದ ಇದಕ್ಕೆ ಮರದರಸಿನ ಎಂದು ಕನ್ನಡದಲ್ಲಿ ಕರೆಯುತ್ತಾರೆ. ಆದರೆ ಇದರ ಗುಣಗಳು ಹೆಚ್ಚು ಕಡಿಮೆ ಅರಸಿನವನ್ನು ಹೋಲುತ್ತದೆ. ಅಡುಗೆಗೆ ಬಳಸುವ ಅರಸಿನವನ್ನು ಎಲ್ಲರೂ ಬಲ್ಲರು. ಆದರೆ ಮರದರಸಿನವನ್ನು ನೋಡಿದವರು ತೀರಾ ಕಡಿಮೆ.

ಬಹು ಭಾಷಾ ಹೆಸರುಗಳು

ಕನ್ನಡ	:	ಮರದರಸಿನ
ಸಂಸ್ಕೃತ	:	ದಾರುಹರಿದ್ರಾ
ತುಳು	:	ಮರಮಂಜಲ್
ಹಿಂದಿ	:	ದಾರುಹಲ್ದಿ
ಇಂಗ್ಲೀಷ್	:	ಇಂಡಿಯನ್ ಬರ್ಬರಿ

ದಾರುಹರಿದ್ರಾ, ದಾರುನಿಶಾ, ಪೀತದಾರು, ಪಚಂಪಚಾ, ಪರ್ಜನೀ, ದಾರ್ವಿ, ಕಾಮಿನೀ, ಪೀತ ಚಂದನಾ, ಹೇಮಕಾಂತ, ಪೀತಕಾ, ಪೀತಿಕಾ.

ದ್ರವ್ಯದ ವರ್ಣನೆ

ಮರದರಸಿನವು ನಿತ್ಯಹರಿದ್ವರ್ಣದಿಂದ ಕೂಡಿದ ಕುರುಚಲಗಿಡ. ಇದು ಸುಮಾರು 1–3 ಮೀಟರ್‌ನಷ್ಟು ಎತ್ತರಕ್ಕೆ ಬೆಳೆಯುತ್ತದೆ. ಎಲೆಯು ದಪ್ಪವಾಗಿ, ನೇರವಾಗಿ ಮೇಲ್ಭಾಗ ಹಸಿರು ಬಣ್ಣದಿಂದ, ಕೆಳ ಭಾಗ ಬಿಳಿ ಛಾಯೆಯಿಂದ ಕೂಡಿದೆ. ಪುಷ್ಪಗಳ ಸಮುದಾಯವು 5–8 ಸೆಂ.ಮೀಟರ್‌ನಷ್ಟು ಉದ್ದವಾಗಿದೆ. ಹೂವು ದೊಡ್ಡದಾಗಿ ಹಳದಿ ಬಣ್ಣದಿಂದ ಕೂಡಿದೆ. ಹಣ್ಣು ಚಿಕ್ಕದಾಗಿ ನಸು ನೀಲಿ ಬಣ್ಣ ಮಿಶ್ರಿತ ನೇರಳೆ ಬಣ್ಣದಿಂದ ಕೂಡಿದೆ. ಈ ದ್ರವ್ಯವು ಹೂವನ್ನು ವಸಂತ ಋತುವಿನಲ್ಲಿ ಮತ್ತು ಹಣ್ಣನ್ನು ಚಳಿಗಾಲದಲ್ಲಿ ಬಿಡುತ್ತದೆ. ಹಿಮಾಲಯ ಪ್ರದೇಶ, ನೀಲಗಿರಿ, ನೇಪಾಳ, ಬಂಗಾಳ ಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಯುತ್ತದೆ.

ವಿಧಗಳು

ದಾರುಹರಿದ್ರಾದ ಸರಿಯಾದ ವಿಧವನ್ನು ಶಾಸ್ತ್ರೀಯವಾಗಿ ಗುರುತಿಸದಿದ್ದರೂ, ಡಲ್ಹಣನು ಎರಡು ಸಸ್ಯಗಳನ್ನು ಒಂದೇ ಎಂಬುದಾಗಿ ಗುರುತಿಸಿದ್ದಾನೆ. ಅವು

- ದಾರುಹರಿದ್ರಾ
- ಕಾಲೀಯಕ

ಸಸ್ಯ ಶಾಸ್ತ್ರದಲ್ಲಿ ಇದನ್ನು Berberis aristata ಮತ್ತು Coscinium fenestratum ಎಂದು ಕ್ರಮವಾಗಿ ಗುರುತಿಸಲಾಗಿದೆ

ಉಪಯುಕ್ತ ಅಂಗಗಳು

- ಬೇರು
- ತೊಗಟೆ
- ಹಣ್ಣು
- ಕಾಂಡ

ದ್ರವ್ಯದ ಗುಣಧರ್ಮಗಳು

ರಸ : ತಿಕ್ತ, ಕಷಾಯ

ಗುಣ : ಲಘು, ರೂಕ್ಷ

ವೀರ್ಯ : ಉಷ್ಣ

ವಿಪಾಕ : ಕಟು

ಕರ್ಮ : ಕಫಪಿತ್ತಹರ, ದೀಪಕ, ಪಾಚನ, ಗ್ರಾಹೀ.

ತಿಕ್ತಾ ದಾರುಹರಿದ್ರಾ ಸ್ಯಾತ್ ರೂಕ್ಷೋಷ್ಣಾ ವ್ರಣಮೇಹಜಿತ್।
ಕರ್ಣನೇತ್ರಮುಖೋದ್ಭೂತಾಂ ರುಜಂ ಕಂಡೂಂ ಚ ನಾಶಯೇತ್॥

(ಧನ್ವಂತರಿ ನಿಘಂಟು)

ಎಂದರೆ ಮರದರಸಿನ ತಿಕ್ತರಸದಿಂದ ಕೂಡಿದೆ. ರೂಕ್ಷ ಮತ್ತು ಉಷ್ಣ ಗುಣದಿಂದ ಕೂಡಿದೆ. ಮೇಹ, ವ್ರಣರೋಗಗಳನ್ನು ನಿವಾರಿಸುವುದು. ಕಣ್ಣು, ಕಿವಿ, ಮುಖದೊಳಗಿನ ನೋವು ಕಡಿಮೆ ಮಾಡುವುದು, ಮೈ ತುರಿಕೆಯನ್ನು ಪರಿಹರಿಸುವುದು.

ಔಷಧಿ ಪ್ರಮಾಣ

ಕಷಾಯ : 50–100 ಮಿ.ಲೀ.

ಹಣ್ಣಿನ ಚೂರ್ಣ : 5–10 ಗ್ರಾಂ.

ಮೂಲ ಸ್ವರಸ : 12–24 ಮಿ.ಲೀ.

ಔಷಧಿ ಯೋಗಗಳು

- ದಾರ್ವೀಘೃತ
- ದಾರ್ವ್ಯಾದಿ ಕ್ವಾಥ
- ದಾರ್ವ್ಯಾದಿ ತೈಲ
- ದಾರ್ವ್ಯಾದಿ ಲೇಹ
- ರಸಾಂಜನ

ಔಷಧೀಯ ಉಪಯೋಗಗಳು

- ಮರದರಸಿನ ಕಷಾಯವನ್ನು ಜೇನಿನೊಂದಿಗೆ ಸೇವಿಸುವುದರಿಂದ ಶ್ವೇತ ಪ್ರದರ ರೋಗವು ನಿವಾರಣೆಯಾಗುತ್ತದೆ.
- ತ್ರಿಫಲ, ಅಮೃತಬಳ್ಳಿ, ದಾರುಹರಿದ್ರಾ ಮತ್ತು ಕಹಿಬೇವಿನ ಕಷಾಯವನ್ನು ಜೇನಿನೊಂದಿಗೆ ಬೆಳಗ್ಗೆ ಸೇವಿಸುವುದರಿಂದ ಕಾಮಾಲೆ ರೋಗವು ನಿವಾರಣೆಯಾಗುತ್ತದೆ.
- ಮರದರಸಿನವನ್ನು ಗೋಮೂತ್ರದೊಂದಿಗೆ ಸೇವಿಸುವುದರಿಂದ ಕುಷ್ಠರೋಗವು ನಿವಾರಣೆಯಾಗುತ್ತದೆ.

- ಮರದರಸಿನ ಮತ್ತು ನೆಲ್ಲಿಕಾಯಿಯ ರಸವನ್ನು ಜೇನಿನೊಂದಿಗೆ ಸೇವಿಸುವುದರಿಂದ ಪ್ರಮೇಹ ರೋಗ, ಮೂತ್ರ ಕೃಚ್ಛ್ರ, ಮೂತ್ರ ತೊಂದರೆ ರೋಗವು ನಿವಾರಣೆ.
- ಮರದರಸಿನ ಸೇರಿಸಿ ಬಿಸಿ ಮಾಡಿದ ಹಾಲನ್ನು ತಣಿಸಿ, ಅದಕ್ಕೆ ಸ್ವಲ್ಪ ಸೈಂಧವ ಲವಣವನ್ನು ಬೆರೆಸಿ ಕಣ್ಣು ತೊಳೆಯುವುದರಿಂದ ಕಣ್ಣು ನೋವು ನಿವಾರಣೆಯಾಗುತ್ತದೆ.
- ಮರದರಸಿನದ ಸಾರವಾದ ರಸಾಂಜನವನ್ನು ಜೇನಿನೊಂದಿಗೆ ಸೇವಿಸುವುದರಿಂದ ಬಾಯಿ ರೋಗ, ರಕ್ತದ ವ್ಯಾಧಿಗಳೆಲ್ಲ ನಿವಾರಣೆ.
- ಅರಸಿನ ಮತ್ತು ಮರದರಸಿನದ ಕಷಾಯವನ್ನು ಸೇವಿಸುವುದರಿಂದ ಮೇಹರೋಗವು ನಿವಾರಣೆ.
- ಮರದರಸಿನ ಮತ್ತು ಲಾವಂಚ ಬೇರಿನ ಕಷಾಯ ಸೇವಿಸುವುದರೊಂದಿಗೆ, ಮರದರಸಿನವನ್ನು ಎಮ್ಮೆಯ ಹಾಲಿನಲ್ಲಿ ತೇಯ್ದು ಬಾಯಿಗೆ ಲೇಪವನ್ನು ಹಾಕವುದರಿಂದ ಮೈಯೆಲ್ಲ ಹರಿದಾಡುವ ಕೆಂಪಾದ ಬಾವು ಇರುವ ಜ್ವರವು ನಿವಾರಣೆ.
- ಮರದರಸಿನ ಮತ್ತು ಲಾವಂಚದ ಕಷಾಯದಿಂದ ಬಾಯಿ ಮುಕ್ಕಳಿಸುವುದರಿಂದ ಬಾಯಿಹುಣ್ಣು, ಒಸಡಿನ ಬಾವು ಮುಂತಾದ ರೋಗಗಳು ನಿವಾರಣೆಯಾಗುತ್ತದೆ.

ಮುತ್ತಿನಂತಿರುವ ಮುತ್ತುಗ

Butea monosperma, Kuntz.

Fabaceae





ಸಾಮಾನ್ಯವಾಗಿ ಭಾರತದ ಎಲ್ಲ ಪ್ರದೇಶಗಳಲ್ಲಿ ವಿಶೇಷವಾಗಿ ಕಾಡಿನಲ್ಲಿ ಬೆಳೆಯುವ ಮುತ್ತುಗದ ಮರ ಎಲ್ಲರಿಗೂ ಪರಿಚಿತ ದ್ರವ್ಯ. ಈ ದ್ರವ್ಯವು ಯಜ್ಞಕ್ಕೆ ಉಪಯೋಗಿಸುವ ಶ್ರೇಷ್ಠ ದ್ರವ್ಯಗಳಲ್ಲಿ ಒಂದು. ಈ ದ್ರವ್ಯದ ಪರಿಚಯವು ಗ್ರಾಮಸ್ಥರಿಗೆ ಹೆಚ್ಚಾಗಿಯೇ ಇರುತ್ತದೆ. ಬೃಹತ್ ಸಂಹಿತೆಯಲ್ಲಿ ವಿವರವಾಗಿ ವಿವರಿಸಲ್ಪಟ್ಟ ಪೂಜನೀಯ ಈ ದ್ರವ್ಯವನ್ನು 'ಬ್ರಹ್ಮವೃಕ್ಷ' ಎಂದು ಕರೆಯುತ್ತಾರೆ. ಊಟ ಮಾಡಲು ಬಾಳೆ ಎಲೆ ದೊರೆಯದೆ ಹೋದರೆ ಮುತ್ತುಗದ ಎಲೆ ಹಾಕಿಕೊಂಡು ಊಟ ಮಾಡುವುದು ಹಿಂದಿನಿಂದಲೂ ಬಂದಿರುವ ರೂಢಿ. ದಾರಿಹೋಕರು, ಜಾನಪದ ಗಾಯಕರು ಬಿಸಿಲಿನಲ್ಲಿ ಬಳಲಿ ವಿಶ್ರಾಂತಿಪಡೆಯಲು ಮರದ ಹತ್ತಿರ ಬಂದು ನೆರಳು ಸಿಗದೆ ಹೋದಾಗ 'ಮುತ್ತುಗದ ಮರವು ನೆರಳಲ್ಲ' ಎಂದು ನೋವಿನಿಂದ ಹಾಡಿದ್ದಾರೆ ಎಂಬ ವ್ಯಾಖ್ಯಾನವು ಇದೆ. ಮದುವೆ ಸಂದರ್ಭದಲ್ಲಿ ರಥವನ್ನು ಅಲಂಕರಿಸಲು ಮುತ್ತುಗದ' ಹೂವನ್ನು ಉಪಯೋಗಿಸುತ್ತಿದ್ದರು ಎಂಬ ವ್ಯಾಖ್ಯಾನವು ಇದೆ. ಈ ದ್ರವ್ಯದ ಪ್ರತಿಯೊಂದು ಅಂಗವನ್ನು ಔಷಧಿ ತಯಾರಿಸಲು ಉಪಯೋಗಿಸುತ್ತಾರೆ. ಇದು ಒಗರು, ಕಾರ, ಕಹಿ ಎಂಬ ಮೂರು ರಸದಿಂದ ಕೂಡಿ, ಅಗ್ನಿದೀಪಕ, ವೀರ್ಯವರ್ಧಕ, ಉದರ, ಕ್ರಿಮಿನಾಶಕವಾಗಿದೆ. ಮುತ್ತುಗದ ಔಷಧಿಯನ್ನು ಗರ್ಭಿಣಿಯರು ಸೇವಿಸಬಾರದು.

ಬಹು ಭಾಷಾ ಹೆಸರುಗಳು

ಕನ್ನಡ : ಮುತ್ತುಗ, ಬ್ರಹ್ಮವೃಕ್ಷ, ಕಮಟ, ಪಲಸ

ಸಂಸ್ಕೃತ : ಪಲಾಶ

ತುಳು : ಪಲಾಶೋ

ಹಿಂದಿ : ಢಕ

ಇಂಗ್ಲೀಷ್ : ಫಾರೆಸ್ಟ್‌ಫ್ಲೇಮ್

ಪರ್ಯಾಯ ಪದಗಳು

ಪಲಾಶ, ರಕ್ತಪುಷ್ಪಕ, ಬ್ರಹ್ಮವೃಕ್ಷ, ಸಮಿದ್ವರ, ಕಿಂಶುಕ, ಕ್ಷಾರಶ್ರೇಷ್ಠ, ವಕ್ರಪುಷ್ಪ

ಮುತ್ತುಗದ ಹೂವು ಆಕಾರದಲ್ಲಿ ಮತ್ತು ಬಣ್ಣದಲ್ಲಿ ಗಿಳಿಯ ಕೊಕ್ಕಿನಂತೆ ಕಂಡುದರಿಂದ 'ಕಿಂಶುಕ' ಎಂಬ ಹೆಸರಿನಿಂದ ಕರೆಯುತ್ತಾರೆ.

ದ್ರವ್ಯದ ವರ್ಣನೆ

ಮುತ್ತುಗ ಮರವು ಸುಮಾರು 13 ರಿಂದ 16 ಮೀಟರ್‌ನಷ್ಟು ಎತ್ತರಕ್ಕೆ ಬೆಳೆಯುತ್ತದೆ. ಕಾಂಡವು ಡೊಂಕಾಗಿದೆ. ತೊಗಟೆಯು ಕಂದು ಬಣ್ಣ ಅಥವಾ ಬೂದಿ ಬಣ್ಣದಿಂದ ಕೂಡಿದೆ. ಎಲೆಯು 10 ರಿಂದ 15 ಸೆಂ. ಮೀಟರ್‌ನಷ್ಟು ಉದ್ದವಾಗಿದೆ. ಸುಂದರವಾದ ಹೂವುಗಳು ಕೆಂಪು ಬಣ್ಣದಿಂದ ಕೂಡಿದೆ. ಇದರ ಕೋಡುಗಳು ಸುಮಾರು 12–20 ಸೆಂಟಿ ಮೀಟರ್ ಉದ್ದವಾಗಿ, 2 ಸೆಂ.ಮೀಟರ್‌ನಷ್ಟು ಅಗಲವಾಗಿದೆ. ಕೋಡುಗಳು ಚಪ್ಪಟೆಯಾದ ಬೀಜವನ್ನು ಹೊಂದಿರುತ್ತದೆ. ನಿರ್ಯಾಸವು ತೊಗಟೆಯಿಂದ ಹೊರ ಬರುತ್ತದೆ. ಈ ದ್ರವ್ಯವು ಹೂವನ್ನು ಮಾರ್ಚ್‌ನಿಂದ ಎಪ್ರಿಲ್ ತಿಂಗಳವರೆಗೆ, ಹಣ್ಣನ್ನು ಎಪ್ರಿಲ್–ಜೂನ್ ತಿಂಗಳಿನಲ್ಲಿ ಬಿಡುತ್ತದೆ. ಈ ದ್ರವ್ಯವು ಭಾರತದ ಎಲ್ಲ ಪ್ರದೇಶಗಳಲ್ಲಿ ಹೆಚ್ಚಾಗಿ ಕಾಡುಗಳಲ್ಲಿ ಬೆಳೆಯುತ್ತದೆ.

ವಿಧಗಳು

ರಾಜ ನಿಘಂಟುಕಾರ ಪ್ರಕಾರ ಪಲಾಶದಲ್ಲಿ ನಾಲ್ಕು ವಿಧಗಳಿವೆ. ಅವು

- ರಕ್ತ ಪಲಾಶ
- ಪೀತ ಪಲಾಶ
- ಶ್ವೇತ ಪಲಾಶ
- ನೀಲ ಪಲಾಶ

ಸಸ್ಯಶಾಸ್ತ್ರದಲ್ಲಿ ಎರಡು ವಿಧವನ್ನು ಪಲಾಶ ಎಂದು ಗುರುತಿಸಲಾಗಿದೆ. ಅವು

- Butea monosperma
- Butea superba

ಉಪಯುಕ್ತ ಅಂಗಗಳು

- ತೊಗಟೆ
- ಪತ್ರ
- ಪುಷ್ಪ
- ನಿರ್ಯಾಸ
- ಬೀಜ

ದ್ರವ್ಯದ ಗುಣಧರ್ಮಗಳು

ರಸ : ಕಟು, ತಿಕ್ತ, ಕಷಾಯ

ಗುಣ : ಲಘು, ಸ್ನಿಗ್ಧ

ವೀರ್ಯ : ಉಷ್ಣ

ವಿಪಾಕ : ಕಟು

ಕರ್ಮ : ವಾತಕಫಹರ, ಗ್ರಾಹೀ, ಕ್ರಿಮಿಘ್ನ, ದೀಪನ

"ಕಷಾಯಃ ಕಟುಕಃ ತಿಕ್ತೋ ಸ್ನಿಗ್ಧೋ ಗುದಜರೋಗಜಿತ್।
ವಾತಲಂ ಕಫಪಿತ್ತಾಸ್ರಕೃಚ್ಛ್ರಜಿದ್‌ಗ್ರಾಹೀ ಶೀತಲಂ॥
ತೃಟ್‌ದಾಹಶಾಮಕಂ ವಾತರಕ್ತಕುಷ್ಠ ಹರಂ ಪರಂ॥ *(ಭಾವಪ್ರಕಾಶ)*

ಎಂದರೆ ಮುತ್ತುಗವು ಕಷಾಯ, ಕಟು, ತಿಕ್ತ ರಸದಿಂದ ಕೂಡಿದೆ. ಸ್ನಿಗ್ಧ ಮತ್ತು ಶೀತ ಗುಣದಿಂದ ಕೂಡಿದೆ. ಕಫವಾತಹರವಾಗಿದೆ. ಹೂವು ಕಫಪಿತ್ತ ಶಾಮಕವಾಗಿದೆ. ಬಾಯಾರಿಕೆ, ಗುದರೋಗ, ವಾತರಕ್ತ, ಕುಷ್ಠರೋಗಗಳನ್ನು ನಿವಾರಿಸುತ್ತದೆ.

ಔಷಧಿ ಪ್ರಮಾಣ

ಚಕ್ಕೆಯ ಕಷಾಯ – 50–100 ಮಿ.ಲೀ

ಬೀಜ ಚೂರ್ಣ – 3–6 ಗ್ರಾಂ

ಹೂವಿನ ಚೂರ್ಣ – 3–6 ಗ್ರಾಂ

ನಿರ್ಯಾಸ – 1–3 ಗ್ರಾಂ

ಔಷಧೀಯ ಯೋಗಗಳು

- ಕ್ರಿಮಿಮುದ್ಗರ ರಸ
- ಪಲಾಶಕ್ಷಾರ ತೈಲ
- ಪಲಾಶಬೀಜಾದಿ ಚೂರ್ಣ
- ಪಲಾಶಕ್ಷಾರ ಘೃತ

ಔಷಧೀಯ ಉಪಯೋಗಗಳು

- ಮುತ್ತುಗದ ಕಷಾಯ ಅಥವಾ ಮುತ್ತುಗ ಬೀಜದ ಕಲ್ಕವನ್ನು ಮಜ್ಜಿಗೆಯಲ್ಲಿ ಸೇವಿಸುವುದರಿಂದ ಕ್ರಿಮಿರೋಗವು ನಿವಾರಣೆಯಾಗುತ್ತದೆ.
- ಮುತ್ತುಗದ ಬೀಜದ ಕಷಾಯವನ್ನು ಹಾಲಿನೊಂದಿಗೆ ಸೇವಿಸುವುದರಿಂದ ಅತಿಸಾರ ರೋಗವು ನಿವಾರಣೆಯಾಗುತ್ತದೆ.
- 160 ಗ್ರಾಂನಷ್ಟು ಮುತ್ತುಗದ ಹೂವಿನ ಪುಡಿಗೆ 320 ಗ್ರಾಂ. ಸಕ್ಕರೆ ಬೆರೆಸಿ ಹಾಲಿನ ಜೊತೆಗೆ ಸೇವಿಸುವುದರಿಂದ ದೇಹದ ಒಳಗಿನ ರಕ್ತಸ್ರಾವಕ್ಕೆ ಒಳ್ಳೆಯದು.
- ಮುತ್ತುಗದಿಂದ ತಯಾರಿಸಿದ ಸಾರಿಗೆ ಸಕ್ಕರೆ ಬೆರೆಸಿ ಸೇವಿಸುವುದರಿಂದ ಹೊಟ್ಟೆನೋವು ನಿವಾರಣೆಯಾಗುತ್ತದೆ.
- ಮುತ್ತುಗದ ಬೀಜದ ಪುಡಿ, ಅತ್ತಿಯ ಹಣ್ಣಿನ ಪುಡಿ ಮತ್ತು ಕರಿಮೆಣಸಿನ ಪುಡಿಯನ್ನು ಬೆರೆಸಿ ಸೇವಿಸುವುದರಿಂದ ಕೆಮ್ಮು ಮೂರು ದಿವಸದೊಳಗೆ ನಿವಾರಣೆಯಾಗುತ್ತದೆ.
- ಮುತ್ತುಗದ ಹೂವನ್ನು ಜೇನಿನಲ್ಲಿ ತೇಯ್ದು ಕಣ್ಣಿಗೆ ಅಂಜನವಾಗಿ ಇಡುವುದರಿಂದ ಕಣ್ಣು ರೋಗವು ನಿವಾರಣೆಯಾಗುತ್ತದೆ.
- ಮುತ್ತುಗದ ಎಲೆಯ ಅಥವಾ ಬೇರಿನ ಕಷಾಯ ಮಾಡಿ ಸೇವಿಸುವುದರಿಂದ ಇರುಳುಗಣ್ಣು, ಆನೆಕಾಲು ರೋಗಕ್ಕೆ ಒಳ್ಳೆಯದು.
- ಮುತ್ತುಗದ ಹೂವಿನ ಕಷಾಯ ಸೇವನೆಯಿಂದ ಚರ್ಮ ರೋಗಗಳು ನಿವಾರಣೆಯಾಗುತ್ತದೆ.
- ಮುತ್ತಗದ ಬೇರಿನ ತೊಗಟೆಯ ರಸವನ್ನು ವಿಷದ ವೇಗಕ್ಕೆ ತಕ್ಕಂತೆ ಮತ್ತು ರೋಗಿಯ ಶಕ್ತಿಗೆ ತಕ್ಕಂತೆ 9 ರಿಂದ 11 ತೊಲಗಳವರೆಗೆ ಕುಡಿಯುವುದರಿಂದ ಹಾವಿನ ವಿಷ ನಿವಾರಣೆಯಾಗುತ್ತದೆ.
- ಮುತ್ತುಗದ ಎಲೆಗಳ ರಸವನ್ನು ಹುಣ್ಣಿನ ಮೇಲೆ ಹಚ್ಚಿದರೆ ಹುಣ್ಣು ಮಾಯವಾಗುತ್ತದೆ.

- ರಾತ್ರಿ ನೀರಿನಲ್ಲಿ ನೆನೆ ಹಾಕಿದ ಒಂದು ತೊಲ ಮುತ್ತುಗದ ಹೂವನ್ನು ಕಿವುಚಿ ಅದಕ್ಕೆ ಸಕ್ಕರೆಯನ್ನು ಸೇರಿಸಿ ಕುಡಿಯುವುದರಿಂದ ಮೂಗಿನಿಂದ ಬರುವ ರಕ್ತವು ಮತ್ತು ಮೂತ್ರ ದ್ವಾರದಿಂದ ಬರುವ ರಕ್ತವು ನಿಲ್ಲುತ್ತದೆ.
- ಮುತ್ತುಗದ ಬೀಜಗಳನ್ನು ನಿಂಬೆಯ ರಸದಲ್ಲಿ ತೇಯ್ದು ನವೆ, ಇಸುಬು ಮೊದಲಾದ ಚರ್ಮ ರೋಗಗಳಿಗೆ ಲೇಪಿಸಿದರೆ ಚರ್ಮರೋಗವು ನಿವಾರಣೆಯಾಗುತ್ತದೆ.
- ಮುತ್ತುಗದ ಹೂಗಳನ್ನು ನೀರಿನಲ್ಲಿ ಕಾಯಿಸಿ, ಆ ನೀರಿನಿಂದ ಹೊಕ್ಕಳದ ಕೆಳಭಾಗಕ್ಕೆ ಶಾಖವನ್ನು ಕೊಟ್ಟರೆ ಕಟ್ಟಿಕೊಂಡಿದ್ದ ಮೂತ್ರವು ಸರಳವಾಗಿ ಹೊರಬರುತ್ತದೆ.


ಚಿತೆ ಮತ್ತು ಚಿಂತೆ ಎರಡರ ಮಧ್ಯೆ
ಚಿಂತೆಯೆ ಹೆಚ್ಚಿನದು

ಹಲ್ಲು ಬಾಧೆ ನಿವಾರಕ ಲವಂಗ

Syzygium aromaticum, Linn.

Myrtaceae







ಲವಂಗವು ಸಾಮಾನ್ಯವಾಗಿ ಎಲ್ಲರು ನೋಡಿರುವಂತಹ ದ್ರವ್ಯ. ಹಲ್ಲು ನೋವು ಉಂಟಾದಾಗ ಕೂಡಲೇ ನಮ್ಮ ಅಜ್ಜಿಯರು "ಪರ್ತಿನ್‌ಲವಂಗದ ಎಣ್ಣೆಡ್‌ಮುರ್ಕಾದ್‌ಕೂಲಿದ ಬೆನೆದಡೆ ದಿಲಾ" ಹತ್ತಿಯನ್ನು ಲವಂಗದ ಎಣ್ಣೆಯಲ್ಲಿ ಮುಳುಗಿಸಿ ಹಲ್ಲುನೋವು ಇರುವ ಜಾಗಕ್ಕೆ ಇಡಬೇಕು. ಹೀಗೆ ಮಾಡುವುದರಿಂದ ಹಲ್ಲುನೋವು ಖಂಡಿತವಾಗಿಯೂ ಕಡಿಮೆಯಾಗುತ್ತದೆ, ಎಂಬುದು ಅಜ್ಜಿಯರ ಮಾತ್ರವಲ್ಲ ನನ್ನ ಅನುಭವವೂ ಕೂಡ. ಲವಂಗದ ಮೊಗ್ಗು ದೇವತೆಗಳಿಗೆ ಪ್ರಿಯ ಎಂಬ ಉಲ್ಲೇಖವನ್ನು ನಾವು ಪುಸ್ತಕಗಳಲ್ಲಿ ಕಾಣಬಹುದು. ಈ ದ್ರವ್ಯವು ಬೃಹತ್‌ಸಂಹಿತೆಗಳಲ್ಲಿ ಯಥೇಚ್ಛವಾಗಿ ವಿವರಿಸಲ್ಪಡದಿದ್ದರೂ ಆಯುರ್ವೇದದಲ್ಲಿ ಮಾತ್ರ ಔಷಧಕ್ಕೆ ಉಪಯೋಗಿಸುವ ಪ್ರಮುಖ ದ್ರವ್ಯಗಳಲ್ಲಿ ಒಂದಾಗಿದೆ. ಯೋಗ ಗ್ರಂಥಗಳಲ್ಲಿ ಇದರ ಔಷಧಿ ಉಪಯೋಗವನ್ನು ಕಾಣಬಹುದಾಗಿದೆ. ಈ ದ್ರವ್ಯವನ್ನು ಮುಖ್ಯವಾಗಿ ಪಚನ ತೊಂದರೆಗಳಿಗೆ ಉಪಯೋಗಿಸುವುದರ ಜೊತೆಗೆ ವಿಷರೋಗ, ನೇತ್ರರೋಗ, ಶ್ವಾಸ, ಕೆಮ್ಮು, ವಾಂತಿ, ವಿಕ್ಕಾದೆ ಮುಂತಾದ ತೊಂದರೆಗಳಿಗೂ ಉಪಯೋಗಿಸುತ್ತಿದ್ದರು. ಲವಂಗವನ್ನು ನೋಡಿದರೂ, ಲವಂಗ ವೃಕ್ಷವನ್ನು ನೋಡಿದವರು ತೀರ ಅಪರೂಪ.

ಬಹು ಭಾಷಾ ಹೆಸರುಗಳು

ಕನ್ನಡ : ಲವಂಗ

ಸಂಸ್ಕೃತ : ಲವಂಗ

ತುಳು : ಲವಂಗೊ

ಹಿಂದಿ : ಲೌಂಗ್

ಇಂಗ್ಲೀಷ್ : ಕ್ಲೋವ್

ಪರ್ಯಾಯ ಪದಗಳು

ಲವಂಗ, ವಾರಿಜ, ದೇವ ಕುಸುಮ, ಶ್ರೀ ಪ್ರಸೂನ, ಶ್ರೀಗಂಧ ಪುಷ್ಪ, ಚಂದನ ಪುಷ್ಪಕ, ಶ್ರೀ ಚಂದನ ಪುಷ್ಪ, ಶೇಖರ, ತೀಕ್ಷ್ಣ ಪುಷ್ಪ, ದಿವ್ಯಗಂಧ, ಗ್ರಹಣೀಕರ ಮಲಯಾ, ಸುಮಾತ್ರಾ ಮುಂತಾದ ಜಲಾಕ್ಷ ಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಯುವುದರಿಂದ ಇದನ್ನು 'ವಾರಿಜ' ಎಂದು ಕರೆಯುತ್ತಾರೆ.

ದ್ರವ್ಯದ ವರ್ಣನೆ

ಲವಂಗವು ಸದಾ ಹಸಿರಾಗಿ ಸುಮಾರು 10–13 ಮೀಟರ್‌ನಷ್ಟು ಎತ್ತರಕ್ಕೆ ಬೆಳೆಯುತ್ತದೆ. ಸುವಾಸನೆಯುಳ್ಳ ಎಲೆಯು ಹಸಿರು ಬಣ್ಣದಿಂದ ಕೂಡಿದೆ. ಎಲೆಯು ಅಂಡಾಕಾರದಲ್ಲಿರುತ್ತದೆ. ಬೊಡ್ಡೆ (ಟ್ರಂಕ್)ಯ ಚಿಕ್ಕೆಯು ಹಳದಿ ಮಿಶ್ರಿತ ಬಿಳಿ ಬಣ್ಣವನ್ನು ಹೊಂದಿ, ಕೋಮಲವಾಗಿದೆ. ಕಾಂಡದಲ್ಲಿ ಸುಂದರವಾದ, ಮೃದುವಾದ ಶಾಖೆಗಳಿರುತ್ತವೆ. ಹೊರಗೆ ಕಂದು ಬಣ್ಣದಿಂದ ಕೂಡಿದ ಹೂವಿನ ಸುಗಂಧ ಎಲ್ಲರಿಗೂ ಪರಿಚಿತ. ಲವಂಗದ ಕಾಯಿ ಮಾಂಸದ ತಿರುಳಿನಂತಿದ್ದು, ಸುಮಾರು 6 ಸೆಂ.ಮೀಟರಿನಷ್ಟು ಉದ್ದವಾಗಿದೆ. ಒಂದೊಂದು ಕಾಯಿಯಲ್ಲಿ ಒಂದೊಂದು ಬೀಜವಿದೆ. ಈ ದ್ರವ್ಯವು ಹೂವನ್ನು ಜನವರಿ – ಜೂನ್ ತಿಂಗಳಿನಲ್ಲಿ ನಂತರ ಕಾಯಿಯನ್ನು ಬಿಡುತ್ತದೆ. ಸಂಬಾರ ಪದಾರ್ಥವಾಗಿ, ಔಷಧ ದ್ರವ್ಯವಾಗಿ ಉಪಯೋಗಿಸಲ್ಪಡುವ ಈ ದ್ರವ್ಯವು ಹೆಚ್ಚಾಗಿ ಕೇರಳ, ತಮಿಳುನಾಡು ರಾಜ್ಯಗಳಲ್ಲಿ ಬೆಳೆಯುತ್ತದೆ.

ಉಪಯುಕ್ತ ಅಂಗಗಳು

- ಲವಂಗದೆಣ್ಣೆ
- ಮೊಗ್ಗು

ದ್ರವ್ಯದ ಗುಣಧರ್ಮಗಳು

ರಸ : ತಿಕ್ತ, ಕಟು

ಗುಣ : ಲಘು, ಸ್ನಿಗ್ಧ

ವೀರ್ಯ : ಶೀತ

ವಿಪಾಕ : ಕಟು

ಕರ್ಮ : ಕಫಪಿತ್ತಹರ, ರುಚ್ಯ, ದೀಪನ, ಪಾಚನ, ನೇತ್ರ್ಯ, ಚಕ್ಷುಷ್ಯ

ಲವಂಗಂ ಕಟುಕಂ ತಿಕ್ತಂ ಲಘು ನೇತ್ರಹಿತಂ ಹಿಮಂ।
ದೀಪನಂ ಪಾಚನಂ ರುಚ್ಯಂ ಕಫಪಿತ್ತಾಸ್ರನಾಶಕೃತ್॥
ತೃಷ್ಣಾಂ ಛರ್ದಿಂ ತಥಾಧ್ಮಾನಂ ಶೂಲಮಾಶು ವಿನಾಶಯೇತ್।
ಕಾಸಂ ಶ್ವಾಸಂ ಚ ಹಿಕ್ಕಾಂಚ ಕ್ಷಯಂ ಕ್ಷಪಯತಿ ಧ್ರುವಂ॥ *(ಭಾವ ಪ್ರಕಾಶ)*

ಎಂದರೆ ಲವಂಗ ಕಟು ಮತ್ತು ತಿಕ್ತ ರಸದಿಂದ ಕೂಡಿದೆ, ಲಘು ಗುಣದಿಂದ ಕೂಡಿದೆ, ಶೀತ ವೀರ್ಯದಿಂದ ಕೂಡಿದೆ. ನೇತ್ರಕ್ಕೆ ಹಿತಕರ, ದೀಪನ ಪಚನವಾಗಿದೆ, ರುಚಿಯನ್ನು ಹೆಚ್ಚಿಸುತ್ತದೆ. ಕಫಪಿತ್ತರಕ್ತದೋಷಗಳನ್ನು ನಿವಾರಿಸುತ್ತದೆ. ಬಾಯಾರಿಕೆ, ವಾಂತಿ, ಹೊಟ್ಟೆಯುಬ್ಬರ, ಶೂಲ, ಕೆಮ್ಮು, ಶ್ವಾಸ, ಎಕ್ಕಾದೆ, ಕ್ಷಯ ಮುಂತಾದ ತೊಂದರೆಗಳನ್ನು ನಿವಾರಿಸುತ್ತದೆ.

ಔಷಧಿ ಪ್ರಮಾಣ

ಚೂರ್ಣ – 1–2 ಗ್ರಾಂ

ಲವಂಗದೆಣ್ಣೆ – 1–2 ಬಿಂದು

ಔಷಧೀಯ ಯೋಗಗಳು

- ಅವಿಪತ್ತಿಕರ ಚೂರ್ಣ
- ಲವಂಗಾದಿ ವಟಿ
- ಖದಿರಾದಿ ಗುಟಿಕಾ
- ದೇವಕುಸುಮಾರ್ಕ
- ಲವಂಗಾದಿ ಚೂರ್ಣ
- ಲವಂಗೋದಕ

ಔಷಧೀಯ ಉಪಯೋಗಗಳು

- ಲವಂಗದ ರಸವನ್ನು ಸೇವಿಸುವುದರಿಂದ ಬಾಯಾರಿಕೆಯು ನಿವಾರಣೆಯಾಗುತ್ತದೆ.
- ಲವಂಗವನ್ನು ಬಿಸಿ ನೀರಿನಲ್ಲಿ ಅರೆದು ಹಚ್ಚುವುದರಿಂದ ನೋವು ನಿವಾರಣೆಯಾಗುತ್ತದೆ.


- ಶಿರಶೂಲ, ದಂತಶೂಲ, ಕ್ರಿಮಿದಂತ ಮುಂತಾದ ತೊಂದರೆಯಿಂದ ಬಳಲುತ್ತಿರುವವರಿಗೆ ಲವಂಗ ತೈಲವು ಬಹಳ ಪರಿಣಾಮಕಾರಿ.
- ಬಾಯಿ ದುರ್ವಾಸನೆಯನ್ನು ನಿವಾರಿಸಲು ಜಾತೀಫಲ, ಲತಾಕಸ್ತೂರೀ, ಅಡಿಕೆ, ಲವಂಗ, ಕಕ್ಕೋಲ, ಕರ್ಪೂರ, ಏಲಕ್ಕಿಯನ್ನು ಸೇರಿಸಿ ತಾಂಬೂಲ ಸೇವನೆ ಮಾಡಬೇಕು.
- ಲವಂಗ ಹಾಕಿ ಬಿಸಿ ಮಾಡಿದ ನೀರನ್ನು ಸೇವಿಸುವುದರಿಂದ ಕಫದೋಷ ನಿವೃತ್ತಿಯಾಗಿ ಅಜೀರ್ಣ, ಅರುಚಿ ನಿವಾರಿಸುತ್ತದೆ.
- ಮೂರ್ಛೆ ಬಂದಾಗ ಲವಂಗ ಅರೆದು ಕಣ್ಣುಗಳಿಗೆ ಅಂಜನವಾಗಿ ಹಚ್ಚಿದರೆ ಮೂರ್ಛೆ ವಾಸಿಯಾಗಿ ಸ್ಮೃತಿ ಬರುತ್ತದೆ.
- ಎಣ್ಣೆ ದೀಪದಲ್ಲಿ ಸುಟ್ಟ ಲವಂಗದ ಕರುಕಿಗೆ ಸ್ವಲ್ಪ ಜೇನುತುಪ್ಪ ಬೆರೆಸಿ ಮಕ್ಕಳಿಗೆ ಕೊಟ್ಟರೆ ಮಕ್ಕಳ ವಾಂತಿಯು ನಿಲ್ಲುತ್ತದೆ.
- ಬಿಕ್ಕಳಿಕೆಗೂ ಕೂಡ ಇದು ಉತ್ತಮ ಔಷಧ. ಲವಂಗವನ್ನು ಕಲ್ಲು ಉಪ್ಪಿನಲ್ಲಿ ಚಪ್ಪರಿಸುತ್ತಾ ನೀರು ಸೇವಿಸುತ್ತಿದ್ದರೆ ಕೆಮ್ಮು ಗಂಟಲು ಕೆರೆತ ನಿವಾರಣೆಯಾಗುತ್ತದೆ.
- ಲವಂಗದಿಂದ ತಯಾರಿಸಿದ ಕಷಾಯವನ್ನು ಮೂರು ಹೊತ್ತು ಸೇವಿಸುವುದರಿಂದ ಅಜೀರ್ಣ, ಹೊಟ್ಟೆಯುಬ್ಬರ ನಿವಾರಣೆ.
- ಎಳ್ಳೆಣ್ಣೆಗೆ ಲವಂಗವನ್ನು ಹಾಕಿ, ಎಣ್ಣೆಯನ್ನು ಬಿಸಿ ಮಾಡಿ ಕೆಳಗಿಳಿಸಿ ತೊಟ್ಟು ತೊಟ್ಟಾಗಿ ಕಿವಿಗೆ ಹಾಕಿದರೆ ಕಿವಿನೋವು ನಿವಾರಣೆಯಾಗುತ್ತದೆ.
- ಲವಂಗವನ್ನು ಅನೇಕ ತರಹದ ಚರ್ಮದ ತೊಂದರೆಗಳಿಗೆ ಉಪಯೋಗಿಸುತ್ತಾರೆ.
- ಸಣ್ಣ ಏಲಕ್ಕಿ, ಜಟಾಮಾಂಸಿ, ಲವಂಗ, ಶುಂಠಿ, ಹಿಪ್ಪಲಿ, ತುಂಗೆಗಡ್ಡೆ, ರಕ್ತಚಂದನ, ಧನಿಯಾ, ಖರ್ಜೂರ, ದಾಲ್ಚಿನಿ, ಅತಿಮಧುರ, ಬಲದಬೇರು, ದಾಳಿಂಬೆಯ ಬೀಜ ಇವುಗಳ ಸಮಪ್ರಮಾಣದ ಚೂರ್ಣಕ್ಕೆ ಜೇನು ಸೇರಿಸಿ, ಒಂದು ಹೊತ್ತಿಗೆ 5 ಗ್ರಾಂ.ನಷ್ಟು ಸೇವಿಸಿದರೆ ಬಿಕ್ಕಳಿಗೆ, ಕಾಮಾಲೆ, ಮೂತ್ರದ ಉರಿ, ಪ್ರಮೇಹ ರೋಗಗಳು ನಿವಾರಣೆಯಾಗುತ್ತದೆ.

ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು

ದಕ್ಷಿಣ ಭಾರತದ ಶಂಖಪುಷ್ಪಿ

Clitoria ternatea, Linn.

Fabaceae





ಸಾಮಾನ್ಯವಾಗಿ ಗಿಡಮರಗಳಿಗೆ, ಬೇಲಿಗೆ ಹಬ್ಬಿಕೊಂಡು ಬೆಳೆಯುವ ಈ ದ್ರವ್ಯವನ್ನು ನೋಡದವರು ತೀರಾ ಕಡಿಮೆ. ಅದರಲ್ಲೂ ಕರಾವಳಿ ಪ್ರದೇಶದ ಜನರಿಗೆ ತೀರಾ ಪರಿಚಿತ ದ್ರವ್ಯ. ಕೆಲವರು ಅಲಂಕಾರಕ್ಕೋಸ್ಕರ ಕಾಂಪೌಂಡಿನಲ್ಲಿ ಬೆಳೆಯುವುದನ್ನು ಕಾಣಬಹುದು. ತ್ರಿಮೂರ್ತಿಗಳಲ್ಲಿ ಒಬ್ಬನಾದ ವಿಷ್ಣುವು ಹೇಗೆ ನಮ್ಮನ್ನು ಪಾಲಿಸುವ, ಪೋಷಿಸುವ ಕಾರ್ಯವನ್ನು ಮಾಡುತ್ತಾನೋ, ಅದೇ ರೀತಿ ವಿಷ್ಣುವಿನ ಶಕ್ತಿಯನ್ನು ಪಡೆದ ಶಂಖಪುಷ್ಪಿಯು ಅದರ ಔಷಧ ಗುಣಗಳಿಂದ ರೋಗಿಯ ಆರೋಗ್ಯ ಪಾಲನೆ ಮತ್ತು ಬುದ್ಧಿ ವೃದ್ಧಿಸುವ ಕಾರ್ಯವನ್ನು ಮಾಡುತ್ತದೆ. ಬುದ್ಧಿ ವೃದ್ಧಿಸುವ ಶಂಖಪುಷ್ಪಿಯೂ ಆಯುರ್ವೇದದಲ್ಲಿ ವೇದಕಾಲದಿಂದಲೂ ಬಳಸುವ ದ್ರವ್ಯವಾಗಿದೆ. ಇಡೀ ಬಳ್ಳಿಯನ್ನು ಔಷಧ ತಯಾರಿಕೆಗೆ ಉಪಯೋಗಿಸುತ್ತಾರೆ. ಇದು ತ್ರಿದೋಷಗಳನ್ನು ನಿವಾರಿಸುವ ಶಕ್ತಿಯನ್ನು ಹೊಂದಿದೆ.

ಬಹು ಭಾಷಾ ಹೆಸರುಗಳು

ಕನ್ನಡ : ಗಿರಿಕರ್ಣಿಕ, ಶಂಖಪುಷ್ಪಿ

ಸಂಸ್ಕೃತ : ಅಪರಾಜಿತಾ

ತುಳು : ಶಂಖಪುಷ್ಪಿ
ಹಿಂದಿ : ಕೋಯಲ
ಇಂಗ್ಲೀಷ್ : ವಿಂಗ್‌ಲೀವ್‌ಡ್‌ಕ್ಲೈಟೋರಿಯಾ

ಪರ್ಯಾಯ ಪದಗಳು

ಅಪರಾಜಿತಾ, ಶಂಖಪುಷ್ಪೀ, ಗಿರಿಕರ್ನಿ, ವಿಷ್ಣುಕ್ರಾಂತ, ಗೋಕರ್ಣ, ಆಸ್ಫೋಟಾ, ಮಹಾಶ್ವೇತಾ, ಶ್ವೇತಾ ಕ್ಷೀರಪುಷ್ಪೀ, ಮಾಂಗಲ್ಯ ಪುಷ್ಪೀ, ಮೋಹನಾಶಿನೀ.

ಈ ದ್ರವ್ಯದ ಎಲೆಯು ದನದ ಕಿವಿಯ ಆಕಾರದಾಗೆ ಕಾಣುವುದರಿಂದ 'ಗೋಕರ್ಣ' ಎಂಬ ಹೆಸರಿನಿಂದ ಕರೆಯಲಾಗಿದೆ.

ದ್ರವ್ಯದ ವರ್ಣನೆ

ಶಂಖಪುಷ್ಪಿಯು ಸುಂದರವಾದ ಹೂಗಳಿಂದ ಕೂಡಿದ ಬಳ್ಳಿ, ಇದರ ಹೂವು ದನದ ಕಿವಿಯ ಆಕಾರದಲ್ಲಿದೆ. ಬಿಳಿ ಮತ್ತು ನೀಲಿ ಬಣ್ಣದ ಎರಡು ರೀತಿಯ ಹೂವುಗಳು ಈ ದ್ರವ್ಯದಲ್ಲಿ ಬೆಳೆಯುತ್ತದೆ. ಇದರ ಕೋಡುಗಳು ಬೆರಳಿನಷ್ಟು ಉದ್ದವಾಗಿ 4–5 ಬೀಜಗಳನ್ನು ಹೊಂದಿದೆ. ಒಣಗಿದಾಗ ಕೋಡು ತೆರೆದು ಬೀಜಗಳು ಉದುರುತ್ತವೆ. ಈ ದ್ರವ್ಯವು ಹೂವನ್ನು ಮಳೆಗಾಲದಲ್ಲಿ ಮತ್ತು ಹಣ್ಣನ್ನು ಚಳಿಗಾಲದಲ್ಲಿ ಬಿಡುತ್ತದೆ. ಸಾಮಾನ್ಯವಾಗಿ ಎಲ್ಲ ಪ್ರದೇಶದಲ್ಲಿ ಬೆಳೆಯುವ ಈ ದ್ರವ್ಯವು ದಕ್ಷಿಣ ಭಾರತದಲ್ಲಿ ಹೆಚ್ಚಾಗಿ ಬೆಳೆಯುತ್ತದೆ.

ವಿಧಗಳು

ಶಂಖಪುಷ್ಪಿ ಒಂದು ವಿಶಿಷ್ಟ ವನಸ್ಪತಿಯಾದುದರಿಂದ ಸಸ್ಯಶಾಸ್ತ್ರದಲ್ಲಿ ಐದು ಪ್ರಭೇದಗಳನ್ನು ಕಾಣಬಹುದು. ಅವು

- Clitorea ternatea
- Convolvulus pluricaulis
- Evolvulus alsinoides
- Canscora decussata
- Lavendula bipinnata

ಧನ್ವಂತರಿ ನಿಘಂಟುಕಾರನ ಪ್ರಕಾರ ಶಂಖಪುಷ್ಪಿಯಲ್ಲಿ ಎರಡು ವಿಧಗಳಿವೆ. ಅವು

- ಬಿಳಿ ಶಂಖ ಪುಷ್ಪಿ
- ನೀಲಿ ಶಂಖಪುಷ್ಪಿ

ಉಪಯುಕ್ತ ಅಂಗ

- ಬೇರು
- ಬೇರಿನ ತೊಗಟೆ
- ಪಂಚಾಂಗ

ದ್ರವ್ಯದ ಗುಣಧರ್ಮಗಳು

ರಸ : ಕಟು, ತಿಕ್ತ, ಕಷಾಯ

ಗುಣ : ಲಘು, ರೂಕ್ಷ

ವೀರ್ಯ : ಶೀತ

ವಿಪಾಕ : ಮಧುರ

ಕರ್ಮ : ತ್ರಿದೋಷಹರ, ಮೇಧ್ಯ, ವಿಷಘ್ನ, ಚಕ್ಷುಷ್ಯ, ಸ್ವರ್ಯ, ದೀಪಕ

ಅಪರಾಜಿತೇ ಕಟೂ ಮೇಧ್ಯೇ ಶೀತೇ ಕಂಠ್ಯೇ ಸುದೃಷ್ಟಿದೇ।
ಕುಷ್ಠಮೂತ್ರ ತ್ರಿದೋಷಾಮಶೋಥವ್ರಣವಿಷಾಪಹೇ॥
ಕಷಾಯಾ ಕಟುಕೇ ಪಾಕೇ ತಿಕ್ತೇ ಚ ಸ್ಮೃತಿಬುದ್ಧಿದೇ॥ *(ಭಾವಪ್ರಕಾಶ)*

ಎಂದರೆ ಶಂಖಪುಷ್ಪಿ ಕಟು, ತಿಕ್ತ, ಕಷಾಯ ರಸಗಳಿಂದ ಕೂಡಿದೆ. ಶೀತ ವೀರ್ಯವುಳ್ಳದಾಗಿದೆ. ಕಟು ವಿಪಾಕದಿಂದ ಕೂಡಿದೆ. ತ್ರಿದೋಷ ಶಾಮಕವಾಗಿದೆ. ಕಂಠ, ಕುಷ್ಠ, ಮೂತ್ರ ರೋಗ, ಆಮರೋಗ, ಶೋಥ, ವ್ರಣ, ವಿಷರೋಗಗಳನ್ನು ನಿವಾರಿಸುತ್ತದೆ. ಮುಖ್ಯವಾಗಿ ನೆನಪಿನ ಶಕ್ತಿ, ಬುದ್ಧಿಯನ್ನು ವೃದ್ಧಿಸುತ್ತದೆ.

ಔಷಧಿ ಪ್ರಮಾಣ

ಬೇರಿನ ಚೂರ್ಣ : 1–3 ಗ್ರಾಂ

ಬೀಜದ ಚೂರ್ಣ : 1–2 ಗ್ರಾಂ

ಸ್ವರಸ : 20 ಮಿ.ಲೀ.

ಆಸವ : 50 ಮಿ.ಲೀ.

ಔಷಧೀಯ ಯೋಗಗಳು

- ಗರ್ಭಪಾಲರಸ
- ಅಪರಾಜಿತ ಪಾನಕ
- ಅಮೃತಾದಿ ರಸಾಯನ
- ಶಂಖಪುಷ್ಪಿ ಪಾನಕ

ಔಷಧೀಯ ಉಪಯೋಗಗಳು


- ಶಂಖಪುಷ್ಪಿ ಬೇರಿನ ಪುಡಿ ಮತ್ತು ಕರಿಮೆಣಸಿನ ಪುಡಿಯನ್ನು ಬೆರೆಸಿ ಬಾಯಿಯಲ್ಲಿ ಇಡುವುದರಿಂದ ಹಲ್ಲುನೋವು ನಿವಾರಣೆ.
- ಶಂಖಪುಷ್ಪಿಯ ಎಲೆಯ ಲೇಪವನ್ನು ಸೇವಿಸುವುದರಿಂದ ಊತವು ನಿವಾರಣೆ.
- ಬಿಳಿ ಜಾತಿಯ ಶಂಖಪುಷ್ಪಿಯ ಬೇರನ್ನು ಅಕ್ಕಿ ತೊಳೆದ ನೀರಿನಲ್ಲಿ ಅರೆದು, ಅದಕ್ಕೆ ತುಪ್ಪ ಸೇರಿಸಿ ನಶ್ಯ ಮಾಡುವುದರಿಂದ ಮಾನಸ ರೋಗವು ಕಡಿಮೆಯಾಗುತ್ತದೆ.
- ಬಿಳಿ ಶಂಖಪುಷ್ಪಿಯ ಬೇರನ್ನು ತುಪ್ಪದಲ್ಲಿ ತೇಯ್ದು, ಬೆಳಗ್ಗೆ ಸೇವಿಸುವುದರಿಂದ ಗಂಡಮಾಲಾ ರೋಗವು ನಿವಾರಣೆ.
- ಶಂಖಪುಷ್ಪಿ ಬೇರಿನ ಲೇಪವನ್ನು ಹಚ್ಚುವುದರಿಂದ ಆನೆ ಕಾಲು ರೋಗವು ನಿವಾರಣೆ.
- ಶಂಖಪುಷ್ಪಿ ಹೂವನ್ನು ಹಾಲಿನಲ್ಲಿ ಅರೆದು ಕಣ್ಣಿಗೆ ಅಂಜನವಾಗಿ ಹಚ್ಚುವುದರಿಂದ ಕಣ್ಣುರೋಗವು ನಿವಾರಣೆ.
- ಬಿಳಿಶಂಖಪುಷ್ಪಿಯ ಎಲೆಯನ್ನು ಹಾಲಿನಲ್ಲಿ ಕಾಯಿಸಿ ಸೇವಿಸುವುದರಿಂದ ಕಾಮೋತ್ತೇಜತೆ ಉಂಟಾಗುತ್ತದೆ.
- ಶಂಖಪುಷ್ಪಿಯಿಂದ ತಯಾರಿಸಿದ ಲೇಪವನ್ನು ಚರ್ಮಕ್ಕೆ ಹಚ್ಚುವುದರಿಂದ ಚರ್ಮರೋಗವು ನಿವಾರಣೆ.
- ಶಂಖಪುಷ್ಪಿಯ ಎಲೆಗಳನ್ನು ನೀರಿನಲ್ಲಿ ಅರೆದು ಗಂಟಲಿನ ಹೊರಗಡೆ ಲೇಪಿಸುವುದರಿಂದ ಗಂಟಲು ಊತವು ಕಡಿಮೆಯಾಗುತ್ತದೆ.
- ನಾಲ್ಕು ಭಾಗ ಶಂಖಪುಷ್ಪಿ ಚೂರ್ಣಕ್ಕೆ ಒಂದು ಭಾಗ ಕರಿಮೆಣಸಿನ ಚೂರ್ಣ, 3 ಭಾಗ ಕಲ್ಲುಸಕ್ಕರೆ ಚೂರ್ಣ ಬೆರೆಸಿ ಹಾಲಿನಲ್ಲಿ ಸೇವಿಸುವುದರಿಂದ ಸ್ಮರಣ ಶಕ್ತಿ, ಬುದ್ಧಿಶಕ್ತಿ ಹೆಚ್ಚುತ್ತದೆ.
- ಶಂಖಪುಷ್ಪಿಯ ಚೂರ್ಣವನ್ನು ಹುರಿದು ಚೂರ್ಣ ಮಾಡಿ ಹಾಲಿನೊಂದಿಗೆ ದಿನಕ್ಕೆ ಎರಡು ಹೊತ್ತು ಸೇವಿಸುತ್ತಾ ಬಂದರೆ ಹೊಟ್ಟೆನೋವು, ಕರುಳು ನೋವು, ಹೊಟ್ಟೆಯುಬ್ಬರ, ಅಜೀರ್ಣರೋಗ ನಿವಾರಣೆ.
- ಶಂಖಪುಷ್ಪಿ ಎಲೆಯ ರಸಕ್ಕೆ ಸೈಂಧವ ಲವಣ ಬೆರೆಸಿ, ಸ್ವಲ್ಪ ಕಾಯಿಸಿ, ಕಿವಿಯ ಹೊರಭಾಗಕ್ಕೆ ಹಚ್ಚುವುದರಿಂದ ಕಿವಿನೋವು ಕಡಿಮೆಯಾಗುತ್ತದೆ.
- ಶಂಖಪುಷ್ಪಿ ಬೀಜಗಳನ್ನು ಹುರಿದು, ಸ್ವಲ್ಪ ಬೆಲ್ಲ ಸೇರಿಸಿ, ನುಣ್ಣಗೆ ಅರೆದು, ಹೆಸರು ಕಾಳಿನ ಗಾತ್ರದ ಮಾತ್ರೆ ಮಾಡಿ, ದಿನಕ್ಕೆ ಎರಡು ವೇಳೆ ಸೇವಿಸುವುದರಿಂದ ಕೆಮ್ಮು ನಿವಾರಣೆಯಾಗುತ್ತದೆ.
- ಶಂಖಪುಷ್ಪಿಯ ಬೇರು ಮತ್ತು ಬೀಜ ಜಲೋದರ ರೋಗಕ್ಕೆ ಒಳ್ಳೆಯದು.

ಬುದ್ಧಿವರ್ಧಕ – ಶಂಖಪುಷ್ಪಿ

Evolvulus alsinoides, Linn.

Convolvulaceae





ತ್ರಿಮೂರ್ತಿಗಳಲ್ಲಿ ಒಬ್ಬನಾದ ವಿಷ್ಣುವು ಹೇಗೆ ನಮ್ಮನ್ನು ಪಾಲಿಸುವ, ಪೋಷಿಸುವ ಕಾರ್ಯವನ್ನು ಮಾಡುತ್ತಾನೋ, ಅದೇ ರೀತಿ ವಿಷ್ಣುವಿನ ಶಕ್ತಿಯನ್ನು ಪಡೆದ ಶಂಖಪುಷ್ಪಿಯು ಅದರ ಔಷಧ ಗುಣಗಳಿಂದ ರೋಗಿಯ ಆರೋಗ್ಯ ಪಾಲನೆ ಮತ್ತು ಬುದ್ಧಿ ವೃದ್ಧಿಸುವ ಕಾರ್ಯವನ್ನು ಮಾಡುತ್ತದೆ. ಬುದ್ಧಿ ವೃದ್ಧಿಸುವ ಶಂಖಪುಷ್ಪಿಯು ಆಯುರ್ವೇದದಲ್ಲಿ ವೇದಕಾಲದಿಂದಲೂ ಬಳಸುವ ದ್ರವ್ಯವಾಗಿದೆ. ಶಂಖಾಕಾರದ ಪುಷ್ಪಗಳು ಇರುವುದರಿಂದ ಈ ವನಸ್ಪತಿಗೆ ಶಂಖಪುಷ್ಪಿ ಎಂದು ಹೆಸರು ಇಡಲಾಗಿದೆ. ಚರಕನ ಪ್ರಕಾರ ಇದೊಂದು ಮೇಧ್ಯ (ಬುದ್ಧಿವರ್ಧಕ) ದ್ರವ್ಯವಾಗಿದೆ. ಅದರ ಮೇಧ್ಯಗುಣದಿಂದಲೇ ಶಂಖಪುಷ್ಪಿ ಸಿರಪ್‌ಆಯುರ್ವೇದ ಔಷಧಾಲಯದಲ್ಲಿ ಯಥೇಚ್ಛವಾಗಿ ಮಾರಾಟವಾಗುತ್ತಿದೆ.

ಬಹು ಭಾಷಾ ಹೆಸರುಗಳು

ಕನ್ನಡ : ಶಂಖಪುಷ್ಪಿ, ಶಂಖಾಹುಲಿ

ಸಂಸ್ಕೃತ : ಶಂಖಪುಷ್ಪಿ

ತುಳು : ಶಂಖಪುಷ್ಪೀ

ಹಿಂದಿ : ಶಂಖಹುಲ್, ಶಂಖಪುಷ್ಪಿ

ಇಂಗ್ಲೀಷ್ : ಟ್ವಿನಿಂಗ್ ಸ್ಟೆಮ್

ಪರ್ಯಾಯ ಪದಗಳು :

ಶಂಖಪುಷ್ಪೀ, ಕ್ಷೀರಪುಷ್ಪೀ, ಗಿರಿಕರ್ಣಿ, ವಿಷ್ಣುಕ್ರಾಂತಾ, ಶಿವಬ್ರಾಹ್ಮೀ, ಮನೋರಮಾ, ಸುಪುಷ್ಪೀ, ಶಂಖಕುಸುಮಾ, ಶಂಕಿನೀ, ಶಂಖಪುಷ್ಪಿಕಾ, ಮೇಧ್ಯಾ, ವನವಿಲಾಸಿನೀ.

ಬುದ್ಧಿಯನ್ನು ವೃದ್ಧಿಸುವ ಕಾರಣ ಶಂಖಪುಷ್ಪಿಯನ್ನು 'ಮೇಧ್ಯಾ' ಎಂದು ಸಂಸ್ಕೃತದಲ್ಲಿ ಕರೆಯುತ್ತಾರೆ. ಶಂಖಪುಷ್ಪಿಯ ಹೂವು ಶುಭಕಾರಕವಾಗಿರುವುದರಿಂದ ಇದನ್ನು 'ಕುಸುಮ' ಎಂದು ಸಂಸ್ಕೃತದಲ್ಲಿ ಕರೆಯುತ್ತಾರೆ.

ದ್ರವ್ಯದ ವರ್ಣನೆ

ಶಂಖಪುಷ್ಪಿಯು ವರ್ಷಗಟ್ಟಲೆ ಬಾಳುವ ವನಸ್ಪತಿಯಾಗಿದೆ. ಈ ವನಸ್ಪತಿಯು ಭೂಮಿಯಿಂದ 10ರಿಂದ 30 ಸೆಂ.ಮೀ.ನಷ್ಟು ಉದ್ದವಾಗಿ ಬೆಳೆಯುತ್ತದೆ. ಇಡೀ ವನಸ್ಪತಿಯು ರೋಮಯುಕ್ತವಾಗಿದ್ದು, ಕಾಂಡವು ಸುಮಾರು 30 ಸೆಂ.ಮೀ.ನಷ್ಟು ಉದ್ದವಾಗಿ ಬೆಳೆಯುತ್ತದೆ. ಅಂತರ್‌ಭಾಗದ ಬೇರಿನ ತ್ವಚೆಯಲ್ಲಿ ಒಂದು ರೀತಿಹಾಲಿನ ಹಾಗೆ ಸ್ರಾವ ಇದ್ದು, ರುಚಿಯಲ್ಲಿ ಒಗರು ಇರುತ್ತದೆ. ಹೂಗಳು ನೀಲಿ, ಬಿಳಿ ಅಥವಾ ಕೆಂಪು ಬಣ್ಣದಿಂದ ಕೂಡಿರುತ್ತದೆ. ಈ ವನಸ್ಪತಿಯು ಭಾರತದಲ್ಲೆಡೆ ಬಯಲು ಪ್ರದೇಶಗಳಲ್ಲಿ, ರಸ್ತೆ ಬದಿಗಳಲ್ಲಿ, ಹುಲ್ಲುಗಾವಲುಗಳಲ್ಲಿ ಬೆಳೆಯುತ್ತದೆ.

ವಿಧಗಳು

ಶಂಖಪುಷ್ಪಿ ಒಂದು ವಿಶಿಷ್ಟ ವನಸ್ಪತಿಯಾದುದರಿಂದ ಸಸ್ಯಶಾಸ್ತ್ರದಲ್ಲಿ ಐದು ಪ್ರಭೇದಗಳನ್ನು ಗುರುತಿಸಬಹುದು. ಅವು

- Evoluvulus alsinoides
- Convolvulus pluricaulis
- Canscora decussata
- Clitorea terriatea
- Lavendula bippinnata

ಇದರಲ್ಲಿ ಮೊದಲ ಮೂರು ವಿಧವನ್ನು ಉತ್ತರ ಭಾರತದಲ್ಲಿ ಔಷಧಿಯಾಗಿ ಉಪಯೋಗಿಸಿದರೆ, ನಾಲ್ಕನೆ ವಿಧ Clitorea ternatea ವನ್ನು ದಕ್ಷಿಣ ಭಾರತದಲ್ಲಿ

ಔಷಧಿಗಾಗಿ ಉಪಯೋಗಿಸುತ್ತಾರೆ. ಆದರೆ, ಈ ಎಲ್ಲ ವನಸ್ಪತಿಯ ಗುಣಕರ್ಮಗಳು ಬಹುವಾಗಿ ಸಮಾನವಾಗಿರುವುದರಿಂದ ಅವುಗಳು ಲಭ್ಯತೆಯ ಪ್ರಕಾರ ಔಷಧಿಯಾಗಿ ಉಪಯೋಗಿಸಬಹುದು.

ಉಪಯುಕ್ತ ಅಂಗಗಳು

- ಸಂಪೂರ್ಣ ಗಿಡ
- ಬೇರು
- ಬೀಜ
- ಕ್ಷಾರ

ದ್ರವ್ಯದ ಗುಣಧರ್ಮಗಳು

ರಸ : ತಿಕ್ತ
ಗುಣ : ಸ್ನಿಗ್ಧ, ಪಿಚ್ಛಿಲ
ವೀರ್ಯ : ಶೀತ
ವಿಪಾಕ : ಮಧುರ
ಕರ್ಮ : ತ್ರಿದೋಷಹರ, ಮೇಧ್ಯ, ಸ್ವರ್ಯ, ಕುಷ್ಠಘ್ನ

ಶಂಖಪುಷ್ಪೀ ಸರಾ ಮೇಧ್ಯಾ ವೃಷ್ಯಾ ಮಾನಸರೋಗಹೃತ್।
ರಸಾಯನೀ ಕಷಾಯೋಷ್ಣಾ ಸ್ಮೃತಿಕಾಂತಿಬಲಾಗ್ನಿದಾ॥
ದೋಷಾಪಸ್ಮಾರಭೂತಾಶ್ರೀಕುಷ್ಠಕ್ರಿಮಿವಿಷಪ್ರಣುತ್॥ *(ಭಾವಪ್ರಕಾಶ)*

ಎಂದರೆ ಶಂಖಪುಷ್ಪಿಯು ಬುದ್ಧಿವರ್ಧಕ, ಕಾಮೋತ್ತೇಜಕ, ಮಾನಸಿಕ ರೋಗಕ್ಕೆ ಒಳ್ಳೆಯದು. ಕಷಾಯ ರಸದಿಂದ ಕೂಡಿದೆ. ಉಷ್ಣವೀರ್ಯದಿಂದ ಕೂಡಿದೆ. ಸ್ಮರಣಶಕ್ತಿ, ಕಾಂತಿ,ಬಲ, ಅಗ್ನಿಯನ್ನು ಹೆಚ್ಚಿಸುತ್ತದೆ. ತ್ರಿದೋಷಹರವಾಗಿದೆ. ಅಪಸ್ಮಾರ, ಕುಷ್ಠ, ಕ್ರಿಮಿ, ವಿಷರೋಗಕ್ಕೆ ಒಳ್ಳೆಯದು.

ಔಷಧಿ ಪ್ರಮಾಣ

ಲೇಪ : 10–20 ಗ್ರಾಂ.
ಕಷಾಯ : 50–100 ಮಿ.ಲೀ.
ಕ್ಷಾರ : 1–3 ಗ್ರಾಂ.
ಚೂರ್ಣ : 3–6 ಗ್ರಾಂ.


ಔಷಧಿ ಯೋಗಗಳು

- ಶಂಖಪುಷ್ಪಿ ಸಿರಪ್
- ಶಂಖಪುಷ್ಪಿ ರಸಾಯನ
- ಶಂಖಪುಷ್ಪಿ ತೈಲ
- ಅಮೃತಾದಿ ರಸಾಯನ
- ಮೇಧ್ಯ ರಸಾಯನ
- ಬ್ರಾಹ್ಮೀ ರಸಾಯನ
- ಮೇಧ್ಯ ಕಷಾಯ
- ಶಂಖಪುಷ್ಪಿ ಪಾನಕ

ಔಷಧೀಯ ಉಪಯೋಗಗಳು

- ಶಂಖಪುಷ್ಪಿಯಿಂದ ತಯಾರಿಸಿದ ಲೇಪವನ್ನು ಚರ್ಮಕ್ಕೆ ಹಚ್ಚುವುದರಿಂದ ಚರ್ಮರೋಗವು ನಾಶವಾಗುತ್ತದೆ.
- ಶಂಖಪುಷ್ಪಿ ಬೀಜಗಳನ್ನು ಹುರಿದು ಸ್ವಲ್ಪ ಬೆಲ್ಲ ಸೇರಿಸಿ, ನುಣ್ಣಗೆ ಅರೆದು, ಹೆಸರು ಕಾಳಿನ ಗಾತ್ರದ ಗುಳಿಗೆ ಮಾಡಿ ನೆರಳಿನಲ್ಲಿ ಒಣಗಿಸಿ, ದಿನಕ್ಕೆ ಎರಡು ವೇಳೆ ಒಂದೊಂದು ಗುಳಿಗೆಯನ್ನು ನೀರಿನಲ್ಲಿ ಸೇವಿಸುವುದರಿಂದ ಕೆಮ್ಮು ನಿವಾರಣೆಯಾಗುತ್ತದೆ.
- ಶಂಖಪುಷ್ಪಿಯ ಎಲೆಗಳನ್ನು ನೀರಿನಲ್ಲಿ ಅರೆದು ಗಂಟಲಿನ ಹೊರಗಡೆ ಲೇಪಿಸುವುದರಿಂದ ಗಂಟಲು ಊತವು ಕಡಿಮೆಯಾಗುತ್ತದೆ.
- ಶಂಖಪುಷ್ಪಿ ಬೇರು, ಬೀಜ ಮತ್ತು ಗರಿಕೆ ಹುಲ್ಲನ್ನು ತಣ್ಣೀರಿನಲ್ಲಿ ನಯವಾಗಿ ಅರೆದು, ಸೋಸಿ ರಸವನ್ನು ತೊಟ್ಟು ತೊಟ್ಟಾಗಿ ಮೂಗಿಗೆ ಬಿಡುವುದರಿಂದ ಅಸಾಧ್ಯ ತಲೆಶೂಲೆ ಕಡಿಮೆಯಾಗುತ್ತದೆ.
- ಪ್ರಸಿದ್ಧ ಔಷಧ ಶಂಖಪುಷ್ಪಿ ಸಿರಪನ್ನು ದಿನಾಲೂ ಎರಡು ಚಮಚ ತೆಗೆದುಕೊಳ್ಳುವುದರಿಂದ ಬುದ್ಧಿ, ಸ್ಮರಣ ಶಕ್ತಿ ಹೆಚ್ಚುತ್ತದೆ.
- ಶಂಖಪುಷ್ಪಿಯಿಂದ ತಯಾರಿಸಿದ ಕೂದಲಿನ ಎಣ್ಣೆಯನ್ನು ತಲೆಗೆ ಹಚ್ಚುವುದರಿಂದ ತಲೆಕೂದಲು ಉದುರುವುದನ್ನು ತಡೆಯಬಹುದು.
- ಶಂಖಪುಷ್ಪಿಯ ರಸವನ್ನು ಸೇವಿಸುವುದರಿಂದ ಹಸಿವು ಉಂಟಾಗುತ್ತದೆ.
- ಶಂಖಪುಷ್ಪಿ ಸಿದ್ಧ ಪುರಾಣ ಘೃತ ಸೇವಿಸುವುದರಿಂದ ಅಪಸ್ಮಾರ ರೋಗಕ್ಕೆ ಒಳ್ಳೆಯದು.

- ಅಪಸ್ಮಾರ ರೋಗದಿಂದ ಬಳಲುತ್ತಿರುವವರಿಗೆ ಶಂಖಪುಷ್ಪಿ ರಸ ಮತ್ತು ಕುಷ್ಠ ದ್ರವ್ಯದ ಚೂರ್ಣವನ್ನು ಜೇನಿನೊಂದಿಗೆ ಬೆರೆಸಿ ಸೇವಿಸುವುದು ಉತ್ತಮ.
- ಶಂಖಪುಷ್ಪಿಯ ಸಂಪೂರ್ಣ ಗಿಡದ ರಸವನ್ನು ಸೇವಿಸುವುದರಿಂದ ಮಾನಸಿಕ ತೊಂದರೆಯಿಂದ ಬಳಲುತ್ತಿರುವವರಿಗೆ ಒಳ್ಳೆಯದು.



ಶಾಂತಿ ಕಾಪಾಡುವ ಶಾಂತಿಮರ

Terminalia bellerica, Roxb.

Combretaceae





ಹರೀತಕೀ, ವಿಭೀತಕೀ, ಆಮಲಕೀ ಎಂಬ ತ್ರಿಫಲಗಳಲ್ಲಿ ಒಂದಾಗಿರುವ ವಿಭೀತಕಿಯು ಆಯುರ್ವೇದದಲ್ಲಿ ಔಷಧ ತಯಾರಿಕೆಗೆ ಉಪಯೋಗಿಸುವ ದ್ರವ್ಯವಾಗಿದೆ. ಈ ದ್ರವ್ಯದ ಒಣಟೊಂಗೆಗಳನ್ನು ಯಜ್ಞಕಾರ್ಯಗಳಿಗೆ ಉಪಯೋಗಿಸುತ್ತಿದ್ದರು. ಕೇಶವ ಪದ್ಧತಿ ಮತ್ತು ಇತರ ಹಳೆಯ ಗ್ರಂಥಗಳಲ್ಲಿ ಇದನ್ನು ಕೂದಲು ಉದುರುವಿಕೆಗೆ ಉಪಯೋಗಿಸುತ್ತಿದ್ದರು ಎಂಬುದಾಗಿ ವಿವರಿಸಲಾಗಿದೆ. ಬೃಹತ್ ಸಂಹಿತೆ ಮತ್ತು ನಿಘಂಟುಗಳಲ್ಲಿ ವಿವರವಾಗಿ ವಿವರಿಸಲಾದ ಈ ದ್ರವ್ಯವನ್ನು ಚರಕನು 'ಜ್ವರಕಾಸಹರ' ಎಂಬುದಾಗಿ, ಸುಶ್ರುತನು 'ಮದಕರ' ಎಂಬುದಾಗಿ ಮತ್ತು ವಾಗ್ಭಟನು ಶ್ವಾಸ ಮತ್ತು ಕಾಸಕ್ಕೆ ಉತ್ತಮ ದ್ರವ್ಯ ಎಂಬುದಾಗಿ ವಿವರಿಸಿದ್ದಾರೆ. ಶನೀಶ್ವರ ವಾಸಿಸಿರುವನು ಎಂಬ ನಂಬಿಕೆಯಿಂದ ಈ ಮರವನ್ನು ಜನರು ಈಗಲೂ ಪೂಜಿಸುತ್ತಾರೆ. ಈ ಮರದಿಂದ ಯಾವುದೇ ತರಹದ ಗೃಹೋಪಯೋಗಿ ವಸ್ತುವನ್ನು ತಯಾರಿಸುವುದಿಲ್ಲ ಮತ್ತು ಬಳಸುವುದಿಲ್ಲ.

ಬಹು ಭಾಷಾ ಹೆಸರುಗಳು

ಕನ್ನಡ : ಶಾಂತಿಮರ, ಶಾಂತಿಕಾಯಿ

ಸಂಸ್ಕೃತ : ವಿಭೀತಕೀ

ತುಳು : ಶಾಂತಿಮರ

ಹಿಂದಿ : ಬಹೇಡಾ

ಇಂಗ್ಲೀಷ್ : ಬೆಲೆರಿಕ್‌ಮೈರೋಬಾಲನ್ಸ್

ಪರ್ಯಾಯ ಪದಗಳು

ವಿಭೀತಕ, ಬಿಭೀತಕ, ಅನಿಲಘ್ನಕ, ಬಹಿರ, ಅಕ್ಷ, ತುಷ, ಕರ್ಷಫಲ, ಭೂತವಾಸ, ಕಲಿದ್ರುಮ, ಕಲಿವೃಕ್ಷ, ರೋಮಹರ್ಷ, ಕಾಸಘ್ನಫಲ, ತಿಲಪುಷ್ಪಕಾ, ವಸಂತ, ವಿಷಘ್ನಾ.

ದ್ರವ್ಯದ ವರ್ಣನೆ

ಶಾಂತಿಮರವು ಸುಮಾರು 20-25 ಮೀಟರ್‌ನಷ್ಟು ಎತ್ತರಕ್ಕೆ ಬೆಳೆಯುವ ಬೃಹತ್ ಗಾತ್ರದ ಮರ. ಮರವು ನಿತ್ಯಹರಿದ್ವರ್ಣ, ಮಲೆನಾಡು ಮತ್ತು ಮೈದಾನ ಸೀಮೆಯ ಸಸ್ಯಾವರಣದಲ್ಲಿ ಕಂಡು ಬರುತ್ತದೆ. ತೊಗಟೆಯು ನಸುಕಂದು ಬಣ್ಣವನ್ನು ಹೊಂದಿರುತ್ತದೆ. ಎಲೆಯು 8 ರಿಂದ 16 ಸೆಂ.ಮೀಟರ್‌ನಷ್ಟು ಉದ್ದವಾಗಿ ಆಲದ ಮರದ ಎಲೆಗೆ ಹೋಲುತ್ತದೆ. ಎಲೆಯು ಉದ್ದ ಅಥವಾ ವೃತ್ತಾಕಾರದಿಂದ ಕೂಡಿದೆ. ಎಲೆಗಳ ಕೆಳಭಾಗದಲ್ಲಿ ಎರಡು ಚಿಕ್ಕ ಗ್ರಂಥಿಗಳಿರುತ್ತವೆ. ಹೂಗಳು ಚಿಕ್ಕದಾಗಿ ಹಳದಿ ಬಣ್ಣದಿಂದ ಕೂಡಿದೆ. ನಸು ಕಂದು ಬಣ್ಣದ ವೃತ್ತಾಕಾರದ ಕಾಯಿಗಳು ರೋಮಗಳಿಂದ ಕೂಡಿದೆ. ಕಾಯಿಯಲ್ಲಿ ಚಿಕ್ಕದಾದ ಒಂದು ಬೀಜವಿರುತ್ತದೆ. ಈ ಮರವು ಹೂವನ್ನು ಮಾರ್ಚ್ - ಮೇ ತಿಂಗಳಿನಲ್ಲಿ ಕಾಯಿಯನ್ನು ಡಿಸೆಂಬರ್-ಫೆಬ್ರವರಿ ತಿಂಗಳಿನಲ್ಲಿ ಬಿಡುತ್ತದೆ. ಸಾಮಾನ್ಯವಾಗಿ ಭಾರತದ ಎಲ್ಲ ಪ್ರದೇಶದಲ್ಲಿ ಕಾಣಸಿಗುವ ಈ ದ್ರವ್ಯವನ್ನು ಬರ್ಮಾ, ಶ್ರೀಲಂಕಾ, ಮಲಯಾ, ದಕ್ಷಿಣ ಚೀನಾ ಮುಂತಾದ ದೇಶಗಳಲ್ಲೂ ಕಾಣಬಹುದು.

ವಿಧಗಳು

ಕಾಯಿಯ ಗಾತ್ರದ ಆಧಾರದಲ್ಲಿ ಶಾಂತಿಕಾಯಿಯಲ್ಲಿ ಎರಡು ವಿಧಗಳಿವೆ. ಅವು

- ದೊಡ್ಡ ಶಾಂತಿಕಾಯಿ
- ಚಿಕ್ಕ ಶಾಂತಿಕಾಯಿ

ಉಪಯುಕ್ತ ಅಂಗಗಳು

- ಕಾಯಿ ತೊಗಟೆ

- ಬೀಜ
- ಎಣ್ಣೆ

ದ್ರವ್ಯದ ಗುಣಧರ್ಮಗಳು

ರಸ : ಕಷಾಯ
ಗುಣ : ರೂಕ್ಷ, ಲಘು
ವೀರ್ಯ : ಉಷ್ಣ
ವಿಪಾಕ : ಮಧುರ
ಕರ್ಮ : ಕಫಪಿತ್ತಹರ, ಕೇಶ್ಯ, ಚಕ್ಷುಷ್ಯ, ಭೇದನ, ಮದಕಾರೀ, ಕ್ರಿಮಿಘ್ನ

ವಿಭೀತಕಂ ಸ್ವಾದುಪಾಕಂ ಕಷಾಯಂ ಕಫಪಿತ್ತನುತ್।
ಉಷ್ಣವೀರ್ಯಂ ಹಿಮಸ್ಪರ್ಶಂ ಭೇದನಂ ಕಾಸನಾಶನಂ॥
ರೂಕ್ಷಂ ನೇತ್ರಹಿತಂ ಕೇಶ್ಯಂ ಕೃಮಿವೈಸ್ವರ್ಯನಾಶನಂ।
ವಿಭೀತಮಜ್ಜಾತೃಟ್‌ಛರ್ದಿಕಫವಾತಹರೀ ಲಘು॥ (ಭಾವಪ್ರಕಾಶ)

ಎಂದರೆ, ಶಾಂತಿಕಾಯಿಯು ಕಷಾಯ ರಸದಿಂದ ಕೂಡಿದೆ. ಉಷ್ಣ ವೀರ್ಯದಿಂದ ಕೂಡಿದೆ, ಲಘು, ರೂಕ್ಷ ಗುಣದಿಂದ ಕೂಡಿದೆ. ಮಧುರ ವಿಪಾಕದಿಂದ ಕೂಡಿದೆ, ಕಫ ಪಿತ್ತಹರವಾಗಿದೆ. ಭೇದನ ಕರ್ಮ ಮಾಡುತ್ತದೆ. ಕೇಶಕ್ಕೆ ಒಳ್ಳೆಯದು, ಕಫ ಪಿತ್ತಹರವಾಗಿದೆ. ಭೇದನ ಕರ್ಮ ಮಾಡುತ್ತದೆ. ಕೇಶಕ್ಕೆ ಒಳ್ಳೆಯದು. ಕಾಸ, ಕ್ರಿಮಿ, ಸ್ವರ, ತೃಷ್ಣಾ, ವಾಂತಿಗಳನ್ನು ನಿವಾರಿಸುತ್ತದೆ.

ಔಷಧಿ ಪ್ರಮಾಣ

ಚೂರ್ಣ : 3–6 ಗ್ರಾಂ
ತ್ರಿಫಲ ಚೂರ್ಣ : 20–50 ಮಿ.ಗ್ರಾಂ

ಔಷಧೀಯ ಯೋಗಗಳು


- ಲವಂಗಾದಿ ವಟಿ
- ತ್ರಿಫಲ ಚೂರ್ಣ
- ಅಕ್ಷ ತೈಲ
- ತಾಲೀಸಾದಿ ಚೂರ್ಣ
- ಫಲತ್ರಿಕಾದಿ ಕ್ವಾಥ
- ವಿಭೀತಕೀ ಸುರಾ

ಔಷಧೀಯ ಉಪಯೋಗಗಳು

- ಶಾಂತಿಕಾಯಿಯ ಪುಡಿ 10 ಗ್ರಾಂ.ಗೆ ಸ್ವಲ್ಪ ಜೇನುತುಪ್ಪ ಬೆರೆಸಿ ಊಟದ ನಂತರ ಸೇವಿಸುವುದರಿಂದ ಕೆಮ್ಮು ಮತ್ತು ದಮ್ಮು ರೋಗಗಳ ನಿವಾರಣೆಯಾಗುತ್ತದೆ.
- ಹುರಿದ ಶಾಂತಿಕಾಯಿಯ ಪುಡಿಗೆ ಸ್ವಲ್ಪ ಸೈಂಧವ ಲವಣವನ್ನು ಬೆರೆಸಿ ಸೇವಿಸುವುದರಿಂದ ಅತಿಸಾರ ನಿವಾರಣೆಯಾಗುತ್ತದೆ.
- ಉರಿ ಮತ್ತು ನೋವಿನಿಂದ ಕೂಡಿದ ಊತಕ್ಕೆ ಶಾಂತಿಕಾಯಿಯ ತೊಗಟೆಯನ್ನು ಅರೆದು ಬಿಸಿ ಮಾಡಿ ಚರ್ಮಕ್ಕೆ ಹಚ್ಚುವುದರಿಂದ ಗುಳ್ಳೆಗಳೇಳುವ ಚರ್ಮರೋಗಕ್ಕೆ ಒಳ್ಳೆಯದು.
- ಶಾಂತಿಮರದ ಬೀಜದ ಪುಡಿಯನ್ನು ದ್ರಾಕ್ಷಾರಸದೊಂದಿಗೆ ಸೇವಿಸುವುದರಿಂದ ಮೂತ್ರಕೋಶದ ಕಲ್ಲು ಕರಗಿ ಹೋಗುತ್ತದೆ.
- ತ್ರಿಫಲ ಚೂರ್ಣದ ಕಷಾಯವನ್ನು ಗಾಯ ತೊಳೆಯಲು ಉಪಯೋಗಿಸುವುದಲ್ಲದೇ. ಚೂರ್ಣ ಸೇವಿಸುವುದರಿಂದ ಕಣ್ಣಿನ ದೋಷಗಳು ನಿವಾರಣೆಯಾಗುತ್ತದೆ.
- ಪ್ರತಿದಿವಸ ಬೀಜದ ಚೂರ್ಣ ಸೇವಿಸುವುದರಿಂದ ನಪುಂಸಕತ್ವ ನಿವಾರಣೆ
- ಶಾಂತಿಕಾಯಿಯ ಬೀಜದಿಂದ ತೆಗೆದ ಎಣ್ಣೆಯನ್ನು ಮೈಗೆ ಹಚ್ಚುವುದರಿಂದ ನವೆ ಕಡಿಮೆಯಾಗುತ್ತದೆ.
- ಮಧುರ ಸ್ವರ ಉಂಟಾಗಲು ಶಾಂತಿಕಾಯಿ, ಹಿಪ್ಪಲಿ, ಸೈಂಧವ ಲವಣದ ಸಮಪ್ರಮಾಣ ಚೂರ್ಣವನ್ನು ಬಿಸಿನೀರಿನಲ್ಲಿ ಕದಡಿ ದಿನಾಲೂ ಎರಡು ವೇಳೆ ಕುಡಿಯಬೇಕು.
- ಶಾಂತಿಕಾಯಿಯ ಚೂರ್ಣವನ್ನು ಸಿಂಪಡಿಸುವುದರಿಂದ ರಕ್ತಸ್ರಾವವು ನಿಲ್ಲುತ್ತದೆ.
- ಹಣ್ಣಿನ ತಿರುಳನ್ನು ಜಗಿದು ಉಗಿಯುವುದರಿಂದ ಶ್ವಾಸ, ಸ್ವರಭೇದ ರೋಗಗಳು ನಿವಾರಣೆಯಾಗುತ್ತದೆ.
- ತಾರೆಕಾಯಿಯ ಎಣ್ಣೆ, ಕೂದಲಿಗೆ ಹಚ್ಚುವುದರಿಂದ ಬಿಳಿಯಾದ ಕೂದಲುಗಳು ಮತ್ತೂ ಕಪ್ಪಾಗುತ್ತದೆ.

ಮಗುವಿನ ಆರೋಗ್ಯ ದೇಶದ ಭಾಗ್ಯ

ಶುಂಠಿಯ ಸೊಬಗು
Zingiber officinale, Roscoe.
Scitaminaceae

ಆಯುರ್ವೇದದಲ್ಲಿ ಅನೇಕ ತರಹದ ಔಷಧಗಳಿಗೆ ಯಥೇಚ್ಛವಾಗಿ ಬಳಸಲ್ಪಡುವ ಶುಂಠಿಯೂ ಎಲ್ಲರಿಗೂ ಪರಿಚಿತ ದ್ರವ್ಯ. ಶುಂಠಿಯಿಂದ ತಯಾರಿಸಿದ 'ಶುಂಠಿ ಕಾಫಿ' ಕೆಲವರಿಗಂತೂ ಬಹಳ ಪ್ರಿಯ. ಯಾಕೆ? ಎಂದು ಕೆಲವರಲ್ಲಿ ವಿಚಾರಿಸಿದಾಗ ಅವರಿಂದ ಬಂದ ಉತ್ತರ ನೆಗಡಿ, ಕೆಮ್ಮು ತಲೆನೋವು, ಗಂಟಲುನೋವು, ಕೆಮ್ಮು ಗಂಟಲುನೋವು ಇರುವಾಗ ಒಂದೆರಡು ಹೊತ್ತು ಶುಂಠಿ ಕಾಫಿ ಕುಡಿದರೆ ಸಾಕು ಅದು ಕೂಡಲೇ ಗುಣವಾಗುತ್ತದೆ ಎಂದು ಹೇಳುತ್ತಾರೆ. ಹಳ್ಳಿಗಳಲ್ಲಿ ಮನೆ ಮದ್ದಾಗಿ ಉಪಯೋಗಿಸುವ ಶುಂಠಿಯು ಔಷಧಿಯೊಂದಿಗೆ ಬೇರೆ ಬೇರೆ ತರಹದ ಪದಾರ್ಥಗಳಿಗೂ ಇದನ್ನು ಉಪಯೋಗಿಸುತ್ತಾರೆ. ಶಾಸ್ತ್ರೀಯವಾದ ಎಲ್ಲ ಪುಸ್ತಕಗಳಲ್ಲಿ ಇದು ಒಂದು ಶ್ರೇಷ್ಠವಾದ ಮತ್ತು ಸಾಮಾನ್ಯವಾಗಿ ಉಪಯೋಗಿಸಲ್ಪಡುವ ದ್ರವ್ಯ ಎಂದು ವಿವರಿಸಲಾಗಿದೆ. ಆಯುರ್ವೇದದಲ್ಲಿ ಮುಖ್ಯವಾಗಿ ಈ ದ್ರವ್ಯವನ್ನು ಪಾಚಕ, ಉರಿಬಾಹು (inflammation) ಮುಂತಾದ ತೊಂದರೆಗಳಿಗೆ ಉಪಯೋಗಿಸುತ್ತಾರೆ ಎಂಬ ವ್ಯಾಖ್ಯಾನವು ಇದೆ.

ಬಹು ಭಾಷಾ ಹೆಸರುಗಳು

ಕನ್ನಡ : ಶುಂಠಿ

ಸಂಸ್ಕೃತ : ಆರ್ದ್ರಕ

ತುಳು : ಸುಂಟಿ

ಹಿಂದಿ : ಸೋಂಠ್

ಇಂಗ್ಲೀಷ್ : ಜಿಂಜರ್

ಪರ್ಯಾಯ ಪದಗಳು

ಆರ್ದ್ರಕ, ನಾಗರ, ವಿಶ್ವಭೇಷಜ, ಶೃಂಗವೇರ, ಕಟು ಭದ್ರ, ವಿಶ್ವ, ಮಹೌಷಧ, ಗುಲ್ಮಮೂಲಾ, ಛತ್ರಾ, ರಾಹುಛತ್ರಾ, ಉಷ್ಣ.

ನಗರ ಪ್ರದೇಶದಲ್ಲಿ ಬಹಳವಾಗಿ ಔಷಧಿಗೆ ಬಳಸಲ್ಪಡುವುದರಿಂದಲೇ ಈ ದ್ರವ್ಯವನ್ನು 'ನಾಗರ' ಎಂದು ಸಂಸ್ಕೃತದಲ್ಲಿ ಕರೆಯಲಾಗಿದೆ.

ದ್ರವ್ಯದ ವರ್ಣನೆ

ಅರಿಷಿಣ ಗಿಡವನ್ನು ಹೋಲುವ ಶುಂಠಿಯು ಒಂದು ಬಹುವಾರ್ಷಿಕ ಸಸ್ಯ. ಸುಮಾರು 1–5 ಮೀಟರ್‌ನಷ್ಟು ಎತ್ತರಕ್ಕೆ ಬೆಳೆಯುವ ಈ ಸಸ್ಯವು ನೀಟಾದ ಕಾಂಡವನ್ನು ಹೊಂದಿದೆ. ಎಲೆಯು 13–30 ಸೆಂ.ಮೀಟರ್‌ನಷ್ಟು ಉದ್ದವಾಗಿ ಚೂಪಾದ ತುದಿಯಿಂದ ಕೂಡಿದೆ. ಹೂವಿನ ಚಿಗುರು 12 ಸೆಂ.ಮೀಟರ್‌ನಷ್ಟು ಉದ್ದವಾಗಿ, ಹಳದಿ, ಮಿಶ್ರಿತ ಹಸಿರು ಬಣ್ಣದಿಂದ ಕೂಡಿದೆ. ನೀರು ಬಸಿದು ಹೋಗುವ ಪ್ರದೇಶದಲ್ಲಿ ಚೆನ್ನಾಗಿ ಬೆಳೆಯುತ್ತದೆ. ಇದು ಹೂವು ಮತ್ತು ಹಣ್ಣನ್ನು ಜುಲೈ – ಸೆಪ್ಟೆಂಬರ್ ತಿಂಗಳಿನಲ್ಲಿ ಬಿಡುತ್ತದೆ. ಭಾರತದ ಎಲ್ಲ ಪ್ರದೇಶಗಳಲ್ಲಿ ಬೆಳೆಯುವ ಈ ಸಸ್ಯದ ಬೇರನ್ನು ಔಷಧಿ ತಯಾರಿಕೆಗೆ ಉಪಯೋಗಿಸುತ್ತಾರೆ.

ವಿಧಗಳು

ಶುಂಠಿಯ ಪ್ರಭೇದವನ್ನು ಕಾಣದಿದ್ದರೂ, ಕೈಯ್ಯದೇವನು ಎರಡು ವಿಧವಾಗಿ ವಿವರಿಸಿದ್ದಾನೆ. ಅವು

- ಆರ್ದ್ರ ನಾಗರಂ
- ಆರ್ದ್ರಕಂ

ಅಮರಕೋಶದಲ್ಲಿ ಒಣಶುಂಠಿಯನ್ನು "ನಾಗರ" ಎಂದೂ, ಹಸಿ ಶುಂಠಿಯನ್ನು "ಆರ್ದ್ರಕಂ" ಎಂದು ಗುರುತಿಸಲಾಗಿದೆ.

ಉಪಯುಕ್ತ ಅಂಗಗಳು

- ಶುಂಠಿಯ ಬೇರು

ದ್ರವ್ಯದ ಗುಣಧರ್ಮಗಳು

ರಸ : ಕಟು

ಗುಣ : ಗುರು, ರೂಕ್ಷ, ತೀಕ್ಷ್ಣ

ವೀರ್ಯ : ಉಷ್ಣ

ವಿಪಾಕ : ಮಧುರ

ಕರ್ಮ : ವಾತಕಫಹರ, ದೀಪನ, ಭೇಧನ, ಪಾಚಕ, ರುಚ್ಯ, ಸ್ವರ್ಯ, ಶೂಲ

ಆರ್ದ್ರಿಕಾ ಭೇದನೀ ಗುರ್ವೀ ತೀಕ್ಷ್ಣೋಷ್ಣಾ ದೀಪನೀ ಮತಾ।
ಕಟುಕಾ ಮಧುರಾ ಪಾಕೇ ರೂಕ್ಷಾ ವಾತಕಫಾಪಹಾ॥
ಅಗ್ನಿಸಂದೀಪನಮ್ ರುಚ್ಯಂ ಜಿಹ್ವಾಕಂಠವಿಶೋಧನಮ್।
ಕುಷ್ಠಪಾಂಡ್ವಾಮಯೇ ಕೃಚ್ಛ್ರೇ ರಕ್ತಪಿತ್ತೇ ವ್ರಣೇಜ್ವರೇ॥ (ಭಾವಪ್ರಕಾಶ)

ಎಂದರೆ ಶುಂಠಿಯು ರೂಕ್ಷ, ಗುರು, ತೀಕ್ಷ್ಣ, ಗುಣಗಳಿಂದ ಕೂಡಿದೆ, ಭೇದನ, ದೀಪನ ಕರ್ಮಗಳನ್ನು ಮಾಡುತ್ತದೆ. ಉಷ್ಣ ವೀರ್ಯದಿಂದ ಕೂಡಿದೆ. ಕಟು ರಸದಿಂದ ಮಧುರ ವಿಪಾಕದಿಂದ ಕೂಡಿದೆ. ವಾತಕಫಹರವಾಗಿದೆ. ಅಗ್ನಿ ವೃದ್ಧಿಸುತ್ತದೆ. ರುಚಿಯನ್ನು ಹೆಚ್ಚಿಸುತ್ತದೆ. ಗಂಟಲು ನೋವು, ಕುಷ್ಠ, ಪಾಂಡು, ಆಮವಿಕಾರ, ರಕ್ತಪಿತ್ತ, ವ್ರಣ, ಜ್ವರ ಮುಂತಾದ ರೋಗಕ್ಕೆ ಒಳ್ಳೆಯದು.

ಔಷಧಿ ಪ್ರಮಾಣ

ಸ್ವರಸ : 5–10 ಮಿ.ಲೀ

ಚೂರ್ಣ : 1–2 ಗ್ರಾಂ

ಸಿರಪ್ : 2–4 ಮಿ.ಲೀ.

ಔಷಧೀಯ ಯೋಗಗಳು

- ಆರ್ದ್ರಕ ರಸಾಯನ
- ಆದ್ರಕ ಖಂಡಾವಲೇಹ್ಯ
- ನಾಗರಾದಿ ಕಷಾಯ
- ಕೊಟ್ಟಂಚುಕ್ಕಾದಿ ತೈಲಮ್

- ಆರ್ದ್ರಕ ಘೃತ
- ಆರ್ದ್ರಕ ಖಂಡ
- ಸೌಭಾಗ್ಯ ಶುಂಠಿಲೇಹ
- ಪಂಚಕೋಲ ಚೂರ್ಣ

ಔಷಧೀಯ ಉಪಯೋಗಗಳು

- ಶುಂಠಿಯ ರಸವನ್ನು ಹಾಲಿನೊಂದಿಗೆ ಸೇವಿಸುವುದರಿಂದ ನೆಗಡಿ ಕಡಿಮೆಯಾಗುತ್ತದೆ.
- ಶುಂಠಿಯ ರಸವನ್ನು ಮೂಗಿಗೆ ಬಿಡುವುದರಿಂದ ಮೂರ್ಛೆ ರೋಗಕ್ಕೆ ಒಳ್ಳೆಯದು.
- ಶುಂಠಿ ರಸಕ್ಕೆ ಸೈಂಧವ ಲವಣ ಬೆರೆಸಿ ಭೋಜನದ ಮೊದಲು ಸೇವಿಸಿದರೆ ಅಗ್ನಿ ವೃದ್ಧಿಯಾಗಿ ನಾಲಿಗೆಯ ರುಚಿ ಹೆಚ್ಚುತ್ತದೆ.
- ಶುಂಠಿಯ ಕಷಾಯ ಮಾಡಿ ಅದಕ್ಕೆ ಜೇನುತುಪ್ಪ ಬೆರೆಸಿಕೊಟ್ಟರೆ ಜ್ವರದಿಂದ ಬಳಲುತ್ತಿರುವವರಿಗೆ ಒಳ್ಳೆಯದು.
- ಶುಂಠಿ ಪುಡಿಗೆ ನಿಂಬೆರಸ ಮತ್ತು ಸೈಂಧವ ಲವಣ ಸೇರಿಸಿ ಸೇವಿಸುವುದರಿಂದ ಅರುಚಿಗೆ ಒಳ್ಳೆಯದು.
- ಶುಂಠಿ ಪುಡಿಯನ್ನು ಹಾಲಿನಲ್ಲಿ ಬೆರೆಸಿ, ಕುದಿಸಿ ಕಲ್ಲುಸಕ್ಕರೆ ಸೇರಿಸಿ ಕುಡಿದರೆ ಬಲಹೀನತೆ ದೂರವಾಗುತ್ತದೆ.
- ಶುಂಠಿಯ ಪುಡಿಯನ್ನು ಜೇನುತುಪ್ಪದೊಂದಿಗೆ ಸೇವಿಸಿದರೆ ಕೆಮ್ಮು ರೋಗವು ನಿವಾರಣೆಯಾಗುತ್ತದೆ.
- ಶುಂಠಿಯ ರಸಕ್ಕೆ ಹರಳೆಣ್ಣೆ ಸೇರಿಸಿ ಸೇವಿಸಿದರೆ ಆಮದ ತೊಂದರೆಗೆ ಒಳ್ಳೆಯದು.
- ಹಸಿ ಶುಂಠಿ ರಸಕ್ಕೆ ಚಿಟಿಕೆ ಸೈಂಧವ ಲವಣ ಬೆರೆಸಿ, ಬಿಸಿ ಮಾಡಿ ಸೋಸಿ ಕಿವಿಗೆ ನಾಲ್ಕಾರು ಹನಿಗಳನ್ನು ಬಿಡುವುದರಿಂದ ಕಿವಿನೋವು ಕಡಿಮೆಯಾಗುತ್ತದೆ.
- ಶುಂಠಿಯ ಸ್ವರಸವನ್ನು ಹಾಲಿನೊಂದಿಗೆ ಬೆರೆಸಿ ಸೇವಿಸುವುದರಿಂದ ಉದರರೋಗ ಕಡಿಮೆಯಾಗುತಶದೆ.
- ಶುಂಠಿಯ ಲೇಪವನ್ನು ಉಗುರು ಬೆಚ್ಚಗಿನ ನೀರಿನಲ್ಲಿ ಸೇವಿಸುವುದರಿಂದ ಕಫ ಮತ್ತು ಆಮದ ಅತಿಸಾರಕ್ಕೆ ಒಳ್ಳೆಯದು.
- 40 ಮಿ.ಲೀ. ಶುಂಠಿಯ ಕಷಾಯಕ್ಕೆ ಜೇನುತುಪ್ಪ ಸೇರಿಸಿ ಸೇವಿಸುವುದರಿಂದ ಮಂದಾಗ್ನಿ, ಹಸಿವಿಲ್ಲದಿರುವಿಕೆ, ದಮ್ಮು, ಉದರರೋಗಕ್ಕೆ ಒಳ್ಳೆಯದು.
- ಶುಂಠಿ ಪುಡಿಗೆ ಅಣಿಲೆಕಾಯಿ ಪುಡಿಯನ್ನು ಸೇರಿಸಿ ಪ್ರತಿನಿತ್ಯ ಭೋಜನದ

ಮೊದಲು ಸೇವಿಸುವುದರಿಂದ ಆಮ್ಲ, ಅಜೀರ್ಣ, ಮೂಲವ್ಯಾಧಿ, ಮಲಬದ್ಧತೆಗೆ ಒಳ್ಳೆಯದು.

- ಶುಂಠಿ ಪುಡಿ ಮತ್ತು ಅಣಿಲೆಕಾಯಿ ಪುಡಿಯನ್ನು ಬೆಲ್ಲದೊಂದಿಗೆ ಬೆರೆಸಿ ಸೇವಿಸುವುದರಿಂದ ಹಸಿವಿಲ್ಲದಿರುವಿಕೆಗೆ ಒಳ್ಳೆಯದು.

ಎಚ್ಚರಿಕೆ

ಶುಂಠಿಯ ರಸವನ್ನು ಬೇಸಿಗೆ ಕಾಲದಲ್ಲಿ, ಪಿತ್ತದ ಜ್ವರ, ಪಾಂಡು, ಚರ್ಮವ್ಯಾಧಿಗಳಲ್ಲಿ ಬಳಲುತ್ತಿರುವವರು ಸೇವಿಸಬಾರದು.

ಮಗು ಒಂದಿದ್ದರೆ ಸಂಪತ್ತು,
ಹೆಚ್ಚಾದರೆ ಆಪತ್ತು

ಹಾಲು ಕಾರುವ ಹಾಲೆ ಮರ

Alstonia scholaris, R. Br.

Apocyanaceae





ಹಾಲೆಯ ಮರವನ್ನು ನೋಡದವರು ಸಿಗುವುದು ಬಹಳ ಅಪರೂಪವಿರಬಹುದು. ಯಾಕೆಂದರೆ ಇದು ಅಷ್ಟು ಪ್ರಸಿದ್ಧತೆಯಿಂದ ಕೂಡಿದ ಮರ. ಹಾಲೆ ಮರದ ಸಂಪೂರ್ಣ ಔಷಧ ಗುಣದ ಬಗ್ಗೆ ಅರಿವಿಲ್ಲದಿದ್ದರೂ, ಆಟಿ ಅಮವಾಸ್ಯೆಯ ದಿನ ಇದರ ಚೆಕ್ಕೆಯಿಂದ ತಯಾರಿಸಿದ ರಸವನ್ನು ಕುಡಿಯುವ ವಾಡಿಕೆಯನ್ನು ದಕ್ಷಿಣ ಕನ್ನಡದಲ್ಲಿ ಇಂದಿಗೂ ಕಾಣಬಹುದು. ಯಾಕೆ? ಎಂದು ಕೆಲವರಲ್ಲಿ ವಿಚಾರಿಸಿದಾಗ ಬಂದ ಉತ್ತರ "ಪಾಲೆದ ಮರಕ್ ಆಟಿ ಅಮವಾಸ್ಯೆದ ದಿನ ಮಾತ ದೈತ ಸತ್ವ ಬತ್ತ್‌ದ್ ಸೇರುಂಡು. ಬೊಕ್ಕ ಆವಿ ಪಾಲೆದ ರಸ ಪರ್‌ಂಡ ಮೂರ ರೋಗರುಜಿನ ಪೋಪುಂಡು "ಅಂದರೆ ಹಾಲೆಮರಕ್ಕೆ ಎಲ್ಲ ಸಸ್ಯದ ಸತ್ವಗಳು ಆಟಿ ಅಮವಾಸ್ಯೆಯ ದಿವಸ ಬಂದು ಸೇರುತ್ತದೆ ಮತ್ತು ಆ ದಿವಸ ಅದರ ರಸ ಸೇವಿಸುವುದರಿಂದ ರೋಗರುಜಿನ ದೂರವಾಗುತ್ತದೆ. ಆದರೆ ಈ ಮಾತು ವೈಜ್ಞಾನಿಕವಾಗಿ ಎಷ್ಟು ಸತ್ಯವೆಂಬುದರ ಬಗ್ಗೆ ಇನ್ನು ಸಂಶೋಧನೆ ಮಾಡುವ ಅವಶ್ಯಕತೆ ಇದೆ. ಈ ಮರವನ್ನು ಬೆಂಕಿಪೆಟ್ಟಿಗೆಯ ಕಡ್ಡಿ ತಯಾರಿಸಲು ಉಪಯೋಗಿಸುತ್ತಾರೆ. ಕೃಷಿಕರು ಗದ್ದೆಗಳಲ್ಲಿ ಈ ದ್ರವ್ಯದ ರೆಂಬೆಯನ್ನು ಊರುವ ಸಂಪ್ರದಾಯವನ್ನು ನಾವು ಈಗಲೂ ಕಾಣಬಹುದು. ಯಾಕೆ ಎಂದು ಕೇಳಿದಾಗ

ಇದು ಭೂತ ಪಿಶಾಚಿಗಳಿಂದ ನಮ್ಮ ಬೆಳೆಯನ್ನು ಕಾಯುತ್ತದೆ ಎಂಬುದು ಅವರ ನಂಬಿಕೆ ಉತ್ತರ.

ಬಹು ಭಾಷಾ ಹೆಸರುಗಳು

ಕನ್ನಡ : ಹಾಲೆಮರ, ಮದ್ದಾಳೆ
ಸಂಸ್ಕೃತ : ಸಪ್ತಪರ್ಣ
ತುಳು : ಪಾಲೆದ ಮರ
ಹಿಂದಿ : ಚಿತವನ್
ಇಂಗ್ಲೀಷ್ : ಡೆವಿಲ್‌ಟ್ರೀ

ಪರ್ಯಾಯ ಪದಗಳು

ಸಪ್ತಪರ್ಣ, ಸಪ್ತಚ್ಛದಾ, ವಿಶಾಲ, ವಿಷಮಚ್ಛದಾ, ಶಾರದ, ಶಾಲ್ಮ ಲೀಪತ್ರಕ, ವಿಶಲತ್ವಕ್, ಸುಪರ್ಣಕ, ಯುಗ್ಮಪರ್ಣ, ಬಹುಪರ್ಣ, ಗಂಧಿಪರ್ಣ.

ಈ ಮರದಲ್ಲಿ ಏಳೇಳು ಎಲೆಗಳ ಗೊಂಚಲು ಇರುವುದರಿಂದಲೋ ಏನೋ ಇದನ್ನು 'ಸಪ್ತಪರ್ಣ' ಎಂದು ಕರೆದಿರಬಹುದು.

ದ್ರವ್ಯದ ವರ್ಣನೆ

ಹಾಲೆಮರವು ಸುಮಾರು 17–20 ಮೀಟರ್‌ನಷ್ಟು ಎತ್ತರಕ್ಕೆ ಬೆಳೆಯುತ್ತದೆ. ಇದರ ತೊಗಟೆಯು ದಪ್ಪವಾಗಿ ಬಿಳಿ ಬಣ್ಣದಿಂದ ಕೂಡಿದೆ. ತೊಗಟೆಯು ರಂಧ್ರಯುಕ್ತವಾಗಿದೆ. ತೊಗಟೆಯನ್ನು ಕಡಿದಾಗ ಹಾಲಿನಂತಹ ದ್ರವ ಪದಾರ್ಥ ಹೊರಬರುತ್ತದೆ. ಎಲೆಯು ಹಸಿರಾಗಿದ್ದು ಏಳೇಳು ಎಲೆಗಳ ಗೊಂಚಲಿನಿಂದ ಕೂಡಿದೆ. ಎಲೆಯು ಸುಮಾರು 10–15 ಸೆಂ.ಮೀಟರ್‌ನಷ್ಟು ಉದ್ದವಾಗಿ, 3–4 ಸೆಂ.ಮೀಟರ್‌ನಷ್ಟು ಅಗಲವಾಗಿದೆ. ಗೋಬಿ ರೀತಿಯ ಹೂಗಳು ಬಿಳಿ ಬಣ್ಣದಿಂದ ಕೂಡಿದೆ. ಈ ದ್ರವ್ಯವು ಹೂವನ್ನು ಡಿಸೆಂಬರ್–ಮಾರ್ಚ್ ತಿಂಗಳಲ್ಲಿ ಕಾಯಿಯನ್ನು ಮೇ – ಜುಲೈ ತಿಂಗಳಲ್ಲಿ ಬಿಡುತ್ತದೆ. ಹಿಮಾಲಯ ಬಂಗಾಳ, ದಕ್ಷಿಣ ಭಾರತ, ಬಿಹಾರ ಮುಂತಾದ ರಾಜ್ಯಗಳಲ್ಲಿ ಇದು ಹೆಚ್ಚಾಗಿ ಬೆಳೆಯುತ್ತದೆ.

ವಿಧಗಳು

ಸಾಮಾನ್ಯವಾಗಿ Alstonia scholaris ಎಂಬ ವಿಧವನ್ನು ಔಷಧಕ್ಕೆ ಉಪಯೋಗಿಸಿದರೂ, Alstonia macrosperma ವನ್ನು ಬದಲಿ ದ್ರವ್ಯವಾಗಿ ಔಷಧಕ್ಕೆ ಉಪಯೋಗಿಸುತ್ತಾರೆ.

ಉಪಯುಕ್ತ ಅಂಗ

- ತೊಗಟೆ
- ಎಲೆ
- ಹೂವು
- ಕಾಯಿ
- ನಿರ್ಯಾಸ (ಲೆಟೆಕ್ಸ್)

ದ್ರವ್ಯದ ಗುಣಧರ್ಮಗಳು

ರಸ : ತಿಕ್ತ, ಕಷಾಯ

ಗುಣ : ಲಘು, ಸ್ನಿಗ್ಧ

ವೀರ್ಯ : ಉಷ್ಣ

ವಿಪಾಕ : ಕಟು

ಕರ್ಮ : ತ್ರಿದೋಷಹರ, ದೀಪನ, ಹೃದ್ಯ.

ಸಪ್ತಪರ್ಣಃ ಕಷಾಯೋಷ್ಣಃ ಸುಸ್ನಿಗ್ಧೋ ದೀಪನಃ ಸರಃ।
ಹೃದ್ಯೋ ದೋಷಕ್ರಿಮಿಶ್ವಾಸಕುಷ್ಠಗುಲ್ಮವ್ರಣಾಸ್ರಜಿತ್॥ (ಕೈಯ್ಯದೇವ ನಿಘಂಟು)

ಎಂದರೆ ಹಾಲೆಮರವು ಕಷಾಯ ರಸದಿಂದ ಕೂಡಿದೆ. ಸ್ನಿಗ್ಧ ಗುಣದಿಂದ ಕೂಡಿದೆ. ಉಷ್ಣವೀರ್ಯವುಳ್ಳದ್ದಾಗಿದೆ. ದೀಪನವಾಗಿದೆ. ಹೃದಯಕ್ಕೆ ಒಳ್ಳೆಯದು, ತ್ರಿದೋಷಘ್ನವೂ ಆಗಿದೆ. ಕ್ರಿಮಿರೋಗ, ಶ್ವಾಸ, ಕುಷ್ಠ, ಗುಲ್ಮ, ಗಾಯ, ರಕ್ತದ ರೋಗಗಳನ್ನು ನಿವಾರಿಸುತ್ತದೆ.

ಔಷಧಿ ಪ್ರಮಾಣ

ಕಷಾಯ : 40–80 ಮಿ.ಲೀ.

ಸ್ವರಸ : 12–24 ಮಿ.ಲೀ.

ತೊಗಟೆ ಚೂರ್ಣ : 1–2 ಗ್ರಾಂ.

ಕ್ಷೀರ : 1 ಮಿ.ಲೀ.

ಔಷಧೀಯ ಯೋಗಗಳು

- ಸಪ್ತಚ್ಛದಾದಿ ತೈಲಂ
- ಸಪ್ತಚ್ಛದಾದಿ ಕ್ವಾಥ
- ತ್ರಿಫಲ ಘೃತ

- ಸಪ್ತಪರ್ಣಾಸತ್ವಾದಿ ವಟಿ

ಔಷಧೀಯ ಉಪಯೋಗಗಳು

- ಹಾಲೆಮರದ ತೊಗಟೆಯ ಲೇಪವನ್ನು ಕೊಳೆತ ಗಾಯಕ್ಕೆ ಹಚ್ಚುವುದರಿಂದ ಕೊಳೆತ ಗಾಯವು ನಿವಾರಣೆಯಾಗುತ್ತದೆ.
- ಹಾಲೆಮರದ ಎಳೆ ಎಲೆಯನ್ನು ನೀರಿನಲ್ಲಿ ಬಿಸಿ ಮಾಡಿ ನಂತರ ಲೇಪ ಮಾಡಿ ಗಾಯಕ್ಕೆ ಹಚ್ಚುವುದರಿಂದ ಗಾಯವು ನಿವಾರಣೆ.
- ತೊಗಟೆಯ ಕಷಾಯ ಸೇವನೆಯಿಂದ ಹಸಿವಿಲ್ಲದಿರುವಿಕೆ, ಹೊಟ್ಟೆನೋವು ತೊಂದರೆಗಳು ನಿವಾರಣೆಯಾಗುತ್ತದೆ.
- ಹೆರಿಗೆಯ ನಂತರ ಸಪ್ತಪರ್ಣ ತೊಗಟೆ, ಬಜೆ, ಶುಂಠಿಯ ಮಿಶ್ರಣವನ್ನು ಸೇವಿಸುವುದರಿಂದ ಹೆರಿಗೆಯ ಸ್ತ್ರೀಯರನ್ನು ಜ್ವರದಿಂದ ರಕ್ಷಿಸುತ್ತದೆ ಮತ್ತು ಬಲವನ್ನು ವೃದ್ಧಿಸುತ್ತದೆ.
- ಹಾಲೆಮರದ ಹೂವಿನ ರಸಕ್ಕೆ ಹಿಪ್ಪಲಿ ಮತ್ತು ಜೇನು ತುಪ್ಪ ಬೆರೆಸಿ ಸೇವಿಸುವುದರಿಂದ ಕಫ ಮತ್ತು ಪಿತ್ತದ ಉಬ್ಬಸ ರೋಗವು ನಿವಾರಣೆಯಾಗುತ್ತದೆ.
- ಹಾಲೆಮರದ ಕಷಾಯದಿಂದ ಸ್ನಾನ ಮಾಡುವುದರ ಜೊತೆಗೆ, ಕಷಾಯ ಸೇವನೆ, ಅದರ ಲೇಪವನ್ನು ಹಚ್ಚುವುದರಿಂದ ಕುಷ್ಠರೋಗವು ನಿವಾರಣೆ.
- ಮೊಲೆಹಾಲು ಶುದ್ಧಗೊಳ್ಳಲು ಅಮೃತಬಳ್ಳಿ ಮತ್ತು ಹಾಲೆಮರದ ತೊಗಟೆಯ ಕಷಾಯಕ್ಕೆ ಶುಂಠಿಯನ್ನು ಬೆರೆಸಿ ಸೇವಿಸಬೇಕು.
- ಹಾಲೆಮರವು ಪ್ರಮುಖ ಘಟಕವಾದ ತ್ರಿಫಲಾದ್ಯ ಘೃತ ಸೇವನೆಯಿಂದ ಜ್ವರವು ನಿವಾರಣೆಯಾಗುತ್ತದೆ.
- ಹಾಲೆಮರ ಮತ್ತು ಎಕ್ಕೆಯ ಹಾಲಿನಂತಹ ದ್ರವ ಪದಾರ್ಥಗಳನ್ನು ಹಲ್ಲಿಗೆ ತುಂಬಿಸುವುದರಿಂದ ಕ್ರಿಮಿದಂತ ರೋಗ ನಿವಾರಣೆ.
- ವಿಷದ ಹಾವುಗಳು ಕಚ್ಚಿದರೆ, ನಾಯಿ ಕಚ್ಚಿದರೆ ಹಾಲೆಮರದ ತೊಗಟೆಯ ಚೆಕ್ಕೆಯನ್ನು ನುಣ್ಣಗೆ ಅರೆದು, 10 ಗ್ರಾಂನಷ್ಟು ಲೇಪವನ್ನು 30 ಮಿ.ಲೀ. ನೀರಿನಲ್ಲಿ ಬೆರೆಸಿ ಸೇವಿಸಬೇಕು. ಹೀಗೆ ಮೂರು ಗಂಟೆಗೊಮ್ಮೆ ಕುಡಿಯುತ್ತಿರಬೇಕು. ಮಾತ್ರವಲ್ಲದೆ ಕಡಿದ ಗಾಯಕ್ಕೂ ಮುಟ್ಟಿಸುತ್ತಿರಬೇಕು.

ಮಗುವಿಗೆ ಸಕಾಲದಲ್ಲಿ ಆರು ಮಾರಕ
ರೋಗಗಳ ವಿರುದ್ಧ ಲಸಿಕೆ ಹಾಕಿಸಿ

ವಾತಕಫ ನಿವಾರಕ ಹಿಪ್ಪಲಿ

Piper longum, Linn.

Piperaceae





ಕರಿಮೆಣಸಿನ ಜಾತಿಗೆ ಸೇರಿದ ಹಿಪ್ಪಲಿ ಸಾಮಾನ್ಯವಾಗಿ ಎಲ್ಲರೂ ನೋಡಿರುವ ದ್ರವ್ಯ. ಹಿಂದೂ ಇತಿಹಾಸದ ಪ್ರಕಾರ ಹಿಪ್ಪಲಿಯೂ ಸಮುದ್ರ ಮಂಥನದಲ್ಲಿ ಅಮೃತದೊಂದಿಗೆ ಉದ್ಭವವಾಯಿತು ಎಂಬ ವ್ಯಾಖ್ಯಾನವು ಇದೆ. ವಸಿಷ್ಠ ಮಹರ್ಷಿಯು ಹಿಪ್ಪಲಿಯನ್ನು ಸೇವಿಸಿ ಆರೋಗ್ಯ ಮತ್ತು ಸಂಪತ್ತು ಹೊಂದಿದನು ಎಂಬ ಉಲ್ಲೇಖವು ಇದೆ. ಅಥರ್ವವೇದದ ಪ್ರಕಾರ ಹಿಪ್ಪಲಿಯು ರಸಾಯನವಾಗಿದೆ. ಮೇಲಿನ ಎಲ್ಲಾ ಅಂಶಗಳಿಂದ ಹಿಪ್ಪಲಿಯು ಆಯುರ್ವೇದದಲಿ ಬಳಕೆಯಲ್ಲಿರುವ ಬಹು ಪುರಾತನ ದ್ರವ್ಯ ಎಂದು ತಿಳಿಯಬಹುದು. ಚರಕನ ಪ್ರಕಾರ ಸುಧೀರ್ಘ ಸೇವನೆ ಅಥವಾ ಲೆಕ್ಕಕ್ಕಿಂತ ಹೆಚ್ಚು ಹಿಪ್ಪಲಿ ಸೇವಿಸುವುದು ದೇಹಕ್ಕೆ ಒಳ್ಳೆಯದಲ್ಲ. ಹಸಿ ಹಿಪ್ಪಲಿಯನ್ನು ಔಷಧಕ್ಕೆ ಉಪಯೋಗಿಸಬಾರದು. ಒಂದು ವರ್ಷದಷ್ಟು ಹಳೆಯ ಹಿಪ್ಪಲಿ ಔಷಧಕ್ಕೆ ಒಳ್ಳೆಯದು. ಹಿಪ್ಪಲಿಯ ನಿಜವಾದ ಲಾಭ ಪಡೆಯಬೇಕಾದರೆ, ಹಿಪ್ಪಲಿಯನ್ನು ಗಿಡದಿಂದ ಕಿತ್ತು ನೀರಿನಲ್ಲಿ 3 ರಿಂದ 4 ಬಾರಿ ತೊಳೆದು ಡೋಲಾಯಂತ್ರದ ಮೂಲಕ ಹಸುವಿನ ಹಾಲಿನಲ್ಲಿ ಬೇಯಿಸಿ, ಮತ್ತೆ ನೀರಿನಲ್ಲಿ ತೊಳೆದು ಬಿಸಿಲಿನಲ್ಲಿ ಒಣಗಿಸಿಟ್ಟುಕೊಂಡು ಉಪಯೋಗಿಸಬೇಕು.

ಬಹು ಭಾಷಾ ಹೆಸರುಗಳು

ಕನ್ನಡ : ಹಿಪ್ಪಲಿ

ಸಂಸ್ಕೃತ : ಪಿಪ್ಪಲೀ

ತುಳು : ಕಾಟ್‌ತಿಪ್ಪಲಿ

ಹಿಂದಿ : ಪಿಪ್ಪಲ

ಇಂಗ್ಲೀಷ್ : ಲಾಂಗ್‌ಪೆಪ್ಪರ್

ಪರ್ಯಾಯ ಪದಗಳು

ಪಿಪ್ಪಲೀ, ನಾಗವಲ್ಲಿದಳ, ಮಾಗಧೀ, ವೈದೇಹೀ, ಚಪಲಾ, ಶೌಂಡೀ, ಕೋಲಾ, ಕೃಷ್ಣಾ, ತೀಕ್ಷ್ಣಾ, ತಂಡುಲಾ, ಉಪಕುಲ್ಯಾ, ಕಣಾ, ಉಷ್ಣಾ, ಕಟುಬೀಜಾ, ಕೋರಂಗೀ. ಹಿಪ್ಪಲಿಯ ಎಲೆಯು ವೀಳ್ಯದೆಲೆಗೆ ಹೋಲುವುದರಿಂದ 'ನಾಗವಲ್ಲಿದಳ' ಎಂದು ಕರೆಯುತ್ತಾರೆ.

ದ್ರವ್ಯದ ವರ್ಣನೆ

ಹಿಪ್ಪಲಿಯ ಸುವಾಸನೆಯುಳ್ಳ ತೆಳ್ಳನೆಯ ಬಳ್ಳಿ, ಬಳ್ಳಿಯು ನೆಲದಲ್ಲಿ ಹರಡಿಕೊಂಡಿರುವುದು ಅಥವಾ ಮರಗಳ ಸಹಾಯದಿಂದ ಮೇಲೆ ಏರುವುದು. ಎಲೆಯು 5–6 ಸೆಂ. ಮೀಟರ್‌ನಷ್ಟು ಉದ್ದವಾಗಿದ್ದು, ವೀಳ್ಯದೆಲೆಗೆ ಹೋಲುತ್ತದೆ. ಎಲೆಯು ಐದು ಸೀಳುಗಳಿಂದ ಕೂಡಿದ್ದು, ಅಂಡಾಕಾರ ಅಥವಾ ಹೃದಯಾಕಾರದಿಂದ ಕೂಡಿದೆ. ಹೂವುಗಳು ಏಕಲಿಂಗದಿಂದ ಕೂಡಿರುತ್ತವೆ. ಹಣ್ಣು ಉದ್ದವಾಗಿ ನಸುಗೆಂಪು ಬಣ್ಣವನ್ನು ಹೊಂದಿ, ಒಣಗಿದಾಗ ಕಪ್ಪು ಬಣ್ಣವನ್ನು ಹೊಂದುತ್ತದೆ. ಇದು ಹೂವನ್ನು ಮಳೆಗಾಲದಲ್ಲಿ ಮತ್ತು ಹಣ್ಣನ್ನು ಶರತ್ಕಾಲದಲ್ಲಿ (ಮಾರ್ಚ್ – ಜೂನ್) ಬಿಡುತ್ತದೆ. ಸಾಮಾನ್ಯವಾಗಿ ಭಾರತದ ಎಲ್ಲ ಪ್ರದೇಶದಲ್ಲಿ ಬೆಳೆಯುವ ಹಿಪ್ಪಲಿಯು ಹೆಚ್ಚಾಗಿ ಬಂಗಾಳ, ಬಿಹಾರ, ನೇಪಾಳ, ಭೂತಾನ್, ಹಿಮಾಲಯ, ಅಸ್ಸಾಂ ಪ್ರದೇಶಗಳಲ್ಲಿ ಬೆಳೆಯುತ್ತದೆ.

ವಿಧಗಳು

ರಾಜನಿಘಂಟುಕಾರನ ಪ್ರಕಾರ ಹಿಪ್ಪಲಿಯಲ್ಲಿ ನಾಲ್ಕು ವಿಧಗಳಿವೆ. ಅವು

1. ಪಿಪ್ಪಲೀ
2. ಗಜಪಿಪ್ಪಲೀ
3. ಸಿಂಹಲಿ ಪಿಪ್ಪಲೀ
4. ವನ ಪಿಪ್ಪಲೀ

ಉಪಯುಕ್ತ ಅಂಗಗಳು

- ಹಣ್ಣು
- ಬೇರು

ದ್ರವ್ಯದ ಗುಣಧರ್ಮಗಳು

ರಸ : ಕಟು

ಗುಣ : ಲಘು, ಸ್ನಿಗ್ಧ, ತೀಕ್ಷ್ಣ

ವೀರ್ಯ : ಉಷ್ಣ

ವಿಪಾಕ : ಮಧುರ

ಕರ್ಮ : ವಾತಕಫಹರ, ದೀಪನ, ವೃಷ್ಯ, ರಸಾಯನ

"ಪಿಪ್ಪಲೀ ದೀಪನೀ ವೃಷ್ಯಾ ಸ್ವಾದುಪಾಕಾ ರಸಾಯನೀ।
ಅನುಷ್ಣಾ ಕಟುಕಾ ಸ್ನಿಗ್ಧಾ ವಾತಶ್ಲೇಷ್ಮ ಹರೀ ಲಘುಃ॥
ಪಿಪ್ಪಲೀ ರೇಚನೀ ಹಂತಿ ಶ್ವಾಸಕಾಸೋದರ ಜ್ವರಾನ್।
ಕುಷ್ಠ ಪ್ರಮೇಹಗುಲ್ಮಾರ್ಶಃ ಪ್ಲೀಹಶೂಲಾಮಮಾರುತಾನ್"॥ (ಭಾವಪ್ರಕಾಶ)

ಎಂದರೆ ಹಿಪ್ಪಲಿಯು ಕಟು ರಸದಿಂದ ಕೂಡಿದೆ, ಸ್ನಿಗ್ಧ ಮತ್ತು ಲಘು ಗುಣದಿಂದ ಕೂಡಿದೆ. ದೀಪನ, ರೇಚನವಾಗಿದೆ. ವೃಷ್ಯ, ವಾತಕಫಹರವಾಗಿದೆ. ಶ್ವಾಸ, ಕೆಮ್ಮು, ಉದರ, ಜ್ವರ, ಕುಷ್ಠ, ಮೇಹ, ಗುಲ್ಮ, ಮೂಲವ್ಯಾಧಿ, ಪ್ಲೀಹರೋಗ, ಶೂಲೆ, ವಾತರೋಗಗಳನ್ನು ನಿವಾರಿಸುತ್ತದೆ.

ಔಷಧಿ ಪ್ರಮಾಣ

ಚೂರ್ಣ – 0.5–1 ಗ್ರಾಂ

ಔಷಧೀಯ ಯೋಗಗಳು

- ಪಿಪ್ಪಲ್ಯಾದಿಘೃತ
- ಪಿಪ್ಪಲ್ಯಾಸವ
- ವ್ಯೋಶಾದಿ ವಟಿ
- ಯಕೃತ್‌ಪ್ಲೀಹಾರಿ ಲೋಹ
- ಪಿಪ್ಪಲ್ಯಾದಿ ಲೇಹ

ಔಷಧೀಯ ಉಪಯೋಗಗಳು

- ಒಂದು ಭಾಗ ಹಿಪ್ಪಲಿ ಪುಡಿಗೆ ನಾಲ್ಕು ಭಾಗದಷ್ಟು ನೀರು ಸೇರಿಸಿ ಬಿಸಿ ಮಾಡಿ ಕಷಾಯ ರೂಪದಲ್ಲಿ ಸೇವಿಸುವುದರಿಂದ ಮಲೇರಿಯಾ ಜ್ವರವು ನಿವಾರಣೆಯಾಗುತ್ತದೆ.
- ಹಿಪ್ಪಲಿ ಮತ್ತು ತ್ರಿಫಲವನ್ನು ಜೇನು ಮತ್ತು ತುಪ್ಪದೊಂದಿಗೆ ಬೆರೆಸಿ ಸೇವಿಸುವುದರಿಂದ ಕೆಮ್ಮು ಮತ್ತು ಅಸ್ತಮಾ ರೋಗವು ನಿವಾರಣೆಯಾಗುತ್ತದೆ.
- ಹಿಪ್ಪಲಿ ಪುಡಿಯನ್ನು ಹಾಲಿನಲ್ಲಿ ಬೆರೆಸಿ ಅದಕ್ಕೆ ಸ್ವಲ್ಪ ಜೇನುತುಪ್ಪ ಸೇರಿಸಿ ಸೇವಿಸುವುದರಿಂದ ಹೃದಯರೋಗ, ಕೆಮ್ಮು ನಿವಾರಣೆಯಾಗುತ್ತದೆ.
- ಹಿಪ್ಪಲಿಯನ್ನು ಜೇನುತುಪ್ಪದೊಂದಿಗೆ ಸೇವಿಸುವುದರಿಂದ ಅತಿಸಾರ ರೋಗವು ನಿವಾರಣೆಯಾಗುತ್ತದೆ.
- ಅಣಿಲೆಕಾಯಿಯ ಪುಡಿಯನ್ನು ತುಪ್ಪದಲ್ಲಿ ಹುರಿದು, ಅದಕ್ಕೆ ಬೆಲ್ಲ ಮತ್ತು ಹಿಪ್ಪಲಿಯ ಪುಡಿಯನ್ನು ಬೆರೆಸಿ ಸೇವಿಸುವುದರಿಂದ ಮೂಲವ್ಯಾಧಿಯು ನಿವಾರಣೆಯಾಗುತ್ತದೆ.
- ಹಿಪ್ಪಲಿ ಮತ್ತು ಸೈಂಧವ ಲವಣವನ್ನು ಬಿಸಿ ನೀರಿನಲ್ಲಿ ಕಲಸಿ ಸೇವಿಸುವುದರಿಂದ ಕೆಮ್ಮು ನಿವಾರಣೆಯಾಗುತ್ತದೆ.
- ಹಿಪ್ಪಲಿ, ನೆಲ್ಲಿಕಾಯಿ ಮತ್ತು ಶುಂಠಿಯ ಪುಡಿಯನ್ನು ಜೇನುತುಪ್ಪ ಮತ್ತು ಸಕ್ಕರೆಯೊಡನೆ ಬೆರೆಸಿ ಸೇವಿಸುವುದರಿಂದ ಎಕ್ಕಾದೆ ಮತ್ತು ಉಬ್ಬಸ ರೋಗವು ನಿವಾರಣೆಯಾಗುತ್ತದೆ.
- ಹಿಪ್ಪಲಿ ಮತ್ತು ಅಣಿಲೆಕಾಯಿಯನ್ನು ಬೆರೆಸಿ ಸೇವಿಸುವುದರಿಂದ ಒರಟು ಸ್ವರವು ನಿವಾರಣೆಯಾಗುತ್ತದೆ.
- ಹಿಪ್ಪಲಿ, ಶಿಗಡೆ ಚೂರ್ಣಕ್ಕೆ ಸಕ್ಕರೆ ಬೆರೆಸಿ ಸೇವಿಸುವುದರಿಂದ ಜಠರವಾಯುವಿನ ತೊಂದರೆಯಿಂದ ಬಳಲುತ್ತಿರುವವರಿಗೆ ಒಳ್ಳೆಯದು.
- ಹಿಪ್ಪಲಿಯನ್ನು ಬೆಲ್ಲದೊಂದಿಗೆ ಸೇವಿಸುವುದರಿಂದ ಉದರರೋಗ ನಿವಾರಣೆಯಾಗುತ್ತದೆ.
- ಹಿಪ್ಪಲಿ ಮತ್ತು ಶುಂಠಿಯ ಪುಡಿಯನ್ನು ಸೇರಿಸಿ ಸೇವಿಸುವುದರಿಂದ ಕಫದಿಂದ ಬಂದ ಹೊಟ್ಟೆನೋವು ನಿವಾರಣೆಯಾಗುತ್ತದೆ.
- ಹಿಪ್ಪಲಿ, ತುಪ್ಪ, ಜೇನುತುಪ್ಪ ಮತ್ತು ಸಕ್ಕರೆಯನ್ನು ಬೆರೆಸಿ ಸೇವಿಸುವುದರಿಂದ ವಾಂತಿಯು ನಿವಾರಣೆಯಾಗುತ್ತದೆ.
- ಹಿಪ್ಪಲಿ ಪುಡಿಯನ್ನು ಜೇನು ತುಪ್ಪದೊಂದಿಗೆ ಸೇವಿಸುವುದರಿಂದ ಆಮ್ಲಪಿತ್ತ ರೋಗವು ನಿವಾರಣೆಯಾಗುತ್ತದೆ.

- ಹಿಪ್ಪಲಿ ಪುಡಿಯನ್ನು ಹಾಲಿನೊಂದಿಗೆ ಸೇವಿಸುವುದರಿಂದ ಊತರೋಗವು ನಿವಾರಣೆಯಾಗುತ್ತದೆ.
- ಹಿಪ್ಪಲಿಯನ್ನು ಬೆಲ್ಲದೊಂದಿಗೆ ಬೆರೆಸಿ ಸೇವಿಸುವುದರಿಂದ ಅಜೀರ್ಣರೋಗವು ನಿವಾರಣೆಯಾಗುತ್ತದೆ.
- ಪಿತ್ತವಿಕಾರ, ತಲೆಸುತ್ತಿನಿಂದ ಬಳಲುತ್ತಿರುವವರು ಹಸಿಹಿಪ್ಪಲಿಯನ್ನು ಜೇನುತುಪ್ಪದೊಂದಿಗೆ ಬೆರೆಸಿ ಸೇವಿಸಬೇಕು.
- ಹಿಪ್ಪಲಿ ಚೂರ್ಣವನ್ನು ಸಕ್ಕರೆ, ತುಪ್ಪದೊಂದಿಗೆ ಸೇವಿಸುವುದರಿಂದ ಕುಷ್ಠರೋಗವನ್ನು ತಡೆಯಬಹುದು.

ನೇತ್ರ ದಾನವೇ ಮಹಾದಾನ

ತಂಪು ತಂಪಾದ ಹೊಂಗೆಮರ
Pongamia pinnata, (Linn) Merr.
Fabaceae





ಸಾಮಾನ್ಯವಾಗಿ ರಸ್ತೆಯ ಬದಿಗಳಲ್ಲಿ ಉದ್ಯಾನವನಗಳಲ್ಲಿ ಕಾಣಸಿಗುವ ಈ ದ್ರವ್ಯವು ಎಲ್ಲರಿಗೂ ಪರಿಚಿತ. ಛತ್ರಿಯಂತೆ ಹರಡಿಕೊಂಡಿರುವ ಹಸಿರಾದ ಎಲೆಗಳಿಂದ ಕೂಡಿದ ಈ ಮರದ ಕೆಳಗೆ ದಾರಿಹೋಕರು, ಆಯಾಸಗೊಂಡವರು ಸ್ವಲ್ಪ ಹೊತ್ತು ಕುಳಿತು ದಣಿವು ಹೋದ ಮೇಲೆ ಮುಂದೆ ಸಾಗುತ್ತಿದ್ದರು, ಎಂಬ ವ್ಯಾಖ್ಯಾನವು ಇದೆ. ಆದ್ದರಿಂದಲೇ ಜಾನಪದ ಗೀತೆಯಲ್ಲಿ ಹೊಂಗೆಯ ಮರ ತಂಪು ಎಂದು ಹಾಡಿ ಹೊಗಳಿದ್ದಾರೆ. ಈ ದ್ರವ್ಯದ ಪರಿಚಯವನ್ನು ವೇದಕಾಲದಿಂದಲೂ ಕಾಣಬಹುದು. ಹೊಂಗೆ ಮರದ ಕಡ್ಡಿಗಳನ್ನು ಹಿಂದಿನ ಕಾಲದಲ್ಲಿ ದಂತಧಾವನಕ್ಕೆ ಉಪಯೋಗಿಸುತ್ತಿದ್ದರು. ರೈತರು ಈ ಮರವನ್ನು ಗದ್ದೆ ಮತ್ತು ಹೊಲಗಳ ಬದಿಯಲ್ಲಿ ಬೆಳೆಸುತ್ತಾರೆ. ಚರಕನು ಈ ದ್ರವ್ಯವನ್ನು ಕಂಡೂಘ್ನ ಎಂಬುದಾಗಿ ವಿವರಿಸಿದರೆ, ಸುಶ್ರುತನು ಹೊಂಗೆಯ ಎಣ್ಣೆಯು ಕ್ರಿಮಿ, ಕುಷ್ಠ, ಪ್ರಮೇಹ ಮುಂತಾದ ರೋಗಗಳಿಗೆ ಉತ್ತಮ ಎಂದು ವಿವರಿಸಿದ್ದಾನೆ.

ಬಹು ಭಾಷಾ ಹೆಸರುಗಳು

ಕನ್ನಡ : ಹೊಂಗೆಮರ

ಸಂಸ್ಕೃತ : ಕರಂಜ

ತುಳು : ಕೊರುಂಗು

ಹಿಂದಿ : ದಿತೌರಿ

ಇಂಗ್ಲೀಷ್ : ಇಂಡಿಯನ್ ಬೀಚ್

ಪರ್ಯಾಯ ಪದಗಳು

ಕರಂಜ ಗುಚ್ಛಪುಷ್ಪ ಘೃತಪೂರಕ, ನಕ್ತಮಾಲಾ, ಸ್ನಿಗ್ಧಪತ್ರ, ಪ್ರಕೀರ್ಯಾ, ಉದಕೀರ್ಯಾ, ಪೂತಿಪರ್ಣ, ವೃದ್ಧಫಲ, ರೋಚನ.

ಹೂವುಗಳು ಗುಚ್ಛದಿಂದ ಕೂಡಿರುವುದರಿಂದಲೇ ಗುಚ್ಛಪುಚ್ಛ ಎಂದು ಈ ದ್ರವ್ಯವನ್ನು ಕರೆಯುತ್ತಾರೆ.

ದ್ರವ್ಯದ ವರ್ಣನೆ

ಹೊಂಗೆಯು ಮಧ್ಯಮ ಗಾತ್ರದ ಮರ. ಇದು ಸುಮಾರು 18 ಮೀಟರ್ ಎತ್ತರಕ್ಕೆ ಬೆಳೆಯುತ್ತದೆ. ಸಂಯುಕ್ತ ಎಲೆಗಳು ಪರ್ಯಾಯವಾಗಿ ಜೋಡಣೆಯಾಗಿರುತ್ತದೆ. ಅಂಟಾದ ಎಲೆಗಳು ಮೃದುವಾಗಿ ಹಸಿರು ಬಣ್ಣದಿಂದ ಕೂಡಿದೆ. ಹೂವುಗಳು ಗುಚ್ಛದಂತೆ ಇದ್ದು ಎಲೆಗಳ ನಡುವೆ ಕಂಗೊಳಿಸುತ್ತವೆ. ಹೂವು ನೀಲಿ ಬಣ್ಣದಿಂದ ಕೂಡಿದೆ. ದಪ್ಪವಾದ ಕಾಯಿ ನಾಲ್ಕರಿಂದ 5 ಸೆಂ.ಮೀಟರ್‌ನಷ್ಟು ಉದ್ದವಾಗಿ ಅಂಡಾಕಾರದಿಂದ ಕೂಡಿದೆ. ಕಾಯಿಯ ಬೀಜಗಳಿಂದ ಕಹಿಯಾದ ಎಣ್ಣೆಗಳನ್ನು ತೆಗೆಯುತ್ತಾರೆ. ಈ ಮರವು ಹೂವು ಮತ್ತು ಕಾಯಿಯನ್ನು ಮೇ – ಜೂನ್‌ತಿಂಗಳಿನಲ್ಲಿ ಬಿಡುತ್ತದೆ. ಸಾಮಾನ್ಯವಾಗಿ ಮಲೆನಾಡು, ಮೈದಾನ ಸೀಮೆ ಸಸ್ಯಾವರಣದಲ್ಲಿ ಕಂಡು ಬರುವ ಈ ಮರವು ದಕ್ಷಿಣ ಭಾರತ ಮತ್ತು ಶ್ರೀಲಂಕಾ ದೇಶಗಳಲ್ಲಿ ಹೆಚ್ಚಾಗಿ ಕಂಡು ಬರುತ್ತದೆ.

ವಿಧಗಳು

ಭಾವಮಿಶ್ರನ ಪ್ರಕಾರ ಕರಂಜದಲ್ಲಿ ಮೂರು ವಿಧಗಳಿವೆ. ಅವು

- ಕಂಟಕ ಕರಂಜ
- ಘೃತ ಕರಂಜ
- ಕರಂಜೀ

ಸಸ್ಯಶಾಸ್ತ್ರದಲ್ಲಿ ಎರಡು ಹೆಸರುಗಳನ್ನು ಗುರುತಿಸಬಹುದು. ಅವು Pongamia pinnata ಮತ್ತು Pongamia glabra.

ಉಪಯುಕ್ತ ಅಂಗಗಳು

- ಬೇರಿನ ತೊಗಟೆ
- ಕಾಂಡದ ತೊಗಟೆ
- ಎಲೆ
- ಬೀಜ
- ಕಡ್ಡಿ
- ಬೀಜದ ಎಣ್ಣೆ

ದ್ರವ್ಯದ ಗುಣಧರ್ಮಗಳು

ರಸ : ತಿಕ್ತ, ಕಟು, ಕಷಾಯ

ಗುಣ : ಲಘು, ತೀಕ್ಷ್ಣ

ವೀರ್ಯ : ಉಷ್ಣ

ವಿಪಾಕ : ಕಟು

ಕರ್ಮ : ಕಫವಾತಹರ, ಶೋಥಹರ, ಭೇಧನ, ಕ್ರಿಮಿಘ್ನ

ಕರಂಜಃ ಕಟುತೀಕ್ಷ್ಣೋಷ್ಣಃ ವೀರ್ಯೋಷ್ಣೋ ಯೋನಿದೋಷಹೃತ್।
ಕುಷ್ಠೋದಾವರ್ತಗುಲ್ಮಾರ್ಶೋವ್ರಣ ಕ್ರಿಮಿಕಫಾಪಹಃ॥ (ಭಾವಪ್ರಕಾಶ)

ಎಂದರೆ ಹೊಂಗೆಯ ಕಟು ರಸದಿಂದ ಕೂಡಿದೆ, ತೀಕ್ಷ್ಣ ಗುಣದಿಂದ ಕೂಡಿದೆ, ಉಷ್ಣ ವೀರ್ಯದಿಂದ ಕೂಡಿದೆ, ಯೋನಿದೋಷ ನಿವಾರಿಸುತ್ತದೆ, ಕಫಹರವಾಗಿದೆ, ಕುಷ್ಠ, ಉದಾವರ್ತ, ಗುಲ್ಮ, ಮೂಲವ್ಯಾಧಿ, ವ್ರಣ, ಕ್ರಿಮಿ ಮುಂತಾದ ರೋಗಗಳನ್ನು ನಿವಾರಿಸುತ್ತದೆ.

ಔಷಧಿ ಪ್ರಮಾಣ

ಸ್ವರಸ : 10–20 ಮಿ.ಲೀ.

ಬೀಜದ ಚೂರ್ಣ : 1–3 ಗ್ರಾಂ

ತೊಗಟೆ ಚೂರ್ಣ : 3–5 ಗ್ರಾಂ

ಔಷಧಿ ಯೋಗಗಳು

- ಕರಂಜಾದಿ ತೈಲ
- ಕರಂಜಾದಿ ಘೃತ
- ಕರಂಜಾದಿ ಚೂರ್ಣ

ಔಷಧೀಯ ಉಪಯೋಗಗಳು

- ಹೊಂಗೆಯ ಬೀಜದ ಚೂರ್ಣಕ್ಕೆ ಸಕ್ಕರೆ ಮತ್ತು ಜೇನುತುಪ್ಪ ಬೆರೆಸಿ ಸೇವಿಸುವುದರಿಂದ ರಕ್ತಪಿತ್ತ ರೋಗವು ನಿವಾರಣೆಯಾಗುತ್ತದೆ.
- ಹೊಂಗೆ ಮರದ ತೊಗಟೆಯನ್ನು ಅರೆದು ಲೇಪ ಮಾಡಿ, ಸ್ವಲ್ಪ ಬಿಸಿ ಮಾಡಿ ಚರ್ಮಕ್ಕೆ ಹಚ್ಚುವುದರಿಂದ ವಿಸರ್ಪ ರೋಗವು ನಿವಾರಣೆ.
- ಹೊಂಗೆಯ ಬೇರಿನ ಕಷಾಯ ಮಾಡಿ ಅದನ್ನು ದಿನಾಲೂ ಸೇವಿಸಿದರೆ ರಕ್ತಸೋರುವ ಮೂಲವ್ಯಾಧಿಯು ನಿವಾರಣೆಯಾಗುತ್ತದೆ.
- ಕರ್ಪೂರ ಮತ್ತು ಶುದ್ಧಗಂಧಕ 10 ಗ್ರಾಂ.ಗೆ, 20 ಗ್ರಾಂ. ನಿಂಬೆ ರಸ ಸೇರಿಸಿ, ಅದನ್ನು ಒಂದು ಬಟ್ಟಲು ಹೊಂಗೆ ಎಣ್ಣೆಗೆ ಹಾಕಿ, ಚೆನ್ನಾಗಿ ಕಲಸಿ ಚರ್ಮಕ್ಕೆ ಹಚ್ಚುವುದರಿಂದ ಗಜಕರ್ಣ, ಇಸುಬು, ತುರಿಕೆ ಮುಂತಾದ ಚರ್ಮವ್ಯಾಧಿಗಳು ನಿವಾರಣೆಯಾಗುತ್ತದೆ.
- ಮುಖದ ಕಾಂತಿ ಹೆಚ್ಚಲು ಹೊಂಗೆಯ ಬೀಜವನ್ನು ಹಾಲಿನಲ್ಲಿ ಅರೆದು ಮುಖಕ್ಕೆ ರಾತ್ರಿ ಹಚ್ಚಿ, ಬೆಳಗ್ಗೆ ಮುಖ ತೊಳೆಯುವುದು.
- ಹೊಂಗೆಯ ಚಿಗುರೆಲೆಯ 10 ಮಿ.ಲೀ ರಸಕ್ಕೆ ಸ್ವಲ್ಪ ಕಾಳುಮೆಣಸಿನ ಚೂರ್ಣ ಸೇರಿಸಿ ದಿವಸಕ್ಕೆ ಎರಡು ಬಾರಿ ಸೇವಿಸುವುದರಿಂದ ಕಫದ ಕೆಮ್ಮು ನಿವಾರಣೆಯಾಗುತ್ತದೆ.
- ಪಾಂಡುರೋಗಕ್ಕೆ ಹೊಂಗೆಯ ಪಂಚಾಂಗಗಳನ್ನು ಅರೆದು ಹಾಲಿನೊಂದಿಗೆ ಸೇವಿಸಬೇಕು.
- ಹೊಂಗೆ ಮತ್ತು ಲಕ್ಕೆ ಎಲೆಗಳನ್ನು ಅರೆದು ಸ್ವಲ್ಪ ಬಿಸಿ ಮಾಡಿ ಊತಕ್ಕೆ ಕಟ್ಟುವುದರಿಂದ ಊತವು ಕಡಿಮೆಯಾಗುತ್ತದೆ.
- ಸಂಧಿವಾತ, ಸಂಧಿಶೂಲದಿಂದ ಬಳಲುತ್ತಿರುವವರು ನೋವಿದ್ದ ಭಾಗಕ್ಕೆ ಹೊಂಗೆ ಎಣ್ಣೆ ಹಚ್ಚಿ, ಎಲೆಯ ಕಷಾಯದಿಂದ ಸೇಕ ಕೊಡಬೇಕು.
- ಕೆಂಪು ಸಿಪ್ಪೆ ರಹಿತ 10 ರಿಂದ 12 ಹೊಂಗೆ ಬೀಜದ ಚೂರ್ಣ ಮಾಡಿಟ್ಟು, 2 ಗ್ರಾಂನಷ್ಟು ಚೂರ್ಣವನ್ನು ಜೇನಿನೊಂದಿಗೆ ಸೇವಿಸುವುದರಿಂದ ಮಲೇರಿಯಾ ಜ್ವರವು ಉಪಶಮನವಾಗುತ್ತದೆ.
- ಹೊಂಗೆ ಬೀಜದ ರಸವನ್ನು 2–3 ಹನಿಯಷ್ಟು ಮೂಗಿಗೆ ಬಿಡುವುದರಿಂದ ಅರ್ಧ ತಲೆನೋವು ನಿವಾರಣೆಯಾಗುತ್ತದೆ.

ಮಗು ಹೆಣ್ಣಾಗಲಿ, ಗಂಡಾಗಲಿ
ಚಿಕ್ಕ ಕುಟುಂಬವೇ ಸುಖೀ ಕುಟುಂಬ

ಅಳತೆಗಳು

ರತ್ತಿ / ಗುಂಜಾ	=	125 ಮಿ.ಗ್ರಾಂ.
ಮಾಷ	=	1 ಗ್ರಾಂ.
ಕರ್ಶ / ತೊಲ	=	12 ಗ್ರಾಂ.
ಶುಕ್ತಿ	=	24 ಗ್ರಾಂ.
ಪಲಮ್	=	48 ಗ್ರಾಂ.
ಪ್ರಸೃತಿ	=	96 ಗ್ರಾಂ.
ಕುಡವ	=	192 ಗ್ರಾಂ
ಮಣಿಕ	=	384 ಗ್ರಾಂ.
ಪ್ರಸ್ಥ	=	764 ಗ್ರಾಂ.
ಆಢಕ	=	3.73 ಗ್ರಾಂ.
ದ್ರೋಣಾ	=	12.288 ಗ್ರಾಂ.
ಶೂರ್ಪ	=	24.376 ಗ್ರಾಂ.
ದ್ರೋಣೀ	=	48.152 ಗ್ರಾಂ.
ತುಲಾ	=	4.800 ಗ್ರಾಂ.
ಭಾರ	=	96 ಕಿ.ಲೋ. ಗ್ರಾಂ.
ಶಾಣ	=	3 ಗ್ರಾಂ.
ವಲ್ಲ	=	375 ಮಿ.ಗ್ರಾಂ.
ಅಂಜಲೀ	=	192 ಗ್ರಾಂ.
ಔನ್ಸ್	=	25 ಮಿ.ಲೀ.

ವಿಶಿಷ್ಟ ಶಬ್ದಗಳ ಅರ್ಥ

ಮೇದೋರೋಗ = ಬೊಜ್ಜು
ಮೇಹ = ಪ್ರಮೇಹ, ಮಧುಮೇಹ, ಸಕ್ಕರೆ ಖಾಯಿಲೆ
ಭಗ್ನ = ಮೂಳೆಮುರಿತ
ಕ್ಷತ = ಗಾಯ
ಶುಕ್ರಮೇಹ = ಧಾತುಸ್ರಾವ
ಶ್ವೇತಪ್ರದರ = ಬಿಳಿಸೆರಗು
ರಕ್ತಪ್ರದರ = ಕೆಂಪುಸೆರಗು, ಅತಿಯಾದ ಮಾಸಿಕ ಸ್ರಾವ
ಶ್ರಮ = ಸುಸ್ತಾಗುವಿಕೆ
ಕೇಶ್ಯ = ಕೇಶವರ್ಧಕ
ಸ್ವರ್ಯ = ಸ್ವರಕ್ಕೆ ಒಳ್ಳೆಯದು
ನಿರ್ಯಾಸ = ಅಂಟು, ಮೇಣ
ಪ್ರಸೇಕ = ಬಾಯಲ್ಲಿ ನೀರಾಡುವುದು
ಪ್ಲೀಹರೋಗ = ಪ್ಲೀಹ ಸಂಬಂಧಿ ಖಾಯಿಲೆ
ಶ್ವಾಸ = ದಮ್ಮು (ಉಬ್ಬಸ)
ಆಮಜವಿಕಾರ = ಅಜೀರ್ಣ ಸಂಬಂಧಿ ಖಾಯಿಲೆ
ಪೀನಸ = ಶೀತ
ಕುಷ್ಠ = ಚರ್ಮರೋಗ
ಮೂತ್ರಕೃಛ್ರ = ಉರಿಮೂತ್ರ
ಗ್ರಾಹೀ = ಸ್ತಂಭನ ಸಾಮರ್ಥ್ಯವುಳ್ಳ
ಗ್ರಹಣೀರೋಗ = ಆಮಶಂಕೆ
ಗುಲ್ಮ = ಉದರವಾಯು
ಆಮವಾತ = ಗಂಟುನೋವು
ವಾತರಕ್ತ = ರಕ್ತವಾತ
ರಕ್ತಪಿತ್ತ = ರಕ್ತಸ್ರಾವ ಸಂಬಂಧಿ ರೋಗ
ಬೃಹತ್‌ತ್ರಯೀ = ಚರಕ ಸಂಹಿತ, ಸುಶ್ರುತ ಸಂಹಿತ, ಅಷ್ಟಾಂಗ ಸಂಗ್ರಹ/ಹೃದಯ
ವೃಷ್ಯಾ = ಲೈಂಗಿಕ ಶಕ್ತಿ ವರ್ಧಕ
ಧಾನ್ಯಕ ಹಿಮ = ಧಾನ್ಯಕ ಶೀತ ಕಷಾಯ
ಸ್ಥಾವರ ವಿಷ = ಖನಿಜ ವಿಷ
ಜಂಗಮ ವಿಷ = ಪ್ರಾಣಿ ವಿಷ
ಚ.ಸೂ. 26 = ಚರಕ ಸೂತ್ರ 26

ರೋಗಗಳ ಪರಿವಿಡಿ

ಆಧಾರ ಗ್ರಂಥಗಳು

English

1. Plants that heal - Dr. J.C. Kurian
2. Medicinal plants for primary health care - P. Ram Manohar
3. Fruits & Vegetables in ancient India - P.V. Sharma
4. A Hand book of Medicinal plants by Dr. V.G. Neginhal
5. Poisonous & Medicinal plants - K. Narayana B.V.
6. Some controversial drugs in Indian Medicine - Dr. Bapalal Vaidya
7. Classical uses of Medicinal plants - P.V. Sharma
8. Dravya Guna Vijnana - Dr. J.L.N. Shastry
9. Useful plants of India & Pakistan
10. Sacred plants and their Medicinal uses.
11. Ayurvedic pharmacology ang therapeutic uses of Medicinal plants - Vaidya V.M. Gogte
12. 100 Red listed Medicinal plants of conservation concern in southern India - K. Ravikumar D.K.
13. Poisonous plants in Ayurveda - Dr. L.B. Singh
14. Pharmacognosy of Ayurvedic drugs - Kerala
15. Dravya Guna Vijnana - Dr. Gyanendra Pande
16. Indian Medicinal plants - Kirtikar. K.P. & Basu
17. Therapeutic uses of Medicinal plants - P.V. Sharma.

ಆಧಾರ ಗ್ರಂಥಗಳು

1. ಆಯುರ್ವೇದ ಸುಲಭ ಚಿಕಿತ್ಸೆಗಳು – ಡಾ. ವೈ.ಎಂ. ಪರಮೇಶ್ವರಯ್ಯ
2. ಆಹಾರದಲ್ಲಿ ಆರೋಗ್ಯ – ಶ್ರೀಮತಿ ನಾಗರತ್ನಮ್ಮ
3. ಔಷಧೀಯ ಗುಣವುಳ್ಳ ಉಪಯುಕ್ತ ಸೊಪ್ಪು ತರಕಾರಿಗಳು – ಡಾ. ವಸುಂಧರಾ ಭೂಪತಿ
4. ಮನೆಯಲ್ಲೇ ಔಷಧಿ – ಪಂಡಿತ ರತ್ನ ಚಂದ್ರಶೇಖರ ಶಾಸ್ತ್ರಿ
5. ಜನತಾ ಸುಲಭ ಗೃಹಚಿಕಿತ್ಸೆ – ಡಾ. ಐ.ಕೆ.ಪಿ. ಶರ್ಮಾ
6. ವೈದ್ಯಕೀಯ ನಿಘಂಟು – ಡಾ. ಎನ್. ಕಪನೀಪತಯ್ಯ
7. ಔಷಧೀಯ ಮಹತ್ವದ ವನಸ್ಪತಿಗಳು – ಇಂದ್ರಜಿತ್
8. ಅಪೂರ್ವ ಗಿಡಮೂಲಿಕೆಗಳು ಹಾಗೂ ಸರಳ ಚಿಕಿತ್ಸೆಗಳು – ಎ.ಆರ್.ಎಂ. ಸಾಹೇಬ್
9. ಹೂವುಗಳಲ್ಲಿ ಔಷಧೀಯ ಗುಣಗಳು – ಡಾ.ಎ.ಎನ್. ಮೂರ್ತಿ
10. ಅಂದಚಂದಕ್ಕೆ ಆಯುರ್ವೇದ – ಡಾ. ಕೆ. ಪೂರ್ಣಿಮ ಭಟ್
11. ವನೌಷಧಿ ಗುಣಧರ್ಮ – ತಿರುಕ
12. ಜೀವ ಸಂಜೀವಿನಿ – (ಕರಾವಳಿ ತೀರದ ಔಷಧಿ ಸಸ್ಯಗಳು)
13. ಔಷಧೀಯ ಮಹತ್ವದ ವನಸ್ಪತಿಗಳು – ಕೆ.ಐ. ಪಾಟೀಲ
14. ನಿಘಂಟು ಸಂಗ್ರಹ – ವೈದ್ಯ ಗಣಪತಿರಾವ್
15. ಆರೋಗ್ಯ ದರ್ಪಣ – ಪಂಡಿತ ಶಿವಕುಮಾರ ಸ್ವಾಮಿಗಳು
16. ಆಯುರ್ವೇದ ದರ್ಶನ – ಡಾ. ಹೊ. ನಾಗರತ್ನ
17. ಮೂಲಿಕೆಗಳ ಮಾಯಾಲೋಕ – ಡಾ. ನದಿಬೈಲು ಉದಯಶಂಕರ
18. ಕೌಟುಂಬಿಕ ಆಯುರ್ವೇದಿಯ ಔಷಧೋಪಚಾರ
19. ಕರ್ನಾಟಕದ ಔಷಧೀಯ ಸಸ್ಯಗಳು – ಡಾ. ಮಾಗಡಿ. ಆರ್. ಗುರುದೇವ
20. ಭಾರತೀಯ ಔಷಧಿ ದ್ರವ್ಯಗುಣ ಸಂಗ್ರಹ
21. ಉಪಯುಕ್ತ ಗಿಡಮೂಲಿಕೆಗಳು – ಡಾ. ಎಂ. ಗೋಪಾಲಕೃಷ್ಣ ರಾವ್
22. ಕರ್ನಾಟಕ ಸಸ್ಯಗಳ ಸಸ್ಯಶಾಸ್ತ್ರೀಯ, ಕನ್ನಡ, ಕೊಂಕಣಿ ಮತ್ತು ತುಳು ಹೆಸರುಗಳು – ಡಾ. ಮಾಗಡಿ. ಆರ್. ಗುರುದೇವ

ಕನ್ನಡ ಪುಸ್ತಕ ಪ್ರಾಧಿಕಾರ ಜನಪ್ರಿಯ ಪುಸ್ತಕದ ಪ್ರಕಟಣೆಗಿಂತ ವಿಶೇಷವಾಗಿ ಅಪರೂಪದ ಸಾಹಿತ್ಯ ಪ್ರಕಾರದ ಪುಸ್ತಕಗಳನ್ನು ಪ್ರಕಟಿಸುವುದನ್ನು ಧ್ಯೇಯವನ್ನಾಗಿಟ್ಟುಕೊಂಡಿದೆ. ಈ ದಿಶೆಯಲ್ಲಿ ಈಗಾಗಲೇ ನೂರಾರು ಕೃತಿಗಳನ್ನು ಹೊರತರಲಾಗಿದೆ. ಪ್ರಸ್ತುತ ಪ್ರಕಟವಾಗುತ್ತಿರುವ ಡಾ. ಶೈಲೇಶ್ ಅವರ ಕೃತಿ 'ಸಸ್ಯ ಸಂಜೀವಿನಿ' ಒಂದು ವಿಶಿಷ್ಟ ಕೃತಿಯಾಗಿದೆ. ಇಲ್ಲಿ ಲೇಖಕರು ನಾವು ದಿನಬಳಕೆಯಲ್ಲಿ ಉಪಯೋಗಿಸುವ ಸಸ್ಯಗಳನ್ನು ಕುರಿತು ವೈಜ್ಞಾನಿಕವಾಗಿ ನಿರೂಪಣೆ ನೀಡಿದ್ದಾರೆ. ಪ್ರತಿ ಸಸ್ಯಕ್ಕೆ ಬೇರೆ ಬೇರೆ ಭಾಷೆಯಲ್ಲಿ ಕರೆಯುವ ಹೆಸರು, ಅದರ ಪರ್ಯಾಯ ಪದಗಳು, ದ್ರವ್ಯದ ವರ್ಣನೆ, ಅದರ ಗುಣಧರ್ಮ, ಔಷಧ ಪ್ರಮಾಣ ಮತ್ತು ಉಪಯೋಗ ಹೀಗೆ ಬಹಳ ಸರಳವಾಗಿ ಸಂಗ್ರಹವಾಗಿ ನೀಡಿರುವುದು ಮೆಚ್ಚುಗೆಗೆ ಪಾತ್ರವಾಗುತ್ತದೆ. ಈ ಕೃತಿ ಈಗಾಗಲೇ ಜನಪ್ರಿಯ ದೈನಿಕದಲ್ಲಿ ಪ್ರಕಟವಾಗಿ ಜನರ ಆದರಾಭಿಮಾನ ಗಳಿಸಿದೆ.

ಡಾ. ಸಿದ್ಧಲಿಂಗಯ್ಯ,
ಅಧ್ಯಕ್ಷರು

I.S.B.N. 81-7713-274-1
ಬೆಲೆ: ರೂ. 120/-